UNIVERSAL
LIBRARY
OU_200167
UNIVERSAL
LIBRARY

OUP—552—7-7-66—10,000

OSMANIA UNIVERSITY LIBRARY

Call No. K83 K31B | Accession No. K

Author కేమల పుష్పి.

Title బాలదచబ్రీ

This book should be returned on or before the date last marked below.

ಹಂಸ ಸಾಹಿತ್ಯ ಮಾಲೆ—೬

# ಬಾಡಿದ ಬಳ್ಳಿ

ಎಸ್. ಕಮಲಮ್ಮ, ಬಿ.ಎಸ್‌ಸಿ.

ತಿ. ಎ. ಕೆ. ಮೂರ್ತಿ — ಪ್ರಕಾಶಕರು — ಮೈಸೂರು
ಕರ್ನಾಟಕ ಸಾಹಿತ್ಯ ಮಂದಿರ,

ಮೊದಲ ಮುದ್ರಣ: ೧೯೫೧

ಎಲ್ಲ ಹಕ್ಕುಗಳೂ ಲೇಖಕಿಯರದು

ಪ್ರಕಾಶಕರು :
ಡಿ. ವಿ. ಕೆ. ಮೂರ್ತಿ
ಜಗನ್ಮೋಹನ ಬಂಗಲೆ ಚೌಕ, ಮೈಸೂರು

ಬೆಲೆ :

ಮುದ್ರಣ :
ಹಂಸ ಲಿಮಿಟೆಡ್
ಸುಬ್ಬರಾಯನಕೆರೆ, ಮೈಸೂರು

# ಅರ್ಪಣೆ

★

ಬಾಳಿನಲ್ಲಿ ಪ್ರೇಮದ ಹೊನಲನ್ನು ಹರಿಸಿ
ಕಣ್ಮರೆಯಾದ ನನ್ನ ತಂದೆಗೆ.

# ಬಾಡಿದ ಬಳ್ಳಿ

# ಬಾಡಿದ ಬಳ್ಳಿ

"ಗೌನು ಕೊಡೋದು ಇಷ್ಟ್ಹೊತ್ತಿಗೆ ಮುಗಿಯುತ್ತೇನೆ ಸೀತಮ್ಮ; ಆಗುತ್ತೆ ಗಂಟೆ ಒಂದೋ, ಎರಡೋ. ಅಷ್ಟೊಂದು ಜನಕ್ಕೂ ಗೌನು ಕೊಡೋದು ಅಂದರೆ ಕಮ್ಮಿ ಹೊತ್ತು ತೆಗೆದುಕೊಳ್ಳುತ್ತೇನು? ಸುಮ್ಮನೆ ಯಾಕಾದರೂ ಕಾಯುತ್ತಿ" ಎನ್ನುತ್ತಾ ಪಕ್ಕದ ಮನೆಯ ಭಾಗೀರಥಮ್ಮ ಊಟಮಾಡಿ ಕೈ ತೊಳೆಯಲು ಈಚೆ ಬಂದವರು ಎಡಗೈಲಿ ಚೊಂಬನ್ನು ಹಿಡಿದೇ ಸೀತಮ್ಮನವರ ಮನೆಯ ಕಡೆಗೆ ಬಂದರು. ದಾರಿಯನ್ನು ದೀರ್ಘ ಕಾಲದಿಂದ ದಿಟ್ಟಿಸುತ್ತಾ ಶಿಲಾಮೂರ್ತಿಯಂತೆ ಕುಳಿತಿದ್ದ ಸೀತಮ್ಮನವರ ಸಮಾಧಿ ಭಂಗವಾಯಿತು. ಹಾಗೆಯೇ ತಮ್ಮ ಗುಟ್ಟು ಭಾಗಮ್ಮನವರಿಗೆ ತಿಳಿಯಿತಲ್ಲಾ ಎಂದು ಕೊಂಚ ನಾಚಿಕೆಯೂ ಆಯಿತು. ತಲೆಯ ಮೇಲಿನ ಮುಸುಕನ್ನು ಸರಿಮಾಡಿಕೊಳ್ಳುತ್ತಾ,

"ಬನ್ನಿ ಭಾಗಮ್ಮ, ಜಗುಲಿ ಮೇಲಕ್ಕೆ ಬನ್ನಿ. ಏನೋ ಹುಡುಗ ಬರ್‍ತಾನೆ ಅಂತ ಕಾಯ್ತಿದ್ದೆ," ಎಂದರು ಸೀತಕ್ಕ. ಅವರಿಗೆ ನಿಜವಾದ ವಿಷಯವನ್ನು ಬಚ್ಚಿಡಲು ಆಗಲಿಲ್ಲ.

"ಅದನ್ನೇ ನಾನು ಹೇಳಿದ್ದು. ಇಷ್ಟೊತ್ತಿಗೆಲ್ಲಾ ಅದೆಲ್ಲಾ ಎಲ್ಲಿ ಮುಗಿಯುತ್ತೇ ಅಂತ. ಹೋದ ವರ್ಷ ನಮ್ಮೋನು ಹೋಗಿದ್ದನಲ್ಲ, ಮನೆಗೆ ಬಂದಾಗ ಎರಡು ಗಂಟೆ. ಹೊರಗೆ ಹೋದವರ ಸಮಾಚಾರ ಹೀಗೆ ಅಂತ ಹೇಳೋಕ್ಕಾದೀತೇ. ಬರ್‍ತಾರೆ, ಕೊಂಚ ಹಿಂಚು ಮುಂಚು. ಹೋಗಲಿ, ಊಟವಾದ್ರು ಆಯ್ತೋ, ಇಲ್ಲ ಹಾಗೇ ಕೂತಿದ್ದೀಯೋ?"

ಊಟ ಎಂದಾಗ ಸೀತಕ್ಕನಿಗೆ ತಟ್ಟನೆ ಹೊಳೆಯಿತು, ಆ ದಿನ ದ್ವಾದಶಿಯೆಂದು. ಹಿಂದಿನ ದಿನವೆಲ್ಲಾ ಉಪವಾಸ. ಬೇಗ ಪಾರಣೆಯನ್ನು ಮುಗಿಸಿಬಿಡಬೇಕೆಂದು ಅಡಿಗೆಯನ್ನೇನೊ ಎಂಟು ಗಂಟೆಗೇ ಮಾಡಿಟ್ಟಿದ್ದರು. ಅಡಿಗೆಯಲ್ಲಾ ಆರಿ ತಂಗಳಾಗುತ್ತಿದ್ದರೂ ಊಟ ಮಾತ್ರ ಬೇಕಾಗಿರಲಿಲ್ಲ. ತಾಯಿಯ ಸ್ವಭಾವವನ್ನು ಚೆನ್ನಾಗಿ ಅರಿತಿದ್ದ ವಾಸು, ಹೊರಗೆ ಹೋಗುವ ಮೊದಲು ಒಂದಿಪ್ಪತ್ತು ಬಾರಿ,

"ಊಟ ಮಾಡಿಬಿಟ್ಟಿರು. ನನಗಾಗಿ ಕಾಯುವುದು ಬೇಡ. ಹನ್ನೆರಡಕ್ಕೆ ಬಂದರೂ ಬಂದೆ, ಇಲ್ಲ ಒಂದು ಗಂಟೆಯಾದರೂ ಸರಿಯೆ" ಎಂದು ಎಚ್ಚರಿಸಿ ಹೋಗಿದ್ದನು.

ಆ ಒಂದು ಕ್ಷಣದಲ್ಲಿ ಸೀತಕ್ಕ ಹಾಗೆಯೇ ಮಾಡುವುದಾಗಿ ನಿರ್ಧರಿಸಿದ್ದರು. ಆದರೆ ವಾಸುವು ಹೊರಟುಹೋದ ಮೇಲೆ ಅವರಿಗೆ ಎಲ್ಲ ಮರತೇಹೋಯಿತು. "ನನಗೇನು ಅವಸರ, ಮಗುವೂ ಬರಲಿ ಜೊತೆಯಲ್ಲೇ ಉಂಡರಾಯಿತು" ಎಂದು ಸುಮ್ಮನಾಗಿಹೋದರು. ಬೇಗ ಬೇಗ ಮನೆಗೆಲಸವನ್ನೆಲ್ಲಾ ಮುಗಿಸಿ, ತಮ್ಮ ದಿನಚರಿಯ ಪಾರಾಯಣವನ್ನು ಹೇಳಿಕೊಂಡು, ಅವರು ಹೊರಕ್ಕೆ ತಲೆ ಇಟ್ಟಾಗ ಗಂಟೆ ಹನ್ನೊಂದಾಗಿತ್ತು. ಎಷ್ಟು ಹೊತ್ತು ಬೇಕಾದರೂ ಆಗಲಿ, ವಾಸುವು ಬಂದ ಹೊರತು ಒಳಗೆ ಹೋಗುವುದಿಲ್ಲವೆಂದು ಸೀತಕ್ಕ, ಜಗಲಿಯ ಮೇಲೆ ಕಂಬವನ್ನೊರಗಿಕೊಂಡು ಹಾದಿಯನ್ನೇ ನಿರೀಕ್ಷಿಸುತ್ತ ಕುಳಿತುಬಿಟ್ಟರು. ಹತ್ತಿ ಬತ್ತಿಯನ್ನು ಮಾಡುವ ಎಂದರೆ ಅದೂ ತೀರಿಹೋಗಿತ್ತು. ಬೇಸರ ಕಳೆಯಲು ಒಂದೆರಡು ಹಾಡನ್ನು ಮಣ ಮಣಗುಟ್ಟಿಯೂ ಆಯಿತು. ಹೊರಗೆ ಯಾರೊಬ್ಬರ ಸುಳಿವೂ ಇರಲಿಲ್ಲ. ಬೀದಿಯೆಲ್ಲಾ ಖಾಲಿಯಾಗಿತ್ತು. ಹೊತ್ತೇರಿದಂತೆಲ್ಲ ಬಿಸಲಿನ ಝಳ ಮಾತ್ರ ವಿಪರೀತವಾಗುತ್ತಿತ್ತು. ಸೂರ್ಯನ ತಾಪವನ್ನು ಸಹಿಸಲಾರದೆ ಮೈಯನ್ನು ಹರಡಿಕೊಂಡು ಬಿದ್ದು, ಗಾಢವಾಗಿ ನಿದ್ರಿಸುತ್ತಿದ್ದ ನಾಯಿಯೊಂದನ್ನು ಬಿಟ್ಟರೆ, ಸೀತಕ್ಕನಿಗೆ ಬೀದಿಯಲ್ಲಿ ಇನ್ನೇನೂ ಕಾಣಿಸಲಿಲ್ಲ. ಸೀತಮ್ಮನವರಿಗೆ ಹಾಡು ಹೇಳಿಕೊಂಡು ಸಾಕಾಯಿತು. ಆಮೇಲೆಂದರೆ, ಕೆಲವು ಬಾರಿ ಬೀದಿಯ ಎರಡೂ ಕಡೆ ಬಗ್ಗಿ ನೋಡುವುದು, ಇಲ್ಲವೇ ಯಾವ ಆತಂಕವೂ ಇಲ್ಲದೆ ಹಾಯಾಗಿ ನಾಲಗೆಯನ್ನು ಚಾಚಿ ನಿದ್ರಿಸುತ್ತಿರುವ ನಾಯಿಯ ಉಸಿರಾಟವನ್ನೇ ನಿರೀಕ್ಷಿಸುವುದು ಅವರ ಕೆಲಸವಾಗಿತ್ತು. ಅಂತೂ ನಿರೀಕ್ಷಣೆಯ ಅಸಹನೀಯತೆಯಲ್ಲಿ ಅವರಿಗೆ ಊಟದ ನೆನಪೇ ಉಳಿದಿರಲಿಲ್ಲ. ಈಗ ಭಾಗಮ್ಮನವರು ಊಟವಾಯಿತೇ ಎಂದರೆ ಅವರಿಗೆ ಎಲ್ಲಿಲ್ಲದ ತಬ್ಬಿಬ್ಬು. ಇಲ್ಲವೆಂದರೆ ಇವಳಿಗೇನು ಹುಚ್ಚು ಎಂದು ಅವರು ನಕ್ಕಾರು ಎಂಬ ಭಯ. ಆಯಿತು ಎಂದು ಹೇಳಲು, ಭಾಗಮ್ಮ ವಾಸುವನ್ನು ಮಾತಾಡಿಸುವ ನೆಪದಲ್ಲಿ ತಾವು ಊಟ ಮಾಡುತ್ತಿರುವಾಗ ಒಳಗೆ ಬಂದರೆ ಏನು ಅಂದುಕೊಂಡಾರು. ಎರಡು ಬಾರಿ ಉಂಡಳೆಂದು ನಗುವುದಿಲ್ಲವೇ ಎಂಬ ಆತಂಕ. ಕಡೆಗೂ ಸುಳ್ಳು ಹೇಳಲಾಗದೆ ಅವರು, "ಇನ್ನೂ ಇಲ್ಲ: ಅವಸರವೇನು" ಎಂದರು.

"ನಿನಗೆ ಹುಚ್ಚು, ದೊಡ್ಡ ದೊಡ್ಡ ಓದು ಓದಿ, ಪ್ಯಾಸು ಮಾಡಿ, ಡಿಗ್ರಿ ತಗೊಳ್ಳೋ ಗಂಡು ಹುಡುಗರಿಗೆ ನಮ್ಮ ಹಾಗೆ ಮಡೀನೆ, ಮೈಲಿಗೆಯೇ, ಅಥವಾ ಹೋಟಲಿಗೆ ಹೋಗಬಾರದು ಅನ್ನೋ ನೇಮವೆ? ಎಲ್ಲೋ ತಿನ್ನುತ್ತಾರೆ, ಮನಸ್ಸು ಬಂದಾಗ ಮನೆಗೆ ಬರುತ್ತಾರೆ. ಅವರನ್ನು ಕಾದರೆ ನಾವು ಅನ್ನವನ್ನು ಕಂಡಹಾಗೆಯೇ ಸರಿ. ಏಳೇಳು ಹುಚ್ಚಮ್ಮ" ಎಂದವರೇ ಭಾಗಮ್ಮ ಚೊಂಬನ್ನೂ ಎತ್ತಿಕೊಂಡು ಒಳಕ್ಕೇ ಹೋಗಲೆತ್ನಿಸಿದರು. ಒಮ್ಮೆ ಅವರು ಆಗ್ರಹ ಮಾಡಿದರೆ ಅವರನ್ನು ಇದಿರಿಸುವುದು ತೀರಾ ಅಸಾಧ್ಯವೆಂಬುದು ಸೀತಕ್ಕನಿಗೆ ಗೊತ್ತಿತ್ತು. ಗಾಬರಿಯಿಂದ ಸೀತಕ್ಕ ಉಸಿರನ್ನು ಸಹ ತೆಗೆದುಕೊಳ್ಳದೆ,

"ಬೇಡಿ ಭಾಗಮ್ಮ ಬೇಡಿ. ಏನೋ ಹಾಳು ಚಪಲ. ಎಷ್ಟು ತಡೆಯುತೇನೆ ಎಂದರೂ ಕೇಳುವುದಿಲ್ಲ. ಊಟಕ್ಕೇನು ಅವಾಂತರ, ಮೊದಲೇ ಮಾಡಿದ್ದರೂ ಆಗಿತ್ತು. ಆಮೇಲೆ ಮಾಡಿದರೂ ಆದೀತು" ಎಂದು ಗೋಗರೆದುಕೊಂಡರು.

ಸೀತಕ್ಕನ ಚಪಲವೇನಿರಬಹುದೆಂಬುದು ಭಾಗಮ್ಮನವರಿಗೆ ಅರ್ಥ ವಾಗಲಿಲ್ಲ. ಅವರು ಅದಕ್ಕಾಗಿ ಸೀತಕ್ಕನನ್ನೇ ನೋಡಹತ್ತಿದರು. ಸೀತಮ್ಮನವರ ಕಣ್ಣಲ್ಲಿ ನೀರು ಉಕ್ಕಿ ಉಕ್ಕಿ ಬರುತ್ತಿರುವುದನ್ನು ಅವರು ಗಮನಿಸದೇ ಇರಲಿಲ್ಲ.

ಐದು ನಿಮಿಷಗಳವರೆಗೆ ಇಬ್ಬರ ನಡುವೆ ಯಾವ ಮಾತುಕತೆಯೂ ನಡೆಯಲಿಲ್ಲ. ಮಾತಿಗಾರಂಭ ಮಾಡುವ ಸಾಹಸ ಯಾರಿಗೂ ಉಂಟಾಗ ಲಿಲ್ಲ. ಕಡೆಗೆ ತಮ್ಮ ಮನೋವೇದನೆ ಇನ್ನೊಬ್ಬರೆದುರಿಗೆ ತೋಡಿ ಕೊಂಡರೆ ಚಿತ್ತಶಾಂತಿ ಉಂಟಾಗಬಹುದೆಂದು ತೋರಲು, ಸೀತಕ್ಕನೇ ಬಾಯಿ ತೆಗೆದರು.

"ನೋಡಿ ಭಾಗಮ್ಮ, ನೀವು ತಾಯಿಗಿಂತ ಹೆಚ್ಚಾಗಿರುವುದರಿಂದ ಹೇಳ್ತೇನೆ. ವಾಸು ಚಿಕ್ಕ ಮಗುವಾಗಿದ್ದಾಗಿನಿಂದಲೂ ನನಗೊಂದು ಹುಚ್ಚು ಆಸೆ ಇತ್ತು. ಇವನೂ ಎಲ್ಲರ ಹಾಗೇ ಓದಿ ಪಾಸು ಮಾಡ್ತಾ ನೆಯೇ ಎಂದು ಹಗಲಿರುಳು ಯೋಚಿಸುತ್ತಿದ್ದೆ. ಹೇಗಾದರೂ ಸರಿಯೆ; ವಾಸುವನ್ನು ಓದಿಸಿಬಿಡಬೇಕು. ಅವನು ಗೌನು ತೆಗೆದುಕೊಂಡುದನ್ನು ನೋಡಿ ಪ್ರಾಣ ಬಿಡಬೇಕು ಎಂದು ಮಾಡಿದ್ದೆ. ದೇವರಿಗೆ ನನ್ನ ಹಂಬಲು

ಮುಟ್ಟಿರಬೇಕು. ಅವನು ಓದಿ ಪಾಸೇನೋ ಮಾಡಿದ. ಇನ್ನು ಅವನು ಗೌನು ಹಾಕಿಕೊಂಡು ಬರುವುದನ್ನು ನೋಡಿಬಿಟ್ಟರೆ ನನ್ನ ಬಹಳ ದಿನದ ಬಯಕೆ ತೀರಿದ ಹಾಗೆ. ಅದಕ್ಕಾಗಿ, ಊಟಕ್ಕೆ ಕುಳಿತರೆ ಮಧ್ಯೆ ಎಲ್ಲಿ ಹುಡುಗ ಬಂದುಬಿಡುತ್ತಾನೋ ಎಂದು ಕಾಯುತ್ತಿದ್ದೇನೆ. ಅವನಿಗೂ, ಹಾಗೆಯೇ ಬಾ. ಗೌನು ತೆಗೆದುಬಿಟ್ಟು ಬರಬೇಡ ಎಂದು ಹೇಳಿ ಕಳುಹಿಸಿದ್ದೇನೆ."

ತಮ್ಮ ಅಭಿಲಾಷೆಯನ್ನು ಹೇಳಿಕೊಂಡಮೇಲೆ ಸೀತಮ್ಮ ಕಪಟವಿಲ್ಲದ ನಗೆಯೊಂದನ್ನು ನಕ್ಕರು. ತಮಗಿಂತ ಕೊಂಚ ಕೀಚಿನವಳಾದರೂ ತಮ್ಮಷ್ಟು ಪ್ರಪಂಚವನ್ನು ಕಂಡರಿಯದ ಹಸುಗೂಸಿನಂತಹ ಸೀತಕ್ಕನನ್ನು ನೋಡಿ ಭಾಗಮ್ಮನವರ ಹೃದಯ ಕರಗಿ ನೀರಾಯಿತು.

"ನೀನು ಶುದ್ಧ ಬೆಪ್ಪಿಕಾಣೆ ಸೀತಮ್ಮ. ಈ ಆಸೆ ತೀರಿಸಿಕೊಳ್ಳಲ ನೀನು ಇಲ್ಲಿ ಹೀಗೆ ಅನ್ನವಿಲ್ಲದೆ ಒಣಗಬೇಕೆ. ಮುತ್ತಿನಹಾಗೆ ಮ ಹೋಗಿ ಗೌನು ತರೋವಾಗ ನನ್ನದಲ್ಲಾ ಎಂದು ಎರಡು ಪಾಸ ಬರುತ್ತಿತ್ತು. ಹೋದ ಸಾರಿ ಕಿಟ್ಟಿ ತಂದಿರಲಿಲ್ಲವೇನು? ನಾನೇನೋ ಮ ವೈಲಿಗೆ ಅಂತ ಹೋಗಲಿಲ್ಲ. ನಮ್ಮನೇಲಿ ಅವರು, ಪದ್ದತ್ತೆ ಇಬ್ಬರ ಹೋಗಿದ್ದರು. ಇಲ್ಲಿ ನೋಡುವುದೇನಿದೆ. ಅಲ್ಲೇ ಆದರೆ ಮಹಾರಾಜರೂ ಇನ್ನು ಯಾರ್ಯಾರೋ ದೊಡ್ಡ ಮನುಷ್ಯರೆಲ್ಲಾ ಬರುತ್ತಾರೆ. ಸುಖವಾ ನೋಡಿಕೊಂಡು ಬರಬಹುದಾಗಿತ್ತು."

"ಅಯ್ಯೋ ಬಿಡಿ ಭಾಗಮ್ಮನೋರೆ, ಅವರನ್ನೆಲ್ಲಾ ನೋ ನನಗೇನಾಗಬೇಕಾಗಿದೆ. ಇನ್ನೂ ಹುಡುಗರಿಗಾದರೆ ಅವೆಲ್ಲಾ ಆಸ ನನ್ನಂತಹ ಪೆಚ್ಚಿಗೆ ಏನು ಅರ್ಥವಾದೀತು. ಮುಖ್ಯ ನಾನು ನನ್ನ ಮ ಗೌನು ಹಾಕಿಕೊಂಡು ಬರುವುದನ್ನು ನೋಡಬೇಕು. ಅದು ಇಲ್ಲಾದರೇನು. ಅಲ್ಲಾದರೇನು?"

ಸೀತಮ್ಮ ಮತ್ತೆ ನಕ್ಕರು. ಅವರ ತರ್ಕಕ್ಕೆ ಪ್ರತಿ ಹೇಳಲು ಏನೂ ತೋರದೆ ಭಾಗಮ್ಮನವರು ಸುಮ್ಮನೆ ಕುಳಿತುಬಿಟ್ಟರು.

ಮತ್ತೆ ಅವರಿಬ್ಬರ ನಡುವೆ ಮೊದಲಿನಂತಹ ಮೌನವಾವರಿಸಿಬಿಟ್ಟಿತು. ಭಾಗಮ್ಮನವರು ಮುಂಕಾಗಿ, ಎದುರು ಮನೆಯ ಕಿಟಕಿಯಲ್ಲಿ ಏನನ್ನೋ ಕಂಡವರಂತೆ ಅತ್ತ ಕಡೆಯೇ ಸುಮ್ಮನೆ ಶೂನ್ಯದೃಷ್ಟಿಯಿಂದ

ನೋಡುತ್ತಾ ಕುಳಿತರು. ಸೀತಕ್ಕನ ದೃಷ್ಟಿಯೇನೋ ಮೊದಲಿನಂತೆಯೆ ಹಾದಿಯ ಕಡೆಗಿತ್ತು. ಆದರೆ ಮುಂಚಿನ ಏಕಾಗ್ರತೆಯಿರಲಿಲ್ಲ. ಅವರ ಮನಸ್ಸಿನಲ್ಲಿ ಅದಾವುದೋ ಅಸಹನೀಯವಾದ ಆಂದೋಳನವೊಂದು ನಡೆಯುತ್ತಿತ್ತು. ಆ ಆಂದೋಳನದ ಆರ್ಭಟ ಏರಿದಂತೆಲ್ಲಾ ಬೇಡ ಬೇಡವೆಂದರೂ ಕಣ್ಣಲ್ಲಿ ನೀರು ಹೆಚ್ಚುಹೆಚ್ಚಾಗಿ • ಮಿಡಿಯುತ್ತಿತ್ತು. ಎಷ್ಟು ಕಷ್ಟಪಟ್ಟರೂ ಸಂಕಟವನ್ನು ಅಡಗಿಸಲು ಸಾಧ್ಯವಾಗದೆ ಹೋಗಲು ಸೀತಕ್ಕ, ತಾವೇ ಮೌನವನ್ನೊಡೆದು ಮಾತಿಗಾರಂಭಿಸಿದರು.

"ಅದಕ್ಕೇನೆ ಭಾಗಮ್ಮ ತಿಳಿದೋರು ಮೋಹ ಮಮತೆ ಅನ್ನೋದನ್ನು ಇಟ್ಕೊಳ್ಳಬಾರದು ಅಂತ ಹೇಳುವುದು. ಅನುಭವ ಇಲ್ದೆ ಹೇಳುವ ಮಾತಲ್ಲ ಅದು. ಯಾವತ್ತಿಗೂ ದಿಟವಾದದ್ದು."

ಆಗ ಅವರ ಗಂಟಲುಬ್ಬಿಬಂತು. ತಡೆದು ನಿಲ್ಲಿಸಿದ್ದ ಕಂಬನಿಯ ಕಾಲುವೆ ಕಟ್ಟೆಯನ್ನೊಡೆದು ಧಾರಧಾರಾಕಾರವಾಗಿ ಅವರ ಕೆನ್ನೆಯ ಮೇಲೆ ಪ್ರವಹಿಸುತ್ತಿತ್ತು. ಭಾಗಮ್ಮ ಎಲ್ಲವನ್ನೂ ಸುಮ್ಮನೆ ಕುಳಿತು ನೋಡುತ್ತಿದ್ದರು.

"ಅಲ್ಲ, ಅವರನ್ನು ಕಳೆದುಕೊಂಡು ಇಪ್ಪತ್ತೊಂದು ವರ್ಷವಾಯಿತು. ಆದರೂ ಹಾಳು ಮಮತೆಯೆನ್ನುವುದು ಮರೆಯಾಗಲಿಲ್ಲ. ಈ ದಿವಸ ಅವರ ನೆನಪು ಬಂದು ಬೇಡ ಬೇಡವೆಂದರೂ ಕಣ್ಣೀರಿಡುವ ಹಾಗಾಗುತ್ತಿದೆ. ಓದೋರು ಬರೆಯೋರು ಎಂದರೆ ಏನು ಅಕ್ಕರೆ ಆಸೆ ಅವರಿಗೆ! ನಮ್ಮೂರ ಮೇಷ್ಟ್ರ ಮಗ ಬಿ. ಎ. ಪಾಸು ಮಾಡಿದರೆ, ಅವರ ಮನೆಯವರಿಗಿಂತ ಹಿರಿಯ ಹಿಗ್ಗು ಇವರಿಗೆ. ತಮಗಾಗಲೇ ಓದಿಸಲು ಒಬ್ಬ ಮಗನಿರುವಂತೆ, 'ನೋಡು ಸೀತು, ನಮ್ಮಗೂನ್ನೂ ಚೆನ್ನಾಗಿ ಓದಿಸಿಬಿಡಬೇಕು, ನನಗಂತೂ ಓದಲು ಅವಕಾಶವಾಗಲಿಲ್ಲ.' ಎಂದು ಹಾರಾಡಿಬಿಟ್ಟರು. ಈ ದಿನ ಮಗನನ್ನು ನೋಡಲು ಅವರಿಲ್ಲ."

ಸೀತಮ್ಮ ಮಗುವಿನಂತೆ ಬಿಕ್ಕಿಬಿಕ್ಕಿ ಅತ್ತರು. ಆ ಆವೇಶದಲ್ಲಿ ಅವರಿಗೆ ಬೀದಿಯಲ್ಲಿ ಹೋಗುವವರು ಯಾರಾದರೂ ತಮ್ಮನ್ನು ನೋಡಬಹುದೆಂಬುದೂ ಸಹ ಮರೆತುಹೋಯಿತು. ಅವರ ಪ್ರಲಾಪ ಭಾಗಮ್ಮನವರ ಕಣ್ಣಲ್ಲಿಯೂ ಕಣ್ಣೀರಿನ ಕಾಲುವೆಯನ್ನು ಹರಿಸಿತ್ತು.

ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಭಾಗಮ್ಮ,

೬

"ಅವನು ಕೇಳಿ ಬಂದದ್ದು ಅವನಿಗೆ; ನೀನು ಕೇಳಿ ಬಂದದ್ದು ನಿನಗೆ. ಪುಣ್ಯಾತ್ಮರು ಮೊಮ್ಮಕ್ಕಳು ಮರಿ ಮಕ್ಕಳನ್ನು ಕಂಡರೆ, ನಿನ್ನ ಗಂಡ ತನಗಾದ ಮಗುವು ಗಂಡೋ, ಹೆಣ್ಣೋ ಎಂದು ತಿಳಿದುಕೊಳ್ಳು ವಷ್ಟರಮಟ್ಟಿನ ಅವಕಾಶವನ್ನೂ ದೇವರ ಬಳಿ ಕೇಳಿ ಬರಲಿಲ್ಲ. ಎಲ್ಲಾ ಈ ಭೂಮಿಯ ಸಾಲ ಎಲ್ಲಿಯ ವರೆಗೋ ಅಲ್ಲಿಯ ವರೆಗೆ. ಇದಕ್ಕೆ ಅತ್ತೇಕೆ ಆಯಾಸಪಡುತ್ತಿ. ಮೊದಲೇ ಹೊಟ್ಟೆಗನ್ನವಿಲ್ಲ," ಎಂದರು.

ಮನಸ್ಸಿಗೆ ತೃಪ್ತಿಯಾಗುವಷ್ಟು ಅತ್ತುದ್ದರಿಂದ ಸೀತಮ್ಮನವರ ಹೃದಯ ತಕ್ಕಮಟ್ಟಿಗೆ ಹಗುರವಾಯಿತು. ಅಲ್ಲದೆ ಭಾಗಮ್ಮನವರ ವೇದಾಂತವೂ ಅವರ ನೊಂದ ಮನಸ್ಸಿನ ಮೇಲೆ ಕೊಂಚ ಪರಿಣಾಮ ವನ್ನುಂಟುಮಾಡಿತ್ತು. ಸೀತಕ್ಕ ಕಣ್ಣೀರನ್ನು ಸೆರಗಿನಿಂದ ಒರಸಿಕೊಂಡು ಸಮಾಧಾನವನ್ನು ತಂದುಕೊಂಡರು.

## ೨

ಈಗ್ಗೆ ಇಪ್ಪತ್ತೊಂದು ವರ್ಷಗಳ ಹಿಂದೆ ಸೀತಮ್ಮನವರ ಮನೆಯ ಪರಿಸ್ಥಿತಿ ವರ್ಣಿಸಲಾರದಷ್ಟು ಕಠಿಣವಾಗಿತ್ತು. ಶ್ರೀಕಂಠಯ್ಯನವರು ಖಾಯಿಲೆ ಬಿದ್ದಾಗ ತುಂಬಿದ ಬಸುರಿ ಸೀತಮ್ಮ ಅವರಿಗಾಗ ಹತ್ತೊಂಭತ್ತು ವಯಸ್ಸು. ಮನೆಯಲ್ಲಿ ಹೀಗೆ ಮಾಡು, ಹಾಗೆ ಬೇಡ ಎಂದು ಹೇಳಲು ಒಂದು ಹಿರಿಯ ಜೀವವೂ ಇರಲಿಲ್ಲ. ಗಂಡ ಹೆಂಡತಿ ಯರ ಎರಡು ಕಡೆಯ ಬಳಗವೆಂದರೆ ಸೀತಮ್ಮನವರ ಅಣ್ಣನಾದ ವೆಂಕಟ ಪತಯ್ಯನೊಬ್ಬ. ಅವನಿದ್ದುದು ನಂಜುಂಡಳ್ಳಿಯಲ್ಲಿ. ದರಿದ್ರವಾದರೋ ಅವನನ್ನು ಎಡಬಿಡದೆ ಕಾಡಿ ತಿನ್ನುತ್ತಿತ್ತು. ತನ್ನ ಪ್ರೈಮರಿ ಸ್ಕೂಲು ಮಾಸ್ತರಿಕೆಯಿಂದ ಬರುವ ಹದಿನೈದು ರೂಪಾಯಿ ವೇತನದಲ್ಲಿ ಅವನು ತನ್ನ ನಾಲ್ಕು ಮಕ್ಕಳನ್ನೂ ಹೆಂಡತಿಯನ್ನೂ ಸಾಕಬೇಕಾಗಿತ್ತು. ಅವನಿಂದ ಸಹಾಯ ತೆಗೆದುಕೊಳ್ಳುವುದು ಹಾಗಿರಲಿ, ಹಾಗೆ ಹೋದ ವರಿಗೆ ಅವನಿಗೇ ಏನಾದರೂ ಸಹಾಯ ಮಾಡಬೇಕೆಂಬ ಮನ ಹುಟ್ಟು ವಂತೆ ಮಾಡುತ್ತಿತ್ತು ಅವನ ದಟ್ಟವಾದ ದಾರುಣ ದಾರಿದ್ರ್ಯ. ಇದರ ಮೇಲೆ ಮಗಳ ಮದುವೆಗೆ ಮಾಡಿದ್ದ ಸಾಲವೂ ಉಳಿದಿತ್ತು. ಆದರೂ ಅಣ್ಣನನ್ನು ಬರಹೇಳಬೇಕೆಂಬ ಚಪಲ ಸೀತಮ್ಮನವರಿಗೆ. ಆದರೆ

ಶ್ರೀಕಂಠಯ್ಯನವರು ಒಂದು ಬಗೆಯ ಸ್ವಭಾವದವರು ಎಂಬ ಹೆದರಿಕೆ. ಯಾತಕ್ಕಾಗಿ ಕರೆಸಿದೆ ಎಂದು ರೇಗಾಡಿದರೆ ? ಮನಸ್ಸು ತಡೆಯಲಾರದೆ ಗಂಡನನ್ನು ಕೇಳಿಯೂ ನೋಡಿದರು.

"ನಿಮಗೆ ಹಿಡಿದ ಜ್ವರ ಬಿಟ್ಟಿಲ್ಲ. ಅಲ್ದೆ ಕುತ್ತಿಗೆ ಬಳಿ ಗಡ್ಡೆ ಬೇರೆ ಇರೋಹಾಗಿದೆ ಅಂತೀರಿ. ವೆಂಕೂಗಾದರೂ ಹೇಳಿಕಳುಹಿಸ್ತೇನೆ."

"ಒಂದು ನಾಲ್ಕು ದಿನದ ಜ್ವರಕ್ಕೆಲ್ಲಾ ಅವನಿಗೆ ಹೇಳಿಕಳುಹಿಸಿ ಕೈಕಾಲುಗೆಡಿಸಿಬಿಡು, ಏನೋ ಶೀತದ ಗಡ್ಡೆ ಬಂದಿದೆ, ಕರಗಿ ಹೋಗುತ್ತೆ."

"ಅತ್ತ ಅವನನ್ನೂ ಬರಗೊಡಿಸುವುದಿಲ್ಲ, ಇತ್ತ ಡಾಕ್ಟರೂ ಬೇಡ ಅಂತೀರಿ. ಖಾಯಿಲೆ ನೋಡಿದರೆ ದಿನ ದಿನಕ್ಕೆ ಹೆಚ್ಚಾಗ್ತಾಯಿದೆ. ಏನಾದ್ರೂ ಸರಿಯೆ, ಇವತ್ತು, ನೇತೂರಾಯರಿಗೆ ಹೇಳಿಕಳುಹಿಸಿ ಬಿಡ್ತೇನೆ."

"ಹಾಗೆ ಮಾಡಿಬಿಡು. ಅವನು ಬಂದ ತಡವೆಯೇ 'ಪ್ಲೇಗು' ಎಂದು ಹೇಳಿಬಿಡಲಿ. ಆಗ ಚೆನ್ನಾಗಿರುತ್ತೆ ನಿನ್ನ ಫಜೀತಿ"

"ಎಂತಹ ಬಾಯೀಂದ್ರೆ ನಿಮ್ಮದು. ಅಪರೂಪಕ್ಕಾದ್ರೂ ವೆ ಒಂದು ಒಳ್ಳೆ ಮಾತು ಬೇಡ್ವೆ. ಸದ್ಯ, ಆ ರೋಗ ಕೊಲ್ಲೋ ಶತ್ರುವಿಗೂ ಬರುವುದು ಬೇಡ, ಒಂದ್ವೇಳೆ ಅದೇ ಖಾಯಿಲೆ ಆಗಿದ್ರೂವೆ, ಡಾಕ್ಟರಿಗೆ ತಿಳಿದುಹೋಗುತ್ತೆ ಅಂತ ಬಚ್ಚಿಡೋಕ್ಕಾಗುತ್ತೇನು ? ಅದನ್ನು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕೋ ಹಾಗೆ ನೋಡುವುದು ಒಳ್ಳೆಯದು. ಇದೆಲ್ಲಾ ಒಂದು ತಮಾಷೆ ಕೆಟ್ಟುಹೋಯ್ತೇನು ?"

ಹೆಚ್ಚಿಗೆ ಚರ್ಚೆಮಾಡಿದರೆ ಇನ್ನೂ ರಂಪವಾಗುತ್ತೆಂದು ಶ್ರೀಕಂಠಯ್ಯನವರು,

"ಸೀತು, ವೆಂಕಪ್ಪನನ್ನು ಬೇಕಾದರೆ ಕರೆಸಿಕೋ.. ಈಗ ಸದ್ಯಕ್ಕೆ ಡಾಕ್ಟರು ಬೇಡ. ಇನ್ನೂ ಒಂದೆರಡು ದಿನ ನೋಡೋಣ. ದೇವರಿದ್ದಾನೆ. ಎಲ್ಲಕ್ಕೂವೆ " ಎಂದರು.

ಶ್ರೀಕಂಠಯ್ಯನವರಿಗೆ ತಮ್ಮ ಖಾಯಿಲೆಯೇನೆಂದು ತಕ್ಕಮಟ್ಟಿಗೆ ಗೊತ್ತಾಗಿದ್ದಿತು. ಅವರು ಕೊಂಚ ಹಳೆಯ ಕಾಲದ ಸ್ವಭಾವದವರು. ಔಷಧಿ ಪತ್ಯವೆಂದರೆ ವಿಪರೀತ ಹೆದರಿಕೆ. ಅದರಲ್ಲೂ ಕ್ಯಾಂಪು, ಆಸ್ಪತ್ರೆ

ಎಂದರೆ ಅವರು ನಡುಗಿಬಿಡುತ್ತಿದ್ದರು. ಒಂದು ವೇಳೆ ಸತ್ತರೂ ಚಿಂತೆ ಇಲ್ಲ. ಅಲ್ಲಿಗೆ ಮಾತ್ರ ಹೋಗುವುದು ಬೇಡವೆಂದು ಶ್ರೀಕಂಠಯ್ಯನವರು ತಮ್ಮ ಹೆಂಡತಿಗೇ ತಮ್ಮ ಗುಟ್ಟು ಬಿಟ್ಟುಕೊಡಲಿಲ್ಲ. ಈಗ ತಾವು ಮಾಡುತ್ತಿರುವ ಮೂಢತನದಿಂದ ಮುಂದೆ ಎಷ್ಟು ಕಷ್ಟವಿದೆಯೆಂಬುದನ್ನು ಅವರು ಯೋಚಿಸಿದಂತೆ ತೋರಲಿಲ್ಲ.

ಈ ಬಗೆಯ ಮಾತುಕತೆಯಾದ ಎರಡು ದಿವಸಕ್ಕೆಲ್ಲಾ ಶ್ರೀಕಂಠಯ್ಯನವರು ಪರಲೋಕವಾಸಿಗಳಾದರು. ಸಾವನ್ನು ನೋಡಿ ಅರಿಯದ ಸೀತಕ್ಕ ಸತ್ತು ಮಲಗಿರುವ ಗಂಡನನ್ನು ನಿದ್ರೆಮಾಡುತ್ತಿರಬಹುದೆಂದು ಕೊಂಡಿದ್ದರು. ಭಾಗಮ್ಮನವರು ನೋಡದಿದ್ದರೆ ಒಂದು ದಿನವೆಲ್ಲಾ ಹಾಗೆಯೇ ಕಳೆಯುತ್ತಿದ್ದಿತೇನೊ! ತಾವಿನ್ನು ಮುಂದೆ ಅನಾಥರಾದ ರೆಂಬುದನ್ನು ತಿಳಿದಮೇಲೆ, ಸೀತಮ್ಮ ಎಲ್ಲರ ನಿರೀಕ್ಷಣೆಯಂತೆ ಅಳಲಿಲ್ಲ. ಮೂರ್ಛೆಯೂ ಹೋಗಲಿಲ್ಲ. ಕೇವಲ ತಪ್ಪುಮಾಡಿದ ಮಗು, ಬೆಪ್ಪಾಗಿ ತಾಯಿಯ ಶಿಕ್ಷೆಯನ್ನು ಇದಿರುನೋಡುವಂತೆ ಅವರು ಮಂಕಾಗಿ ಕುಳಿತಿದ್ದರು. ಆ ಒಂದು ಕ್ಷಣದ ಗಾಬರಿಯ ಗದ್ದಲದಲ್ಲಿ ತನಗೇನಾಗಿದೆ ಎಂಬುದನ್ನು ಯೋಚಿಸಲು ಸಹ ಅವರಿಗೆ ಅವಕಾಶವಿರಲಿಲ್ಲ. ಇಂತಹ ಹಸುಗೂಸಿನ ಹೃದಯದ ಸೀತಕ್ಕನ ಸ್ಥಿತಿ ಭಾಗಮ್ಮನವರಿಲ್ಲದಿದ್ದರೆ. ಏನಾಗುತ್ತಿದ್ದಿತೋ ಹೇಳುವುದಕ್ಕೆ ಸಾಧ್ಯವಿರಲಿಲ್ಲ.

ನಂಜುಂಡಳ್ಳಿಗೆ ತಂತಿಯನ್ನು ಕಳುಹಿಸಿಯಾಯಿತು. ಮೊದಲು, ಕೊನೆ ಒಂದೂ ಅರಿಯದೆ, ಇದ್ದಕ್ಕಿದ್ದ ಹಾಗೆ ಬಂದ ಕೆಟ್ಟವರ್ತಮಾನವನ್ನು ಕೇಳಿ ವೆಂಕಟಪತಯ್ಯನೆದೆ ಒಡೆದುಹೋಯಿತು. ಇನ್ನೊಬ್ಬ ತಂಗಿಗೂ ಆದ ದುರವಸ್ಥೆಯನ್ನು ಕಂಡು, ಕಂಗೆಟ್ಟು ಅವನು ಮೈಸೂರಿಗೆ ಓಡೋಡಿ ಬಂದನು. ಜೊತೆಗೆ ಅವನ ಹೆಂಡತಿ ಸಾವಿತ್ರಿಯೂ ಇದ್ದಳು. ವೆಂಕಟಪತಯ್ಯನು ಬಂದಮೇಲೆ ಮನೆಯಲ್ಲಿ ಒಂದು ಅಳುವಿನ ಹೊಳೆಯೇ ಹರಿಯಿತು.

ವೆಂಕಟಪತಯ್ಯನು ದುಃಖದ ಅತಿರೇಕದಲ್ಲಿ,

"ಸೀತು, ನನಗೊಂದು ಮಾತು ಹೇಳಿಕಳುಹಿಸಬಾರದಾಗಿತ್ತೇ? ಒಂದು ಕಾರ್ಡು ಗೀಚಿಹಾಕಿದ್ದರೂ ಆಗಿತ್ತು, ಓಡಿಬರುತ್ತಿದ್ದೆ. ಏನಾದ್ರು ಔಷಧಿಪಥ್ಯನಾದರೂ ಮಾಡಬಹುದಾಗಿತ್ತು. ನಾನು ಇಷ್ಟು ಹತ್ತಿರ ಇದ್ದುಕೊಂಡೂ ಭಾವಯ್ಯನ ಗತಿ ಹೀಗಾಗಬೇಕೆ" ಎಂದನು.

"ನಾನು ಪಾಪಿ ವೆಂಕು. ಮೊದಲು ನಿನ್ನನ್ನು ಕರಸಲೇ, ಎಂದಾಗ ಬೇಡ ಅಂದುಬಿಟ್ಟರು. ತುಂಬಾ ಬಲವಂತ ಮಾಡಿದ ಮೇಲೆ, 'ಬೇಕಾದರೆ, ವೆಂಕೂನ ಕರೆಸಿಕೋ, ಡಾಕ್ಟರು ಬೇಡ' ಅಂದರು. ನಾನೂ ಒಂದು ಮೂರು ದಿವಸದ ಜ್ವರಕ್ಕೆ ನಿನಗೇಕೆ ಗಾಬರಿಮಾಡಲಿ ಅಂತ ಸುಮ್ಮನಾಗಿಬಿಟ್ಟೆ."

"ಆ ಮಹಾಮಾರಿ ಖಾಯಿಲೆ ಬಂದಿದೆ ಅಂತ ಯಾರಿಗೆ ಹೊಳೀ ಬೇಕಪ್ಪ. ಏನೋ ಜ್ವರ, ಜ್ವರ ಅಂತ ಗಂಜಿ ಕಷಾಯದಲ್ಲೇ ಮುಗಿಸಿ ದುದಾಯಿತು" ಎಂದರು ಭಾಗಮ್ಮ.

"ಅಯ್ಯೋ ಹೊಳೆಯದೇ ಏನು ಬಂತು ಭಾಗಮ್ಮ. ಡಾಕ್ಟರನ್ನು ಕರೆಸಲೇ ಎಂದಾಗ ಅವರೇ ಬಾಯಿಬಿಟ್ಟು ಖಾಯಿಲೆ ಹೆಸರು ಹೇಳಿದ್ರು. ಅವರಿಗೆ ಒಳಗೇ ಗೊತ್ತಿತ್ತೇನೋ. ಮಂಕು ಮೂದೇವಿ ನನಗೆ ತಿಳೀದೆ ಹೋಯ್ತು. ಕಂಡೂ ಕಂಡೂ ನಾನೇ ಕೈಯಾರ ಕೊಂದ್ಬಿಟ್ಟೆ."

ಸೀತಮ್ಮನವರು ಗೋಳೋ ಎಂದು ಅತ್ತರು. ವೆಂಕಟಪತಯ್ಯನಿಗೆ. ದುಃಖ ಬಂದರೂ ಆಗವನು ತಡೆದುಕೊಳ್ಳಬೇಕಾಗಿತ್ತು.

"ಸೀತು, ನೀನು ಅತ್ತರೆ ನನಗಿನ್ನು ಕೋಪವೇ ಬರುತ್ತೆ. ಅತ್ತೇನಾದರೂ ಭಾವಯ್ಯನನ್ನು ಹಿಂದಕ್ಕೆ ಕರೆಸುತ್ತೀಯೇನು? ನೀನೀಗ ನಿನ್ನ ಹೊಟ್ಟೆಯಲ್ಲಿರುವ ಮಗುವಿನ ಯೋಗಕ್ಷೇಮ ನೋಡಬೇಕು. ಸೇರಿದ ಮನೆಯ ನಂದಾದೀಪ ಆರದಂತೆ ಮಾಡುವುದು ನಿನ್ನ ಕರ್ತವ್ಯ."

ಭಾಗಮ್ಮನವರೂ ಸಹ ಸೀತಕ್ಕನ ಕಣ್ಣೀರನ್ನು ತಮ್ಮ ಸೆರಗಿನಿಂದ ತೊಡೆಯುತ್ತಾ, "ಏಳು ತಾಯಿ, ನಿನ್ನ ಸಂಕಟವನ್ನು ಕಡಮೆ ಮಾಡಲು ನಮ್ಮಿಂದ ಸಾಧ್ಯವೆ? ನೀನೀಗ ಎರಡು ಜೀವದವಳು. ಆಯಾಸ ಮಾಡಿಕೊಂಡರೆ ಗತಿಯೇನು?" ಎಂದು ಸಮಾಧಾನ ಮಾಡಿದರು.

ಇದುವರೆವಿಗೂ ಸುಮ್ಮನಿದ್ದ ಸಾವಿತ್ರಿ,

"ಇದನ್ನೇ ನೋಡಿ ದ್ವಂದ್ವ ಕರ್ಮ ಅನ್ನೋದು, ಬೆಳೆದ ಜೀವ ಹೋಗಿ, ಈಗ ಈ ಎಳೆಯ ಬತ್ತಿ ಹುಟ್ಟಬೇಕೇ. ಇದಿಲ್ಲ ಎಂದು ಯಾರು ಅಳುತ್ತಿದ್ದರು. ಇದು ಹೋಗಿ ಅವರು ಉಳಿದುಕೊಂಡಿದ್ದರೆ ಮೇಲಾಗಿತ್ತು" ಎಂದಳು. ಆವಳ ಮಾತು ಯಾರಿಗೂ ಇಷ್ಟವಾಗಿ ಹಿಡಿಸಲಿಲ್ಲ. ಇನ್ನೇನಾದರೂ ಮುಂದೆ ಹೇಳಿ ಸೀತಕ್ಕನ ಮನಸ್ಸು ಬೇಜಾರು ಮಾಡಿ

ಯಾಳೆಂದು, ಭಾಗಮ್ಮನವರು ಅವರನ್ನು ಬೇರೆ ಕಡೆಗೆ ಕರೆದುಕೊಂಡು ಹೊರಟುಹೋದರು.

ಭಾಗಮ್ಮನವರ ಮತ್ತು ವೆಂಕಟಪತಯ್ಯನ ಅನನ್ಯ ಶ್ರಮದಿಂದ ಶ್ರೀಕಂಠಯ್ಯನವರ ಅಂತ್ಯಕ್ರಿಯೆ, ಕರ್ಮಾಂತರಗಳು ಸಾಂಗವಾಗಿ ನೆರವೇರಿದುವು. ಆದರೆ ವೈಕುಂಠ ಸಮಾರಾಧನೆಯ ಮಾರನೆಯ ದಿನವೇ ಸೀತಕ್ಕ ಗಂಡುಮಗುವಿನ ತಾಯಿಯಾದರು. ಮತ್ತೆ ಭಾಗಮ್ಮನವರು ಎಲ್ಲಿಲ್ಲದ ಜವಾಬ್ದಾರಿಯನ್ನು ಹೊರಬೇಕಾಯಿತು. ಹೆಣ್ಣು ಮಕ್ಕಳಿಲ್ಲದ ಅವರಿಗೆ ಸೀತಮ್ಮನವರನ್ನು ಕಂಡರೆ ಮಗಳನ್ನು ಕಂಡಷ್ಟೇ ಆದರ, ಪ್ರೀತಿ. ಬಾಣಂತಿಯನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಸೀತಮ್ಮನವರಿದ್ದ ಕೋಣೆಗೆ ಹೊರಗಿನವರ್ಯಾರನ್ನೂ ಬಿಡುತ್ತಿರಲಿಲ್ಲ. ಏಕೆಂದರೆ ಸಾಮಾನ್ಯವಾಗಿ ಬಂದವರು ಹುಟ್ಟಿದ ಆ ಎಳೆಯ ಕೂಸನ್ನು ಬಾಯಿಗೆ ಬಂದಂತೆ ಬೈದು ಹೋಗುತ್ತಿದ್ದರು. ಪ್ರಪಂಚವನ್ನೇ ಕಂಡರಿಯದ ಮಗು 'ಅಪ್ಪನನ್ನು ತಿಂದುಕೊಂಡಿತು' ಎಂದರೆ ಅರ್ಥ ವೇನೆಂದು ಸೀತಕ್ಕ ಅಳುತ್ತಿದ್ದರು. ಹಾಗೆ ಅಳುವುದು, ಚಿಂತಿಸುವುದು ದೇಹಕ್ಕೆ ತುಂಬ ಕೆಡಕೆಂದು ಅರಿತ ಭಾಗಮ್ಮನವರು ಅಂತಹ ಸಂದರ್ಭ ಗಳಿಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ.

ಮೈಲಿಗೆ ಕಳೆದು ಬಾಣಂತಿ ಒಳಗೆ ಬಂದ ಮೇಲೆ, ಅವರೆಲ್ಲಿ ಇರಬೇಕೆಂಬ ವಿಚಾರದಲ್ಲಿ ಒಂದು ತರ್ಕವೆದ್ದಿತು. ಸೀತಕ್ಕನಿಗೆ ಅಣ್ಣನ ಮನೆಗೆ ಹೋಗಲು ಸ್ವಲ್ಪವೂ ಇಷ್ಟವಿರಲಿಲ್ಲ. ದರಿದ್ರ ದೇವತೆಯ ಆವಾಸವಾಗಿದ್ದ ಅಲ್ಲಿಗೆ ತಾವು ಹೋದರೆ ಏಕಾದಶಿಯ ಮನೆಗೆ ಶಿವರಾತ್ರಿ ಹೊಕ್ಕಹಾಗೆಯೇ ಸರಿ ಎನಿಸಿತ್ತು. ಆದಕಾರಣ, ಮೈಸೂರಿನಲ್ಲೇ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟು, ಮತ್ತೊಂದು ಭಾಗದಲ್ಲಿ ತಾವಿರುವುದು. ಹೇಗಿದ್ದರೂ ವರ್ಷಕ್ಕೆ ನಾಲ್ಕು ಕಾಳು ಭತ್ತ ಬರುತ್ತದೆ. ಬರುವ ಮನೆ ಬಾಡಿಗೆ ಮೇಲು ಖರ್ಚಿಗೆ. ಭಾಗಮ್ಮ ನವರು ತಾಯಿಗಿಂತ ಮೇಲಾಗಿ ನೋಡಿಕೊಳ್ಳುತ್ತಿದ್ದುದರಿಂದ ದಿಕ್ಕಿಗೂ ಏನು ಯೋಚನೆ ಮಾಡಬೇಕಾಗಿಲ್ಲ ಎಂದು ಸೀತಮ್ಮನವರು ಚಿಂತಿಸಿದರು. ಆದರೆ ಅವರ ಅಭಿಪ್ರಾಯವನ್ನು ಅಲ್ಲಿದ್ದವರು ಯಾರೂ ಒಪ್ಪಲಿಲ್ಲ. ತಂಗಿಯು ತನ್ನ ಮನೆಗೆ ಬರುವುದಕ್ಕೆ ಹಿಂಜರಿಯುವುದನ್ನು ನೋಡಿ ವೆಂಕಟಪತಯ್ಯನಿಗೆ ತುಂಬ ನೋವಾಯಿತು.

"ಸೀತು, ಈ ಕಷ್ಟದಲ್ಲಿ ನಿನ್ನನ್ನು ಒಬ್ಬೊಂಟಿಗಳನ್ನಾಗಿ ಬಿಟ್ಟು ಹೋದರೆ, ನಾಳೆ ನೋಡಿದ ಜನ ಏನೆಂದಾರು? ಬಡವನೇನೋ ನಿಜ. ನಾನು ಉಣ್ಣುವ ಅಂಬಲಿಯನ್ನು ನಿನಗೂ ಹಾಕುವಷ್ಟರಮಟ್ಟಿನ ಧಾರಾಳಬುದ್ಧಿ ಇದೆ. ಧನಕ್ಕೆ ಬಡತನವಾದರೂ ಮನಕ್ಕೆ ಬಡತನವಿಲ್ಲ," ಎಂದನು.

"ಬಡತನ, ಸಿರಿತನದ ವಿಚಾರವಾಗಿ ನಾನು ಹೇಳುವುದಿಲ್ಲ ವೆಂಕು. ನಾನು ಕೊಡುವ ತೊಂದರೆಗೆ ನನಗೇ ನಾಚಿಕೆಯಾಗುತ್ತದೆ. ಅಲ್ಲಿ ಪಾಪ ಸಾವಿತ್ರಿಯೊಬ್ಬಳು ಒಂಟಿಗಿತ್ತಿ. ಅತ್ತ ಮಕ್ಕಳನ್ನು ನೋಡಿಕೊಂಡಾಳೇ ಇತ್ತ ನನ್ನನ್ನು ನೋಡಿಕೊಂಡಾಳೇ. ಇಲ್ಲಾದರೆ ಹೇಗೋ ನಾನೇ ಸವರಿಸಿ ಕೊಳ್ಳುತ್ತೇನೆ."

"ಬಹಳ ಚೆನ್ನಾಗಿ ಹೇಳಿದೆ. ಮಾಡಬೇಕಾದ್ದ ಕೆಲಸವನ್ನು ಕಷ್ಟ ಅಂತ ಬಿಡುವುದಕ್ಕಾಗುತ್ತೆಯೆ? ಅಷ್ಟಲ್ಲದೆ ನನ್ನದು, ತನ್ನದು ಅಂತ ಯಾಕೆ ಒದ್ದಾಡ್ತಾರೆ. ಈಗ ನಿನ್ನನ್ನು ಹೀಗೆ ಬಿಟ್ಟು ಹೋದರೆ, ನಿನ್ನ ಭಾಗಕ್ಕೆ ನಾನಿದ್ದೂ ಇಲ್ಲದ ಹಾಗಾಗುತ್ತದೆ. ಹಾಗಾಗಲಿ ಎಂದು ನಿನ್ನ ಇಷ್ಟವೇನು?"

ಸೀತಮ್ಮನವರಿಗೆ ಹೇಳಲು ಏನೂ ತೋರಲಿಲ್ಲ. ಅದಕ್ಕೆ ತಕ್ಕ ಹಾಗೆ ಭಾಗಮ್ಮನವರೂ,

"ಸೀತಮ್ಮ, ನೀನಿನ್ನೂ ಹುಡುಗಿ. ಇಂತಹ ಕಷ್ಟಕಾಲದಲ್ಲಿ ದೊಡ್ಡವರು ಹೇಳಿದ ಹಾಗೆ ಮಾಡುವುದು ಮೇಲು. ವೆಂಕಪ್ಪನೋರು ತಿಳಿವಳಿಕೆ ಇಲ್ಲವೆ ಹೇಳುತ್ತಿಲ್ಲ. ಜನದ ಬಾಯಿ ಮುಚ್ಚಿಸೋಕೆ ಜನಾರ್ದನನಿಂದಲೂ ಸಾಧ್ಯವಿಲ್ಲ ಅನ್ನೋ ಹಾಗೆ, ಜನ ಏನಾದರೂ ಒಂದು ಕೊಕ್ಕೆ ಮಾತು ಆಡೇ ಆಡುತ್ತಾರೆ. ನಿನಗೆ ತಾನೇ ಬೇರೆ ದಿಕ್ಕು ಯಾರಿದ್ದಾರೆ? ಏನೋ ಕೊಂಚ ದಿನ ಅವರ ಬಳಿ ಇದ್ದರೆ ಇಬ್ಬರಿಗೂ ಗೌರವ. ನೀನು ಮನೆ ಯೋಚನೆ ಮಾತ್ರ, ನಾನು ಬದುಕಿರೋ ತನಕ ಇಟ್ಟುಕೊಳ್ಳಬೇಡ. ಯಾರು ಎಲ್ಲಿಗೆ ಹೋದ್ರೂವೇ ನಾನೇನು ಈ ಜಾಗ ಬಿಟ್ಟು ಕದಲೊಲ್ಲ." ಎಂದರು.

ಇನ್ನು ಹೆಚ್ಚು ವಾದಿಸುವ ಶಕ್ತಿ ಸೀತಮ್ಮನಿಗಿರಲಿಲ್ಲ.

ರೈಲ್ವೆ ನಿಲ್ದಾಣಕ್ಕೆ ಹೋಗಲು ಮನೆಯ ಮುಂದೆ ಗಾಡಿ ಬಂದು

ನಿಂತಾಗ ಸೀತಮ್ಮನವರ ಹೃದಯದಲ್ಲಿ ಆದ ಆಂದೋಳನ ಅಷ್ಟಿಷ್ಟಲ್ಲ. ಶ್ರೀಕಂಠಯ್ಯನವರು ಸತ್ತರೆಂದು ಕೇಳಿದ ಆ ಒಂದು ಕ್ಷಣದಲ್ಲೂ ಸಹ ಅವರಿಗೆ ಹೃದಯದಲ್ಲಿ ಇಂತಹ ಘೋರ ಯಾತನೆಯಾಗಿದ್ದಿರಲಾರದು. ತಾವು ಬಾಳಿನಲ್ಲಿ ಪಟ್ಟಿದ್ದ ಆನೆ ಭದವನೆಗಳೇನು? ಈಗ ತಾವಿರುವ ಪರಿಸ್ಥಿತಿಯೇನು? ನೆನೆನೆನೆನಂತೆಲ್ಲಾ ದುಃಖ ಉಕ್ಕಿ ಬರುತ್ತಿತ್ತು. ಅತ್ತರೆ, ಸದಾ ಸಮೀಪದಲ್ಲಿರುತ್ತಿದ್ದ ಭಾಗಮ್ಮನವರು ರೇಗಾಡುತ್ತಿದ್ದರು. ಅಳುವನ್ನು ನುಂಗಿ ನುಂಗಿ ಅವರೆದೆಯಲ್ಲಿ ಹೊಸ ವೇದನೆಯೊಂದು ತಲೆ ಹಾಕಿತ್ತು. ಮೊದಲೇ ನಿಶ್ಶಕ್ತಿ, ಮೇಲೆ ಅನುಭವಿಸಲಾರದ ದುಃಖ. ಅವರ ಸಂಕಟವನ್ನು ಹೀಗೆಂದು ವರ್ಣಿಸುವಂತಿರಲಿಲ್ಲ. ಅತ್ತ ವೆಂಕಟಪತಯ್ಯನಿಗೆ ದುಃಖವಿದ್ದರೂ ಪ್ರದರ್ಶನಕ್ಕೆ ಪುರಸೊತ್ತು ಇರಲಿಲ್ಲ. ಪ್ರಯಾಣದ ಸಿದ್ಧತೆಯಲ್ಲಿ ಅವನು ಮುಳುಗಿಹೋಗಿದ್ದನು. ಅಂತೂ ಗಾಡಿಯು ಹೊರಡುವಾಗ, ಸೀತಮ್ಮ, ಭಾಗಮ್ಮನವರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು, ಇಬ್ಬರ ಕಣ್ಣಲ್ಲಿಯೂ ಕಣ್ಣೀರು ಕಟ್ಟೆ ಒಡೆದು ಹರಿಯಿತು. ರೈಲು ನಿಲ್ದಾಣಕ್ಕೆ ಗಾಡಿಯು ಬಂದು ಸೇರುವಾಗ, ಸೀತಕ್ಕ ಮಡಿಲಿನಲ್ಲಿ ಅವುಚಿಕೊಂಡಿದ್ದ ಮಗುವನ್ನು ಕಣ್ಣೀರಿನಲ್ಲಿ ಸಂಪೂರ್ಣವಾಗಿ ನೆನಸಿಬಿಟ್ಟಿದ್ದರು.

೩

ಸೀತಮ್ಮನವರು ಅಣ್ಣನ ಮನೆಯನ್ನು ಸೇರಿದರು. ಅಲ್ಲೊಂದು ಹೊಸ ಜೀವನದ ಆರಂಭವಾಯಿತು. ಅಣ್ಣನ ಮುರುಕು ಮನೆಯ ಮೂಲೆ ಮೂಲೆಯೂ ದಾರಿದ್ರ್ಯವನ್ನು ಎತ್ತಿತೋರುತ್ತಿತ್ತು. ಲಂಗವಿದ್ದರೆ ಜಂಪರಿಲ್ಲದ, ಜುಬ್ಬವಿದ್ದರೆ ಚಡ್ಡಿ ಇಲ್ಲದ ವೆಂಕಟಪತಯ್ಯನ ಮಕ್ಕಳನ್ನು ನೋಡಿದರೆ, ಸೀತಕ್ಕನ ಹೃದಯ ಕರಗಿ ನೀರಾಗಿ ಹೋಗುತ್ತಿತ್ತು. ಮೊದಮೊದಲು, ಈ ಬಡಪಾಯಿಗಳ ಒಪ್ಪತ್ತಿನ ಗಂಜಿಯ ಪಾಲಿಗೆ ನಾನು ಬೇರೆ ಬಂದೆನೇ ಎಂದು ಅವರಿಗೆ ವಿಪರೀತ ದುಃಖವಾಗುತ್ತಿತ್ತು. ಆದರೆ ನಿಜವಾಗಿ ಸೀತಕ್ಕನ ಆಗಮನದಿಂದ ವೆಂಕಟಪತಯ್ಯನಿಗೆ ತೊಂದರೆಯಾಯಿತೆನ್ನುವ ಬದಲು, ಉಪಕಾರವೇ ಆಯಿತೆನ್ನಬೇಕು. ಏಕೆಂದರೆ ತನ್ನ ಮನೆ ಬೇರೆ, ಅಣ್ಣನ ಮನೆ ಬೇರೆಯೆಂದು ತಿಳಿದು

ಕೊಳ್ಳದಿದ್ದ ಸೀತಮ್ಮ, ಮನೆಯ ಬಾಡಿಗೆಯ ರೂಪದಲ್ಲಿ ತಿಂಗಳು ತಿಂಗಳಿಗೆ ಬರುತ್ತಿದ್ದ ಹತ್ತು ರೂಪಾಯಿಗಳಲ್ಲಿ, ಒಂದು ಕಾಸನ್ನೂ ಸ್ವಂತ ಖರ್ಚಿಗೆಂದು ಇಟ್ಟುಕೊಳ್ಳದೆ ಅಣ್ಣನಿಗೆ ಕೊಟ್ಟುಬಿಡುತ್ತಿದ್ದರು. ಅಲ್ಲದೆ ಅವರಿಗೆ ಬರುತ್ತಿದ್ದ ವರ್ಷಾಕಾಲಕ್ಕಾಗುವ ಭತ್ತವೂ ವೆಂಕಟಪತಯ್ಯನ ಮನೆಗೇ ಬಂದುಬೀಳುತ್ತಿತ್ತು. ಇದರ ಜೊತೆಗೆ, ಸೀತಮ್ಮನವರು ಬಿಡುವು ವಿಶ್ರಾಂತಿಯೆನ್ನದೆ ಮನೆಗೆಲಸಗಳಲ್ಲಿ ಸಾವಿತ್ರಿಗೆ ನೆರವಾಗುತ್ತಿದ್ದರು. ಅಂತೂ ಅವರಿಂದ ಎಷ್ಟು ಉಪಕಾರವಾಗುತ್ತದೆ ಎಂಬುದನ್ನು ಅಣ್ಣನಾಗಲಿ, ಅತ್ತಿಗೆಯಾಗಲಿ ಅರಿಯದಿರಲಿಲ್ಲ. ಅಣ್ಣನಿಗೇನೋ ಇದರಿಂದ ಒಂದು ಬಗೆಯ ಕೊರಗು. ಕಷ್ಟಕಾಲದಲ್ಲಿ ತಂಗಿಗೆ ನೆರವಾಗುವ ನೆಪದಲ್ಲಿ ತಾನೇ ಉಪಕಾರ ಹೊಂದುತ್ತಿರುವೆನಲ್ಲಾ ಎಂದು. ಆದರೆ ಅತ್ತಿಗೆಗೆ ಈ ಮನಸ್ಸು ಬರುವುದು ಅಸಾಧ್ಯವೇ. ಸಾವಿತ್ರಿ ಕೆರೆಯ ನೀರಿಗೆ ಹೋದಾಗ, ಊರ ಹೆಂಗಸರು ನಂಬಲಿ, ನಂಬದಿರಲಿ, ತಮ್ಮ ದುರ್ಗತಿಯಲ್ಲಿ ಹೊರಲಾರದ ಹೊರೆಯಾಗಿ ಬಂದ ಸೀತಮ್ಮನವರಿಂದ ಎಷ್ಟು ತೊಂದರೆಯೆಂಬುದನ್ನು ಬಣ್ಣ ಕಟ್ಟಿ ಹೇಳುತ್ತಿದ್ದಳು.

ಅಂದು ವೆಂಕಟಪತಯ್ಯನ ತಂದೆಯವರ ವೈದೀಕ. ಸೀತಕ್ಕ ಒಂದು ರಾಶಿ ಮುಸುರೆಪಾತ್ರೆಗಳನ್ನು ತೊಳೆಯುತ್ತಿದ್ದರು. ಕೆಲಸವೆಂದರೆ ಅವರಿಗೆ ಎಂದೂ ಬೇಜಾರಿರಲಿಲ್ಲ. ಇತರರೊಡನೆ ಬೆರತು ಅವರಿವರನ್ನು ನಿಂದಿಸುವುದು ಸೀತಮ್ಮನವರಿಗೆ ಯಾವತ್ತಿಗೂ ಆಗದ ವಿಷಯವಾಗಿತ್ತು. ಆದಕಾರಣ ಅವರು ಹರಟೆಗೆ ಅಷ್ಟಾಗಿ ಸೇರುತ್ತಿರಲಿಲ್ಲ. ಆ ದಿನ ಸಾವಿತ್ರಿ ಅಂಗಳದಲ್ಲಿದ್ದ ಸೀತಮ್ಮನವರನ್ನು ಕಾಣದೆ, ಪಕ್ಕದಮನೆಯ ರಂಗಮ್ಮನವರ ಬಳಿ ಗಟ್ಟಿಯಾಗಿ ಮಾತಾಡುತ್ತಿದ್ದಳು.

“ನೋಡೀಂದ್ರೆ, ಒಂದು ತಿಂಗಳ ಬತ್ತೀನ ತಬ್ಬಿಕೊಂಡು ಬಂದವಳು ಮಹರಾಯಿತಿ. ವರ್ಷವಾಯ್ತು, ಎರಡು ವರ್ಷವಾಯ್ತು, ಇನ್ನೇನು ಮೂರು ವರ್ಷಕ್ಕೂ ಬಂತು ಇಲ್ಲೀ ವರೆಗೂ ಇವಳಿಗೆ ದುಃಖ, ದುಃಖ ಅಂತ ತೊಳೆಯೋದರಲ್ಲೇ ಮುಗೀತು ನನ್ನ ಹಣೇಬರಹ. ಒಂದು ಕೆಲಸವೇ, ಬದುಕೇ ಅಂತ ಅಂತೀರಾ ? ಏನು ಕೇಳ್ಕೊ ಬೇಡಿ.”

“ಬಿಡಿ ಸಾವಿತ್ರಮ್ಮ ನಿಮ್ಮದಂತೂ ತೀರಾ ವಿಚಿತ್ರ. ಎಂಟು ತಿಂಗಳು ತುಂಬಿದರೂ ಕೆಲಸ ಬೆನ್ನಿಗೆ ಕಟ್ಟಿಕೊಂಡೇ ಇರ್ತೀರಿ. ಅತ್ತಲಾಗೆ

ಬಿಟ್ಟಿದನ್ನು ಬಿಟ್ಟಹಾಗೇ ಹಾಕಿ ಕೂತ್ಕೋ ಬಾರದೆ. ಮಾಡ್ತಾಳೆ ಆಕೇನೆ. ಏನು ಹೊರಗಿನ ಮನೆಯೇ. ಅವಳಿಗೇನು ಗೂಳಿ ಇದ್ದ ಹಾಗಿದಾಳೆ. ಮೊದಲು ಬಂದಾಗ್ಲೂ, ಈಗ್ಲೂ ನೋಡಿ ಏನು ಬದಲಾವಣೆ! ಕೆಲವರಿಗೆ ಗಂಡ ಸತ್ತ ಮೇಲೆ ಶಕ್ತಿ ಬರುತ್ತಂತೇವಮ್ಮಾ! ನಮ್ಮಮ್ಮ ಇದ್ದಾಗ ಹಾಗನ್ನೋಳು.”

“ಹೂಂ, ಮೈಸೂರಿನಲ್ಲಿ ಅಂದರೆ ನೀರುಮಜ್ಜಿಗೆ ಕುಡಕೊಂಡು ಬಿದ್ದಿದ್ದಳು. ಇಲ್ಲಿಯು ಹಾಗೆ ಹಾಲು, ಮೊಸರು ಎಲ್ಲ ಎಲ್ಲಿ ಬರಬೇಕು ಆರೈಕೆಗೆ. ನೋಡಿದವರಿಗೆ ಬಹಳ ಸಭ್ಯಸ್ಥೆ, ಚಿಕ್ಕಂದಿನಲ್ಲೇ ಮುಡಿಯಾಗಿ ಬಿಟ್ಟಳು ಅನ್ನೋಹಾಗೆ ಕಾಣುತ್ತೆ. ರಾತ್ರಿ ಫಲಹಾರ ಚೆನ್ನು ಎಂದು ಮುಡಿಯಾದ ವಿಷಯ ನನಗೆ ಗೊತ್ತು, ನಿಮಗೆ ಗೊತ್ತು. ಅಲ್ಲ, ದುಃಖ, ದುಃಖ ಅಂತಾನೆ ಅದೇನು ಷೋಕಾಗಿ ಬಾಣಂತನ ಮಾಡಿಸಿಕೊಂಡಳು ಅಂತೀರಿ. ನನ್ನ ಜೀವ ಅರ್ಧವಾಗಿಹೋಯ್ತು. ಇನ್ನು ನಾಳೆ ನೋಡು ವಿರಂತೆ ನನಗೆ ಮಾಡೋ ಉಪಚಾರಾನ.”

“ನೀವು ಸುಮ್ಮನೆ ದಾಕ್ಷಿಣ್ಯಪಟ್ಟುಕೊಂಡು ಕೂತ್ಕೋಬೇಡಿ ಸಾವಿತ್ರಮ್ಮ, ಕೆಲಸ ಕೊಡಿ, ಮಾಡಲಿ. ಒಳ್ಳೆ ಕಸರತ್ತು ಆದ ಹಾಗಾಗುತ್ತೆ.”

“ಅವಳ ಮಗನ್ನ ಹೊತ್ತುಕೊಂಡು ತಿರುಗೋದೇ ಸಾಲದೆ ಕಸರತ್ತಿಗೆ. ಎತ್ತಿಕೊಂಡರೆ ಹುಡುಗನ ಕಾಲು ನೆಲಕ್ಕೆ ಮುಟ್ಟುತ್ತೆ. ಮಗೂ, ಮಗೂಂತ ಮುದ್ದಾಡ್ತಾಳೆ ಆ ಧಡಿಯನ್ನ. ತನಗೆ ‘ಓ’ ‘ಟೋ’ ಅನ್ನೋಕೆ ಬರದಿದ್ರೂ ಅದೇನು ಬಾಯಿಪಾಠ ಹೇಳಿಸಾಟ. ಅದೇನು ವಿದ್ಯಾಭ್ಯಾಸ ಮಾಡಿಸಾಟ. ನಮ್ಮನೇಲಿ ಅವರೂ ಮೇಷ್ಟ್ರೆ ತಾನೇ! ಇವಳ ಓಲಾಟ ನೋಡಿ ಮನಸ್ಸಿನಲ್ಲಿ ಎಷ್ಟು ನಕ್ಕೋತಾರೊ ಏನೊ! ಅವಳ ಮನಸ್ಸಿನಲ್ಲಿ ಅವನಿಗೆ ಈಗಲೇ ಬಿ.ಎ. ಪಾಸು ಮಾಡಿಸಿ ಬಿಡಬೇಕು ಅನ್ನೋ ಆತುರ.”

ಅದುವರೆಗೂ ಸಾವಿತ್ರಿಯನ್ನೇ ನೋಡುತ್ತಿದ್ದ ರಂಗಮ್ಮ, ಅವಳ ಮಾತು ಮುಗಿದ ಕೂಡಲೇ, ತಟ್ಟನೆ ತನ್ನ ಕತ್ತನ್ನು ತೊಂಭತ್ತು ಡಿಗ್ರಿ ಪಕ್ಕಕ್ಕೆ ತಿರುಗಿಸಿಬಿಟ್ಟಳು.

“ಹುಶ್, ಬದುಕಿರೋಣ ಬಿಡಿ, ಅದು ಓದೋ ತನಕ.”

“ಅಯ್ಯೋ, ಅಷ್ಟಲ್ಲದೆ ಮತ್ತೇನೊಂದ್ರೆ. ಅದೇನು ದೊಡ್ಡದಾಗುತ್ತೋ, ನಡುವೆಯೇ ಸಿಗಿದು ಬಿದ್ದುಹೋಗುತ್ತೊ........”

ಇಲ್ಲಿಯ ವರೆಗೂ ಸಹನೆಯಿಂದ ಕುಳಿತಿದ್ದ ಸೀತಮ್ಮನವರಿಗೆ ಇನ್ನು ತಡೆಯಲಾಗಲಿಲ್ಲ. ಪಾತ್ರೆಗಳನ್ನು ಹೇಗೆ ಗಲಬರಿಸಿದರೋ ತಿಳಿಯದು. ದೇವರ ಮನೆಗೆ ಹೋಗಿ, ಅಳುತ್ತಾ ಕುಳಿತುಬಿಟ್ಟರು. ಪಾತ್ರೆಗಳು ಶಬ್ದವಾದಾಗ ಸಾವಿತ್ರಿಗೆ ಅರ್ಥವಾಯಿತು, ಇಷ್ಟರ ವರೆಗೂ ತಾನಾಡುತ್ತಿದ್ದುದು ಅತ್ತಿಗೆಗೆ ಗೊತ್ತಾಗಿಹೋಯಿತೆಂದು, ಸೀತಕ್ಕ ಏನು ಗಲಾಟೆ ಮಾಡುವರೋ ಎಂದು ಅವಳಿಗೂ ಗಾಬರಿಯಾಯಿತು. ಸೀತಮ್ಮ ಅಣ್ಣನನ್ನೇ ಇದಿರುನೋಡುತ್ತಾ ಕುಳಿತರು. ರಾತ್ರಿ ಕೆಲಸವೆಲ್ಲಾ ಮುಗಿದ ಮೇಲೆ ಅಣ್ಣ ತಂಗಿಯರಲ್ಲಿ ಮಾಮೂಲಿನಂತೆ ಮಾತಿಗಾರಂಭವಾಯಿತು.

“ವೆಂಕು, ನಾನು ಬಂದು ಮೂರು ವರ್ಷಕ್ಕೆ ಬಂತಲ್ಲವೇ?”

“ಹೂಂ, ಮೂರ್‍ಯಾಕೆ, ಹೆಚ್ಚು ಕಡಮೆ ಮೂರೂವರೆ ವರುಷಕ್ಕೇ ಬಂತು. ದಿವಸ ನೋಡು ಹೇಗೆ ಕಳೆದುಹೋಗುತ್ತೆ.”

“ಅದಕ್ಕೇನು, ನಮಗೆ ಇಷ್ಟವಿರಲಿ ಇಲ್ಲದಿರಲಿ ಓಡಿ ಹೋಗುತ್ತೆ. ಆದರೂ ಮೈಸೂರು ಮನೆ ಇಷ್ಟು ದಿನ ಬಿಟ್ಟದ್ದು ತಪ್ಪಾಯಿತು. ಅವರಿಗೆ ಅದು ಎರಡನೆ ಪ್ರಾಣ. ನನಗೆ ವಾಸು ಒಂದು ಕಣ್ಣಾದರೆ, ಆ ಮನೆ ಒಂದು ಕಣ್ಣು.”

“ಅದು ಸರಿಯೆ. ಆದರೂ ಭಾಗಮ್ಮನವರು ನಿನಗಿಂತ ಚೆನ್ನಾಗೇ ನೋಡಿಕೊಳ್ತಿದ್ದಾರೆ. ಮೊನ್ನೆ ಕೂಡ ಏನೇನೊ ಕಾಮಗಾರಿಕೆ ಮಾಡಿಸಿರುವ ಹಾಗೆ ಹೇಳಿ ಕಾಗದ ಬರೆದಿದ್ರು, ಏನಾದರೂ ಹೋಗಿ ನೋಡಬೇಕು ಅನ್ನೋ ಚಪಲವೇನು?”

“ಹೋಗಿ ನೋಡ್ಕೊಂಡು ಬರಬೇಕು ಅನ್ನೋದೇನಿಲ್ಲ. ಹೇಗಿದ್ರು ಮಗೂನೂ ದೊಡ್ಡದಾಯ್ತು. ಇನೆಷ್ಟು ದಿನ ಸೀ ತಾನೇ ನಮ್ಮ ಭಾರ ಹೊರಕ್ಕಾಗುತ್ತೆ........” ಸೀತಕ್ಕನಿಗೆ ಅಳು, ತಡೆಯಬೇಕೆಂದರೂ ಸಾಧ್ಯವಿಲ್ಲದೆ ಹೋಯಿತು. ವೆಂಕಟಪತಯ್ಯನಿಗೆ, ಮನೆಯಲ್ಲಿ ಏನೋ ರಾದ್ಧಾಂತ ನಡೆದಿರಬೇಕೆಂದು ಅರ್ಥವಾಗಿಹೋಯಿತು.

“ಸೀತು, ನೀನು ಸುಮ್ಮನೆ” ಅವಳಿಗೆ ಸೆಗರಿಕೊಂಡು ಮಾತಿಗೆ

ಮೊದಲು ಅತ್ತರೆ ಏನೂ ಪ್ರಯೋಜನವಿಲ್ಲ. 'ನೀನ್ಯಾರು ಅನ್ನೋಕೆ ಅಂತ ದಬಾಯಿಸಬೇಕು ಇಷ್ಟಕ್ಕೂ ಅವಳ ಹಂಗೇನಿದೆ ನಿನಗೆ? ಇನ್ನೂ ನಿನ್ನ ಹಂಗಿನಲ್ಲಿ ಆ ನಾಯಿ ಬಿದ್ದಿದೆ. ಹೆಚ್ಚಿಗೆ ಮಾತಾಡಿದರೆ ಹೇಳು ಕತ್ತು ಹಿಡಿದು ಆಚೆ ನೂಕಿಬಿಡ್ತೇನೆ."

ಒಳಗೇ ಗುರುಗುಟ್ಟುತ್ತಿದ್ದ ಸಾವಿತ್ರಿಗೆ ಕಿಚ್ಚುಕೊಟ್ಟ ಹಾಗಾಯಿತು. ತನ್ನ ಕೈಯಿಂದ ಎಷ್ಟರಮಟ್ಟಿನ ಆರ್ಭಟವು ಸಾಧ್ಯವೊ, ಅಷ್ಟನ್ನೂ ಮಾಡುತ್ತ ಹೊರಗೆ ಬಂದಳು

"ಏನು ನಾಯಿ ಗೀಯಿ ಅಂತ ಬೈತಿದ್ದೀರಲ್ಲ, ಬಹಳ ದೊಡ್ಡ ಮನುಷ್ಯರು, ನಾಯಿ, ನರಿ, ಏನು ಬೇಕಾದ್ರೂ ನೀವೇ ಆಗಿ. ಇಲ್ಲವೆ— ನಿಮ್ಮ ತಲೆ ಕೆಡಿಸಿರುವ ಆ ನಿಮ್ಮ ತಂಗಿ ಆಗ್ಲಿ. ನಾನ್ಯಾಕಾದೇನು. ಅವಳಿಂದ ಬರೋ ಮೂರು ಕಾಸೂ ಸಾಕು, ಈ ಹುಯ್ಲೂ ಸಾಕು. ತಿಂಗಳಿಗೆ ಹತ್ರುಪಾಯಿ ಕೊಟ್ರೆ ಇನಳಿಗೆ ಇಷ್ಟೆಲ್ಲಾ ಆಗಭೋಗ ಯಾರು ಮಾಡ್ತಾರೆ? ಇದರ ಮೇಲೆ ಮಹಾರಾಣಿ ಹಾಗೆ ಜೋರು ಬೇರೆ ಮಾಡುವುದು. ಇವತ್ತು ನಾನಂದದ್ದಾದರೂ ಏನು. ಆ ರಂಗಮ್ಮನೋರ ಕೈಲಿ ಏನೋ ಲೋಕಾರೂಢಿಯಾಗಿ, ಮಗೂಗೆ ಚಿಕ್ಕ ವಯಸ್ಸಾದರೂ ಬಾಯಿಪಾಠ ಚೆನ್ನಾಗಿ ಹೇಳುತ್ತೇ ಎಂದೆ. ಇವರ ಮಗನ ವಿಚಾರವಾಗಿ ನಾನಷ್ಟು ಸ್ವಾತಂತ್ರ್ಯ ವಹಿಸಬಾರದಾಗಿತ್ತು. ತಿಳೀದೆ ಮಾತಾಡಿಬಿಟ್ಟೆ. ಇದಕ್ಕೆ ಇಷ್ಟು ರಂಪ ಮಾಡ್ತಾರೆ ಅಂತ ಯಾರಿಗೆ ಗೊತ್ತು."

"ಮಧ್ಯೆಮಾತಿನಲ್ಲಿ ನಿನ್ನನ್ನು ಕರೆಸಿದವರ್ಯಾರು. ಬಾಯಿ ಮುಚ್ಚಿ ಕೊಂಡು ನಿನ್ನ ಕೆಲಸ ನೋಡಿಕೊ ಹೋಗು. ಇವಳೇನೂ ಅನ್ನಲಿಲ್ಲ ವಂತೆ, ಅವಳು ಸುಮ್ಮನೆ ಚಾಡಿ ಹೇಳ್ತಾಳಂತೆ. ಇಷ್ಟೂ ನಿನ್ನಿಂದಲೇ ಸೀತು. ಅಂದದ್ದನೆಲ್ಲಾ ಅನ್ನಿಸಿಕೊಂಡು, ಸುಮ್ಮನಾಗಿ ಆಗಿ, ನೀನಿ ವಳನ್ನು ಅಟ್ಟಕ್ಕೆ ಏರಿಸಿಬಿಟ್ಟಿದ್ದಿ."

ವೆಂಕಟಪತಯ್ಯನ ಕೋಪ ಬಹಳ ಉಗ್ರವಾಗಿತ್ತು. ಸೀತಕ್ಕ ದಿಕ್ಕು ತೋರದವರಂತೆ ಕುಳಿತುಬಿಟ್ಟರು. ಅವರು ಹೆದರಿದುದನ್ನು ಕಂಡು ಸಾವಿತ್ರಿಗೆ ಮತ್ತೆ ಎಲ್ಲಿಲ್ಲದ ಧೈರ್ಯ ಬಂದಿತು. ಅವಳು ಸೀತಕ್ಕನನ್ನು ಉದ್ದೇಶಿಸಿ,

"ಬರೀ ಸುಳ್ಳು ಪೋಣಿಸಿ ಅಣ್ಣನಿಗೆ ಚಾಡಿ ಚುಚ್ಚಿಬಿಟ್ಟರು ಈಗ ಏನೂ ಕಾಣದ ಮಳ್ಳಿಹಾಗೆ ಕೂತಿದ್ದಾರೆ" ಎಂದಳು.

ಸೀತಮ್ಮನವರಿಗೆ ಇದುವರೆಗಿದ್ದ ಸಹನೆ ಎಲ್ಲಿ ಹೋಯಿತೊ ತಿಳಿಯದು.

"ಸಾವಿತ್ರಿ, ಮನುಷ್ಯರ ಸಹನೆಗೂ ಒಂದು ಮಿತಿ ಇದೆ ಎಲ್ಲೆ ಮೀರಿ ಮಾತಾಡಿದರೆ ಯಾರೂ ಕೇಳುವುದಿಲ್ಲ. ನೀನು ನನ್ನನ್ನು ಹಿಂದೆ ಎಷ್ಟೋ ಅಂದಿದ್ದಿ. ಮುಂದೆಯೂ ಅನ್ನುತ್ತಿ ಅದಕ್ಕೆ ನನಗೆ ಕೊಂಚವೂ ಕೋಪವಿಲ್ಲ. ನಿನ್ನ ಪಾಪ ನಿನ್ನನ್ನು ನೋಡಿಕೊಳ್ಳಲಿ ಅನ್ನುತ್ತೇನೆ. ಆ ತಂದೆ ಇಲ್ಲದ ಮಗು ನಿನಗೇನು ಅನ್ಯಾಯ ಮಾಡಿದೆ? ಅದನ್ನ ವೆಂಕು, ನೆಗೆದು ಬಿದ್ದು ಹೋಗುತ್ತೆ ಅಂತ, ಇವತ್ತು ಇವಳೂ, ಆಚೆಮನೆ ರಂಗಮ್ಮನೂ ಮಾತಾಡುತ್ತಿದ್ದರು. ನನ್ನಿಂದ ಯಾಕೋ ಸಹಿಸಲಿಕ್ಕೆ ಆಗಲಿಲ್ಲ........"

ಇಷ್ಟಕ್ಕೆ ಸೀತಕ್ಕನ ಗಂಟಲುಬ್ಬಿ ಬಂದಿತು. ವೆಂಕಟಪತಯ್ಯನಿಗೆ ಹೆಚ್ಚು ಮಾತಾಡುವ ಸಹನೆಯೂ ಇರಲಿಲ್ಲ. ಅವನು ಮನದಣಿಯುವಷ್ಟು ಸಾವಿತ್ರಿಯನ್ನು ರೂಲುದೊಣ್ಣೆಯಿಂದ ಹೊಡೆದನು. ಸೀತಕ್ಕನಾಗಲಿ, ಸಾವಿತ್ರಿಯಾಗಲೀ ಪರಿಸ್ಥಿತಿ ಇಷ್ಟು ಹಗರಣಕ್ಕೆ ಬರುತ್ತದೆಂದು ಭಾವಿಸಿರಲಿಲ್ಲ. ಊರಿಗೆ ಹೊರಡುತ್ತೇನೆ ಎಂದು ಹೇಳುವ ಧೈರ್ಯ ಸೀತಕ್ಕನಿಗೆ ಕೊಂಚವೂ ಉಳಿದಿರಲಿಲ್ಲ. ಅವರು, ಸದ್ಯಕ್ಕೆ ವೆಂಕಟಪತಯ್ಯನು ಶಾಂತನಾದರೆ ಸಾಕೆಂದು ಸುಮ್ಮನಾದರು. ಇನ್ನೊಂದು ದಿನ ಇದೇ ಬಗೆಯ ಆರೋಪಣೆ ತನ್ನ ಮೇಲೆ ಬಂದರೆ, ಗಂಡನು ದಾಕ್ಷಿಣ್ಯವಿಲ್ಲದೆ ತನ್ನ ಜೀವವನ್ನು ತೆಗೆದು ಬಿಡುವುದು ಖಂಡಿತವೆಂದು ಸಾವಿತ್ರಿ, ಇನ್ನು ಮುಂದೆ ಮಾತಾಡಬೇಕಾದಾಗಲೆಲ್ಲ ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿದ್ದಳು. ಸೀತಕ್ಕನಿಗೆ ಇದರಿಂದ ಒಂದು ನೆಮ್ಮದಿ ದೊರಕಿತ್ತು.

## ೪

ವಾಸುವಿಗೆ ಏಳು ವರ್ಷ ತುಂಬಿದಾಗ ಅವನ ಪ್ರೈಮರಿ ಶಾಲೆಯ ವಿದ್ಯಾಭ್ಯಾಸವು ಮುಗಿಯಿತು. ಅವನು ಸೋದರಮಾವನ ಶಾಲೆಯಲ್ಲೇ ಓದಿದ್ದನು. ಆದರೆ ಮುಂದಿನ ವಿದ್ಯಾಭ್ಯಾಸಕ್ಕೆ ಆ ಹಳ್ಳಿಯಲ್ಲಿ ಅನುಕೂಲನಿರಲಿಲ್ಲ. ಮಾಧ್ಯಮಿಕ ಶಾಲೆಯಲ್ಲಿ ಓದಲು ಮೈಸೂರಿಗೇ ಹೋಗಬೇಕಾಗಿತ್ತು. ಇತ್ತ ಸೀತಕ್ಕನಿಗೂ ಅನುಭವಿಸಲಾರದ ಉಪಟಳ

ಸಹಿಸಿ, ಸಾಕಾಗಿ, ಎಂದು ಇಲ್ಲಿಂದ ಪಾರಾದೇನೋ ಎಂಬ ಕಾತರ ಹೆಚ್ಚಿತ್ತು. ಮತ್ತೆ ನಾದಿನಿಯು ಮೈಸೂರಿಗೆ ಮರಳುವಳೆಂದು ಗೊತ್ತಾದಾಗ, ಸಾವಿತ್ರಿ ತಮಗಾಗುತ್ತಿದ್ದ ಲಾಭವೆಲ್ಲ ಹೋಯಿತೆಂದು ಉರಿದು ಬಿದ್ದಳು. ಇಷ್ಟು ಕಾಲದ ವಿರಾಮದಲ್ಲಿ ಅವಳಿಗ ಮತ್ತೆ ಮೂರು ಮಕ್ಕಳು ಹುಟ್ಟಿ, ಒಂದು ಸತ್ತು, ಎರಡು ಉಳಿದುಕೊಂಡಿದ್ದುವು. ಅದೂ ಹಾಗಿರಲಿ, ಸೀತಮ್ಮನವರು ಬಂದಂದಿನಿಂದ ಅಕ್ಕಿಗೆ ಅಷ್ಟು ತಾಪತ್ರಯವಾಗದೆ, ಒಪ್ಪತ್ತಾದರೂ ಚೆನ್ನಾಗಿ ಊಟ ಮಾಡಿ ಅವಳ ಮಕ್ಕಳು ಆಗತಾನೆ, ಕೊಂಚ ನೋಡಬಹುದು ಎನ್ನುವ ಸ್ಥಿತಿಗೆ ಬಂದಿದ್ದುವು. ಇಂತಹುದರಲ್ಲಿ ಸೀತಮ್ಮನವರನ್ನು ಕಳುಹಲು ಸಾವಿತ್ರಿಗೆ ಮನಸ್ಸು ಹೇಗೆ ಬರಬೇಕು? ಅವಳು ನಾದಿನಿಯು ಹೋಗದಂತೆ ನಾನಾ ಬಗೆಯ ಆಟಗಳನ್ನು ಹೂಡಿದಳು. ಯಾವುದೂ ಕೆಲಸಕ್ಕೆ ಬಾರದಿರಲು, "ನಿಮ್ಮ ಮಗನಿಗೆ ವಿದ್ಯೆ ಬೇಡ. ಅದರಿಂದೇನಾದೀತು. ತಂದೆ ಸಂಪಾದಿಸಿರೋ ನಾಲ್ಕಡಿ ಭೂಮಿ ಇಲ್ಲವೆ. ಬೇಸಾಯ ಮಾಡಿ ಬದುಕಲಿ. ಸ್ವಂತಾರಂಭ ಮಾಡಿ ಎಷ್ಟು ಜನ ಸಾಹುಕಾರರಾಗಿಲ್ಲ" ಎಂದು ಹೇಳಿನೋಡಿದಳು. ಸೀತಕ್ಕ ಈ ವಿಚಾರದಲ್ಲಿ ಮಾತ್ರ ಯಾರಿಗೂ ಮಣಿಯುವವರಾಗಿರಲಿಲ್ಲ. ಶ್ರೀಕಂಠಯ್ಯನವರು ಎಂದೋ ಹಾಸ್ಯಕ್ಕೆ ಆಡಿದ ಒಂದು ಮಾತನ್ನು ಅವರು ಭದ್ರವಾಗಿ ಹಿಡಿದಿದ್ದರು. ತಮ್ಮ ಜೀವಕ್ಕೆ ಸುಖವಿಲ್ಲದಿದ್ದರೂ ಚಿಂತೆಯಿಲ್ಲ. ವಾಸು ಮಾತ್ರ ವಿದ್ಯಾವಂತನಾಗಬೇಕು. ಇದು ಅವರ ಜೀವನದ ಹೆಗ್ಗುರಿ. ವಿದ್ಯೆಗೆ ಸಂಬಂಧಪಟ್ಟ ವಿಷಯದಲ್ಲಿ ಇಲ್ಲದ ತೊಂದರೆ ತಂದೊಡ್ಡುವುದು ತರವಲ್ಲವೆಂದು, ವೆಂಕಟಪತಯ್ಯನೂ ಸಹ ಸೀತಮ್ಮನವರ ಅಭಿಪ್ರಾಯಕ್ಕೆ ಇದಿರಾಡಲಿಲ್ಲ. ಅವರ ಅಭಿಲಾಷೆಯಂತೆ ಭಾಗಮ್ಮನವರಿಗೆ ಒಂದು ಕಾಗದ ಹಾಕಿಯಾಯಿತು. ಭಾಗಮ್ಮನವರಿಂದ ಮರು ಜವಾಬು ಬಂದಕೂಡಲೆ ತಾಯಿ ಮಗನ ಪ್ರಯಾಣಕ್ಕೆ ಸಿದ್ಧತೆಗಳಾದುವು. ಸೀತಮ್ಮ ತಮಗೆ ಬಂದಿದ್ದ ವನವಾಸವನ್ನು ಜಯಪ್ರದವಾಗಿ ಕಳೆದೆನೆಂದು, ಮೈಸೂರಿಗೆ ಮತ್ತೆ ಮರಳಿದರು. ಸಾವಿತ್ರಿಗಾದ ನಿರಾಶೆ ಅಷ್ಟಿಷ್ಟಲ್ಲ. ಅವರು ಹೊರಟುಹೋದಮೇಲೆ ಊರಿನವರ ಸಂಗಡ,

"ಹಾವಿಗೆ ಹಾಲೆರೆದು ಸಾಕಿದ ಹಾಗಾಯಿತು. ಧರ್ಮಕ್ಕೆ ಹೆದರಿ ಎಲ್ಲವನ್ನೂ ಇವರಿಗೆ ಮಾಡಿದೆ. ಮನೆಯ ಮಕ್ಕಳ ಬಾಯಿಗೆ ಮಣ್ಣು ಬಿತ್ತು," ಎಂದು ದೊಡ್ಡ ರಂಪ ಮಾಡಿದಳು.

ಸೀತಮ್ಮನವರು ಮೈಸೂರಿಗೆ ಬಂದಮೇಲೆ, ತಮ್ಮನೆಯಲ್ಲಿ ಬಾಡಿಗೆಗಿದ್ದವರನ್ನು ಬಿಡಿಸುವ ಸಾಹಸಕ್ಕೆ ಹೋಗಲಿಲ್ಲ. ಆ ಬಾಡಿಗೆಯೊಂದನ್ನು ಬಿಟ್ಟರೆ ಜೀವಿಸಲು ಅವರಿಗೆ ಬೇರೆ ಯಾವ ವರಮಾನವೂ ಇರಲಿಲ್ಲ. ಈ ಕಾರಣದಿಂದ ಸೀತಮ್ಮ, ತಾವು ನಂಜುಂಡಳ್ಳಿಗೆ ಹೋಗುವ ಮುನ್ನ ತಮ್ಮ ಮನೆಯ ಪಾತ್ರೆ ಪದಾರ್ಥಗಳನ್ನು ಇಡಲು ಬಿಡಿಸಿಕೊಂಡಿದ್ದ ಎರಡು ಕೋಣೆಗಳನ್ನೇ ಶುಭ್ರ ಮಾಡಿಕೊಂಡು ವಾಸ ಮಾಡ ಹತ್ತಿದರು. ಅಕ್ಕಿಯೊಂದನ್ನು ಬಿಟ್ಟು ಮಿಕ್ಕ ಎಲ್ಲ ಪದಾರ್ಥಗಳನ್ನೂ ಕೊಳ್ಳಬೇಕಾಗಿತ್ತು. ಅವರು ಬರಿಯ ಅನ್ನವೊಂದರಲ್ಲಿ ಕಾಲ ತಳ್ಳ ತೊಡಗಿದರು. ಎಂದಾದರೊಂದು ದಿನ ಅನ್ನದ ಜೊತೆಗೆ ಗೊಜ್ಜನ್ನು ಮಾಡಿದರೆ, ಆ ದಿನ ಹಬ್ಬವಿದ್ದಹಾಗೆ. ವಾಸುವಿಗೆ ಮಾತ್ರ ತಿಂಗಳಿಗೆ ಹದಿನೈದು ದಿನ ಮನೆಯಲ್ಲಿ ಊಟವಾದರೆ, ಮತ್ತೆ ಹದಿನೈದು ದಿನ ಆ ನೆಪ ಈ ನೆಪದಲ್ಲಿ ಭಾಗಮ್ಮನವರ ಮನೆಯಲ್ಲೇ ಕಳೆದುಹೋಗುತ್ತಿತ್ತು. ಅಲ್ಲದೆ ಮನೆಯಲ್ಲಿ ಒಕ್ಕಲಿದ್ದವರಿಗೂ ವಾಸುವೆಂದರೆ ಎಲ್ಲಿಲ್ಲದ ಮರುಕ. ವಾಸುವಿನ ಜೊತೆಯವನಾದ ಪುಟ್ಟನಿಗೆ ಆಗುತ್ತಿದ್ದ ಆಗ ಭೋಗಗಳಲ್ಲಿ ಅಲ್ಪವಾದರೂ ವಾಸುವಿಗೆ ಆಗದೇಹೋಗುತ್ತಿರಲಿಲ್ಲ.

ಅಂತೂ ಮಗನ ವಿದ್ಯಾಭ್ಯಾಸದ ಕಾಲದಲ್ಲಿ ಸೀತಕ್ಕ ನಡಸಿದ್ದು ಘೋರವಾದುದೆಂದು ತಪಸ್ಸು ಇಂದು ಅವನು ಓದುತ್ತಿರುವುದು ಸಣ್ಣ ತರಗತಿಯಲ್ಲಿ. ನಾಳೆಯೆಂದರೆ ಕಾಲೇಜಿನ ಓದು ಇಷ್ಟು ಸುಲಭದಲ್ಲಿ ನಡೆದುಹೋದೀತೆ? ಸೀತಮ್ಮನವರು ಒಂದೊಂದು ಕಾಸನ್ನೂ ಅಲಕ್ಷ್ಯ ಮಾಡದೆ ಕೂಡಿಡುತ್ತಿದ್ದರು. ಕೇವಲ ಒಬ್ಬರ ಒಪ್ಪತ್ತಿನ ಊಟವಾಗಿದ್ದ ಕಾರಣ ವರ್ಷಾಕಾಲಕ್ಕಾಗಿ ಭತ್ತವೂ ಕೊಂಚ ಮಿಗುತ್ತಿತ್ತು. ಪ್ರತಿ ವರ್ಷವೂ ಮಿಕ್ಕ ಭತ್ತವನ್ನು ಸೀತಕ್ಕ ಮಾರಿಬಿಡುತ್ತಿದ್ದರು. ಬಂದ ಹಣದಲ್ಲಿ ಒಂದು ಕಾಸನ್ನೂ ವ್ಯಯ ಮಾಡದೆ ಲಕ್ಷ್ಮೀದೇವಿ ಕಲಶದಲ್ಲಿ ಮುಚ್ಚಿಡುತ್ತಿದ್ದರು. ಆದರೂ ಅವರ ಮನಸ್ಸಿಗೆ ತೃಪ್ತಿ ಇಲ್ಲ. ಎಲ್ಲಿ ದುಡ್ಡು ಸಾಲದೆ ಮಗನ ವಿದ್ಯಾಭ್ಯಾಸ ಅರ್ಧಕ್ಕೆ ನಿಂತುಹೋಗುತ್ತದೋ ಎಂದು ಅವರ ಹೃದಯ ಹಗಲಿರುಳು ತಳಮಳಗುಟ್ಟುತ್ತಿತ್ತು. ಆದರೆ ವಾಸುವು ಕಾಲೇಜು ವ್ಯಾಸಂಗಕ್ಕೆ ಬಂದ ಮೇಲೆ, ಸೀತಮ್ಮನವರು ನಿರೀಕ್ಷಿಸಿದಂತೆ ಬಾಳು ಮೊದಲಿಗಿಂತಲೂ ಕಠಿಣವೇನೂ ಆಗಲಿಲ್ಲ.

ವಾಸುವಿಗೆ ಬರುತ್ತಿದ್ದ ವಿದ್ಯಾರ್ಥಿವೇತನ, ಕಾಲೇಜಿನಲ್ಲೂ, ಮುಂದುವರಿ ಯಿತು. ಅಲ್ಲದೆ ತಾಯಿಯ ಬವಣೆಯನ್ನು ಕಂಡಿದ್ದ ವಾಸು, ಚಿಕ್ಕ ತರಗತಿಯ ನಾಲ್ಕೈದು ಹುಡುಗರಿಗೆ ಪಾಠ ಹೇಳಿ, ಒಂದು ಮೂವತ್ತು ರೂಪಾಯಿಗಳ ವರೆಗೆ ಸಂಪಾದಿಸುತ್ತಿದ್ದನು. ಕಾಲೇಜಿನ ಪ್ರೊಫೆಸರುಗಳೂ ಸಹ ವಾಸುವನ್ನು ಅವನ ತೀಕ್ಷ್ಣ ಬುದ್ಧಿ ಮತ್ತು ಪ್ರತಿಭೆಗಳಿಗಾಗಿ ಎಷ್ಟು ಪ್ರೀತಿಸುತ್ತಿದ್ದರೋ ಅಷ್ಟೇ ಪಿತೃವಂಚಿತನಾಗ ಅವನ ಬಡತನದ ಬಾಳಿಗಾಗಿ ಮರುಕಪಡುತ್ತಿದ್ದರು, ಕೈಲಾದ ಸಹಾಯ ನೀಡುತಿದ್ದರು. ಯಾವುದು ಹೇಗಾದರೂ ಇರಲಿ, ಸೀತಕ್ಕ ಮಾತ್ರ ಲಕ್ಷ್ಮೀದೇವಿ ಕಲಶ ದಲ್ಲಿ ಹಣ ಸಂಗ್ರಹಿಸುವುದನ್ನು ತಪ್ಪಲಿಲ್ಲ. ಅವರಿಗೆ ಅದನ್ನು ಖರ್ಚು ಮಾಡುವ ಪ್ರಸಂಗವೇ ಬರಲಿಲ್ಲ. ವಾಸುವಿಗೆ ಬಿ. ಎ. ಆಯಿತೆಂದು ತಿಳಿದ ದಿವಸ ಮಾತ್ರ, ದೇವರಿಗೆ ತುಪ್ಪದ ದೀಪವನ್ನು ಹೊತ್ತಿಸಿ, ಕಲಶವನ್ನು ಹೊರದೆಗೆದು ಎಷ್ಟು ದುಡ್ಡಿದೆ ಎಂದು ಗುಟ್ಟಾಗಿ ಎಣಿಸಿನೋಡಿದರು. ಒಂದು ಹೆಚ್ಚಿಲ್ಲ, ಒಂದು ಕಡಮೆ ಇಲ್ಲದಂತೆ ಸರಿಯಾಗಿ ಐನೂರು ರೂಪಾಯಿಯಾಗಿತ್ತು. ಇದೇ ಒಂದು ಶುಭ ಶಕುನವೆಂದು ಸೀತಮ್ಮನವರು ಹಿರಿಹಿರಿ ಹಿಗ್ಗಿಹೋದರು.

## ೫

ವಾಸುವಿಗೆ ಪ್ರಮಾಣ ಪತ್ರ ಕೊಡುವ ದಿನ ಭಾಗಮ್ಮನವರೂ, ಸೀತಕ್ಕನೂ, ಬೀದಿಯ ಜಗುಲಿಮೇಲೆ ಆ ಕಡೆಗೊಬ್ಬರು, ಈ ಕಡೆಗೊಬ್ಬರು ಕುಳಿತು, ಬಹಳ ಹೊತ್ತಿನ ವರೆಗೆ ಮಾತಾಡುತ್ತಿದ್ದರು. ಅವರ ಸಂತತ ವಾದ ವಾಕ್‌ಲಹರಿಯಲ್ಲಿ ಒಂದು ಕೊಚ್ಚಿಹೋಗದ ಒಂದು ವಿಷಯವೂ ಇರಲಿಲ್ಲ. ಮಾತಾಡಿ, ಮಾತಾಡಿ ಇಬ್ಬರಿಗೂ ಸಾಕಾಯಿತು ಬಾಯಿಯೂ ಒಣಗಿತು. ಹಾಗೆಯೇ ಕೊಂಚ ಝೋಂಪು ಹತ್ತಿದ ಕಾರಣ ಭಾಗಮ್ಮ ನವರು, ಇನ್ನೂ ಕೊಂಚ ಪಕ್ಕಕ್ಕೆ ಸರಿದು, ಕಂಬಕ್ಕೆ ತಲೆಕೊಟ್ಟು ಕಣ್ಣು ಮುಚ್ಚಿದರು. ಸೀತಮ್ಮನವರಿಗೂ ಆಯಾಸದಿಂದ ನಿದ್ರೆ ತಾನೇ ತಾನಾಗಿ ಬರುತ್ತಿತ್ತು. ಆದರೆ ಅವರಿಗೆ ನಿದ್ರೆ ಮಾಡುವ ಮನಸ್ಸಿರಲಿಲ್ಲ. ಮೊಟ್ಟ ಮೊದಲು ಕುಳಿತಿದ್ದ ಭಾವದಲ್ಲೇ ಅವರು ಕಂಬವನ್ನೊರಗಿ ಕುಳಿತು, ಬೀದಿಯ ಕಡೆ ನೋಡಹತ್ತಿದರು. ಬಲವಂತವಾಗಿ

ಅವರು ನಿದ್ರೆಯನ್ನು ತಡೆದರೂ ತಮಗೆ ಅರಿವಿಲ್ಲದಂತೆ ಕಣ್ಣು ಮುಚ್ಚಿ ತೂಕಡಿಸುತ್ತಿದ್ದರು. ಬೂಟ್ಸು ಕಾಲಿನ "ಚರ, ಚರ" ಶಬ್ದ ಮೆಟ್ಟಿಲು ಬಳಿ ಆದಾಗಲೇ ಇಬ್ಬರಿಗೂ ಎಚ್ಚರ. ಸೀತಕ್ಕ ಫಕ್ಕನೆ ಕಣ್ಣು ಬಿಟ್ಟು ಬೀದಿಯ ಕಡೆ ನೋಡಿದರು. ಮೆಟ್ಟಿಲಿನ ಮೇಲೆ ನಿಂತಿದ್ದವನು ವಾಸು ಎಂದು ಹೇಳಲು ಅವರಿಗೇ ಕಷ್ಟವಾಯಿತು. ಇತರ ಉಡುಪುಗಳೆಲ್ಲಕ್ಕಿಂತ, ಎಂದೂ ಅಭ್ಯಾಸವಾಗದ ಅವನ ತಲೆಗೆ, ಪೇಟ ಸುತ್ತಿರುವುದು ಏನೇನೂ ಒಪ್ಪುತ್ತಿರಲಿಲ್ಲ. ಮುಖವು ಏನೋ ಒಂದು ವಿಧವಾಗಿ ಕಂಡು, ನೋಡಿದವರಿಗೆ ನಗು ಬರುವಂತಿತ್ತು. ಸೀತಮ್ಮನವರು ಮಗನನ್ನು ಬಿರುಗಣ್ಣಿನಿಂದ ನೋಡುತ್ತಿದ್ದರು. ಅವರು ಹಾಗೆ ತನ್ನನ್ನು ಪರಿಶೀಲಿಸುವುದನ್ನು ಕಂಡು ವಾಸುವಿಗೆ ನಗು ಬಂದಿತು.

"ಏನು ಹಾಗೆ ನೋಡ್ತಿ? ಫೋಟೊ ಗೀಟೊ ತೆಗೆಯುವ ಏರ್ಪಾಡೇನಾದರೂ ಮಾಡಿದಿಯೇನು ?"

ಇಲ್ಲಿಯ ವರೆಗೂ ಕಂಬದ ಮರೆಯಲ್ಲಿ ಚಿಕ್ಕಿನಂತೆ ಸದ್ದಿಲ್ಲದೆ ಕುಳಿತು, ತಾಯಿಮಕ್ಕಳ ವಿಚಿತ್ರ ವರ್ತನೆಯನ್ನು ನೋಡುತ್ತಿದ್ದ ಭಾಗಮ್ಮನವರು ಈಗ ಚಟ್ಟನೆ ಮುಂದಕ್ಕೆ ಸರಿದು,

"ಹೌದೌದು, ನಿನ್ನಂತಹ ಮಗ ಹುಟ್ಟಿದರೆ ಅವಳು ಫೋಟೋ ತೆಗೆಯುವುದನ್ನೂ ಕಲಿಯಬೇಕಾಗುತ್ತೆ, ಸೈಕಲು ಸವಾರೀನೂ ಮಾಡಬೇಕಾಗುತ್ತೆ" ಎಂದರು.

ಅಲ್ಲಿ ಭಾಗಮ್ಮನವರು ಇರುವುದು ವಾಸುವಿಗೆ ಗೊತ್ತಿರಲಿಲ್ಲ. ಮೊದಲೇ ಅವನ ಕಣ್ಣಿಗೆ ಅವರು ಬಿದ್ದಿದ್ದರೆ, ಕಾಲು ಸಪ್ಪಳವನ್ನೂ ಮಾಡದೆ, ಇಬ್ಬರೂ ನಿದ್ರೆಯ ಪರವಶತೆಯಲ್ಲಿ ಮೈಮರೆತಿದ್ದಾಗ ಮೆಲ್ಲಗೆ ಒಳಗೆ ನುಸುಳಿಬಿಡುತ್ತಿದ್ದನು. ತನ್ನ ಪ್ರಕೃತದ ಅಲಂಕಾರದಲ್ಲಿ ಅವನಿಗೆ ಅಷ್ಟೊಂದು ನಾಚಿಕೆಯಾಗಿತ್ತು. ಆದರೆ ಈಗ ಮಾತ್ರ ಭಾಗಮ್ಮನವರ ಮಾತಿಗೆ ಬೆರಗಾಗಿ, ಏನು ಹೇಳಲೂ ತೋರದೆ ತಲೆ ಬಗ್ಗಿಸಿ ನಿಲ್ಲುವುದೊಂದನ್ನು ಬಿಟ್ಟು ಅವನಿಗೆ ಮತ್ತೇನೂ ಹೊಳೆಯಲಿಲ್ಲ.

"ಚೆನ್ನಾಯ್ತು, ಬಿ. ಎ. ಓದಿದ ಹುಡುಗ ಇಷ್ಟು ನಾಚಿದರೆ ಬದುಕಿದ ಹಾಗೆಯೇ ಸರಿ. ಮದುವೆಯಾದ ಮೇಲೂ ಹೀಗೇ ನಾಚುತ್ತಿದ್ದರೆ, ನಿನ್ನ ಹೆಂಡತಿ ನಿನ್ನನ್ನು ಪೇಟೆಯಲ್ಲಿ ಮೂರು ಕಾಸಿಗೆ ಮಾರಿಬಿಡುತ್ತಾಳೆ," ಎಂದರು ಮತ್ತೆ ಭಾಗಮ್ಮ.

ವಾಸುವಿಗೆ ಲಜ್ಜೆಯ ಅತಿರೇಕವನ್ನು ತಡೆಯಲಾಗಲಿಲ್ಲ. ಅಷ್ಟೊಂದು ಹಿರಿಯರಾದ ಭಾಗಮ್ಮನವರಿಗೆ ಎದುರುತ್ತರವನ್ನು ಕೊಡ ಲಾರದೆ, ವಾಸುವು ತಲೆ ಬಗ್ಗಿಸಿ ಒಳಕ್ಕೆ ಹೊರಟುಹೋದನು. ಭಾಗಮ್ಮ ನವರು ಮಾತ್ರ ಅವನು ಕಣ್ಮರೆಯಾಗುವ ವರೆಗೂ ಸುಮ್ಮನಿದ್ದು, ಅನಂತರ ದೃಷ್ಟಿ ಪರಿಹಾರಾರ್ಥವಾಗಿ ನೆಟಿಗೆ ಮುರಿಯುತ್ತಾ,

"ನಿನ್ನ ಮಗ ನಿಜವಾಗೂ ಪುಟಕ್ಕೆ ಹಾಕಿದ ಚಿನ್ನ ಕಣೆ ಸೀತಮ್ಮ. ಎಲ್ಲಾ ಹುಡುಗರ್ನೂ ಹೀಗಿರು ಅಂದ್ರೆ ಇರೋಕ್ಕಾಗುತ್ಯೆ? ಹುಡುಗ ಹಸುಗೂಸಿದ್ದ ಹಾಗಿದಾನೆ. ಅಲ್ಲ, ಅಷ್ಟು ಓದಿರೋನು,ಒಂದು ಗಟ್ಟಿಯಾದ ಮಾತೇ! ಒಂದು ಷೋಕೇ! ಅದೇ ನಮ್ಮ ಕಿಟ್ಟೀನೂ ಇದಾನಲ್ಲ, ಬಿ. ಎ. ಆಗೂತ್ಲೂವೇ ಏನು ಮಾತು, ಅಲಂಕಾರ ಕಲಿತು ಬಿಟ್ಟ ಅಂತಿ. ಕೆಲಸ ಆದಮೇಲಂತೂ ಅವನನ್ನು ತಡೆಯುವುದೇ ನಮಗೆ ಕೊಂಚ ದಿನ ಕಷ್ಟವಾಗಿಹೋಗಿತ್ತು."

"ಅಯ್ಯೋ ಬಿಡಿ ಭಾಗಮ್ಮನೋರೆ, ಈವತ್ತು ಹೀಗೆ. ನಾಳೆ ನಾಲ್ಕು ಕಾಸು ಕೈಗೆ ಬಂದರೆ ಹೇಗಾಗುತ್ತಾನೋ."

"ಅದೆಲ್ಲಾ ಬಿಡು. ನೀನು ಹೇಳಿದ್ರೆ ನಾನು ಕೇಳಬೇಕಲ್ಲ. ಎಳೆ ಪೈರ ಮೊಳಕೇಲಿ ನೋಡು ಅನ್ನೋ ಹಾಗೆ, ಮನುಷ್ಯನ ಗುಣ ಮಕ್ಕಳಲ್ಲೇ ಕಂಡುಬರುತ್ತೆ. ಮುಂದೆ ಕಾಸು ಕೈಗೆ ಬಂದರೆ ಹೇಗೋ ಎನ್ನುವುದಕ್ಕೆ ಈಗ ಅವನಿಗೆ ದರಿದ್ರವಿತ್ತೆ. ತೋಚಿದ ಹಾಗೆ ಖರ್ಚು ಮಾಡೋ ಹುಡುಗನಾಗಿದ್ದಿದ್ದರೆ, ತಿಂಗಳು ತಿಂಗಳಿಗೆ ಬರುತ್ತಿದ್ದ ಕಾಲಕ್ಷೇಪ ನಿನ್ನ ಕಣ್ಣಿಗೂ ಕಾಣಿಸುತ್ತಿರಲಿಲ್ಲ."

"ಏನೋ ಎಲ್ಲ ಆ ಭಗವಂತನ ದಯ ಭಾಗಮ್ಮ. ಇಲ್ಲಿಯ ವರೆಗೂ ಕಷ್ಟವೋ, ಮಗೂನ ಬೆಳೆಸಿದ್ದಾಯಿತು. ಇನ್ನು ಮುಂದೆ ಜಾಣನಾಗುವುದೂ, ಬಿಡುವುದೂ ಅವನ ಜವಾಬ್ದಾರಿಗೆ ಸೇರಿದ್ದು."

"ಜಾಣನೇ ಆಗ್ತಾನೆ. ಆಗದಹಾಗೇನು. ನೀನೇನೂ ಯೋಚನೆ ಮಾಡಬೇಡ. ಮನುಷ್ಯ ಅಂತ ಹುಟ್ಟಿದ ಮೇಲೆ ಒಬ್ಬೊಬ್ಬರಿಗೆ ಒಂದೊಂದು ಕಾಲದಲ್ಲಿ ದುಃಖ ಬರುತ್ತೆ. ನಿನಗೆ ಚಿಕ್ಕಂದಿನಲ್ಲೇ ಎಲ್ಲ ಕಳೆದುಹೋಯಿತು."

ಒಳಗೆ ಬಟ್ಟೆ ಬದಲಾಯಿಸುತ್ತಿದ್ದ ವಾಸುವಿಗೆ ಭಾಗಮ್ಮನವರ

ಹೊಗಳಿಕೆಯೂ, ಸೀತಮ್ಮನವರ ಆತಂಕದ ನುಡಿಗಳೂ ಕೇಳಿಸುತ್ತಿತ್ತು. ತಾಯಿಗೆ ತನ್ನಲ್ಲಿದ್ದ ಅಭಿಮಾನ ಅವನ ಹೃದಯವನ್ನು ಮುಟ್ಟಿತು. ಪ್ರೇಮದ ಅತಿಶಯದಿಂದ ಕಣ್ಣಲ್ಲಿ ನೀರು ಬಂತು. ಹಾಗೆಯೇ ಏನೋ ತೋರಲು, ವಾಸುವು ಒಳಗಿನಿಂದಲೇ, "ಅಮ್ಮಾ, ಊಟ ಮಾಡಿದ್ದಿ ತಾನೇ?" ಎಂದು ಕೇಳಿದನು. ಊಟದ ವಿಷಯ ನೆನಪಿಗೆ ಬಂದ ಕೂಡಲೆ ಭಾಗಮ್ಮನವರು ಚೊಂಬುಸಹಿತವಾಗೆದ್ದು, "ಸರಿ, ಸರಿ. ನನಗೆ ಮರತೇಹೋಗಿತ್ತು. ಹೀಗೆಯೇ ಕೂತಿದ್ದರೆ ನಿನಗೆ ಈ ದಿನವೂ ಏಕಾದಶಿಯೆ. ಹೋಗು, ಅವನಿಗೂ ಬಡಿಸಿ, ನೀನು ಪಾರಣೆ ಮಾಡು. ಇಲ್ಲವೇ, ಇಬ್ಬರೂ ಒಟ್ಟಿಗೆ ಉಂಡರೂ ಸರಿಯೆ," ಎನ್ನುತ್ತಾ ಮನೆಗೆ ಹೊರಟರು. ಸೀತಮ್ಮನವರು ಭಾಗಮ್ಮ ಅವರ ಮನೆಯನ್ನು ತಲಪುವ ವರೆಗೂ ಮೆಟ್ಟಲ ಮೇಲೆಯೇ ನಿಂತಿದ್ದು, ಅನಂತರ ಒಳಗೆ ಬಂದು ಬಾಗಿಲಿಕ್ಕಿಕೊಂಡರು.

ಆ ದಿವಸ ತಾಯಿ ಮತ್ತು ಮಗ ಅದೆಷ್ಟು ಅನ್ಯೋನ್ಯವಾಗಿ ಮಾತಾಡಿದರೋ ಅದನ್ನು ಹೇಳಲು ಸಾಧ್ಯವಿಲ್ಲ. ಸೀತಕ್ಕ ಉಪವಾಸ ವಿದ್ದುದಕ್ಕಾಗಿ ವಾಸುವು ತುಂಬ ರೇಗಾಡಿದನು. ಮೊದಲು ಊಟ ಮಾಡುವುದಕ್ಕೂ ಒಪ್ಪಲಿಲ್ಲ. ಅವನ ಆಗ್ರಹವನ್ನು ತಡೆಯಲಾರದೆ ಅವರು ಎಲೆಯ ಮುಂದೆ ಅಡಿಗೆಯನ್ನೆಲ್ಲಾ ತಂದಿಟ್ಟುಕೊಂಡರು. ಒಂದು ತುತ್ತಿನಿಂದ ಇನ್ನೊಂದು ತುತ್ತಿನ ನಡುವಿನಲ್ಲಿ ಒಂದೊಂದು ಮಾತಿನ ಹೊಳೆಯನ್ನೇ ಹರಿಸುತ್ತಿದ್ದರು. ಬಳಗದವರ, ಬಳಗವಲ್ಲದವರ ವಿಷಯವನ್ನೆಲ್ಲಾ ಮಾತಾಡಿಯಾಯಿತು. ಅವರು ಊಟ ಮಾಡಿ ಏಳುವ ಹೊತ್ತಿಗೆ ಮಧ್ಯಾಹ್ನ ಮೂರು ಗಂಟೆ ಆಗಿದ್ದಿತು.

## ೬

"ಮಾತಿಗೆ ಮೊದಲು ತಂಗಿ ಮನೆ, ತಂಗಿ ಮನೇಂತ ಮೈಸೂರಿಗೆ ಹೋಗ್ತಿರ್ತೀರಲ್ಲಾ, ಹೋದಾಗ ಒಂದ್ಮಾತು ಕೇಳ್ಬಾರದೆ? ಆಕೆ ತಾನೆ ಅದೆಂತಹ ಮಹರಾಯ್ತಿನೋ ದೇವರಿಗೇ ಗೊತ್ತು. ತಂದೆ ಮನೆ ಕಡೆಯವರಾಗಿ ಯಾರಾದರೂ ಇದ್ದರೆ ಸಾಕಲ್ಲಪ್ಪ ಅಂತೀವಿ ನಾವು. ಇರೋನು ಒಬ್ಬ ಅಣ್ಣ. ಒಂದು ಸ್ವಲ್ಪವಾದರು ಮಮತೆ ಬೇಡವೆ?

ನಾವು ಆ ಕಾಲದಲ್ಲಿ ಅಷ್ಟು ತೋರಿದ್ದಕ್ಕೆ, ಈಗ ನಮ್ಮನೆ ಹೆಣ್ಣು ತಂದುಕೊಂಡರೆ ಏನಂತೆ ಇವರಿಗಾಗೋ ನಷ್ಟ."

"ಇಲ್ಲ, ನಿನ್ನ ಮಗಳನ್ನು ಮಾಡಿಕೊಂಡರೆ ಸೀತೂಗೆ ಒಂದು ಕೋಡು ಬರುತ್ತದೆ."

ಸಾವಿತ್ರಿಗೆ ಏಕಕಾಲದಲ್ಲಿ ಸಾವಿರ ಚೇಳು ಕುಟುಕಿದಷ್ಟು ಯಾತನೆಯಾಯಿತು.

"ನನ್ನ ಕಂಡರಂತೂ ದ್ವೇಷ ಮಾಡುವುದು ಮಾಮೂಲು. ಇನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗುವನ್ನು ಕಂಡರೂ ನಿರ್ಲಕ್ಷ್ಯ. ನಿಮಗೆ ಅವರೂ, ಅವರ ಮಗನೇ ಹೆಚ್ಚಾಗಿಹೋದರು. ನಿಮ್ಮ ಸೋದರಳಿಯ ಏನು ಡಿಲ್ಲಿಯ ನವಾಬ ಅಂತ ತಿಳಿದುಬಿಟ್ಟಿರೇನು?"

"ನೋಡು ಸಾವಿತ್ರಿ, ಇದ್ದ ವಿಚಾರ ಇದ್ದಹಾಗೇ ಹೇಳಿದರೆ ನಿನಗೆ ಎಲ್ಲಿಲ್ಲದ ಕೋಪ ಬರುತ್ತೆ. ವಾಸು ಡಿಲ್ಲಿಯ ನವಾಬನಲ್ಲದೇ ಇರ ಇರಬಹುದು. ಆದರೆ ಅವನಿಗೆ ಹೆಣ್ಣಿಗೇನೂ ದಾರಿದ್ರ್ಯವಿಲ್ಲ. ಸೀತೂನ ಜಾತಕ ಕೊಡಿರೆಂದು ಈಗಾಗಲೇ ಬೇಕಾದಷ್ಟು ಜನ ಕಾಯ್ತಾ ಇದ್ದಾರೆ. ಇಂತಹುದರಲ್ಲಿ ನನ್ನ ಮನೆ ಹೆಣ್ಣು ತಂದುಕೊಂಡು ಅವನು ಯಾವ ಸುಖ ಪಡಬೇಕು."

"ಸರಿ, ನೀವೇ ಅವರ ಕಡೆ ವಹಿಸಿಕೊಂಡರೆ ನಾನೇನು ಹೇಳುವುದಕ್ಕೆ ಸಾಧ್ಯ. ಹೆಣ್ಣು ಹೆತ್ತವರು ನೀವು, ಅವರನ್ನ ಹೋಗಿ ಕೇಳಿಕೊಳ್ಳಬೇಕು. ಅದನ್ನು ಬಿಟ್ಟು ಇಲ್ಲಿ ನನ್ನೆದುರಿಗೆ ನಿಮ್ಮ ತಾಪತ್ರಯ ತೋಡಿಕೊಳ್ತಾ ಕೂತಿದ್ದರೆ, ಅವರಾಗಿ ಅವರೇ ಬಂದು ಹೆಣ್ಣು ಕೇಳೋ ಕಾಲ್ವೇ ಇದು?"

"ನನಗೆ ಹೇಳೋ ಕೆಲಸವನ್ನು ನೀನೆ ಯಾಕೆ ಮಾಡ್ಬಾರದೂ ಅಂತ? ನಡಿ, ಇಬ್ಬರೂ ಒಟ್ಟಿಗೆ ಹೋಗಿ ಒಂದು ದಿನ ಮಾತಾಡಿಕೊಂಡು ಬರೋಣ, ಅದರಲ್ಲಿ ಇನ್ನೂ ಗೌರವ ಜಾಸ್ತಿ."

ಸಾವಿತ್ರಿ ಇಲ್ಲಿಯ ವರೆಗೆ ಹಾರಾಡುತ್ತಿದ್ದವಳು, ಈಗ ಒಮ್ಮೆ ತಡವೆಗೇ ಪೆಚ್ಚಾಗಿಹೋದಳು. ಸೀತಕ್ಕನನ್ನು ತಲೆಯೆತ್ತಿ ಮಾತಾಡಿ ಸುವ ಧೈರ್ಯ ಈಗ ಅವಳಿಗಿರಲಿಲ್ಲ. ಅದಕ್ಕೆ ಕಾರಣವೇನೆಂಬುದು ಅವ ಳಿಗೇ ಚೆನ್ನಾಗಿ ಗೊತ್ತಿತ್ತು. ಆದರೆ ತನ್ನ ಗುಟ್ಟನ್ನು ಹೊರಪಡಿಸಲು ಇಷ್ಟಪಡದೆ, ಏನೇನೊ ನೆಪಗಳನ್ನು ಹೇಳಿದಳು.

“ಈ ಮನೆ, ಮಕ್ಕಳುಮರಿಯನ್ನು ಒಂದು ದಿನ ಬಿಟ್ಟು ನಾನೆಲ್ಲಿಯಾದರೂ ಹೋದರೆ, ಒಂದು ದೊಡ್ಡ ರಾದ್ಧಾಂತವೇ ಆಗಿಹೋಗುತ್ತೆ. ಅಲ್ಲದೆ ನಿಮ್ಮ ತಂಗಿಗೂ ನನಗೂ ಇರುವ ವಿಶ್ವಾಸ ಅಷ್ಟರಲ್ಲಿಯೇ ಇದೆ. ನಾನು ಜೊತೆಗೆ ಬರುವುದಕ್ಕಿಂತ, ನೀವೊಬ್ಬರೇ ಹೋದರೆ ಸಾವಿರ ಪಾಲು ಉತ್ತಮ. ನಾದಿನಿಯರಿಗೆ ಅತ್ತಿಗೆಯ ಮುಖ ನೋಡುತ್ತಲೂ ಅಣ್ಣನ ಮೇಲಿದ್ದ ಅಲ್ಪಸ್ವಲ್ಪ ವಿಶ್ವಾಸವೂ ಹೊರಟುಹೋಗುತ್ತಂತೆ.”

ವೆಂಕಟಪತಯ್ಯನಿಗೆ ಸಾವಿತ್ರಿಯ ಕಪಟವನ್ನು ನೋಡಿ ನಗು ಬಂದಿತು. “ನೋಡು ಸಾವಿತ್ರಿ, ನೀನೆಷ್ಟು ಮುಚ್ಚಿದರೂ ಒಟ್ಟಿನಲ್ಲಿ ಹೇಳುವುದಾದರೆ, ಸೀತೂಗೆ ನೀನೆಂದರೆ ಬಹಳ ದಿಗಿಲು. ಅವಳು ಇಲ್ಲಿರುವ ವರೆಗೂ ಒಂದೇ ಸಮನೆ ಕಣ್ಣೀರಿನಲ್ಲಿ ಕೈ ತೊಳಸಿಬಿಟ್ಟೆ. ನಿನ್ನ ಗುಣವೊಂದು ನೆಟ್ಟಗಿದ್ದರೆ, ಪಾರ್ವತಿಗೆ ವಾಸುಗಿಂತ ಎರಡು ವರ್ಷ ಜಾಸ್ತಿಯಾಗಿದ್ದರೂ ಅವಳು ಹಿಂದುಮುಂದು ನೋಡುತ್ತಿರಲಿಲ್ಲ. ಮುಂಬಾಗಿಲ ಬಳಿ ಮಗಳನ್ನು ನೋಡಿದ ಮೇಲೆ ಒಳಗಿರುವ ತಾಯಿಯನ್ನು ನೋಡಬೇಕಾಗಿಲ್ಲ ಅನ್ನೋ ಹಾಗಾದರೆ ತನ್ನ ಗತಿ ಏನೆಂದು ಸೀತು ಹೆದರಿಬಿಟ್ಟಿದ್ದಾಳೆ.”

ಇಲ್ಲಿಯ ವರೆವಿಗೂ ಸಾವಿತ್ರಿ ಎಲ್ಲಿಲ್ಲದ ಸಹನೆಯನ್ನು ತಂದುಕೊಂಡಿದ್ದಳು. ಅವಳಿಗೆ ಇನ್ನು ಮುಂದೆ ತಡೆಯಲಾಗಲಿಲ್ಲ. ಹೋ ಎಂದು ಅಳುತ್ತಾ, “ನನ್ನ ಬಾಯಲ್ಲಿ ಕೆಟ್ಟ ಮಾತು ಹೊರಡಿಸದ ಹೊರತೂ ನಿಮಗೆ ಸುಖವಿಲ್ಲ ಎಂದು ತೋರುತ್ತೆ. ಈ ಬಾಳಿಗೆ ಯಾಕೆತಾನೇ ಮದುವೆಯಾಗಬೇಕು. ನನ್ನ ಮಗಳಿಗೆ ಮದುವೆ ಬೇಡ. ಹಾಗೆಯೇ ಹಾಯಾಗಿ ಬೆಳೆದುಕೊಳ್ಳಲಿ. ಒಂದು ವೇಳೆ ಒಪ್ಪಿ ಮದುವೆಯಾದರೂ ಮುಂದೆ, ನನ್ನ ಮೇಲಿನ ಕಿಚ್ಚನ್ನು ಅರಿಯದ ಹುಡುಗಿಯ ಮೇಲೆ ತೀರಿಸಿದರೆ ಏನು ಮಾಡುವುದು ? ನಿಜವಾಗಿ ಹೇಳುವುದಾದರೆ, ನನಗೇ ಅವರ ಸಂಬಂಧದಲ್ಲಿ ಇಷ್ಟವಿಲ್ಲ” ಎಂದು ಹೇಳಿ, ಸ್ಥಳವನ್ನು ಬಿಟ್ಟು ಹೊರಟುಹೋದಳು.

ಸಾವಿತ್ರಿಯು ಮೇಲೆ ಜಂಭವನ್ನು ತೋರಿಸುತ್ತಿದ್ದರೂ, ಅವಳ ಮನಸ್ಸಿನಲ್ಲಿ ಪಾರ್ವತಿ ವಾಸುವಿನ ಕೈ ಹಿಡಿದರೆ ಚೆನ್ನು ಎಂದೆನಿಸುತ್ತಿತ್ತು. ಸೀತಕ್ಕ ನಂಜುಂಡಳ್ಳಿಗೆ ಬಂದಿದ್ದಾಗ ಅವಳಿಗೆ, ಮುಂದೆ ತನ್ನ ಮಗಳ ಮದುವೆಗೆ ಇವರ ಕೈಕಾಲು ಕಟ್ಟಬೇಕಾದೀತೆಂಬ ಭಾವನೆ ಕನಸು ಮನಸ್ಸಿ

ನಲ್ಲಿಯೂ ಬಂದಿರಲಿಲ್ಲ. ಹಾಗೆ ಒಂದು ವೇಳೆ ಹೋಳಿದಿದ್ದರೆ ತಾನು ಕೊಡುತ್ತಿದ್ದ ಕಿರುಕುಳವನ್ನು ಕೊಂಚ ಕಮ್ಮಿ ಮಾಡುತ್ತಿದ್ದಳೊ ಏನೊ! ಈಗ ಅವಳಿಗೆ, ಹಿಂದೆ ಯಾಕಾದರೂ ಹಾಗೆ ಮಾಡಿದೆನೋ ಅನ್ನಿಸುತ್ತಿತ್ತು. ಆದರೆ ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಎಂಬ ಭಾವನೆ ಮನಸ್ಸಿಗೆ ಬಂದಾಗ, ಸಾವಿತ್ರಿ ತನ್ನಲ್ಲಿ ತಾನೇ ಏನೇನೊ ಸಮಾಧಾನಗಳನ್ನು ಹೇಳಿಕೊಳ್ಳುತ್ತಿದ್ದಳು.

ಸಾವಿತ್ರಿಯು ರೋಷಗೊಂಡು ಹೊರಟುಹೋದಮೇಲೆ, ವೆಂಕಟಪತಯ್ಯನು ಅಲ್ಲಿಯೇ ಕುಳಿತು ಬಹಳ ಹೊತ್ತಿನವರೆಗೆ ಯೋಚಿಸುತಿದ್ದನು. ಅವನ ತಲೆಗೆ ಆಲೋಚನೆಗಳು ತರಂಗತರಂಗವಾಗಿ ಬರುತಿದ್ದುವು. ಪಾರ್ವತಿಗೆ ಗಂಡು ಹುಡುಕಲು ಪಟ್ಟ ಕಷ್ಟವನ್ನು ಅವನು ಮತ್ತಾವ ಹೆಣ್ಣು ಮಗಳ ಮದುವೆಯಲ್ಲೂ ಪಟ್ಟಿರಲಿಲ್ಲ ಇಷ್ಟಾದರೂ ಕಾರ್ಯ ಸಿದ್ಧಿಯಾಗಿರಲಿಲ್ಲ. ವೆಂಕಟಪತಯ್ಯನಿಗೆ ಹುಚ್ಚು ಹಿಡಿಯುವ ಸ್ಥಿತಿ ಬಂದಿತ್ತು. ಮೈಸೂರಿಗೆ ಹೋದಾಗಲೆಲ್ಲಾ ತನ್ನ ಪಾಡನ್ನು ಸೀತಮ್ಮನವರ ಎದುರಿಗೆ ತೋಡಿಕೊಳ್ಳುತ್ತಿದ್ದನು. ಸೀತಕ್ಕ ಅವನ ತಾಪತ್ರಯಕ್ಕೆ ಮರುಗುತ್ತಿದ್ದರು. ಆದರೆ ನೆರವು ನೀಡಲು ಮಾತ್ರ ಕೊಂಚ ಯೋಚಿಸುತ್ತಿದ್ದರು. ದುಡ್ಡು ಕಾಸಿನ ವಿಷಯವಾಗಿದ್ದರೆ ಅವರು ಮನಸ್ಸನ್ನು ಬಹು ಧಾರಾಳ ಮಾಡಿಬಿಡುತ್ತಿದ್ದರು. ಆದರೆ ಇದು ಅವರ ಮಗನ ಮದುವೆಯ ವಿಷಯ. ಅವನ ಜೀವನದಲ್ಲಿನ ಮುಖ್ಯ ಘಟನೆ. ಇಂತಹ ವಿಷಯದಲ್ಲಿ ಸರಿಯಾಗಿ ಯೋಚಿಸದೆ, ಮಾತಾಡುವುದು ಮೂರ್ಖತನವೆಂದು ಸೀತಕ್ಕ ಯೋಚಿಸುತ್ತಿದ್ದರು. 'ಇತ್ತ ವೆಂಕಟಪತಯ್ಯನಿಗೂ ನನ್ನ ಮಗಳನ್ನು ತಂದುಕೊ ಎಂದು ಕೇಳಲು ಒಂದು ಬಗೆಯ ಸಂಕೋಚ. ಅಳಿಯನಿಗೆ ಒಂದು ಸರಿಯಾದ ಬಟ್ಟೆಯನ್ನು ಕೊಡಲೂ ತನಗೆ ಯೋಗ್ಯತೆ ಸಾಲದೆಂದು ಅವನು ಹಗಲಿರಳು ಕೊರಗುತ್ತಿದ್ದನು. ವಾಸುವು ತನ್ನ ಯೋಗ್ಯತೆಗೆ ಮೀರಿದವನೆಂದೂ, ಅವನನ್ನು ಅಳಿಯನನ್ನಾಗಿ ಕೇಳುವುದು ತುಂಬ ಅನ್ಯಾಯವೆಂದೂ ವೆಂಕಟಪತಯ್ಯನು ತಿಳಿದಿದ್ದನು. ಆದರೆ ಅವನ ಅದೃಷ್ಟಕ್ಕೆ ಬೇರೆ ಎಲ್ಲೂ ಗಂಡು ದೊರೆಯಲಿಲ್ಲ. ಒಪ್ಪತ್ತು ಊಟಮಾಡೇ ಪಾರ್ವತಿ ದಿನದಿನಕ್ಕೆ ಬೆಳೆಯುತ್ತಿದ್ದಳು. ಊರಿನಲ್ಲಿ ಜನರ ಆಡಿಕೆ ಅಸಾಧ್ಯವಾಗಿಹೋಗಿತ್ತು. ದೂರದ ದಾಯಾದಿಗಳು

ಕೆಲವರು ಗೊತ್ತಿಲ್ಲದವರಂತೆ ಸಾವಿತ್ರಿಯನ್ನು "ಸಾವಿತ್ರಮ್ಮ, ಪಾರ್ವತಿಗೆ ಎಷ್ಟು ಮಕ್ಕಳಿವೆ?" ಎಂದು ಕೇಳುತ್ತಿದ್ದರು. ಸಾವಿತ್ರಿಗೆ ಜೀವ ಒಂದು ಹಿಡಿಯಾಗುತ್ತಿತ್ತು. ಅವಳು ಮಗಳಿಗಿನ್ನೂ ಮದುವೆಯಾಗಿಲ್ಲವೆಂದರೆ ಬಂದವರು, "ಅಯ್ಯೋ ಅವಳ ಬೆಳವಣಿಗೆ ನೋಡಿ ನಮಗೆ ಹಾಗೆನಿಸಿ ಬಿಟ್ಟಿತೂಂದ್ರೆ, ಏನೂ ತಿಳಿದುಕೊಳ್ಳಬೇಡಿ" ಎಂದು ಒಳ್ಳೆಯ ಮಾತಿನಲ್ಲೇ ಕರುಳನ್ನು ಕತ್ತರಿಸಿಬಿಡುತ್ತಿದ್ದರು. ಸರಿ, ಅವರು ಅತ್ತ ಹೋದಕೂಡಲೇ, ಇತ್ತ ಸಾವಿತ್ರಿ ಒಳಗೆ ಬಂದು ವೆಂಕಟಪತಯ್ಯನ ಮೇಲೆ ಆರೋಪಣೆಗಳ ಮಳೆಯನ್ನು ಕರೆಯುತ್ತಿದ್ದಳು. ಈ ಬಗೆಯ ಕಿರುಕುಳವನ್ನು ಸಹಿಸಿ, ಸಹಿಸಿ ವೆಂಕಟಪತಯ್ಯನಿಗೆ ಸಾಕಾಗಿಹೋಗಿತ್ತು. ಏನಾದರಾಗಲಿ ಮಾರನೆ ದಿವಸ ಮೈಸೂರಿಗೆ ಹೋಗಿ, ಸೀತಕ್ಕನನ್ನು ಬಲವಂತದಿಂದಲಾದರೂ 'ಹೂ' ಎನಿಸಿಬಿಡುವುದಾಗಿ ಅವನು ನಿಶ್ಚಯಿಸಿಬಿಟ್ಟನು.

## ೭

ದಿನಗಳ ಮೇಲೆ ದಿನಗಳು ಉರುಳುತ್ತಿದ್ದುವು. ಕಾಲೇಜಿನ ವಾತಾವರಣವನ್ನು ಕಳೆದುಕೊಂಡಮೇಲೆ ವಾಸುವು ಬಹಳ ಮಂಕಾಗಿ ಹೋಗಿದ್ದನು. ಅವನಿಗೆ, ಯಾವುದಾದರೂ ಕೆಲಸ ಸಿಕ್ಕಿದರೆ ಸಾಕು ಎನ್ನಿಸಿಬಿಟ್ಟಿತ್ತು. ಮಗನು ಕಳೆಗುಂದಿರುವುದನ್ನು ಕಂಡು ಸೀತಮ್ಮನವರು ಬೇರೆ ವಿಧವಾಗಿ ಅರ್ಥಮಾಡಿಕೊಂಡರು. ವಾಸುವು, ಮುಂದೆ ಓದಲು ಸಾಧ್ಯವಿಲ್ಲದುದಕ್ಕಾಗಿ ಕೊರಗುತ್ತಿರಬಹುದೆಂಬುದು ಅವರ ಭಾವನೆ. ಅವನ ಮನೋಭಿಪ್ರಾಯವನ್ನು ತಿಳಿದುಕೊಳ್ಳಲು ಸೀತಕ್ಕ ಒಂದು ದಿನ ಊಟದ ವೇಳೆಯಲ್ಲಿ ಆ ಪ್ರಸ್ತಾಪವನ್ನು ಎತ್ತಿದರು.

"ಬೇಜಾರು, ಬೇಜಾರು ಅಂತಿಯಲ್ಲ, ಒಂದೆರಡು ದಿನ ವೆಂಕು ಮನೆಗಾದರೂ ಹೋಗಬಾರದೆ. ಹಳ್ಳಿವಾಸ ಇಷ್ಟ ಅಂತ ಮಾತ್ರ ಬಾಯಲ್ಲಿ ಹೇಳ್ತಿ."

"ಈಗ ಅಲ್ಲಿಗೆಲ್ಲಾ ಹೋಗೋಲ್ಲಾಕ್ಕ, ಏನಾದರು ಕೆಲಸಕ್ಕೆ ಆರ್ಡರು ಬಂದೀತೇನೋ ಅಂತ ಕಾಯ್ತಿದ್ದೇನೆ" ಎಂದ ವಾಸು.

"ಯಾಕೆ, ಓದು ಇಷ್ಟಕ್ಕೇ ಸಾಕು ಅಂತೀಯಾ?

"ಅಷ್ಟಲ್ಲದೆ ಇನ್ನೇನು........ಮನುಷ್ಯ ಆಸೆಪಡುವುದಕ್ಕೆ ಹೋದರೆ ಕೊನೆ ಮಿತಿ ಏನೂ ಇರೊಲ್ಲ."

ಸೀತಕ್ಕನಿಗೆ ನಿರಾಶೆಯಾಯಿತು. ಅವರಿಗೆ ಮಗನು ಮುಂದೆ ಓದಿದರೂ ಓದಲಿ ಎಂದಿತ್ತು.

"ಹೋಗಲಿ, ಏನು ಕೆಲಸ ಸಿಕ್ಕಬಹುದು ಅನ್ನುತ್ತಿ ?"

"ಹೂಂ, ಒಂದು ಹೈಸ್ಕೂಲು ಮೇಷ್ಟ್ರು ಕೆಲಸ ಸಿಗಬಹುದು. ಆದರೆ ಈ ಕಾಲದಲ್ಲಿ ಅದೂ ಜೇಗ ಸಿಗುವ ಹಾಗಿಲ್ಲ"

ಇಷ್ಟೆಲ್ಲಾ ಓದಿ, ಬರೆದರೂ ಕೆಲಸ ಸಿಗಲು ಇಷ್ಟು ಕಷ್ಟವೇ ಎನಿಸಿತ್ತು ಸೀತಮ್ಮನವರಿಗೆ. ಮಗನು ಮಾಡಿರುವ ಪಾಸಿಗೆ ಒಂದು ದೊಡ್ಡ ಕೆಲಸ ಸಿಕ್ಕಿದರೂ ಸಿಕ್ಕಬಹುದು ಎಂದಿತ್ತು ಅವರ ಭಾವನೆ. ಈಗ ವಾಸುವು ಮೇಷ್ಟ್ರು ಕೆಲಸ ಸಿಕ್ಕುವುದೂ ಕಷ್ಟವೆಂದಾಗ ಅವರಿಗೆ ನಂಬಿಕೆಯೇ ಉಂಟಾಗಲಿಲ್ಲ. ವಾಸುನಿಗೆ ಅವರ ಮುಗ್ಧತೆಯನ್ನು ಕಂಡು ತುಂಬ ನಗು ಒಂದಿತು

"ಅಲ್ಲ ಅಕ್ಕಾ, ನಿನ್ನ ಮಗ ಓದಿರೋ ಬಿ. ಎ. ಗೆ ಡೆಪ್ಟಿಕಮೀಷನರ ಕೆಲಸ ಕೊಡ್ತಾರೆ ಅಂದ್ಕೊಂಡೆಯೇನು ? ಈ ಕಾಲದಲ್ಲಿ ಗ್ರ್ಯಾಜುಯೇಟು ಗಳಿಗೆ ಬೆಲೆಯೇ ಇಲ್ಲ. ಹುಳು ಉದುರಿದ ಹಾಗೆ ಉದುರ್‍ತಿದ್ದಾರೆ. ಇಂತಹುದರಲ್ಲಿ ಯಾವುದೋ ಒಂದು ಕೆಲಸ ಅಂತ ಸಿಕ್ಕಿದರೆ ಸಾಕಾಗಿದೆ. ಕಾಡೋಮೇಡೋ, ಕಳಿಸಿದ ಕಡೆ ಹೋಗುವುದು."

"ನೀನು ಡೆಪ್ಟಿಕಮೀಷನರಾಗು ಅಂತ ಹೇಳಲಿಲ್ಲ ವಾಸು, ಮೇಷ್ಟ್ರೇ ಆಗು ಪರವಾಗಿಲ್ಲ. ಆದರೆ ಬೇರೆ ಊರು ಬೇಡಾಂತ, ಸಿಕ್ಕಾಪಟ್ಟೆ ಎಲ್ಲಿಗಾದರೂ ಹಾಕಿದರೆ ಒಬ್ಬೊಂಟಿಗನಾಗಿ ಹೋಗಬೇಕಲ್ಲಾ ಎಂದು ಹೇಳಿದೆ ಅಷ್ಟೆ" ಎಂದರು ಸೀತಕ್ಕ.

ಅವರಿಗೆ ಮಗನನ್ನು ತಮ್ಮ ಕಣ್ಣೋಟದಿಂದ ಆಚೆ ಕಳುಹಿಸಲು ಕೊಂಚವೂ ಇಷ್ಟವಿರಲಿಲ್ಲ.

"ಸರ್ಕಾರಿ ಕೆಲಸಾಂತ ಸೇರಿದ ಮೇಲೆ, ನಾವು ಹಾಗೆಲ್ಲಾ ಅದೇ ಬೇಕು, ಇದೇ ಬೇಕು ಅಂತ ಕೇಳೋಕ್ಕಾಗೊಲ್ಲ. ಏನೋ ಪ್ರೈವೇಟ್ ಕೆಲಸವಾದರೆ ಒಂದು ತರಹ."

ಸೀತಮ್ಮನವರಿಗೆ ಮುಂದೆ ಹೇಳಲು ಏನೂ ತೋರಲಿಲ್ಲ.

"ಏನೋಪ್ಪ, ನನಗೆ ತೋರಿದುದನ್ನು ಹೇಳಿದೆ; ಇದರ ಮೇಲೆ ನಿನ್ನ ಇಷ್ಟ. ನಿಮ್ಮಗಳ ಹಾಗೆ ಚರ್ಚೆಮಾಡಲು ನಾನೇನು ವಿದ್ಯಾ ಕಲಿತವಳೇ. ಎಷ್ಟೇ ಆಗಲಿ ವಿದ್ಯಾವಂತ, ಯಾವ ಕೆಲಸವನ್ನೇ ಆಗಲಿ ಯೋಚನೆಮಾಡಿ ಮಾಡು ಎಂದೆ ಅಷ್ಟೆ" ಎಂದು ವಿಷಯವನ್ನು ಸೀತಕ್ಕ ಅಲ್ಲಿಗೇ ಮುಕ್ತಾಯ ಮಾಡಿದರು. ಅಷ್ಟರಲ್ಲಿ ಇಬ್ಬರ ಊಟವೂ ಮುಗಿದಿತ್ತು. ಗಡಿಯಾರ ಎರಡು ಗಂಟೆಯನ್ನು ತೋರಿಸುತ್ತಿತ್ತು.

ಉಂಡ ಮೇಲೆ ವಾಸುವು ತನ್ನ ಕೋಣೆಗೆ ಹೊರಟುಹೋದನು. ಬೆಳಗ್ಗೆ ಕೊಂಚ ಬಿಸಿಲಿನಲ್ಲಿ ಸುತ್ತಾಡಿದ್ದನಾದ್ದರಿಂದ, ಆಯಾಸದ ವರಿಕೆ ಯಲ್ಲಿ ಅವನಿಗೆ ಮಲಗಿದ ಕೂಡಲೆ ಗಾಢ ನಿದ್ರೆ ಬಂದುಬಿಟ್ಟಿತು. ಇತ್ತ ಸೀತಮ್ಮನವರಿಗೂ ಮಾಡಲು ಕೆಲಸಗಳಿಗೇನೂ ಕಡಮೆ ಇರಲಿಲ್ಲ. ಅವರು ಒಂದೊಂದಾಗಿ ಎಲೆಗೋಮೆ, ಕಸಮುಸರೆ ಎಂದು ಮಾಡಿ ಮುಗಿಸುವ ಹೊತ್ತಿಗೆ ಒಲೆಯ ಮೇಲೆ ಟೀಗೆ ಇಟ್ಟಿದ್ದ ನೀರು ಕುದಿದು ಇಂಗುತ್ತಿತ್ತು. ಸೀತಕ್ಕ ಕೆಲಸವನ್ನೆಲ್ಲ ಒತ್ತಟ್ಟಿಗೆ ಓರಣವಾಗಿ ಮಾಡಿ, ಟೀ ತಯಾರಿಸಲು ಒಲೆಯ ಮುಂದೆ ಕುಳಿತರು. ಕುದಿಯುವ ನೀರಿಗೆ ಸೊಪ್ಪುಹಾಕಿ, ಸೋಸಿ, ಹಾಲುಸಕ್ಕರೆ ಬೆರಸಬೇಕು ಎನ್ನುವಾಗ ಮುಂದಿನ ಬಾಗಿಲು ದಡ ದಡ ಎಂದಿತು. ಸೀತಕ್ಕ, ಭಾಗಮ್ಮನವರಿರ ಬೇಕೆಂದುಕೊಂಡರು. ಅಷ್ಟು ಹೊತ್ತಿನಲ್ಲಿ ಅವರಲ್ಲದೆ ಇನ್ನಾರು ಬರ ಬೇಕು. ಕೈಲಿದ್ದ ಹಾಲಿನ ಬಟ್ಟಲನ್ನು ಅಲ್ಲಿಯೇ ಇಟ್ಟು ಸೀತಮ್ಮ ಬಾಗಿಲನ್ನು ತೆಗೆಯಲು ಧಾವಿಸಿದರು. ಬಾಗಿಲು ತೆರೆದು ನೋಡುವಲ್ಲಿ ಅವರ ನಿರೀಕ್ಷಣೆಯಂತೆ ಭಾಗಮ್ಮನವರು ಬಂದಿರಲಿಲ್ಲ ಹೇಳಿಕಳುಹಿಸಿ ಕರೆಸಿದಂತೆ ವೆಂಕಟಪತಯ್ಯನು ಬಂದಿದ್ದನು. ಬಿಸಿಲಿನ ತಾಪಕ್ಕೆ ಅವನ ಮೈ ಬೆವತು ನೀರಾಗಿತ್ತು. ಛತ್ರಿಯೂ ಇಲ್ಲ; ಕಾಲಿಗೆ ಚಪ್ಪಲಿಯೂ ಇಲ್ಲ. ಬೆಳಗಿನಿಂದ ಊಟವೂ ಇಲ್ಲದಿರಬಹುದೆಂದು ಸೀತಕ್ಕ ಆತನನ್ನು ಒಳಗೆ ಕರೆದು ಸರಸರನೆ ಊಟದ ಸಿದ್ಧತೆ ಮಾಡಿದರು. ಅಡುಗೆಮನೆಯಲ್ಲಿ ಎಲೆ ಹಾಕಿ ನೀರಿಟ್ಟಿರುವುದನ್ನು ನೋಡಿ ವೆಂಕಟಪತಯ್ಯನಿಗೆ ತುಂಬ ನಗೆ ಬಂದಿತು.

"ಸೀತು, ಮೂವತ್ತು ವರುಷಕ್ಕೆ ಮದುವೆಯಾಗದವರಿಲ್ಲ, ಮೂರು ಝಾವಕ್ಕೆ ಊಟ ಮಾಡದವರಿಲ್ಲ ಅನ್ನೊ ಗಾದ ಕೇಳಿದ್ದಿ ತಾನೇ" ಎಂದ ವೆಂಕಟಪತಯ್ಯ ನಗುತ್ತ.

"ಹಾಗೇನಿಲ್ಲ. ಶಿವಳ್ಳಿ ಶಂಕರೂಗೆ ನಲವತ್ತು ವರುಷವಾದರೂ ಇನ್ನೂ ಮದುವೆ ಇಲ್ಲ" ಎಂದು ಸೀತಮ್ಮನವರು ಅಣ್ಣನನ್ನು ಸೋಲಿಸಿ ಬಿಟ್ಟರು. ತನಗೆ ಗೆಳೆಯರ ಮನೆಯಲ್ಲಿ ಊಟವಾಗಿದೆ ಎಂದು ಅವರನ್ನು ಒಪ್ಪಿಸಬೇಕಾದರೆ ವೆಂಕಟಪತಯ್ಯನಿಗೆ ಸಾಕಾಗಿಹೋಯಿತು. ಬಡಿಸುವ ಕೆಲಸ ತಪ್ಪಿದ್ದರಿಂದ ಮತ್ತೆ ಸೀತಕ್ಕ ಟೀ ಮಾಡಲು ತೊಡಗಿದರು. ಹಾಲನ್ನೇ ಹೆಚ್ಚಾಗಿ ಹಾಕಿ ಟೀ ಒದಗಿಸಿಯಾಯಿತು. ವಾಸುವು ಇನ್ನೂ ಎದ್ದಿರಲಿಲ್ಲವಾಗಿ ಅವರು ಅವನ ಪಾಲಿನದನ್ನು ಬೆಚ್ಚಗಿರಲು ಒಲೆಯ ಮೇಲಿರಿಸಿ, ಅಣ್ಣನಿಗೆ ಕುಡಿಯಲು ಕೊಟ್ಟು, ತಾವು ತೆಗೆದುಕೊಂಡರು.

"ಅಲ್ಲ, ಆವಾಗೆಲ್ಲ ನಿಮ್ಮೂರಿಂದ ಇಲ್ಲಿಗೆ ಬೆಳಗ್ಗೆ ಒಂದು, ಸಂಜೆಗೆ ಒಂದು ಅಂತ ಎರಡೇ ರೈಲು ಬರುತ್ತಿದ್ದುದು. ಈಗಲೇ ವಾಸಿ, ಮಧ್ಯಾಹ್ನಾನೂ ಒಂದು ಬರುತ್ತೆ" ಎಂದರು ಸೀತಮ್ಮ.

"ಏನು, ರೈಲನ್ನೇ ನೀನು ಹೇಳಿದ್ದು?"

"ಅದನ್ನು ತಾನೇ ನಾನು ಹೇಳಿದ್ದು."

"ಹಾಗೇನಿಲ್ಲ, ಈಗಲೂ ಮೊದಲಿನ ಹಾಗೇ ಎರಡು ಬಾರಿ ಬರುತ್ತೆ ಅಷ್ಟೆ. ನಾನು ಬೆಳಗ್ಗೆಯೇ ಬಂದೆ. ಕೊಂಚ ಕೋರ್ಟಿನ ಕೆಲಸ ಇತ್ತಾದಕಾರಣ ನೆಟ್ಟಗೆ ಸರಸ್ವತೀಪುರದ ಕಡೆಗೆ ಹೊರಟುಹೋದೆ. ನಮ್ಮ ಲಾಯರು ಬಹಳ ಬಲವಂತಮಾಡಿದ್ದುದರಿಂದ ಅಲ್ಲಿಯೇ ಕವಳವೂ ಗಿಟ್ಟಿದ ಹಾಗಾಯಿತು."

ವೆಂಕಟಪತಯ್ಯನಿಗೆ ಕೋರ್ಟಿನ ಕೆಲಸವೇನಿರಬಹುದೆಂದು ಸೀತಕ್ಕನಿಗೆ ಆಶ್ಚರ್ಯ ಗಾಬರಿಗಳೆರಡೂ ಏಕಕಾಲದಲ್ಲಿ ಆದುವು. ಅವರು ಕೋರ್ಟು ಕಚೇರಿ ಎಂದರೆ ಜಗಳವಾಡುವ ವರೆಗೆ ಮಾತ್ರ ಮೀಸಲು ಎಂದುಕೊಂಡಿದ್ದರು. ತನ್ನ ಪಾಡನ್ನು ತಾನು ನೋಡಿಕೊಳ್ಳದೆ, ವೆಂಕಟಪತಯ್ಯನು ಯಾವ ತರಲೆಗೆ ತಲೆ ಒಡ್ಡಿರುವನೋ ಎಂದು ಅವರಿಗೆ ಯೋಚನೆಯಾಯಿತು. ಅವರು ಕುತೂಹಲವನ್ನು ತಡೆಯಲಾರದೆ,

"ಕೋರ್ಟು ಹತ್ತುವಂತಹ ಯಾವ ಕೆಲಸವನ್ನು ಗಂಟು ಹಾಕಿಕೊಂಡಿದ್ದೀಯಪ್ಪ? ಅಲ್ಲಿಗೆ ಹೋಗಿ ಊರ್ಜಿತವಾಗಿ ಹಿಂದಿರುಗಿದವರ್‍ಯಾರನ್ನೂ ನಾನು ನೋಡಿಲ್ಲ" ಎಂದರು.

"ಅಂತಹ ವ್ಯಾಜ್ಯದ ಬಾಬ್ತೇನೂ ಅಲ್ಲವಮ್ಮ. ನನ್ನ ಹೊಲದ ಬಿಕರಿ ವಿಚಾರ ಕೊಂಚ ಕೆಲಸ ಮಾಡಬೇಕಾಗಿತ್ತು."

"ಏನು ಹೊಲ ಮಾರಿ ಬಿಡಬೇಕು ಅಂತಿದ್ದೀಯಾ ?"

"ಹೂಂ, ಸದ್ಯಕ್ಕೆ ಅದೇ ಸರಿಯಾದ ಯೋಚನೆ"

"ಯಾವ ಹೊಲಾನ ?"

"ಯಾವ ಹೊಲ ಅಂತ ಕೇಳೋಕೆ ನನಗೆಷ್ಟು ಹೊಲಗಳಿವೆ. ಇರೋದು ಆ ದಾಸ ಹೆಗ್ಗಡೆಗೆ ಗುತ್ತಿಗೆಗೆ ಕೊಟ್ಟಿದ್ದ ಹೊಲ. ಅದನ್ನು ಕೊಟ್ಟು ಬಿಡಬೇಕು ಅಂದುಕೊಂಡಿದ್ದೇನೆ."

ಸೀತಮ್ಮನವರು ಐದು ನಿಮಿಷ ಮಾತಾಡಲಿಲ್ಲ. ಅವರಿಗೆ ತುಂಬ ಖೇದವುಂಟಾಗಿತ್ತು.

"ವೆಂಕು, ನಾನೊಂದು ಮಾತು ಅಂದರೆ ನಿನಗೆ ಕೋಪ ಬರಬಹುದು ಅನ್ನಿಸುತ್ತೆ. ಬಂದರೂ ಚಿಂತೆಯಿಲ್ಲ ನೋಡು, ಹೇಳಿ ಬಿಡ್ತೇನೆ. ಯಾವುದನ್ನೇ ಆಗಲಿ ಮಾರೋದು ಅಂದ್ರೆ ಬಲೆ ಸಂಕಟ ಆಗುತ್ತೆ. ಕಳೆದುಕೊಂಡ ಪದಾರ್ಥಾನ ತಿರುಗಿ ಮಾಡಿಕೊಳ್ಳೋದು ಈ ಕಾಲದಲ್ಲಂತೂ ಆಗದ ಮಾತು"

"ಅದು ಸರಿಯಮ್ಮ, ಕೈಲಿ ಮೂರು ಕಾಸಿಲ್ಲ. ಪಾರ್ವತಿನೋಡಿದರೆ ಹಾಗೆ ಬೆಳೆದು ನಿಂತಿದ್ದಾಳೆ. ನಾಳೆ ಮದುವೆಯೆಂದರೆ ಎಲ್ಲಿಂದ ತರುತ್ತಿ. ಮನೆ ಸ್ವತ್ತು ಹೋಗುತ್ತೆ ಅಂತ ಮದುವೆಯೇ ಬೇಡ, ಬಿಟ್ಟುಬಿಡೋಣ ಅಂತೀಯಾ ?"

"ಹಾಗನ್ನಕ್ಕುಂಟೇಪ್ಪ. ಎಷ್ಟೇ ಆಗಲಿ ಬೆಳೆದ ಹೆಣ್ಣು ಮಕ್ಕಳು ಮನೆಯಲ್ಲಿದ್ದರೆ, ಎದೆಯ ಮೇಲೆ ಒಂದು ಭಾರವಿದ್ದ ಹಾಗೆ. ಹೋಗಲಿ ಗಂಡೇನಾದರೂ ಗೊತ್ತಾಯಿತೇನು ?" ಸೀತಮ್ಮನವರು ಅಣ್ಣನನ್ನು ಕುತೂಹಲದಿಂದ ನೋಡಿದರು. ಬಂದಾಗಿನಿಂದ ಅವರು ಅವನ ಮುಖವನ್ನು ಅಷ್ಟಾಗಿ ದಿಟ್ಟಿಸಿ ನೋಡಿರಲಿಲ್ಲ. ಈಗ ನೋಡಿ ಅವರೆದೆ ಕುಸಿದು ಹೋಯಿತು. ವೆಂಕಟಪತಯ್ಯನು ಹಿಂದೆ ಒಮ್ಮೆ ಬಂದಿದಾಗ್ಗೂ ಈಗ್ಗೂ ಬಹಳ ಇಳಿದುಹೋಗಿದ್ದನು. ಬಗೆಹರಿಸಲಾರದ ತಾಪತ್ರಯಗಳು ಅವನ ದೇಹವನ್ನು ಹುಳು ಕೊರೆಯುವಂತೆ ಕೊರೆದುಬಿಟ್ಟಿದ್ದುವು. ಬಣ್ಣ ಅಷ್ಟು ಕಪ್ಪಲ್ಲದಿದ್ದರೂ ಬಿಸಿಲಿನ ತಿರುಗಾಟದಿಂದ ಮುಖವು ಸುಟ್ಟ ಬದನೆಕಾಯಿಯ ಹಾಗಾಗಿದ್ದಿತು. ಇದನ್ನೆಲ್ಲ ನೋಡಿದಾಗ ಸೀತಕ್ಕನಿಗೆ ದುಃಖವನ್ನು ತಡೆಯಲಾಗಲಿಲ್ಲ.

"ಯಾವುದು ಹೇಗಾದರೂ ಇರಲಪ್ಪ, ನಿನ್ನ ಮುಖವಂತೂ ನೋಡದ ಹಾಗಾಗಿಹೋಗಿದೆ. ಈಗಲೆ ಶರೀರಾನ ಹೀಗೆ ಬಿಡ್ತಾ ಬಂದರೆ ಮುಂದೆ ಗತಿಯೇನು ?"

"ನಾನೇನ್ಮಾಡಲಿ ಹೇಳು. ಮನೇಲಿ ಅವಳೂ ಅದೇ ಅಂತಿರ್ತಾಳೆ. ಮನೋರೋಗಕ್ಕೆ ಮದ್ದಿಲ್ಲ ಅನ್ನೋಹಾಗೆ ನನಗೆ ಏನು ಔಷಧ ಮಾಡಿದರೂ ಮೈಗೇ ಅಂಟುವುದಿಲ್ಲ."

"ಮನೋರೋಗ ಅಂತ ಹಚ್ಚಿಕೊಂಡು ಹೋದರೆ ಏನಾದರೂ ಇದ್ದೇ ಇರುತ್ತೆ. ಯಾವುದನ್ನೇ ಆಗಲಿ ಸಾಧ್ಯವಾದ ಮಟ್ಟಿಗೆ ಬಿಡ್ತಾ ಬರಬೇಕು"

"ಏನು ಬಿಡೋದೋ, ಏನು ಕಟ್ಟಿಕೊಳ್ಳುವುದೋ ದೇವರಿಗೇ ಗೊತ್ತು. ನೋಡು, ಪಾರ್ವತಿಗೆ ಎಲ್ಲೂ ಗಂಡು ಗೊತ್ತಾಗಿಲ್ಲ. ಅವಳಿಗೇನು ಬ್ರಹ್ಮ ಗಂಡನನ್ನು ಸೃಷ್ಟಿಸಿದ್ದಾನೋ ಇಲ್ಲವೊ ಅನ್ನಿಸುತ್ತೆ. ಹಾಳು ಹುಡುಗಿಯಿಂದ ನನಗೆ ತುಂಬಾ ತ್ರಾಸವಾಗುತ್ತಿದೆ"

ಪಾರ್ವತಿಯನ್ನು ಹಾಳು ಹುಡುಗಿ ಎಂದಾಗ ಸೀತಮ್ಮನವರಿಗೆ ಕರುಳು ಚುರುಕ್ ಎಂದಿತು.

"ಛೇ ಹೆಣ್ಣುಮಗುವನ್ನು ಹಾಗೇಕನ್ನುತ್ತಿ. ಎಷ್ಟರ ಮಟ್ಟಿಗೆ ಬಾಳುತ್ತೊ ಏನೊ" ಎಂದರು.

ವೆಂಕಟಪತಯ್ಯನಿಗೆ ನಿರಾಶೆಯೆನ್ನುವುದು ವಿಪರೀತವಾಗಿ ಹೋಗಿತ್ತು.

"ಅಯ್ಯೋ ಅದನ್ನೆಲ್ಲಾ ಬಿಡಮ್ಮ. ಒಟ್ಟಿನಲ್ಲಿ ಹೇಳುವುದಾದರೆ ಪಾರ್ವತಿಯ ಅದೃಷ್ಟ ಒಳ್ಳೆಯದಲ್ಲ. ಅವಳಿಗೆ ಮಾಡಿರುವ ಪ್ರಯತ್ನ ನಾನು ಯಾರಿಗೂ ಮಾಡಿಲ್ಲ."

"ಅಷ್ಟಕ್ಕೆ ಅವಳ ಅದೃಷ್ಟ ಚೆನ್ನಿಲ್ಲವೊ ?"

"ಹಾಗಲ್ಲದೆ ಇನ್ನೇನು ಹೇಳಲಿ ಹೇಳು. ಹೋಗಲಿ, ಆ ಸುಬ್ಬಣ್ಣನವರ ಮನೆಯವರು ಏನು ಹೇಳಿದರು ? ಜಾತಕಾನಾದರೂ ಕೊಟ್ಟರು ತಾನೆ ?"

ಸೀತಮ್ಮನವರಿಗೆ ತಕ್ಷಣ ಏನು ಹೇಳಬೇಕೆಂಬುದು ಗೊತ್ತಾಗಲಿಲ್ಲ. ಯಾವ ರೀತಿಯಲ್ಲಿ ಹೇಳಿದರೂ ಅಣ್ಣನಿಗೆ ನಿರಾಶೆ ಮಾಡಲೇಬೇಕಾಗಿತ್ತು. ಕೊನೆಗೆ ನಿರುಪಾಯರಾಗಿ,

"ಇಲ್ಲಾಪ್ಪ, ಅವರು ಇನ್ನೂ ಎರಡು ವರ್ಷ ಮಗನ ಮದುವೆ ಮಾಡುವುದಿಲ್ಲವಂತೆ" ಎಂದರು.

ವೆಂಕಟಪತಯ್ಯನು ಕುಳಿತಲ್ಲಿಯೇ ಕುಸಿದುಹೋದನು. ಗಂಡು ಹೆತ್ತವರು ಹೀಗೆ ಒಂದೊಂದು ನೆಪ ಹೇಳುತ್ತಾ ಬಂದರೆ, ತನ್ನಂತಹ ಬಡಪಾಯಿ ಎಲ್ಲಿಗೆ ಹೋಗಬೇಕೆಂಬುದು ಅವನಿಗೆ ಬಗೆಹರಿಸಲಾರದ ಸಮಸ್ಯೆಯಾಗಿತ್ತು. ಕೊನೆಗೆ ತನ್ನ ಕಡೆಯ ಪ್ರಯತ್ನವಾಗಿ ಸೀತಮ್ಮನವರನ್ನೇ ಕೇಳಿಬಿಡುವುದೆಂದು ನಿಶ್ಚಯಿಸಿಬಿಟ್ಟನು.

"ಸೀತು, ನಾನು ಪಡುತ್ತಿರುವ ಪಾಡನ್ನೆಲ್ಲಾ ನೀನೇ ನೋಡುತ್ತಿದ್ದಿ. ಇಷ್ಟೊಂದು ಉಪಚಾರ ಮಾಡುವವಳು ನನ್ನ ಮಗುವನ್ನು ದೊಡ್ಡ ಮನಸ್ಸು ಮಾಡಿ ನಿನ್ನ ಮನೆಗೇಕೆ ತಂದುಕೊಳ್ಳಬಾರದು?" ಎಂದನು.

ಸೀತಕ್ಕ ಮೌನವಾಗಿ ಹೋದರು. ಅವರಿಗೆ ಮೊದಲಿನಿಂದಲೂ ಗೊತ್ತಿತ್ತು. ಎಂದಾದರೂ ಈ ಪ್ರಶ್ನೆ ತನಗೆ ಬೀಳಬಹುದೆಂದು. ಅದಕ್ಕಾಗಿ ಹಗಲಿರುಳೂ ಯೋಚಿಸುತ್ತಿದ್ದರು ಅವರ ಸಮಾಚಾರ, ಒಂದು ಕಡೆ ಕೆರೆ; ಮತ್ತೊಂದು ಕಡೆ ಭಾವಿಯೆನ್ನುವ ಹಾಗಾಗಿತ್ತು. ಅಣ್ಣನಿಗೆ ಸಹಾಯ ಮಾಡಿದರೆ, ಮಗನ ಏಳ್ಗೆಯನ್ನು ಹಾಳುಮಾಡಿದ ಹಾಗೆ. ವಾಸುವಿಗೆ ಬಹಳ ಒಳ್ಳೆಯ ಕಡೆಗಳಿಂದ ಹೆಣ್ಣುಗಳು ಬರುತ್ತಿದ್ದುವು. ಅವನ್ನೆಲ್ಲಾ ಬಿಟ್ಟು, ಹಳ್ಳಿಯಲ್ಲಿ ಒರಟೊರಟಾಗಿ ಬೆಳೆದ ಪಾರ್ವತಿಯನ್ನು ಗಂಟುಹಾಕಲು ಅವರ ಮನಸ್ಸೇ ಒಪ್ಪುತ್ತಿರಲಿಲ್ಲ. ಇತ್ತ ಮಗನ ಹಿತವನ್ನು ನೋಡಿದರೆ, ತನಗಾಗಿ ಎಷ್ಟೋ ಕಷ್ಟಪಟ್ಟಿದ್ದ ಅಣ್ಣನಿಗೆ ಮೋಸ ಮಾಡಿದಹಾಗಾಗುತ್ತಿತ್ತು. ಈ ಉಭಯ ಸಂಕಟದಲ್ಲಿ ಸಿಕ್ಕಿ ಸೀತಕ್ಕ ತುಂಬ ಪೇಚಾಡಿದರು. ತಾವು ಯಾವ ರೀತಿಯಲ್ಲಿ ವರ್ತಿಸಿದರೂ ಒಂದು ಬಗೆಯ ಅನ್ಯಾಯವಾಗುವ ಹಾಗೆ ತೋರಿದುದರಿಂದ, ತಾವು ಯಾವ ತಂಟೆಗೂ ಹೋಗಬಾರದೆಂದು ನಿಶ್ಚಯಿಸಿಬಿಟ್ಟರು.

"ವೆಂಕು, ನನ್ನನ್ನು ಮಾತ್ರ ನಿಷ್ಠುರ ಮಾಡಬೇಡ. ಇಂತಹ ವಿಚಾರಗಳಲ್ಲಿ ವಾಸು ನನ್ನ ಮಾತು ಕೇಳ್ತಾನೆ ಅನ್ನುವ ನಂಬಿಕೆ ಇಲ್ಲ. ಅವನನ್ನು ಒಪ್ಪಿಸಿಕೊಳ್ಳುವ ಭಾರ ನನ್ನದು ಎನ್ನುವ ಹಾಗಿದ್ದರೆ ಮಹರಾಯನಾಗಿ ಒಪ್ಪಿಸು. ನಾನು ಒಂದು ಮಾತನ್ನೂ ಆಡುವುದಿಲ್ಲ. ಸಂತೋಷವಾಗಿ ಮದುವೆಗೆ ಬರುತ್ತೇನೆ" ಎಂದರು.

ತಾಯಿಮಕ್ಕಳಿಬ್ಬರಲ್ಲಿ, ತಾಯಿಯ ವಿಷಯ ಒಂದು ನಿರ್ಧಾರಕ್ಕೆ ಬಂದುದರಿಂದ ವೆಂಕಟಪತಯ್ಯನಿಗೆ ಅರ್ಧ ಹಗುರವಾಯಿತು. ಅವನು ತಂಗಿಯ ಔದಾರ್ಯವನ್ನು ಮನಸ್ಸಿನಲ್ಲೇ ಹೊಗಳುತ್ತಾ,

"ಸೀತು, ಅವನನ್ನು ಒಪ್ಪಿಸುವ ವಿಚಾರ ನನಗೆ ಬಿಡು. ಅವನೂ ಒಳ್ಳೆಯ ಹುಡುಗ. ದೊಡ್ಡವರು ಹೇಗೆ ಹೇಳಿದರೆ ಹಾಗೆ ಕೇಳುತ್ತಾನೆ" ಎಂದು ಎದ್ದನು.

"ಇದೇನು ಹೊರಟೇಬಿಟ್ಟೆ. ವಾಸು ಮನೇಲೆ ಇದ್ದಾನೆ. ಎದ್ದ ಮೇಲೆ ಮಾತಾಡಿಯೇ ಬಿಡುವಿಯಂತೆ" ಎಂದರು ಸೀತಮ್ಮ.

"ಇಲ್ಲ, ನನಗೆ ಹೊರಗೆ ಕೊಂಚ ಕೆಲಸ ಇದೆ. ಸಂಜೆಗೆ ಬರುತ್ತೇನೆ. ನಿಧಾನವಾಗಿ ಮಾತಾಡಿದರಾಯಿತು."

ವೆಂಕಟಪತಯ್ಯನ ಹಿಂದೆಯೇ ಸೀತಕ್ಕ ಬಾಗಿಲ ತನಕ ಹೋದರು. ಮೆಟ್ಟಲಿಳಿಯುವಾಗ ವೆಂಕಟಪತಯ್ಯನು, "ಸೀತು, ಬೆಳಗ್ಗೆ ಹಾಗೆ ಊಟಮಾಡಿಕೊಂಡು ಬರ್ತಾನೆ ಅಂತ ತಿಳಿದುಕೊಳ್ಳಬೇಡ. ರಾತ್ರಿಗೆ ಒಬ್ಬರ ಅಡಿಗೆ ಜಾಸ್ತಿಯಾಗೇ ಮಾಡಬೇಕು" ಎಂದನು.

"ಉಹುಂ, ಈ ಮನೆಯಲ್ಲಿ ಊಟಕ್ಕೆ ಮಾತ್ರ ಅನುಕೂಲವಿಲ್ಲ" ಎಂದು ಸೀತಕ್ಕ ನಕ್ಕರು. ಅವನು ಕಣ್ಮರೆಯಾಗುವ ವರೆಗೂ ನೋಡುತ್ತಿದ್ದು ಸೀತಕ್ಕ ಬಾಗಿಲಿಕ್ಕಿಕೊಂಡು ಅಡಿಗೆಮನೆಗೆ ಬಂದರು. ಅವರಿಗೆ ದಿಕ್ಕೇ ತೋರದ ಹಾಗಾಗಿತ್ತು. 'ಎಲ್ಲಾ ನೀನು ಮಾಡಿಸಿದ ಹಾಗಪ್ಪ' ಎಂದು ದೇವರ ಮುಂದೆ ಮಂಕಾಗಿ ಕುಳಿತುಬಿಟ್ಟರು.

## ೮

ವಾಸುವು ಎದ್ದಾಗ ನಾಲ್ಕು ಗಂಟೆ ಹೊಡೆದುಬಿಟ್ಟಿತ್ತು. ವೆಂಕಟಪತಯ್ಯನು ಹೋದಾಗ ಅವನಿಗೆ ಅರ್ಧ ನಿದ್ರೆ, ಅರ್ಧ ಎಚ್ಚರ. ಮಾವನು ಮಾತಾಡುತ್ತಿದ್ದುದು ಅವನಿಗೆ ಕನಸಿನಲ್ಲಿ ಯಾರೋ ಮಾತಾಡಿದಂತೆ ಅಸ್ಪಷ್ಟವಾಗಿತ್ತು. ಆದರೂ ಕುತೂಹಲವನ್ನು ತಡೆಯಲಾರದೆ ಸೀತಮ್ಮನವರನ್ನು,

"ಯಾರೋ ಮಾತಾಡುತ್ತಿದ್ದ ಹಾಗಿತ್ತು. ಯಾರಕ್ಕ ಬಂದಿದ್ದವರು?" ಎಂದನು.

"ನಿಮ್ಮ ಮಾವ."

"ಏನಂತೆ ಸಮಾಚಾರ ?"

"ಏನೂ ಕಾಣೆನಪ್ಪ. ಅದೇನೋ ನಿನ್ನ ಹತ್ತಿರ ಮಾತಾಡುವುದಿದೆ. ಸಂಜೆಗೆ ಬರುತ್ತೇನೆಂತ ಹೇಳಿ ಹೋದ."

"ಏನು ಮಾತಾಡಬೇಕಾಗಿತ್ತಂತೆ ?"

"ಅದೇ ತಿಳೀದು ಅಂದೆನಲ್ಲ. ಬಂದಮೇಲೆ ಗೊತ್ತಾಗುತ್ತೆ."

ಸೀತಮ್ಮನವರು ಬೇರೆ ಕಡೆ ಮುಖ ತಿರುಗಿಸಿಕೊಂಡರು. ಅವರು ತಮ್ಮ ಗುಟ್ಟನ್ನು ಬಚ್ಚಿಡುತ್ತಿರುವುದನ್ನು ಕಂಡು ವಾಸುವಿಗೆ ಬಹಳ ನಗು ಬಂದಿತು.

"ಅಣ್ಣ ತಂಗಿಯರೆಂದರೆ ಪಕ್ಕಾ ಘಾಟಿಗಳು. ನಿನಗೆ ಗೊತ್ತಿಲ್ಲದ ವಿಷಯಾನ ಮಾವ ನನ್ನ ಹತ್ತಿರ ಮಾತಾಡುತ್ತಾನೋ? ನನಗೆಲ್ಲಾ ಗೊತ್ತು, ಏನು ವಿಚಾರ ಅಂತ. ಮಾವನಿಗೆ ಗಂಡು ಹುಡುಕಿ ಹುಡುಕಿ ಸಾಕಾಯಿತು. ಎಲ್ಲಿಯೂ ಗಿಟ್ಟಲಿಲ್ಲ. ಈಗ ನನ್ನ ಸ್ವಲ್ಪ ಪುಸಲಾಯಿಸಿ ನೋಡೋಣ ಅಂತ."

"ದೊಡ್ಡವರನ್ನು ಹಾಗೆಲ್ಲಾ ಅನ್ನಬಾರದು ವಾಸು. ಎಷ್ಟೇ ಆಗಲಿ ಅವನು ನಿನ್ನನ್ನು ಸಾಕಿದವನು. ತಂದೆ ಸಮಾನ."

"ಇಷ್ಟೆಲ್ಲಾ ಅನ್ನುತ್ತಿದ್ದರೇ ನಮ್ಮನ್ನು ಸುಮ್ಮನಿರಲು ಬಿಡುವುದಿಲ್ಲ. ಇನ್ನು ಉಪಚಾರ ಮಾಡಿದರಂತೂ ತಲೆಯ ಮೇಲೇ ಬಂದು ಕೂತು ಬಿಡುತ್ತಾರೆ. ನೀನೆ ಹೇಳಕ್ಕ, ಆ ಪಾರ್ವತೀನ ನಾನು ಮಾಡಿಕೊಂಡರೆ ಚೆನ್ನಾಗಿರುತ್ತೆಯೆ ಅಂತ ?"

ಸೀತಮ್ಮನವರು ಏನೊಂದುತ್ತರವನ್ನೂ ಕೊಡಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ, "ನಾನು ಹಾಗೆಲ್ಲಾ ಯಾವುದನ್ನೂ ಹೇಳುವುದಿಲ್ಲವೆಂದು ವೆಂಕೂಗೆ ಮಾತುಕೊಟ್ಟಿದ್ದೇನೆ" ಎಂದರು.

"ಹಾಗೇಕೆ ಮಾಡಿದೆ ?"

"ಹಾಗೆ ಮಾಡದಿದ್ದರೆ ನನಗೆ ಬೇರೆ ದಾರಿಯೇ ಇರಲಿಲ್ಲ. ನನಗೆ ನೀನೂ ಬೇಕು; ಅವನೂ ಬೇಕು. ಒಬ್ಬನಲ್ಲಿ ಯಾರನ್ನೂ ನೋಯಿಸುವ ಇಷ್ಟವಿಲ್ಲ" '

"ಹಾಗೆಂದು ನಾನು ಮಾತ್ರ ನಿಷ್ಠುರನಾಗಿ ಬಿಡಲೋ ?"

"ಇದರಲ್ಲಿ ನಿಷ್ಠುರವೇನು ಬಂತು. ಇಷ್ಟವಿದ್ದರೆ 'ಹೂಂ' ಎನ್ನು, ಇಲ್ಲವಾದರೆ ಬೇಡವೆನ್ನು, ನನಗೇಕೊ ಅವನ ಮುಖ ನೋಡಿದ ಮೇಲೆ ಏನು ಹೇಳುವುದಕ್ಕೂ ಹೆದರಿಕೆಯಾಯಿತು."

"ಮಾವ ನಿನ್ನನ್ನು ಹೆದರಿಸಲು ಮುಖವಾಡ ಕಟ್ಟಿಕೊಂಡು ಬಂದಿದ್ದ ಅಂತ ತೋರುತ್ತೆ." ವಾಸುವು ತಮಾಷೆಗಾಗಿ ನಕ್ಕನು. ಆದರೆ ಸೀತಕ್ಕ ಮಾತ್ರ ದುಃಖದಿಂದ ಉಬ್ಬಸಪಡುತ್ತಿದ್ದರು.

"ವಾಸು, ನಿನಗೆ ತಮಾಷೆ, ಅವನ ಸ್ಥಿತಿ ನೋಡಿದರೆ ಇನ್ನು ಹೆಚ್ಚು ದಿನ ಬದುಕುತ್ತಾನೋ ಇಲ್ಲವೊ ಎನಿಸುತ್ತೆ." ಸೀತಕ್ಕ ಬಿಕ್ಕಿ ಬಿಕ್ಕಿ ಅತ್ತರು. ಇದುವರೆಗೂ ಹಾಸ್ಯಮಾಡುತ್ತಿದ್ದ ವಾಸುವಿಗೆ ಈಗ ನಿಜ ವಾಗಿಯೂ ಗಾಬರಿಯಾಯಿತು. ಅವನು ಬೆಪ್ಪಾಗಿ ಕುಳಿತುಬಿಟ್ಟನು. ಹಾಗೆಯೇ ಅವನಿಗೆ ಹಿಂದಿನ ಘಟನೆಯೊಂದು ನೆನಪಿಗೆ ಬಂದಿತು.

ಪಾರ್ವತಿಗೆ ಹಿಂದೊಮ್ಮೆ ಒಂದು ಗಂಡು ಗೊತ್ತಾಗಿದ್ದಿತು. ಹುಡುಗ ವಾಸುವಿನ ಸ್ನೇಹಿತ. ಮಾತಿಗೆ ಮಾತು ಬಂದಾಗ ಅವನು ತನ್ನ ಮದುವೆಯ ವಿಷಯವನ್ನು ವಾಸುವಿಗೆ ಹೇಳಿದ. ಹುಡುಗಿಯು ತನ್ನ ಮಾವನ ಮಗಳೆಂಬುದು ವಾಸುವಿಗೆ ತಿಳಿಯಿತು. ಅವನು ಸುಮ್ಮ ನಿರದೆ ಕೇಟಲೆಗೆ,

"ಅಯ್ಯೋ ಅವಳು ನಮ್ಮ ಸೋದರ ಮಾವನ ಮಗಳು ಕಣೋ. ಪರವಾಗಿಲ್ಲ ಬಿಡು. ಒಳ್ಳೆ ಟಾಕಣ ಕುದುರೇನೇ ಚುನಾಯಿಸಿಬಿಟ್ಟೆ," ಎಂದುಬಿಟ್ಟ. ಸರಸ ಹೋಗಿ ವಿರಸವಾಯಿತು. ಅದನ್ನೇ ಮನಸ್ಸಿನಲ್ಲಿಟ್ಟು ಕೊಂಡು ಹುಡುಗ ಮನೆಗೆ ಹೋದವನೆ, ಯಾವ ಕಾರಣವನ್ನೂ ಹೇಳದೆ ನನಗೆ ಮದುವೆ ಬೇಡವೆಂದುಬಿಟ್ಟನು ಲಗ್ನಪತ್ರಿಕೆಗೆ ಹಾರಾಡುತ್ತಿದ್ದ ವೆಂಕಟಪತಯ್ಯನಿಗೆ ಸಿಡಿಲು ಬಡಿದಹಾಗಾಯಿತು. ಆದರೆ ದೇವರ ದಯೆಯಿಂದ ಮದುವೆಯು ನಿಂತುಹೋಗಲು ಮುಖ್ಯ ಕಾರಣ ವಾಸು ಎನ್ನುವುದು ಗೊತ್ತಾಗಲಿಲ್ಲ. ಒಂದು ಕಡೆ ತನ್ನ ಅಪರಾಧವು ಹೊರ ಬೀಳಲಿಲ್ಲ ಎಂದು ಸಂತೋಷವಾದರೂ, ಮತ್ತೊಂದು ಕಡೆ, ಸೀತಮ್ಮ ನವರಂತೆಯೇ ಸರಳ ಹೃದಯದವನಾಗಿದ್ದ ವಾಸುವಿಗೆ ಎಲ್ಲಿಲ್ಲದ ದುಃಖ ವುಂಟಾಗಿದ್ದಿತು. ತನ್ನನ್ನು ಸಾಕಿದವನಿಗೆ ಇಂತಹ ಉಪಕಾರವನ್ನೇ ಮಾಡುವುದು ಎಂದು ಮನಸ್ಸಿನಲ್ಲಿಯೇ ನೊಂದುಕೊಳ್ಳುತ್ತಿದ್ದನು. ನಿಜ

ವಾದ ವಿಷಯವನ್ನು ತಾಯಿಯ ಎದುರಿಗೆ ಹೇಳುವ ಧೈರ್ಯವೂ ಇರಲಿಲ್ಲ. ಈಗ ಪಾರ್ವತಿಯನ್ನು ತಾನೇ ಮದುವೆಯಾಗುವ ಪ್ರಸಂಗ ಬಂದಿರುವುದನ್ನು ನೋಡಿ ವಾಸುವು, 'ದೇವರು ನನಗೆ ಕೊಡುತ್ತಿರುವ ಶಿಕ್ಷೆ ಇದು' ಎಂದುಕೊಂಡನು. ಅವನಿಗೆ ತಾಯಿಯ ಮನೋಭಿಪ್ರಾಯವೇನೆಂಬುದೂ ಚೆನ್ನಾಗಿ ಅರ್ಥವಾಗಿತ್ತು, ತುಂಬ ಯೋಚಿಸಿದ ಮೇಲೆ ವಾಸುವು,

"ಅಕ್ಕ ನಿನಗೆ ಒಂದು ಕಡೆ ಪಾರ್ವತಿಯನ್ನೇ ತಂದುಕೊಳ್ಳಬೇಕೆಂಬ ಚಪಲ. ಇನ್ನೊಂದು ಕಡೆ ನನ್ನ ಮೇಲಿನ ಮಮತೆ ಅಲ್ಲವೆ?" ಎಂದನು.

ತಮ್ಮ ಹೃದಯದ ಕಷ್ಟವನ್ನು ಮಗನು ಬೇಗನೆ ಅರ್ಥಮಾಡಿಕೊಂಡುದುದನ್ನು ನೋಡಿ ಸೀತಕ್ಕನಿಗೆ ತುಂಬ ಹಗುರವಾಯಿತು.

"ಹೌದು ವಾಸು, ಈಗ ನನಗೆ ಬಂದಿರುವ ಉಭಯ ಸಂಕಟ ಅದೇ" ಎಂದರು.

"ಈ ಕಷ್ಟ ನಿನಗೊಬ್ಬಳಿಗೆ ಮಾತ್ರವಲ್ಲ. ನನಗೂ ಇದೆ. ನನ್ನನ್ನು ಸಾಕಿದವನನ್ನು ನೋಯಿಸಲು ಏಕೋ ಮನಸ್ಸೇ ಬರುವುದಿಲ್ಲ."

ವಾಸುವಿನ ವಿಶಾಲ ಮನಸ್ಸನ್ನು ನೋಡಿ ಸೀತಕ್ಕ ಅವಾಕ್ಕಾಗಿ ಹೋದರು. ಅವರಿಗೆ ಅಂತಹ ಹುಡುಗನ ತಾಯಿಯಾಗಲು ತಮಗೆ ಯೋಗ್ಯತೆ ಸಾಲದೆನಿಸಿತು. ಅವರು ವಾತ್ಸಲ್ಯದ ಅತಿರೇಕದಿಂದ,

"ಮಗು ಹಾಗಾದರೆ ಏನು ಮಾಡಬೇಕೆನ್ನುತ್ತಿ?" ಎಂದರು.

"ಒಂದು ಕೆಲಸ ಮಾಡೋದು. ನಮ್ಮಿಬ್ಬರಿಗೆ ಬಂದಿರುವ ತೊಂದರೆ ಒಂದೇ ಆದಕಾರಣ ಅದನ್ನು ಬಗೆಹರಿಸುವ ವಿಧಾನ ನಮ್ಮಿಬ್ಬರಿಂದಲೂ ಸಾಧ್ಯವಿಲ್ಲ. ಅದಕ್ಕೆ ಯಾರಾದರು ಮೂರನೆಯ ವ್ಯಕ್ತಿ ಬರಬೇಕು."

"ಯಾರನ್ನು ಕರೆಸುವುದು? ಭಾಗಮ್ಮನವರನ್ನು ಬರಹೇಳಲೆ? ಅವರಾದರೆ ಮೊದಲಿನಿಂದ ನಮ್ಮ ಕಷ್ಟ ಸುಖ ಕಂಡವರು."

"ನಾನು ಹೇಳುವುದು ಮನುಷ್ಯರ ಸಹವಾಸವೇ ಬೇಡಾಂತ. ಎಲ್ಲಕ್ಕೂ ದೊಡ್ಡವನಾದ ದೇವರನ್ನೇ ನಿಯಮಿಸಿಬಿಡೋಣ."

ವಾಸುವಿನ ಹುಡುಗುಬುದ್ಧಿಯನ್ನು ಕಂಡು ಸೀತಮ್ಮನವರಿಗೆ ಅಳು ನಗು ಏಕಕಾಲದಲ್ಲಿ ಬಂದುವು.

"ಅಯ್ಯೋ ನಿನಗೆ ಜಾಣತನ ಅನ್ನೋದು ಯಾವಾಗ ಬರುತ್ತೆ ಹೇಳು. ದೇವರನ್ನು ನಿಯಮಿಸುವುದು ಅಂದರೆ ಅರ್ಥನೇನೊ," ಎಂದರು.

"ಅದಕ್ಕೆ ಇನ್ನೇನೂ ಮಾಡಬೇಕಾಗಿಲ್ಲ ಅಕ್ಕ. ಕೋಟೆಬಾಗಿಲು ಆಂಜನೇಯನ ಮುಂದೆ ಚೀಟಿ ಹಾಕಿಬಿಡುತ್ತೇನೆ. 'ಮಾಡಿಕೊ' ಎಂದು ಬಂದರೆ, ದೇವರ ಮೇಲೆ ಭಾರಹಾಕಿ ಮಾಡಿಕೊಂಡು ಬಿಡುತ್ತೇನೆ."

ವಾಸುವಿನ ಏರ್ಪಾಡು ಸೀತಕ್ಕನಿಗೆ ತುಂಬ ಒಪ್ಪಿಗೆಯಾಗಿತ್ತು.

"ಅದೇ ಸರಿ ವಾಸು. ಒಳ್ಳೆಯದು, ಕೆಟ್ಟದ್ದು ಎಲ್ಲಾ ನೋಡಿ ಕೊಳ್ಳುವವನು ಅವನೇ. ಬರಿ ಚೀಟಿ ಹಾಕಿ ಬರಬೇಡ. ಮಂಗಳಾರತೀನೂ ಮಾಡಿಸಿ ಬಾ. ಆ ನಮ್ಮಪ್ಪ ಎಲ್ಲಾದರೂ ನಿನ್ನ ತಲೆ ಕಾಯಲಿ" ಎಂದು ಸೀತಮ್ಮನವರು ಕುಳಿತಿದ್ದಲ್ಲಿಯೇ ಕೈ ಮುಗಿದರು.

ತನ್ನ ಮಾತಿಗನುಗುಣವಾಗಿ ವೆಂಕಟಪತಯ್ಯನು ಏಳು ಗಂಟೆ ಗೆಲ್ಲಾ ಬಂದನು. ವಾಸುವು ಹೊರಗೆ ಹೋದವನು ಇನ್ನೂ ಬಂದಿರಲಿಲ್ಲ. ಆ ದಿನ ಮಧ್ಯಾಹ್ನ ಪುರುಸೊತ್ತಾಗಿ ಮಾತುಕತೆಯಾಡಲು ಅವಕಾಶ ದೊರೆಯದಿದ್ದ ಅವರಿಬ್ಬರಿಗೆ ಈಗ ಸುಸಮಯವಾಗಿತ್ತು. ಇಬ್ಬರೂ ಎಲ್ಲಿಲ್ಲದ ಹರಟೆ ಕೊಚ್ಚಿದರು. ಸೀತಮ್ಮನವರು ವಾಸುವಿಗೆ ಜ್ವರ ಬಂದದ್ದು, ಅವನ ಹುಷಾರಿಗೆ ತಾವು ಶ್ರಮಪಟ್ಟದ್ದು ವರ್ಣಿಸಿದರೆ, ಇವನು ತನ್ನ ಮಕ್ಕಳು ಬೇನೆ ಬಿದ್ದಿದ್ದ ಗಂಡಾಂತರವನ್ನು ಹೇಳುವನು. ಅವರು ತಮ್ಮ ರೈತ ಆ ಸಾರಿ ಛತ್ರಕ್ಕೆ ಮಾಡಿದ ತೊಂದರೆಯನ್ನು ಹೇಳಿದರೆ, ಇವನು ಎತ್ತುಕೊಳ್ಳಲು ತೀರಾ ಸಮಯವೆಂದು ಹದಿನೈದು ರೂಪಾಯಿಗಳನ್ನು ಸಾಲ ತೆಗೆದುಕೊಂಡು ಹೋಗಿ, ಕೊಡದೇ ಸತಾಯಿ ಸಿದ ತನ್ನ ನೆಚ್ಚಿನವನೆನಿಸಿದ್ದ ರೈತ ನಿಂಗನ ಕತೆ ಹೇಳುವನು. ಒಬ್ಬರು ಒಂದು ವಿಚಾರ ಎತ್ತಿದರೆ ಅದಕ್ಕೆ ಎದುರು ಪಂಗಡದಿಂದ ಪ್ರತಿ ವಿಚಾರ ಸಿದ್ಧವಾಗಿಯೇ ಇರುತ್ತಿತ್ತು. ಹೀಗೆ ಮಾತಿನ ಲಹರಿಯಲ್ಲಿ ವೆಂಕಟ ಪತಯ್ಯನೂ, ಸೀತಕ್ಕನೂ ಮುಳುಗಿ ಎದ್ದು ದಡಕ್ಕೆ ಬಂದು ನೇರ ಬೇಕಾಗಿದ್ದರೆ ಗಂಟೆ ಒಂಭತ್ತಾಗಿದ್ದಿತು. ವಾಸುವು ಇನ್ನೂ ಬಂದಿರಲಿಲ್ಲ. ವೆಂಕಟಪತಯ್ಯನಿಗೆ ಹಸಿವು ಬಹಳವಾಗಿತ್ತು. ಸೀತಕ್ಕ ಅವನನ್ನು ಊಟ ಮಾಡುವಂತೆ ಆಗ್ರಹಮಾಡಿದರು.

"ಅವನ ಪಾಡು ಅವನಿಗೆ. ಈಗಿನ ಹುಡುಗರಿಗೆ ಮನೆಯ ಊಟ, ತಿಂಡಿ ರುಚಿಸುತ್ತದೆಯೇ ಹೇಳು. ಹಾಳು ಹೋಟೆಲು ತಿಂಡಿ ತಿನ್ನುವುದು ; ರಾತ್ರಿ ಊಟವಿಲ್ಲದೆ ಮಲಗುವುದು. ಅವನನ್ನು ಕಾಯ್ದರೆ ನಿನಗೆ ಉಪವಾಸವೇ ಗತಿ. ನಿನ್ನ ಪಾಡಿಗೆ ನೀನು ಏಳು. ಆಮೇಲೆ ಬೇಕಾದರೆ ಅವನು ಏಳಲಿ. ಇಲ್ಲದಿದ್ದರೆ ಬೇಡ" ಎಂದರು.

ಹಾಗೆ ಮಾಡುವುದನ್ನು ಬಿಟ್ಟು ವೆಂಕಟಪತಯ್ಯನಿಗೆ ಬೇರೆ ಯಾವ ಮಾರ್ಗವೂ ತೋರಲಿಲ್ಲ. ಬೆಳಗ್ಗೆ ಯಾರ ಮನೆಯಲ್ಲೋ ತಿಂದದ್ದು. ಹಸಿವು ಅಸಾಧ್ಯವಾಗಿತ್ತು.

"ಅಯ್ಯೋ, ಹೋಟಲಿಗೆ ದುಡ್ಡು ಹಾಕಿ ನನ್ನಂತಹವರು ಪೂರೈಸೋದಿಕ್ಕಾಗುತ್ತೇನಮ್ಮ. ಅವನಿಗಂತೂ ಹುಡುಗತನ. ಹುಡುಗ ತನದಲ್ಲಿ ಯಾವುದು ಮಾಡಿದರೂ ಚೆನ್ನ. ನಾಳೆ ನಾಲ್ಕು ಮಕ್ಕಳಾಗಲಿ, ಬಾಯಿ ಮುಚ್ಚಿಕೊಂಡು ಮನೇಲಿ ಮಾಡಿದ್ದನ್ನು ತಿನ್ನುತ್ತಾನೆ," ಎನ್ನುತ್ತಾ ಅವನು ಕೈಕಾಲು ತೊಳೆಯಲು ಒಳಗೆ ಹೋದನು. ಅಷ್ಟರಲ್ಲಿ ಬೀದಿಯ ಬಾಗಿಲು ಸದ್ದಾಯಿತು. ಸೀತಮ್ಮನವರು "ಅಕೋ, ಅವನೂ ಬಂದ" ಎಂದು ಹೋಗಿ ಬಾಗಿಲು ತೆರೆದರು.

ಮುಕ್ಕಾಲು ಊಟವಾಗುವ ವರೆಗೂ ವಾಸು ಮತ್ತು ಅವನ ಮಾವ ಯಾವಯಾವುದೋ ವಿಚಾರವಾಗಿ ಹರಟೆ ಹೊಡೆಯುತ್ತಿದ್ದರು. ವೆಂಕಟ ಪತಯ್ಯನು ಮದುವೆಯ ಪ್ರಸ್ತಾಪವನ್ನು ಎತ್ತಲು ಸರಿಯಾದ ಸಮಯ ವನ್ನು ಹೊಂಚುಹಾಕುತ್ತಿದ್ದನು. ಆದರೆ ಸೀತಮ್ಮನವರಿಗೆ ಮಾತ್ರ ಸಂಬಂಧವಿಲ್ಲದ ವಿಚಾರ ಕೇಳಿ ಕೇಳಿ ಬಹಳ ಬೇಜಾರಾಗಿತ್ತು. ಕೊನೆಗೆ ಅವರು ಮಗನನ್ನು,

"ವಾಸು, ನೀನು ಹೋಗಿದ್ದ ಕೆಲಸ ಹಣ್ಣೋ, ಕಾಯೋ ?" ಎಂದರು. ವಾಸುವು ಮುಗುಳುನಗೆ ನಗುತ್ತಾ,

"ಒಟ್ಟಿನಲ್ಲಿ ಮಾವನ ಅದೃಷ್ಟ ಚೆನ್ನಾಗಿದೆ" ಎಂದನು.

ಸೀತಮ್ಮನವರಿಗೆ ವಿಷಯ ಅರ್ಥವಾಯಿತು. ಅವರು ಮತ್ತೆ ಕೈಮುಗಿಯುತ್ತಾ, "ಏನೋ ಎಲ್ಲ ಆ ಮಹಾನುಭಾವನ ಪ್ರೇರೇಪಣೆ" ಎಂದರು.

ತಾಯಿ ಮಗನ ಸನ್ನೆ ಸಂಜ್ಞೆಗಳು ವೆಂಕಟಪತಯ್ಯನಿಗೆ ಸ್ವಲ್ಪವೂ ಅರ್ಥವಾಗಲಿಲ್ಲ. ಅವನಿಗೆ ಕೊಂಚ ಗಾಬರಿಯೇ ಆಯಿತು.

"ಏನಮ್ಮಾ, ಇಬ್ಬರೂ ಸೇರಿ ನನ್ನ ಮೇಲೆ ಏನೋ ಪಿತೂರಿ ಮಾಡುತ್ತಿರುವಹಾಗಿದೆಯಲ್ಲಾ"

ಸೀತಮ್ಮನವರು ಉಕ್ಕಿ [illegible]ರ ಸಂತೋಷವನ್ನು ಅದುಮುತ್ತಾ, ಆ ದಿನ ಮಧ್ಯಾಹ್ನ ತಾ[illegible] ನಡೆದ ಮಾತುಕತೆಗಳನ್ನೂ, ಕೊನೆಗೆ ಅವರ ಫಲಿತಾಂಶವನ್ನೂ ಚಾಚೂ ತಪ್ಪದೆ ಹೇಳಿದರು. ವೆಂಕಟಪತಯ್ಯನಿಗೆ ತನ್ನ ಕಿವಿಯನ್ನೇ ನಂಬಲಾಗಲಿಲ್ಲ. ತಾನಾಗಿ ತಾನು ತನ್ನೆಡೆಗೆ ಒಲಿದುಬಂದ ಆಂಜನೇಯನಿಗೆ ಜೋಡಿ ತೆಂಗಿನಕಾಯಿ ಒಡೆಸುವುದಾಗಿ ಮನಸ್ಸಿನಲ್ಲಿಯೇ ಹರಸಿಕೊಂಡನು. ಆನಂದದ ಅತಿರೇಕದಿಂದ ಅವನಿಗೆ ಕೊಂಚ ಕಾಲ ಮಾತಾಡಲು ಬಾಯೇ ಹೊರಡಲಿಲ್ಲ.

ಆಮೇಲೆ ಆ ಸೂರ್ವರಲ್ಲಿ ನಡೆದ ವಾಗ್ವಾದಗಳಿಂದರೆ ಮದುವೆಯ ವಿಷಯವಾಗಿ. ಲಗ್ನವು ಮಾಘಮಾಸದಲ್ಲಿ ನಡೆಯುವಂತೆ ನಿಷ್ಕರ್ಷೆ ಯಾಯಿತು ಆಗ ಮಾಡುವುದರಿಂದ ವೆಂಕಟಪತಯ್ಯನಿಗೂ ದುಡ್ಡು ಕಾಸು ಮಾಡಿಕೊಳ್ಳಲು ಅವಕಾಶ ದೊರೆಯುವಹಾಗಿತ್ತು. ಇತರ ವಿಷಯದಲ್ಲಿ ಯಾವ ಅತೃಪ್ತಿ ಇಲ್ಲದಿದ್ದರೂ ಸೀತಮ್ಮನವರಿಗೆ ಜಾತಕ ತೋರಿಸದೆ ಲಗ್ನ ಮಾಡಬೇಕಲ್ಲಾ ಎಂದು ಅಸಮಾಧಾನ. ವೆಂಕಟಪತಯ್ಯನು ಅದಕ್ಕೆ ಒಪ್ಪಲಿಲ್ಲ.

"ನಿನಗೆ ಹುಚ್ಚು. ದೇವರ ಮುಂದೆ ಚೀಟಿ ಹಾಕಿ ನೋಡಿದ ಮೇಲೆ ಇನ್ನು ಜಾತಕ ನೋಡುವುದೇನು ಬಂತು? ಅದರಲ್ಲೂ ನೋಡರ ಮಾವನ ಕಡೆ. ಏನೂ ಭಯವಿಲ್ಲ" ಎಂದನು.

ಸೀತಕ್ಕ ಹೆಚ್ಚಿಗೆ ಹೇಳಲು ತೋರದೆ ಸುಮ್ಮನಾದರು.

## ೬

ವೆಂಕಟಪತಯ್ಯನು ಹೊರಟುಹೋದ ಒಂದೆರಡು ದಿನಕ್ಕೆಲ್ಲಾ ವಾಸುವಿನ ನಿರೀಕ್ಷಣೆಯಂತೆ ಅವನಿಗೆ ಕೆಲಸಕ್ಕೆ ಆರ್ಡರು ಬಂದಿತು. ಅವನಿಗೆ ಮೈಲಾಪುರದ ಹೈಸ್ಕೂಲಿನಲ್ಲಿ ಉಪಾಧ್ಯಾಯನ ಕೆಲಸ ಸಿಕ್ಕಿದ್ದಿತು. ಕೆಲಸಕ್ಕೆ ಸೇರಲು ಕೇವಲ ಮೂರು ದಿವಸ ಮಾತ್ರ ಅವಕಾಶವಿದ್ದುದರಿಂದ ಯಾವುದನ್ನೂ ಸಾವಧಾನವಾಗಿ ಯೋಚಿಸಲೂ

ಪುರಸೊತ್ತಿರಲಿಲ್ಲ. ವಾಸುವಿಗೇನೋ ಬಹಳ ಸಂತೋಷವಾಗಿತ್ತು. ಅವನು ಎಲ್ಲಿಲ್ಲದ ಸುಖಮಯ ಸನ್ನಿವೇಶಗಳ ಕನಸು ಕಂಡನು. ತನ್ನ ಭಾಗ್ಯವನ್ನು ತಾನೇ ಕೊಂಡಾಡಿಕೊಂಡನು. ಅವನ ಹೆಚ್ಚಿನ ಸಂತೋಷಕ್ಕೆ ಕಾರಣವು ಮತ್ತೊಂದಿತ್ತು. ಭಾಗಮ್ಮನವರ ಮಗ ಕಿಟ್ಟಿಯೂ ಸಹ ಆಗ ಮೈಲಾಪುರದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಿದ್ದನು. ಜೊತೆಗೆ ಯಾರೂ ಇಲ್ಲವಲ್ಲಾ ಎನ್ನುವ ಚಿಂತೆ ಇರಲಿಲ್ಲ.

ವಾಸುವಿಗೆ ಕೆಲಸಕ್ಕೆ ಆರ್ಡರು ಬಂದಿರುವ ವಿಚಾರ ಭಾಗಮ್ಮನವರಿಗೂ ತಿಳಿಯಿತು. ಅವರಿಂದ ಅವರ ಗಂಡನಿಗೆ ಗೊತ್ತಾಯಿತು. ಆ ಮುದುಕ ದಂಪತಿಗಳಿಬ್ಬರೂ ವಾಸುವನ್ನು ತುಂಬಿದ ಹೃದಯದಿಂದ ಹರಸಿದರು. ಭಾಗಮ್ಮನವರಂತೂ, "ಪಾರ್ವತಿಯ ಅದೃಷ್ಟ ಒಳ್ಳೆಯದು. ಕೈಹಿಡಿಯುವ ಮೊದಲೇ ಗಂಡನಿಗೆ ಕೆಲಸ ಸಿಕ್ಕಿಬಿಟ್ಟಿತು," ಎಂದು ಅವಳನ್ನು ಹಾಡಿ ಹೊಗಳಿಬಿಟ್ಟರು. ಆದರೆ ಸೀತಮ್ಮನವರಿಗೆ ಮಾತ್ರ ಏನೂ ಸಮಾಧಾನವಿರಲಿಲ್ಲ. ಅವರು ಮೈಲಾಪುರದ ಹವ ಅಷ್ಟು ಒಳ್ಳೆಯದಲ್ಲವೆಂದು ಯಾರ ಬಾಯಲ್ಲೋ ಕೇಳಿದ್ದರು. ಈಗ ಮಗನನ್ನು ಒಂಟಿಯಾಗಿ ಅಲ್ಲಿಗೆ ಕಳುಹಿಸಲು ಅವರಿಗೆ ವಿಪರೀತ ಹೆದರಿಕೆಯಾಗಿತ್ತು. ಆದರೆ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ವಾಸು ಇರಲಿಲ್ಲ. ಸೀತಮ್ಮನವರ ಅನುಮಾನವನ್ನು ನೋಡಿ ಭಾಗಮ್ಮನಂತಹವರಿಗೂ ಕೊಂಚ ಬೇಸರವೇ ಆಯಿತು. ಅವರು,

"ಚೆನ್ನಾಯಿತು, ಮಗನಿಗೆ ಕೆಲಸವಾದರೆ ಹೀಗೆ ಪೇಚಾಡುವ ತಾಯಿಯನ್ನು ನಾನು ಎಲ್ಲಿಯೂ ಕಂಡಿಲ್ಲ. ದೂರ ಎಂದರೆ ಏನು ಮಾಡುವುದಕ್ಕೆ ಸಾಧ್ಯ. ನಾನೀಗ ಕಿಟ್ಟಿಯನ್ನು ಬಿಟ್ಟಿಲ್ಲವೆ?" ಎಂದರು.

"ನೀವು ಹೇಳುವುದು ಸರಿ ಭಾಗಮ್ಮ. ನಮ್ಮ ಕಿಟ್ಟಣ್ಣ ಅಲ್ಲಿರುವುದರಿಂದಲೇ ನಾನೂ ಸಹ ವಾಸು ಅಲ್ಲಿಗೆ ಹೋದರೆ ಹೋಗಲಿ ಅನ್ನುವುದು. ಹಾಗಲ್ಲದಿದ್ದರೆ ನಾನು ಖಂಡಿತಾ ಅವನನ್ನು ಹೋಗಗೊಡಿಸುತ್ತಿರಲಿಲ್ಲ" ಎಂದರು ಸೀತಕ್ಕ.

"ಸರಿ ಮತ್ತೆ. ಗಂಡು ಹುಡುಗರು ಕೊಂಚ ಹೊರಗೆ ಓಡಾಡಬೇಕು. ಹೀಗೆ ನೀನು ಅವನನ್ನು ಅಡುಗೆಮನೇಲಿ ಬೆಳಸ್ತಾಬಂದರೆ ಅವನು ಶುದ್ಧ ಮಂಕಾಗುತ್ತಾನೆ ನೋಡಿಕೊ."

"ಅದೇನೋ ನಿಜ."

"ಬೇಸಗೆಯ ವರೆವಿಗೂ ಅವನು ಏನೂ ಆತಂಕಪಡಬೇಕಾಗಿಲ್ಲ ಅವನು ತನ್ನ ಪಾಡಿಗೆ ಕಿಟ್ಟಿಯ ಮನೇಲೇ ಹಾಯಾಗಿ ಇದ್ದುಕೊಳ್ಳಲಿ ಆಮೇಲೆ ಹೇಗಿದ್ದರೂ ಮದುವೆಯಾಗುತ್ತೆ. ಇನ್ನೊಮ್ಮೆ ಅಲ್ಲಿಗೆ ಹೋಗುವಾಗ ಪಾರ್ವತಿಯನ್ನೂ ಜೊತೆಗೇ ಕಳುಹಿಸಿದರಾಯಿತು. ಅವಳೇನು ಸಂಸಾರ ಮಾಡಲು ಬರದ ಚಿಕ್ಕ ಹುಡುಗಿಯೆ? ಗಂಡನನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಾಳೆ. ನೋಡಿಕೊಳ್ಳದಹಾಗೇನು. ನನಗೆ ಸೊಸೆ ಬಂದಮೇಲೆ ಮಗನ ಆತಂಕವನ್ನೇ ಬಿಟ್ಟುಬಿಟ್ಟೆ," ಎಂದು ಭಾಗಮ್ಮನವರು ಸೀತಕ್ಕನನ್ನು ಸಮಾಧಾನ ಮಾಡಿದರು.

ಸೀತಮ್ಮನವರಿಗೂ ಆ ಏರ್ಪಾಡು ಬಹಳ ಮೆಚ್ಚುಗೆಯಾಗಿ ತೋರಿತು. ಭಾಗಮ್ಮನವರ ವಿಶಾಲ ಹೃದಯಕ್ಕೆ ಅವರು ಮನಸ್ಸಿನ ಲ್ಲಿಯೇ ಬಹಳವಾಗಿ ವಂದಿಸಿದರು. ತಮ್ಮ ಕಷ್ಟಕ್ಕೆ ನೆರವಾಗಲೆಂದು ಅವರ ಮನೆಯವರನ್ನು ದೇವರು ತಮ್ಮ ಬಳಿ ಇಟ್ಟಿರಬಹುದು ಎನಿಸಿತು ಸೀತಮ್ಮನವರ ಸರಳ ಮನಸ್ಸಿಗೆ.

ವಾಸುವು ದೃಢ ಮನಸ್ಸು ಮಾಡಿ ಮೈಲಾಪುರಕ್ಕೆ ಹೊರಟು ಬಿಟ್ಟನು. ಆ ಸ್ಟೇಷನ್ ಬಂದಾಗ ಅವನ ಕೈಕಾಲು ತರತರನೆ ನಡಗುತಿತ್ತು. ಕಾಣದ ಊರು ಅದರಲ್ಲಿಯೂ ಮೊದಲನೆ ಬಾರಿ ಕೆಲಸಕ್ಕೆ ಸೇರಲು ಹೋಗುತ್ತಿರುವುದು. ರೈಲು ಇಳಿದಾಗ ಅವನಿಗೆ ಗಾಬರಿಯಿಂದ ಕಣ್ಣಿಗೆ ಕತ್ತಲು ಕವಿದುಬಿಟ್ಟಿತ್ತು. ದೂರದಲ್ಲಿ ಕಿಟ್ಟಿಯು ತನ್ನನ್ನು ಕೂಗುತ್ತಿರುವುದೂ ಗೊತ್ತಾಗಲಿಲ್ಲ. ಕಿಟ್ಟಿಯು ತನ್ನನ್ನು ಕರೆದೊಯ್ಯಲು ಬಂದಿರುವನೆಂದು ತಿಳಿದ ಮೇಲೆ ವಾಸುವಿಗೆ ಹೋದ ಜೀವ ಮರಳಿದ ಹಾಗಾಯಿತು.

ಊರಿಗೆ ಹೊರಟಾಗ ಭಾಗಮ್ಮನವರು ತಮ್ಮ ಮಗನ ಮನೆಯಲ್ಲಿ ಬಿಟ್ಟು ಇನ್ನೆಲ್ಲಿಯೂ ಇಳಿದುಕೊಳ್ಳಕೂಡದೆಂದು ವಾಸುವಿನ ಕೈಲಿ ಮಾತು ತೆಗೆದುಕೊಂಡಿದ್ದರು. ಅಲ್ಲದೆ ಅತ್ತ ಮಗನಿಗೆ ವಾಸುವನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಹೇಳಿ ಕಾಗದ ಬರೆದಿದ್ದರು. ತಾಯಿಯ ಅಭಿಲಾಷೆ ಯಂತೆ ಕಿಟ್ಟಿಯು ತನ್ನ ಮನೆಯಲ್ಲಿನ ಉತ್ತಮವಾದ ಕೋಣೆಯನ್ನು ವಾಸುವಿಗೆ ಬಿಟ್ಟುಕೊಟ್ಟಿದ್ದನು. ಅವನ ಹೆಂಡತಿ ಸರಸ್ವತಿಗೂ ವಾಸುವು

ತಮ್ಮ ಮನೆಗೆ ಬಂದುದು, ತನ್ನ ಅಣ್ಣನೋ, ತಮ್ಮನೋ ಬಂದಷ್ಟು ಸಡಗರವಾಗಿಹೋಗಿತ್ತು. ವಾಸುವಿಗೆ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳಲು ಕಿಟ್ಟಿ, ಸರಸ್ವತಿ ಮೊದಲೇ ನಿಶ್ಚಯಿಸಿಬಿಟ್ಟಿದ್ದರು.

ಮಾರನೆಯ ದಿವಸ ವಾಸುವು ಕೆಲಸಕ್ಕೆ ಸೇರಬೇಕಾಗಿತ್ತು. ಸ್ಕೂಲಿಗೆ ಹೋಗುವಾಗ ಜೊತೆಯಲ್ಲಿ ಕಿಟ್ಟಿಯನ್ನೂ ಕರೆದುಕೊಂಡು ಹೋಗದೆ ಬಿಡಲಿಲ್ಲ. ವಾಸುವಿನ ಗಾಬರಿ ಕಿಟ್ಟಿಗೆ ನೋಡಲು ತುಂಬ ತಮಾಷೆಯದಾಗಿತ್ತು. ಅಟೆಂಡೆನ್ಸ್ ರಿಜಿಸ್ಟರಿನಲ್ಲಿ ರುಜುಮಾಡುವಾಗ ವಾಸುವಿನ ಕೈ ಸಿಕ್ಕಾಪಟ್ಟೆ ಎಲ್ಲೆಲ್ಲಿಯೋ ಎಳೆದುಕೊಂಡು ಹೋಗುತ್ತಿದ್ದುದನ್ನು ನೋಡಿ ಎಷ್ಟು ಜನ ನಕ್ಕರೋ ದೇವರಿಗೆ ಗೊತ್ತು. ಕಿಟ್ಟಿಯು ಎಷ್ಟು ಧೈರ್ಯ ತುಂಬಿದರೂ ಅವನ ಎದೆ ಹೊಡೆತ ಮತ್ತೆ ಮನೆಗೆ ಮರಳುವ ತನಕ ನಿಲ್ಲಲಿಲ್ಲ. ಮೊಟ್ಟಮೊದಲು ತರಗತಿಯ ಒಳಗೆ ಕಾಲಿಟ್ಟಾಗ ವಾಸುವಿಗೆ ನಿಜವಾಗಿಯೂ ತಲೆಗೇರಿಯೇ ಬಂದುಬಿಟ್ಟಿತು. ಸುಮಾರು ಐವತ್ತೋ ಅರುವತ್ತೋ ಹುಡುಗರು ಅವನನ್ನು ನುಂಗಿಹಾಕುವಂತೆ ನೋಡುತ್ತಿದ್ದರು. ಕೆಲವು ಘಟಿಂಗ ಹುಡುಗರ ಮುಖದ ಮೇಲಾಗಲೇ ತುಂಟತನದ ನಗೆ ಲಾಸ್ಯವಾಡುತಿತ್ತು. ಆ ಹುಡುಗರಿಗೆ ವಾಸುವು ಅದೇನು ಪಾಠ ಮಾಡಿದನೋ ಅವನಿಗೇ ತಿಳಿಯದು. ಬೆಲ್ಲು ಹೊಡೆಯುವುದನ್ನೇ ಕಾದಿದ್ದು ಹೊರಗೆ ಬಂದನು. ಮತ್ತೆ ಇನ್ನೆರಡು ತರಗತಿಗಳಲ್ಲಿ ಇಂತಹುದೇ ಅನುಭವವಾಯಿತು ಅಂತೂ ಮನೆಯ ಗಂಟೆ ಹೊಡೆದಾಗ ವಾಸುವು ಬದುಕಿದೆನೆಂದು ಶಾಲೆಯಿಂದ ಹೊರಬಿದ್ದನು. ತನ್ನ ಮೇಲೆ ದೊಡ್ಡದಾಗಿ ಚರ್ಚೆ ವಿಮರ್ಶೆ ಮಾಡುತ್ತಾ ಹೋಗುತ್ತಿರುವ ಹುಡುಗರ ಗುಂಪೊಂದು ಅವನ ಕಣ್ಣಿಗೆ ಕಾಣಿಸಿತು.

ನೀಲಿಯ ಷರಾಯಿಯನ್ನು ಹಾಕಿದ್ದ ಹುಡುಗನು,

"ಲೋ ನಮ್ಮ ಕ್ಲಾಸಿಗೆ ದಪ್ಪ ಗಂಟು, ಕೊಳೆ ಟೋಪಿಯ ಹೊಸ ಮೇಷ್ಟ್ರು ಬಂದಿದ್ದರು" ಎಂದು ಹೇಳಿದನು.

ಅದಕ್ಕೆ ತಕ್ಷಣ ಹಸುರು ಷರಟಿನ ಹುಡುಗನಿಂದ ಮರುಜವಾಬು ಬಂದಿತು.

"ವಾಯು ಬಂದವರ ಹಾಗೆ ಪಾಪ, ತರತರನೆ ನಡುಗುತ್ತಿದ್ದರು."

"ಎಷ್ಟೇ ಆಗಲಿ ಹೊಸಬರು ಕಣೋ, ಇನ್ನೂ ಅಭ್ಯಾಸ ಇಲ್ಲ.

ಟೀಚರ ಕೆಲಸ ಅಂದರೆ ನಗೋ ಅಷ್ಟು ಸುಲಭ ಅಂದುಕೊಂಡೆಯಾ?" ಎಂದು ಗಾಂಧಿ ಟೋಪಿಯ ಹುಡುಗ ವಾಸುವನ್ನು ಪಹಿಸಿಕೊಂಡು ಮಾತಾಡಿದನು. ಇವನ್ನೆಲ್ಲಾ ಕೇಳದ ಘಟಿಂಗ ಹುಡುಗನೊಬ್ಬ ತಾನೇಕೆ ಸುಮ್ಮನಿರಬೇಕೆಂದು, "ಏನಾದರೂ ಆಗಲಪ್ಪ. ಚೆನ್ನಾಗಿ ಪಾಠ ಮಾಡಿದರೆ ಸರಿ. ಇಲ್ಲದೆ ಇದ್ದರೆ ಆ ಲಕ್ಷ್ಮಣರಾಯರಿಗೆ ಮಾಡಿದ ಹಾಗೆ ಮಾಡುವುದು" ಎಂದು ಹೇಳಿದ. ಹುಡುಗರೆಲ್ಲರೂ ಗೊಳ್ಳನೆ ನಕ್ಕರು. ವಾಸುವಿಗೆ ಇನ್ನು ಮುಂದೆ ಅವರ ಮಾತು ಕೇಳಿಸಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಅವನಿಗೆ ಲಕ್ಷ್ಮಣರಾಯರ ಯೋಚನೆ ಬಲವಾಗಿತ್ತು. ಅವರಿಗೆ ಆ ಹುಡುಗರು ಏನು ಮಾಡಿದರೊ ಅದನ್ನು ತಿಳಿಯಬೇಕೆಂಬ ಕುತೂಹಲ ಅವನಿಗೆ ವಿಪರೀತವಾಗಿತ್ತು. ಕಿಟ್ಟಿಯ ಬರವನ್ನೇ ಕಾದಿದ್ದು ಲಕ್ಷ್ಮಣರಾಯರ ಹಣೆಯಬರಹವೇನಾಯಿತೆಂದು ಕೇಳಿಯೂಬಿಟ್ಟನು.

"ಪಾಪ, ಆ ಮೇಷ್ಟ್ರಿಗೆ ಬಿಕ್ಕಲು. ಈ ಹುಡುಗರು ಅವರನ್ನು ಹುಚ್ಚುಮಾಡಿ ಈ ಊರಿಂದ ಓಡಿಸಿಬಿಟ್ಟರು."

"ಕಿಟ್ಟಿ, ಹಾಗಾದರೆ ನನ್ನಿಂದ ಇಲ್ಲಿ ನಿಭಾಯಿಸುವುದಕ್ಕಾಗೊಲ್ಲ ಎಂದು ತೋರುತ್ತೆ. ಅವರಿಗೆ ಹಾಗೆ ಮಾಡಿದವರು, ನನಗೆ ನಾಳೆ ಏನು ಮಾಡುತ್ತಾರೊ." ವಾಸುವು ಬಹಳ ಆತಂಕಪಟ್ಟನು. ಕಿಟ್ಟಿಯು ಅವನಿಗೆ ಧೈರ್ಯ ತುಂಬಲು, "ಹಾಗೇನೂ ಇಲ್ಲ. ಮೊದಲು ಕೊಂಚ ದಿನ ಅವರ ಬಳಿ ವಿಶ್ವಾಸದಿಂದಿದ್ದರೆ ಸಾಕು. ಅವರಾಗಿ ಅವರೇ ನಿನ್ನೊಡನೆ ಹೊಂದಿಕೊಳ್ಳುತ್ತಾರೆ. ಇಲ್ಲದೆ, ಮೊದಲೇ ಜಬರ್ದಸ್ತು ಮಾಡಲು ಹೊರಟರೆ ಗತಿ ತೀರಿದ ಹಾಗೆಯೆ'' ಎಂದು ಸಮಾಧಾನ ಮಾಡಿದನು.

## ೧೦

ವಾಸುವು ಮೈಲಾಪುರಕ್ಕೆ ಬಂದು ಇಪ್ಪತ್ತು ದಿನಗಳಾದುವು. ಅಷ್ಟು ಸ್ವಲ್ಪ ಕಾಲದಲ್ಲಿ ಅವನು ತನ್ನ ಸರಳತೆಯಿಂದ ಶಾಲೆಯ ಹುಡುಗರನ್ನು ಒಗ್ಗಿಸಿಕೊಂಡಿದ್ದನು. ಮನೆಯ ವಾತಾವರಣವೂ ಚೆನ್ನಾಗಿದ್ದಿತು. ಹೀಗೆಯೇ ಇನ್ನು ಮೂರು ತಿಂಗಳು ಕಳೆದುಬಿಟ್ಟರೆ ಸಾಕೆಂದು ತಾಯಿ ಮಕ್ಕಳಿಬ್ಬರಿಗೂ ಯೋಚನೆಯಾಗಿತ್ತು. ಆದರೆ ವಾಸುವಿನ ಅದೃಷ್ಟ ಚೆನ್ನಾಗಿರಲಿಲ್ಲ. ಸರಸ್ವತಿಯ ಬಾಣಂತನಕ್ಕೆಂದು ಅವಳ ತಾಯಿ

ಮೈಲಾಪುರಕ್ಕೆ ಬಂದರು. ಅವರು ಮಗಳ ಮನೆಗೆ ಕಾಲಿಟ್ಟ ಕೂಡಲೇ ಕಣ್ಣಿಗೆ ಬಿದ್ದ ಮೂರನೆಯ ವ್ಯಕ್ತಿ ವಾಸುವಿನ ಮೇಲೆ ಅಸಮಾಧಾನದ ಮಳೆಯನ್ನು ಕರೆಯಹತ್ತಿದರು. ಸರಸ್ವತಿಯು ಎಷ್ಟು ತಡೆದರೂ ಕೇಳುತ್ತಿರಲಿಲ್ಲ. ಹೆಚ್ಚಿಗೆ ಹೇಳಲು ಹೋದರೆ, "ಬಹಳ ಚೆನ್ನಾಗಿದೆಯೆ, ಮನೆಯವರಿಗಂತೂ ವಿಧಿಯಿಲ್ಲ, ಮಾಡಬೇಕು. ಬೀದೀಲಿ ಹೋಗೋ ಮಾರೀನ ಮನೆಗೆ ಬಾ ಅಂದಹಾಗೆ ಯಾರ್‍ಯಾರನ್ನೊ ಕಟ್ಟಿಕೊಂಡು ಅಳ್ತಾನಲ್ಲ ನಿನ್ನ ಗಂಡ ನೀನು ಪಡೋ ತಾಪತ್ರಯ ನೋಡಿದರೆ ಯಾಕಾದರೂ ಇವರ ಮನೆಗೆ ಕೊಟ್ಟೆನೋ ಅನ್ನಿಸುತ್ತಮ್ಮಾ," ಎಂದು ರಂಪಮಾಡಿಬಿಡುತ್ತಿದ್ದರು. ವಾಸುವಿನ ಕಿವಿಗೆ ಈ ಬಗೆಯ ಕೊಂಕು ನುಡಿಗಳು ಬೀಳದಂತೆ ಮಾಡಲು ಸರಸ್ವತಿ ನಡಸಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಬಂದಂದಿನಿಂದ ಮನೆಯ ಅಡಿಗೆ, ಕೆಲಸ ಎಲ್ಲ ರಂಗಮ್ಮನವರದೇ ಆಗಿತ್ತು. ಆದ್ದರಿಂದ ವಾಸುವು ಊಟ, ತಿಂಡಿ ಎಲ್ಲಕ್ಕೂ ಅವರ ಕೈಯನ್ನೇ ಕಾಯಬೇಕಾಗಿತ್ತು. ಬಡಿಸುವಾಗ ರಂಗಮ್ಮ ವಾಸುವಿನ ಕಿವಿಗೆ ಬೀಳಲೆಂದೇ ಗಟ್ಟಿಯಾಗಿ, "ಅಳಿಯನ ಸೇವೆ ಮಾಡುವುದಕ್ಕೇ ಕೈಲಿ ಸಾಗುವುದಿಲ್ಲ ಎಂದು ನಾನಿದ್ದರೆ, ಅಳಿಯನ ಜೊತೆಗೆ ಈ ಗಿಳಿಯನನ್ನೂ ಗಂಟುಹಾಕಿಬಿಟ್ಟೆಯಲ್ಲೆ ಸರಸು" ಎನ್ನುತ್ತಿದ್ದರು. ವಾಸುವಿನಂತಹ ಸ್ವಾಭಿಮಾನದ ಹುಡುಗನಿಗೆ ಹೆಚ್ಚು ಸಹಿಸಲು ಸಾಧ್ಯವಾಗಲಿಲ್ಲ. ಮನಸ್ಸಿಲ್ಲದ ಮನಸ್ಸಿನಲ್ಲಿ ತಾಯಿಗೆ ವಿಷಯವನ್ನು ವಿಶದವಾಗಿ ತಿಳಿಸಿದನು. ಸ್ವಾಭಿಮಾನದಲ್ಲಿ ಸೀತಕ್ಕ ವಾಸುವಿಗಿಂತ ಒಂದು ಕೈ ಮೇಲು. ಬೇರೆ ಯಾವುದಾದರೂ ರೂಮು ನೋಡುವಂತೆ ಬರೆಸಿದರು. ಸದ್ಯದ ಪರಿಸ್ಥಿತಿಯಲ್ಲಿ ವಾಸುವಿಗೆ ಅದೇ ಉತ್ತಮವಾದ ಮಾರ್ಗವೆನಿಸಿತು.

ಅಂದು ಭಾನುವಾರವಾಗಿತ್ತು. ಮನೆಯನ್ನು ಸೇರುವುದಕ್ಕೇ ಅಸಹ್ಯಪಡುತ್ತಿದ್ದ ವಾಸು ನಾಲ್ಕು ಗಂಟೆಗೆಲ್ಲಾ ಹೊರಕ್ಕೆ ತಿರುಗಾಡಲು ಹೊರಟಿದ್ದನು. ಆ ದಿನ ಅವನಿಗೆ ಕಾಫಿಗೂ ಸೊನ್ನೆ ಬಿದ್ದಿತ್ತು. ತನ್ನ ಕೆಟ್ಟ ಅದೃಷ್ಟಕ್ಕೆ ತಾನೇ ಮರುಗುತ್ತಾ ಅವನು ಮೆಲ್ಲನೆ ಅಂಗಡಿಬೀದಿಯಲ್ಲಿ ನಡೆದಿದ್ದನು. ಎಲ್ಲಿಯೋ ದೃಷ್ಟಿಯನ್ನು ಹೊರಳಿಸುತ್ತಾ ಹೋಗುತ್ತಿದ್ದ ವಾಸುವಿನ ಕಣ್ಣಿಗೆ ಎದುರುಗಡೆ ಇದ್ದ ಚಿಲ್ಲರೆ ಅಂಗಡಿಯಲ್ಲಿನ

ರಸಬಾಳೆಗೊನೆ ಕಾಣಿಸಿತು. ಹಣ್ಣುಗಳು ಸೊಗಸಾಗಿದ್ದುವು. ಒಂದೆರಡು ಹಣ್ಣನ್ನಾದರೂ ತಿಂದು ಹೊಟ್ಟೆ ತುಂಬಿಕೊಳ್ಳಬೇಕೆಂದು ಅಂಗಡಿಗೆ ಹೋದನು. ಅಲ್ಲೊಂದು ತಮಾಷೆಯಾಯಿತು. ಹಣ್ಣನ್ನು ಕೊಂಡು ದುಡ್ಡು ಕೊಡುವಾಗ ವಾಸುವಿನ ದೃಷ್ಟಿ ಅಂಗಡಿಯವನ ದೃಷ್ಟಿಯೊಡನೆ ಬೆರೆಯಿತು. ಗುಂಗುರು ತಲೆಗೂದಲು; ತೀಕ್ಷ್ಣವಾದ ಕಣ್ಣುಗಳು; ಹಾಕಿದ್ದುದು ಒಂದು ಶುಭ್ರವಾದ ಬಿಳಿಯ ಜುಬ್ಬ. ಈ ವ್ಯಕ್ತಿ ವಾಸುವಿನ ಮನಸ್ಸನ್ನು ಸೆಳೆಯಿತು. ಅವನಿಗೆ ಏನೋ ತೋರಲು, ತಟ್ಟನೆ,

"ಇಲ್ಲಿ ಎಲ್ಲಾದರು ಒಂದು ರೂಮು ಬಾಡಿಗೆಗೆ ಸಿಕ್ಕುತ್ತೆಯೆ?" ಎಂದು ಕೇಳಿದನು.

ಅನಿರೀಕ್ಷಿತವಾಗಿ ಬಂದ ಈ ಪ್ರಶ್ನೆಯನ್ನು ಕೇಳಿ ಅಂಗಡಿಯುವನಿಗೂ ಕೊಂಚ ಆಶ್ಚರ್ಯವಾಗಿರಬೇಕು. ಅವನು ಕೊಂಚ ಯೋಚಿಸಿ,

"ಈಗ ಸದ್ಯದಲ್ಲಿ ಯಾವುದೂ ಇಲ್ಲ," ಎಂದನು.

ವಾಸುವು ಹತಾಶನಾಗಿ ಹಿಂದಿರುಗಬೇಕಾಯಿತು.

ವಾಸುವು ಒಂದೆರಡು ಹೆಜ್ಜೆಯನ್ನು ಇಟ್ಟಿರಬಹುದು, ಅಷ್ಟರಲ್ಲಿ ಅಂಗಡಿಯುವನು ಮತ್ತೆ ಕರೆದನು.

"ಕೊಂಚ ಕುಳಿತುಕೊಳ್ಳಿ ಸ್ವಲ್ಪ ಯೋಚಿಸಿ ಹೇಳುತ್ತೇನೆ."

ವಾಸುವು ನಿರುಪಾಯನಾಗಿ ಅಲ್ಲಿಯೇ ಇದ್ದ ಕಾಲುಮಣೆಯ ಮೇಲೆ ಕುಳಿತುಕೊಂಡನು.

"ರೂಮು ಯಾರಿಗೆ ಬೇಕಾಗಿತ್ತು ಅಂದಿರಿ?"

"ಯಾರಿಗೂ ಇಲ್ಲ, ನನಗೇನೆ."

ಅಂಗಡಿಯವನು ಕೊಂಚಹೊತ್ತು ಯೋಚಿಸಿದನು. ಅನಂತರ,

"ನಿಮಗೆ ಒಪ್ಪಿಗೆಯಾದರೆ ಒಂದು ಕೆಲಸ ಮಾಡಬಹುದು" ಎಂದನು.

"ಏನು ಮಾಡಬೇಕು?"

"ನಾನೂ ನಿಮ್ಮ ಹಾಗೆ ರೂಮು ಮಾಡಿಕೊಂಡಿರುವವನೆ........"

"ಓಹೋ, ಹಾಗಾದರೆ ನನ್ನ ಹಾಗೆ ಊರಿಗೆ ಹೊಸಬರು ಅನ್ನಿ?"

ವಾಸುವು ಹೀಗೆ ಕೇಳಲು ಕಾರಣವಿತ್ತು. ಅವನು ಬಂದಂದಿನಿಂದ

ಆ ಅಂಗಡಿ ಬಾಗಿಲು ತೆಗೆದಿದ್ದುದನ್ನು ಅವನು ಎಂದೂ ನೋಡಿರಲಿಲ್ಲ. ಅದೇ ಮೊದಲದಿನವಾದ್ದರಿಂದ ಹಾಗೆ ಕೇಳಿದ.

"ಹಾಗೇನೂ ಇಲ್ಲ. ನನಗೆ ಸಂಸಾರವಿಲ್ಲ. ಇರುವವನು ಒಬ್ಬನೆ."

"ಹಾಗಾದರೆ ಸರಿ."

"ನನ್ನ ರೂಮು ದೊಡ್ಡದಾಗಿದೆ. ಇನ್ನಿಬ್ಬರು ಬಂದರೂ ಸಾಕಾಗುತ್ತದೆ. ಪರವಾಗಿಲ್ಲ ಎನ್ನುವ ಹಾಗಿದ್ದರೆ ನನ್ನ ಜೊತೆಯಲ್ಲೇ ಇರುವಿರಂತೆ ಬನ್ನಿ."

ವಾಸುವು ಕೊಂಚ ಯೋಚಿಸಿದನು. ಹಾಗೇಕೆ ಮಾಡಬಾರದು ಎನಿಸಿತು. ಹೇಗಾದರೂ ಸರಿಯೆ, ಕಿಟ್ಟಿಯ ಮನೆಯಿಂದ ಬಿಡುಗಡೆ ಆದರೆ ಸಾಕೆನಿಸಿತ್ತು.

"ನಿಮ್ಮ ರೂಮು ಎಲ್ಲಿದೆ?"

"ಇದೇ ಹಿಂದಣ ಬೀದಿಯಲ್ಲಿ. ನಿಮ್ಮ ಸ್ಕೂಲಿಗೂ ಹತ್ತಿರವಾಗಿದೆ."

ತಾನು ಶಾಲೆಯ ಉಪಾಧ್ಯಾಯನೆಂದು ಇವನಿಗೆ ಹೇಗೆ ಗೊತ್ತು ಎಂದು ವಾಸುವಿಗೆ ಆಶ್ಚರ್ಯವಾಯಿತು.

"ಅದು ಸರಿ. ನಿಮಗೆ ನನ್ನ ಕೆಲಸ ಹೇಗೆ ಗೊತ್ತು?"

"ನಮ್ಮ ಕಡೆಯ ಹುಡುಗನೊಬ್ಬ ನಿಮ್ಮ ಶಾಲೆಗೆ ಬರುತ್ತಾನೆ."

"ನನ್ನ ಹಾಗೆ ಒಬ್ಬೊಂಟಿಗರಾದಮೇಲೆ ಊಟಕ್ಕೆ ಏನು ಏರ್ಪಾಡು ಮಾಡಿಕೊಂಡಿದ್ದೀರಿ?"

"ಬಂದ ಹೊಸದರಲ್ಲಿ ಹೋಟಲನ್ನು ಗೊತ್ತುಮಾಡಿಕೊಂಡಿದ್ದೆ. ಅಲ್ಲಿನ ಕೊಳಕು ಊಟಮಾಡಿ ಮಾಡಿ ಖಾಯಿಲೆ ಬರುವ ಹಾಗಾಯಿತು. ಈಗ ನಾನೇ ಮಾಡಿಕೊಳ್ಳುತ್ತೇನೆ."

ತನಗೂ ಮಾಡಿ ಹಾಕಲು ಸಾಧ್ಯವೇ ಎಂದು ಕೇಳಲು ಅವನು ಯಾವ ಜನವೋ ಎಂದು ವಾಸುವು ಅನುಮಾನಿಸುತ್ತಿದ್ದನು. ಅಂಗಡಿಯವನ ಚುರುಕು ಬುದ್ಧಿಗೆ ವಾಸುವಿನ ಅನುಮಾನ ಹೊಳೆಯದೇ ಇರಲಿಲ್ಲ.

"ಏನೋ ಹೋಟಲಿಗೆ ಹಾಕುವುದನ್ನು ಮನೆಗೇ ಕೊಟ್ಟರೆ ನಿಮಗೆ ಅಡುಗೆ ಮಾಡಿ ಹಾಕುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ನಾನೂ ಸ್ಮಾರ್ತ ಬ್ರಾಹ್ಮಣನೇ. ಹಿಂದೆ ಕೆಲವು ದಿನಗಳು ಅಡುಗೆ ಕೆಲಸದಲ್ಲೇ ಇದ್ದೆ."

ವಾಸುವಿಗೆ ಅನುಮಾನ ಪರಿಹಾರವಾಯಿತು.

"ನಿಮ್ಮ ಹೆಸರು ?"

"ಶ್ರೀಕಂಠಯ್ಯ ಅಂತ"

"ಹಾಗಾದರೆ ನಾನು ಯಾವಾಗ ಬರಲಿ ?"

"ಯಾವಾಗ ಬೇಕಿದ್ದರೆ ಆಗ. ನೀವು ಬರುವ ವೇಳೆಯನ್ನು ಹೇಳಿದರೆ, ಬಾಗಿಲು ತೆಗೆದುಕೊಂಡು ಕಾದಿರುತ್ತೇನೆ"

"ಹಾಗಾದರೆ ನಾಳೆ ಸಂಜೆಗೆ ಸಿದ್ಧ. ನೀವು ಯಾರ ಮನೆಯಲ್ಲಿದ್ದೀರಿ ?"

"ಹಿಂವಣ ಬೀದಿಗೆ ಹೋಗಿ ನನ್ನ ಹೆಸರನ್ನು ಹೇಳಿದರೆ ಯಾರಾದರೂ ನಾನಿರುವ ಸ್ಥಳವನ್ನು ತೋರಿಸುತ್ತಾರೆ"

"ಹಾಗಾದರೆ ನಾನಿನ್ನು ಬರುತ್ತೇನೆ. ನಾಳೆ ಸಂಜೆ ಐದು ಗಂಟೆ, ನೆನೆಪಿರಲಿ"

"ಅಗತ್ಯವಾಗಿ"

"ನಮಸ್ಕಾರ"

"ನಮಸ್ಕಾರ"

## ೧೧

ಶ್ರೀಕಂಠಯ್ಯನೊಡನೆ ಇರಹತ್ತಿದ ಮೇಲೆ ವಾಸುವು, ಒಂದು ವಾರದೊಳಗಾಗಿ ಹೊಸ ಜೀವನವನ್ನು ಒಗ್ಗಿಸಿಕೊಂಡುಬಿಟ್ಟನು. ಅವನೂ ಶ್ರೀಕಂಠಯ್ಯನೂ ಏಕವಚನದಲ್ಲಿ ಮಾತಾಡುವಷ್ಟು ಗೆಳೆಯರಾಗಿಬಿಟ್ಟರು. ಕಂಠಿಯು ತಾನು ಅಡುಗೆಯಲ್ಲಿ ನಿಪುಣನೆಂದು ಹೇಳಿಕೊಂಡಾಗ ವಾಸುವು ಜಂಭಕ್ಕಿರಬಹುದೆಂದುಕೊಂಡನು. ಆದರೆ ಅವನ ಕೈಯ್ಯ ಅಡುಗೆ ಸೀತಕ್ಕನು ಮಾಡುತ್ತಿದ್ದ ಅಡುಗೆಯ ರುಚಿಯನ್ನೂ ಮರೆಸಿಬಿಟ್ಟಿತ್ತು. ಒಟ್ಟಿನಲ್ಲಿ ವಾಸುವಿಗೆ ಒಂದು ಸಣ್ಣ ಕೊರತೆಯನ್ನು ಬಿಟ್ಟು ಮಿಕ್ಕ ಎಲ್ಲ ವಿಧದಲ್ಲೂ ಸುಖವಾಗಿದ್ದಿತು. ಆ ಕೊರತೆಯೆಂದರೆ ಗೆಳೆಯರಿಲ್ಲದುದು. ಕಂಠಿಯೊಡನೆ ಇರಲು ಸಾಮಾನ್ಯವಾಗಿ ಅವನು ಮನೆಯನ್ನೇ ಸೇರುತ್ತಿರಲಿಲ್ಲ. ಬೆಳಗ್ಗೆ ಅಡುಗೆ ಮಾಡುವಾಗ ಮಾತ್ರ ವಾಸುವಿಗೆ ಅವನ ದರ್ಶನವಾಗುತ್ತಿತ್ತು. ಆಮೇಲೆ ಅವನು ಸ್ಕೂಲಿನಿಂದ

ಹಿಂದಿರುಗುವಲ್ಲಿ ಕಂಠಿ ಅದಾವ ಮಾಯದಲ್ಲೋ ತಿಂಡಿ ಮಾಡಿಟ್ಟು ಹೊರಟುಹೋಗಿರುತ್ತಿದ್ದನು. ಸರಿ, ಹೊರಗೆ ತಿರುಗಾಡಿಕೊಂಡು ವಾಸುವು ಮನೆಗೆ ಬಂದರೆ ರಾತ್ರಿಯ ಅಡುಗೆ ಸಿದ್ಧವಾಗಿರುತ್ತಿತ್ತು. ಆದರೆ ಕಂಠಿ ಇರುತ್ತಿರಲಿಲ್ಲ. ಅವನನ್ನು ಕಾಯಲು ಬೇಸರಗೊಂಡು ವಾಸುವು ಊಟಮಾಡಿ ಮಲಗಿಬಿಡುತ್ತಿದ್ದನು. ಅವನಿಗೆ ಸುಮಾರು ಒಂದು ನಿದ್ರೆಯಾದ ಮೇಲೆ ಕಂಠಿಯ ಸವಾರಿ ಚಿತ್ತೈಸುತ್ತಿತ್ತು.

ಮೊದಮೊದಲು ವಾಸುವು ಕಂಠಿಯು ಹೀಗೆ ಮನೆಯನ್ನು ಸೇರದೆ ಇರಲು ಕಾರಣವನ್ನು ಅಷ್ಟಾಗಿ ಯೋಚಿಸಲು ಹೋಗಲಿಲ್ಲ. ವ್ಯಾಪಾರಸ್ಥನು ತನ್ನ ಹಾಗೆ ಸೋಮಾರಿಯಾಗಿದ್ದರೆ ಸಾಧ್ಯವೇ ಎಂದುಕೊಂಡಿದ್ದನು. ಆದರೆ ಇತ್ತೀಚೆಗೆ ಅವನು ತನ್ನ ಮನಸ್ಸಿನ ಅಭಿಪ್ರಾಯವನ್ನು ಬದಲಾಯಿಸಬೇಕಾಗಿಬಂದಿತ್ತು. ಏಕೆಂದರೆ ಕಂಠಿಯು ವಾಸುವಿನ ನಿರೀಕ್ಷಣೆಯಂತೆ ಸದಾ ಕಾಲವೂ ಅಂಗಡಿಯಲ್ಲಿರಬೇಕಾಗಿತ್ತು. ಆದರೆ ಕಂಠಿ ಅಂಗಡಿಯಲ್ಲಿ ಕಾಣಿಸಿಕೊಳ್ಳುತ್ತಿದ್ದುದೇ ಅಪರೂಪ. ಬಾಗಿಲು ಯಾವಾಗಲೂ ಹಾಕಿರುತ್ತಿತ್ತು ಹಾಗಾದರೆ ಕಂಠಿ ಮತ್ತೆಲ್ಲಿಗೆ ಹೋಗಬಹುದು? ಗೆಳೆಯರ ಮನೆಗಾದರೆ ತನ್ನನ್ನೂ ಕರೆದುಕೊಂಡು ಹೋಗಬಾರದೇ ಎನಿಸಿತು ವಾಸುವಿಗೆ. ತನ್ನ ಆಶಯವನ್ನು ತಡೆಯಲಾರದೆ ಒಂದು ದಿನ ವಾಸುವು ಕಂಠಿಯನ್ನು ಆ ವಿಚಾರವಾಗಿ ಕೇಳಿಬಿಟ್ಟನು.

"ಕಂಠಿ ಹಗಲ ಹೊತ್ತು ನೀನು ಮನೆಯಲ್ಲೂ ಇರುವುದಿಲ್ಲ. ಅಂಗಡಿಯಲ್ಲೂ ಇರುವುದಿಲ್ಲ ಎಲ್ಲಿಗೆ ಹೋಗಿರುತ್ತಿ ?"

ಅನಿರೀಕ್ಷಿತವಾಗಿ ಬಂದ ಈ ಪ್ರಶ್ನೆ ಕಂಠಿಯನ್ನು ಬಹಳವಾಗಿ ಹೆದರಿಸಿಬಿಟ್ಟಿತು. ವಾಸುವು ತನ್ನನ್ನೇನಾದರೂ ಪರೀಕ್ಷೆ ಮಾಡುತ್ತಿರುವನೇನೋ, ಎಂದು ಅವನು ವಾಸುವಿನ ಮುಖವನ್ನು ಗಾಬರಿಯಿಂದ ನೋಡಿದನು. ಅವನ ಗಾಬರಿ ವಾಸುವಿಗೆ ಸ್ವಲ್ಪವೂ ಅರ್ಥವಾಗಲಿಲ್ಲ.

"ಅದಕ್ಯಾಕೆ ಅಷ್ಟು ಹೆದರುತ್ತಿ. ಸುಮ್ಮನೆ ಕೇಳಿದೆ."

"ನಾನೊಬ್ಬ ಫ್ರೆಂಡಿನ ಮನೆಗೆ ಹೋಗುತ್ತೇನೆ."

"ಅಷ್ಟು ಹೇಳಲು ಇಷ್ಟು ಕಷ್ಟವೆ? ನನ್ನನ್ನೂ ಕರೆದುಕೊಂಡು ಹೋಗಿ ಗುರುತುಮಾಡಿಸು. ಜೊತೆಯವರಿಲ್ಲದೆ ನನಗೆ ಸಾಕಾಗಿ ಹೋಗಿದೆ."

ವಾಸುವಿನ ಅಲ್ಪ ತಿಳಿವಳಿಕೆಗಾಗಿ ಕಂಠಿಗೆ ನಗು ಬಂದಿತು. ಅವನು ವ್ಯಂಗ್ಯವಾಗಿ,

"ನನ್ನ ಫ್ರೆಂಡಿನ ಹೆಸರು ಹೇಳಿದರೆ ನೀನು ಈ ದಿನವೇ ರೂಮನ್ನು ಖಾಲಿ ಮಾಡುತ್ತಿ," ಎಂದನು.

ಅಂತಹ ಫ್ರೆಂಡು ಯಾರಿರಬಹುದು ಎಂದು ವಾಸುವಿಗೆ ಆಶ್ಚರ್ಯವಾಯಿತು ಏನಾದರೂ ಮಾಡಿ ಕಂಠಿಯ ಬಾಯಿಂದಲೇ ಹೇಳಿಸಬೇಕೆಂದು ನಿಶ್ಚಯಿಸಿದನು.

"ಅವರು ಯಾರು ಅಷ್ಟು ಹೇಳು. ಬೇಕಾಗಿದ್ದರೆ ಬರುತ್ತೇನೆ. ಇಲ್ಲದಿದ್ದರೆ ಇಲ್ಲ. ಅದಕ್ಕೂ ರೂಮಿನಲ್ಲಿರುವುದಕ್ಕೂ ಯಾವ ಸಂಬಂಧ"

ಕಂಠಿಯು ಬಹಳ ಹೊತ್ತಿನ ವರೆಗೆ ಹೇಳದೆ ಸತಾಯಿಸಿದನು. ಆದರೆ ವಾಸುವಿನ ಬಲವಂತ ವಿಪರೀತವಾಗಲು ತಡೆಯಲಾರದೆ,

"ವಾಸು, ನನ್ನ ಫ್ರೆಂಡು ಗಂಡಸಲ್ಲ ಹೆಂಗಸು" ಎಂದನು.

ವಾಸುವಿನ ಮುಖಕ್ಕೆ ತಣ್ಣೀರನ್ನು ಎರಚಿದ. ಹಾಗಾಯಿತು. ಮುಂದೆ ಒಂದು ಮಾತೂ ಅವನ ಬಾಯಿಂದ ಹೊರಡಲಿಲ್ಲ.

ಅಂದು ಮೊದಲುಗೊಂಡು ಒಂದೆರಡು ದಿವಸ ವಾಸುವಿಗೆ ಕಂಠಿಯದೇ ಯೋಚನೆಯಾಗಿಹೋಯಿತು. ಇವನೂ ಎಲ್ಲರ ಹಾಗೆ ಒಂದು ಸಂಸಾರವನ್ನು ಕಟ್ಟಿಕೊಂಡು ಬಂಧುವರಲ್ಲಿ ಹಾಯಾಗಿರಬಾರದೆ ಎಂದು ಮನದಲ್ಲಿಯೇ ಕೊರಗಿದನು. ಈ ಒಂದು ವಿಚಾರವನ್ನು ಬಿಟ್ಟು ಕಂಠಿ ಮಿಕ್ಕ ವಿಧದಲ್ಲಿ ಬೇರೆ ಯಾರಿಗೂ ಕಡಮೆ ಇರಲಿಲ್ಲ. ತಾನೇನಾದರೂ ಪ್ರಯತ್ನಪಟ್ಟರೆ ಕಂಠಿಯು ಒಳ್ಳೆಯ ಹಾದಿಗೆ ಬರಬಹುದೇನೋ ಎಂದು ವಾಸುವಿಗೆ ಚಪಲವಾಯಿತು. ಮತ್ತೊಂದು ದಿನ ಅವನ ಬರವನ್ನೇ ಕಾದಿದ್ದು ಕೇಳಿದನು.

"ಕಂಠಿ, ನಾನೊಂದು ಮಾತು ಕೇಳಿದರೆ ನಿನಗೆ ಕೋಪ ಬರುತ್ತೆ ಅನ್ನುತ್ತೀಯಾ?"

"ಇದ್ದುದ್ದನ್ನು ಇದ್ದಹಾಗೆ ಹೇಳಿದರೆ ಕೋಪ ಯಾತಕ್ಕೆ?"

"ಅವರಿವರನ್ನು ಕಟ್ಟಿಕೊಂಡು ಅಳುವ ಬದಲು ನೀನು ಯಾಕೆ ಮದುವೆಯಾಗಿ ಸುಖವಾಗಿರಬಾರದು?"

ಕಂಠಿಯು ನಿರಾಶೆಯ ನಗೆಯೊಂದನ್ನು ನಕ್ಕನು.

"ನಾನು ತಮಾಷೆಗೆ ಹೇಳುತ್ತಿಲ್ಲ ಕಂಠಿ. ನಿನಗೆ ಒಳ್ಳೆಯದಾಗ ಲೆಂದೇ ಹೇಳುತ್ತಿದ್ದೇನೆ ಅಂತಹ ವಯಸ್ಸುತಾನೇ ನಿನಗೇನಾಗಿದೆ?"

"ನನಗೆ ಮದುವೆಯಾಗಿತ್ತು."

ವಾಸುವು ಕಂಠಿಯ ಮುಖವನ್ನು ನೋಡಿದನು. ಜುಗುಪ್ಸೆ ಎಂಬುದರ ಪ್ರತಿಬಿಂಬದ ಹಾಗಿತ್ತು ಅವನ ಮುಖ. ಹಿಂದೆ ಮದುವೆ ಯಾಗಿದ್ದು ಹೆಂಡತಿಯು ಚಿಕ್ಕ ವಯಸ್ಸಿನಲ್ಲೇ ಸತ್ತುಹೋಗಿರಬೇಕೆಂದು ವಾಸುವಿಗೆ ಹೊಳೆಯಿತು. ಅವನು ಸಮಾಧಾನವನ್ನು ತುಂಬುತ್ತಾ,

"ಏನೋ ಅವರ ಆಯುಸ್ಸು ತೀರಿತ್ತು. ನಿನ್ನೊಡನೆ ಇರಲಾಗಲಿಲ್ಲ. ಹಾಗೆಂದಮಾತ್ರಕ್ಕೆ ಈ ಹಾದಿಗೆ ಬೀಳಬಾರದು."

"ನನ್ನ ಹೆಂಡತಿ ಸತ್ತಿಲ್ಲ ವಾಸು. ಬದುಕಿದ್ದಾಳೆ. ಒಂದು ಗಂಡು ಮಗುವೂ ಇದೆ."

"ಹಾಗಾದರೆ ನಿನ್ನ ಅವಸ್ಥೆ ಯಾಕೆ ಹೀಗೆ?"

"ಅದು ನನ್ನ ಕರ್ಮ. ಹೇಳುತ್ತಾಹೋದರೆ ಒಂದು ಕತೆ ಯಾಗುತ್ತೆ." ಕಂಠಿಯು ತನ್ನ ಜೀವನ ಕಥೆಯನ್ನು ಸಂಪೂರ್ಣವಾಗಿ ಹೇಳಿದನು. ಗಂಡನು ಬಡವನೆಂದು ಹೆಂಡತಿಯು ಓಡಿಹೋಗುವುದು ಎಂತಹ ನಾಚಿಕೆಗೇಡು? ಗಂಡಹೆಂಡತಿಯರ ಪ್ರೇಮವೂ ಸಹ ದುಡ್ಡಿನ ಮೇಲೆ ನಿಂತಿರುತ್ತದೆಯೇ ಎಂದು ವಾಸುವಿಗೆ ದುಃಖವಾಯಿತು. ಕಂಠಿಯು ಅಡ್ಡಹಾದಿಯಲ್ಲಿ ಬಿದ್ದುದರಲ್ಲಿ ಆಶ್ಚರ್ಯವಿಲ್ಲವೆನಿಸಿತು ಅವನ ನೊಂದ ಹೃದಯಕ್ಕೆ.

"ನಿನ್ನ ಹೆಂಡತಿ ತೊರೆದುಹೋದ ಮೇಲೆ ಮತ್ತೆ ನೀನು ಕರೆಯ ಲಿಲ್ಲವೆ?"

"ಇಲ್ಲ. ನನಗೆ ಹಾಗೆ ಮಾಡುವ ಮನಸ್ಸು ಬರಲಿಲ್ಲ. ಅವಳು ಎಂದರೆ ನನಗೆ ಅಷ್ಟು ಜುಗುಪ್ಸೆಯಾಗಿಹೋಗಿತ್ತು."

"ಹೋಗಲಿ, ಬೇರೆ ಮದುವೆಗಾದರೂ ಪ್ರಯತ್ನ ಪಡಬಹುದಾಗಿತ್ತು. ಈ ಬಾಳಿಗಿಂತ ಅದು ಎಷ್ಟೋ ಮೇಲಾಗಿರಲಿಲ್ಲವೆ?"

"ನಿಜ ವಾಸು. ಆದರೆ ಮದುವೆ ಎಂದರೆ ಮತ್ತೆ ಇದೇ ಸಂಕಟ. ಬಿಟ್ಟುಹೋದುದನ್ನು ತಿರುಗಿ ಏಕೆ ಕಟ್ಟಿಕೊಳ್ಳಲಿ ಎಂದು ಸುಮ್ಮನಾಗಿ ಹೋದೆ ಈಗ ನನಗೆ ಸರ್ವ ಸ್ವತಂತ್ರ. ದುಡ್ಡಿದ್ದ ದಿನ ಸುಖಪಡುವುದು. ಇಲ್ಲದೇ ಹೋದ ದಿನ ಇಲ್ಲ."

ವಾಸುವಿಗೆ ಏನು ಹೇಳಬೇಕೆಂಬುದು ತೋರಲಿಲ್ಲ. ಕಂಠಿಯ ಇದಿರಲ್ಲಿ ಅವನೇ ಸೋಲಬೇಕಾಯಿತು.

## ೧೨

ಆ ದಿವಸ ವಾಸುವು ಸ್ಕೂಲಿನಿಂದ ಮನೆಗೆ ಬಂದಾಗ ಕಂಠಿಯು ಬಹಳ ಗಡಿಬಿಡಿಯಲ್ಲಿದ್ದನು. ಅಲಂಕಾರವು ಎಂದಿಗಿಂತ ಹೆಚ್ಚಾಗಿದ್ದಿತು. ಆ ಹೊತ್ತಿನಲ್ಲಿ ಅವನ ದರ್ಶನವಾಗುತ್ತಿದ್ದುದೇ ಅಪರೂಪ. ಅಂತಹುದರಲ್ಲಿ "ಇವತ್ತು ಏನು ಬಂತು!" ಎಂದು ವಾಸುವಿಗೆ ಆಶ್ಚರ್ಯವಾಗಿ ಹೋಯಿತು.

"ಕಂಠಿ, ಎಲ್ಲಿಗೋ ಹೊರಟಹಾಗಿದೆಯಲ್ಲ?"

"ಇವತ್ತು ರಾಮಮಂದಿರದಲ್ಲಿ ನನ್ನ ಫ್ರೆಂಡಿನ ಸಂಗೀತ."

"ಓಹೊ!"

ಕಂಠಿಯು ಕೊಂಚ ಹೊತ್ತು ಸುಮ್ಮನಿದ್ದನು. ಆಮೇಲೆ ಏನೋ ತೋರಲು,

"ಬೇಕಾದರೆ ಬಂದು ಒಂದೆರಡು ಕೀರ್ತನೆಯನ್ನು ಕೇಳಿಹೋಗು."

"ಇನ್ನಾರದ್ದಾಗಿದ್ದರೂ ಬರುತ್ತಿದ್ದೆ. ನಿನ್ನ ಫ್ರೆಂಡು ಎಂದರೆ ಏಕೋ ಮನಸ್ಸೇ ಬರುವುದಿಲ್ಲ."

ವಾಸುವು ಅಷ್ಟೊಂದು ಕಠಿಣವಾಗಿ ಹೇಳಬಾರದಾಗಿತ್ತು. ಅದರಿಂದ ಕಂಠಿಗೆ ತುಂಬ ನೋವಾಗಿಹೋಯಿತು.

"ಯಾರನ್ನೇ ಆಗಲಿ ಅಷ್ಟು ಸಣ್ಣ ದೃಷ್ಟಿಯಿಂದ ನೋಡಬಾರದು ವಾಸು. ಅವಳ ಆಂತರಿಕ ಜೀವನ ಹೇಗಾದರೂ ಇರಲಿ. ಆದರೆ ವಿದ್ಯೆಯು ಚೆನ್ನಾಗಿದೆ. ಹಾಗಿಲ್ಲದೆ ಅವಳಿಗೆ ಅಂತಹ ಒಳ್ಳೆಯ ಜಾಗದಲ್ಲಿ ಅವಕಾಶ ದೊರೆಯುತ್ತಿತ್ತೆ?"

ಕಂಠಿಯನ್ನು ನೋಯಿಸಿದುದಕ್ಕೆ ವಾಸುವಿಗೆ ತುಂಬ ದುಃಖವಾಗಿತ್ತು. ಅವನ ಅಸಮಾಧಾನವನ್ನು ಹೋಗಿಸಲು,

"ತಮಾಷೆಗೆ ಹೇಳಿದೆ ಕಂಠಿ. ನಡಿ, ಹೋಗೋಣ. ಹೊತ್ತು ಹೋಗಲು ಇವತ್ತು ಒಳ್ಳೆಯ ಅವಕಾಶವೇ ದೊರತ ಹಾಗಾಯಿತು" ಎಂದು ಹೇಳಿ ಬಟ್ಟೆಯನ್ನು ಬದಲಾಯಿಸಲು ಹೋದನು.

ವಾಸು ಕಂಠಿ ಇಬ್ಬರೂ ಜೊತೆಯಲ್ಲಿ ರಾಮಮಂದಿರಕ್ಕೆ ಹೋದರು. ಇನ್ನೂ ಸಂಗೀತವು ಪ್ರಾರಂಭವಾಗಿರಲಿಲ್ಲ. ಮಂದಿರದ ಹಜಾರ ಜನರಿಂದ ತುಂಬಿಹೋಗಿತ್ತು. ವಾಸುವು ಕಂಠಿಯ ಸಹಾಯದಿಂದ ಬಹಳ ಮುಂದೆ ಜಾಗವನ್ನು ದೊರಕಿಸಿಕೊಂಡನು. ಆದರೆ ಕಂಠಿ ಮಾತ್ರ ಅವನ ಜೊತೆಯಲ್ಲೇ ಕುಳಿತು ಕೇಳುವ ಅಭಿಲಾಷೆಯನ್ನು ತೋರಿಸಲಿಲ್ಲ.

"ನೀನು ಕೇಳುತ್ತಾ ಇರು. ನಾನು ಹೊರಗೆ ತಿರುಗಾಡುತ್ತಿರುತ್ತೇನೆ, ಗುಂಪಿನಲ್ಲಿ ಸೇರಿಕೊಳ್ಳಲು ನನಗೆ ಇಷ್ಟವಿಲ್ಲ" ಎಂದು ಅವನು ಹೊರಗೆ ಹೊರಟುಹೋದನು.

ತಬಲದವರು, ಪಿಟೀಲಿನವರು ಎಂದು ಒಬ್ಬೊಬ್ಬರಾಗಿ ಪಕ್ಕವಾದ್ಯದವರು ಬಂದು ಕುಳಿತರು. ವಾಸುವಿನ ಕುತೂಹಲ ಅಸಾಧ್ಯವಾಗಿ ಹೋಗಿತ್ತು—ಕಂಠಿಯ ಗೆಳತಿ ಯಾರಿರಬಹುದೆಂದು. ಅವನು ಮೈಯೆಲ್ಲಾ ಕಣ್ಣು ಮಾಡಿಕೊಂಡು ಸ್ಟೇಜನ್ನು ನೋಡುತ್ತಿದ್ದನು. ಅವನ ಮನಃಪಟದ ಮೇಲೆ ಸುಮಾರು ಮೂವತ್ತು ವರುಷದ ಸ್ತ್ರೀಯೊಬ್ಬಳು ಚಿತ್ರಿತವಾಗಿ ಹೋಗಿದ್ದಳು. ಅವಳು ಹಾಗಿರಬಹುದು, ಹೀಗಿರಬಹುದು ಎಂದು ಊಹಿಸುತ್ತಿರುವಾಗಲೇ ಜನರಲ್ಲಿ ಗುಜುಗುಜು ಪ್ರಾರಂಭವಾಯಿತು. ವಾಸು ಮತ್ತೆ ಸ್ಟೇಜಿನ ಕಡೆ ದೃಷ್ಟಿಯನ್ನು ಹೊರಳಿಸಿದನು ಅಲ್ಲಿ ಅವನು ಕಂಡದ್ದು ಮೂವತ್ತು ವರುಷದ ಹೆಂಗಸನ್ನಲ್ಲ. ಹದಿನಾರು ಹದಿನೇಳು ವರುಷದ ಒಬ್ಬ ಮುಗ್ಧೆಯನ್ನು. ಮುಂದೆ ಸುಂದರವಾದ ವೀಣೆ ಇತ್ತು. ಜಂತದ ಬಣ್ಣಕ್ಕಿದ್ದ ಅವಳ ಮೈಯ್ಯಿಗೆ ಉಟ್ಟಿದ್ದ ಹಸಿರು ನವಿರು ಸೀರೆ ಬಹು ಮುದ್ದಾಗಿ ಒಪ್ಪುತ್ತಿತ್ತು. ತಲೆಯ ತುಂಬ ಗುಂಗುರು ಕೂದಲು. ಮೇಲೆ ಯಾವ ವಿಶೇಷ ಅಲಂಕಾರವನ್ನು ಮಾಡಿಕೊಳ್ಳದಿದ್ದರೂ ಅವಳ ನೈಜವಾದ ಸೌಂದರ್ಯ ಎಲ್ಲರ ಮನಸ್ಸನ್ನೂ ಕಲಕಿಬಿಡುತ್ತಿತ್ತು. ವಾಸುವು ತನ್ನ ಕಣ್ಣನ್ನು ತಾನೇ ನಂಬಲಾರದೆ ಹೋದನು. 'ಕಂಠಿಯ ಫ್ರೆಂಡು ಇಷ್ಟು ಚಿಕ್ಕವಳೇ!' ಎಂದು ಅವನಿಗೆ ವಿಪರೀತ ಆಶ್ಚರ್ಯವಾಯಿತು. ಆದರೆ ಅವನು ಹೆಚ್ಚು ಹೊತ್ತು ಆ ರೀತಿ ಕುತೂಹಲಪಡಲಿಲ್ಲ. ಒಂದೆರಡು ನಿಮಿಷದಲ್ಲೇ ಮಂದಿರದ ಮುಖಂಡರು ಬಂದು,

"ಮಹಾಜನಗಳಲ್ಲಿ ವಿನಂತಿ. ಈ ದಿವಸ ನಮ್ಮ ಪ್ರೋಗ್ರಾಂ ಪ್ರಕಾರ ಶ್ರೀ ಶ್ರೀಮತಿ ದೇವಿಯವರ ಸಂಗೀತವಿತ್ತು. ಆದರೆ ಅವರಿಗೆ

ಅಸಂಕ್ಷಿಪ್ತವಾಗಿ ದೇಹಾಲಸ್ಯವುಂಟಾದುದರಿಂದ, ತಮಗೆ ಬದಲು ತಮ್ಮ ಮಗಳನ್ನು ಕಳುಹಿಸಿಕೊಟ್ಟಿದ್ದಾರೆ. ಸರ್ವರೂ ಸಹಕರಿಸಿ ಶ್ರೀಮತಿ ಸರೋಜರವರ ಸಂಗೀತವನ್ನು ಜಯಪ್ರದವಾಗಿ ಮಾಡಬೇಕೆಂದು ಕೋರುತ್ತೇವೆ" ಎಂಗು ಹೇಳಿ ಹೋದರು.

ಸಂಗೀತ ಪ್ರಾರಂಭವಾಯಿತು. ರಾಗಗಳ ಮೇಲೆ ರಾಗ, ಆಲಾಪನೆಗಳ ಮೇಲೆ ಆಲಾಪನೆಗಳು ನಡೆದುವು ಆ ಚಿಕ್ಕ ಹುಡುಗಿಯ ಪಾಂಡಿತ್ಯಕ್ಕೆ ಬೆರಗಾಗಿ ಜನರು ಮೂಕರಾಗಿ ಕುಳಿತಿದ್ದರು. ಸ್ವಾಭಾವಿಕ ವಾಗಿ ಸಂಗೀತವನ್ನು ಪ್ರೀತಿಸುತ್ತಿದ್ದ ವಾಸುವು ಬಾಹ್ಯ ಜ್ಞಾನ ಶೂನ್ಯನಾಗಿ ಕುಳಿತುಬಿಟ್ಟಿದ್ದನು. ರಾಗ ಲಹರಿ ಅವನನ್ನು ಸಂಪೂರ್ಣ ವಾಗಿ ಮುಳುಗಿಸಿಬಿಟ್ಟಿತ್ತು. ಸಮಾಧಿ ಸ್ಥಿತಿಯಲ್ಲಿರುವ ಯೋಗಿಯಂತೆ ಅವನು ಚಲನೆ ಇಲ್ಲದೆ ಕುಳಿತಿದ್ದನು. ಕಛೇರಿಯು ಮುಗಿದು, ಜನಗಳೆಲ್ಲಾ ಗೊಂದಲಪಡಿದ್ದಾಗಲೇ, ಅವನಿಗೆ ಇಹ ಪ್ರಪಂಚದರಿವು. ಕಂಠಿ ಆಗಲೇ ಬಂದು ಅವನ ಬಳಿ ನಿಂತಿದ್ದನು. ವಾಸುವು ಯಾವುದೋ ಪ್ರಪಂಚಕ್ಕೆ ಹೋಗಿ ಮತ್ತೆ ಮರಳಿದವನಂತೆ ತಪ್ಪು ಹೆಜ್ಜೆ ಇಡುತ್ತಾ ಕಂಠಿಯ ಜೊತೆಯಲ್ಲಿ ನಡೆದನು. ಅವನ ವಿಚಿತ್ರ ನಡವಳಿಕೆಯನ್ನು ಕಂಡು ಕಂಠಿಗೆ ನಗು ಬಂದಿತ್ತು. ಬಹುಶಃ ವಾಸುವು ತೂಕಡಿಸುತ್ತಿದ್ದನೆಂದು ತಿಳಿದು,

"ವಾಸು, ನಿನ್ನಂತಹ ವಿಚಿತ್ರ ಮನುಷ್ಯರನ್ನು ನಾನು ಇಲ್ಲಿಯ ವರೆಗೂ ಕಂಡೇ ಇರಲಿಲ್ಲ." ಎಂದನು.

"ನಿನಗೆ ಬುದ್ಧಿ ವಿಕಲ್ಪವಾಗಿದ್ದರೆ ಅದಕ್ಕೆ ನಾನೇನು ಮಾಡುವುದಕ್ಕೆ ಸಾಧ್ಯ?"

"ನನಗೆ ಬುದ್ಧಿ ಸರಿಯಾಗಿಯೇ ಇದೆ. ನಿನಗೆ ಸ್ವಲ್ಪ ಸರಿಯಿಲ್ಲ ಅಂತ ಹೇಳಿದೆ. ನೀನೊಂದು ಮೃಗವಾಗಿ ಹುಟ್ಟಬೇಕಾಗಿತ್ತು."

"ಹಾಗೆಲ್ಲಾ ಅನ್ನಬೇಡ ಕೋಪಬರುತ್ತೆ' ವಾಸುವು ನಕ್ಕನು

"ಬಂದರೆ ಬರಲಿ ಎಲ್ಲ; ಸಂಗೀತ ಎಷ್ಟೊಂದು ಚೆನ್ನಾಗಿತ್ತು ಎಂದು ಎಲ್ಲಾ ಆನಂದಪಡುತ್ತಿದ್ದಾರೆ. ಅಂತಹುದರಲ್ಲಿ ನೀನು ನಿದ್ದೆ ಮಾಡುತಿದ್ದೀಯಲ್ಲಾ, ನಿಜವಾಗಿಯೂ ನಿನೊಂದು ಪ್ರಾಣಿ ತಾನೇ?"

"ಕಂಠಿ, ನೀನು ನನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದಿ. ನಾನು ನಿದ್ದೆ ಮಾಡುತ್ತಿರಲಿಲ್ಲ. ಸಂಗೀತದಲ್ಲಿ ತನ್ಮಯನಾಗಿಹೋಗಿದ್ದೆ."

ವಾಸುವಿನ ಬಾಯಲ್ಲಿ ಹೊರಟ ಹೊಸ ಬಗೆಯ ಮಾತುಗಳನ್ನು ಕೇಳಿ ಕಂಠಿಗೆ ಬಂದ ನಗುವನ್ನು ತಡೆಯಲಾಗಲಿಲ್ಲ.

"ಈ ರಸಿಕತನವನ್ನು ಯಾವತ್ತಿನಿಂದ ಕಲಿತೆ?"

"ನೀನು ನನ್ನನ್ನು ಏನು ಬೇಕಾದರೂ ಹಾಸ್ಯ ಮಾಡು. ನನಗೆ ಸಂಗೀತವೆಂದರೆ ಚಿಕ್ಕ ವಯಸ್ಸಿನಿಂದಲೂ ಪ್ರೀತಿ."

"ಹೋಗಲಿ, ಇವತ್ತಿನ ಕಛೇರಿ ಹೇಗಿತ್ತು ಅನ್ನುತ್ತಿ."

"ಬಹಳ ಸೊಗಸಾಗಿತ್ತು ಕಂಠಿ. ನಿಜವಾಗಿ ಆ ಹುಡುಗಿಗೆ ಕಲೆ ಎನ್ನುವುದು ಹುಟ್ಟಿನೊಡನೆ ಹುಟ್ಟಿ ಬಂದಹಾಗಿದೆ. ಆದರೂ ಅದೆಷ್ಟು ಗಾಂಭೀರ್ಯ ನೋಡು."

"ಸರಿಯಾಗಿ ಹೇಳುವುದಾದರೆ ತಾಯಿಗೂ ಮಗಳಿಗೂ ಎಲ್ಲಾ ಗುಣಗಳಲ್ಲೂ ಬಹಳ ಅಂತರವಿದೆ."

ವಾಸುವು ಕೊಂಚ ಹೊತ್ತು ಮಾತಾಡಲಿಲ್ಲ. ಏನನ್ನೋ ಯೋಚಿಸುತ್ತಿದ್ದನು. ಅನಂತರ,

"ಏನಾದರೂ ಆಗಲಿ, ಆ ಹುಡುಗಿ ನಿನ್ನ ಫ್ರೆಂಡಿನ ಹೊಟ್ಟೆಯಲ್ಲಿ ಹುಟ್ಟಲು ಯೋಗ್ಯಳಲ್ಲ ಎನಿಸುತ್ತೆ. ಸರೋಜ ಅನ್ನುವ ಹೆಸರು ಅನ್ವರ್ಥವಾಗಿದೆ. ಸರೋಜ, ಕೆಸರಿನಲ್ಲಿ ಹುಟ್ಟಿದ ಕಮಲವೇ ಸರಿ" ಎಂದನು.

ಅಷ್ಟರಲ್ಲಿ ಅವರ ರೂಮು ಸಿಕ್ಕಿತ್ತು. ಇಬ್ಬರು ಗೆಳೆಯರೂ ಊಟ ಮಾಡಿ, ಅಂದಿನ ಘಟನೆಯನ್ನೇ ನೆನೆಯುತ್ತ ನಿದ್ರೆಹೋದರು.

## ೧೩

ರಾಮಮಂದಿರದಲ್ಲಿ ನಡೆದ ಸಂಗೀತ ಕಛೇರಿ ವಾಸುವಿನ ಮೇಲೆ ಒಂದು ದೊಡ್ಡ ಪರಿಣಾಮವನ್ನುಂಟುಮಾಡಿಬಿಟ್ಟಿತು. ವಿದ್ಯೆ, ರೂಪು, ಐಶ್ವರ್ಯಗಳು ಒಂದೆಡೆ ಸೇರಲು ಸಾಧ್ಯವೇ ಇಲ್ಲವೆಂದು ವಾಸುವು ಭಾವಿಸಿದ್ದನು. ಆದರೆ ಸರೋಜಳನ್ನು ನೋಡಿದ ಮೇಲೆ ಅವನಿಗೆ ಆ ಭಾವನೆ ಸುಳ್ಳೆಂದು ಗೊತ್ತಾಯಿತು. ಎಂದು ರಾಮಮಂದಿರದಲ್ಲಿ ಅವಳನ್ನು ನೋಡಿದನೋ ಅಂದಿನಿಂದ ಅವಳ ಸುಂದರ ಚಿತ್ರ ಅವನೆದೆಯಲ್ಲಿ ಸ್ಥಾಯಿಯಾಗಿ ನಿಂತುಹೋಯಿತು. ಅಷ್ಟು ಸೊಗಸಾದ ಹುಡುಗಿ ಮುಂದೆ

ತಾಯಿಯ ವೃತ್ತಿಯನ್ನೇ ಅನುಸರಿಸಬೇಕೆ? ವಿದ್ಯಾವಂತಳಾಗಿ ಪ್ರಪಂಚ ವನ್ನು ಚೆನ್ನಾಗಿ ಕಣ್ಣು ತೆರೆದು ನೋಡುತ್ತಿರುವ ಸರೋಜೆಗೆ ತಾಯಿಯ ಬಾಳು ಹೀನವಾಗಿ ತೋರುವುದಿಲ್ಲವೆ? ಇವೇ ಮುಂತಾದ ಪ್ರಶ್ನೆಗಳು ಅವನನ್ನು ಹಗಲಿರುಳು ಕಾಡಹತ್ತಿದುವು. ಅವನಿಗೆ ಹೇಗಾದರೂ ಮಾಡಿ ಸರೋಜಳನ್ನು ನೋಡಿ ಮಾತಾಡಿಸಬೇಕೆನ್ನಿಸಿತು. ತನ್ನ ಮನಸ್ಸಿ ನಲ್ಲಿಯೇ, ಸರೋಜೆಯನ್ನು ಆ ಬಗೆಯ ಪಾಪಕೂಪದಿಂದ ಬಿಡುಗಡೆ ಮಾಡುವುದಾಗಿ ನಿಶ್ಚಯಿಸಿದನು. ಅವಳ ಮನೆಗೆ ಹೋಗಲು ವಾಸು ವಿಗೆ ಕಂಠಿಯ ಸಹಾಯ ಅತ್ಯಾವಶ್ಯಕವಾಗಿದ್ದಿತು.

"ಕಂಠಿ, ನೀನು ಶ್ರೀಮತಿಯ ಮನೆಗೆ ಎಂದು ಹೋಗುವೆ?" ಪೇಪರನ್ನು ತಿರುವಿಹಾಕುತ್ತಾ ವಾಸುವು ಕೇಳಿದನು.

ಆಗ ಕಂಠಿಯು ಈರುಳ್ಳಿಯ ಸಿಪ್ಪೆಯನ್ನು ತೆಗೆಯುತ್ತಿದ್ದನು. ವಾಸುವಿನ ಪ್ರಶ್ನೆಯನ್ನು ಕೇಳಿ ಅವನ ಕೈ ಹಾಗೆಯೇ ನಿಂತುಹೋಯಿತು.

"ಯಾತಕ್ಕೆ?"

"ಬೇಕಾಗಿತ್ತು."

"ಬರಿಯ ಬೇಕಾಗಿತ್ತು ಎಂದರೆ ಹೇಳುವುದಿಲ್ಲ. ಸರಿಯಾದ ಕಾರಣ ತಿಳಿಸಬೇಕು."

"ಅಲ್ಲಿಗೆ ನಾನೂ ಬರಬೇಕಾಗಿತ್ತು."

ಕಂಠಿ ಅಚ್ಚರಿಯಿಂದ ಕಣ್ಣರಳಿಸಿ ನೋಡಿದನು. ಅವನಿಗೆ ವಾಸುವು ಮತ್ತೆ ತನ್ನನ್ನು ಹಾಸ್ಯ ಮಾಡುತ್ತಿರುವನು ಎನ್ನಿಸಿತು.

"ನೀನು ಅಲ್ಲಿಗೆ ಬರುವುದು? ಸುಮ್ಮನೆ ನನ್ನನ್ನು ಅಂದೂ, ಅಂದೂ ಯಾಕೆ ಗೋಳು ಹುಯ್ಯುತ್ತಿ?"

"ತಮಾಷೆಗೆ ಹೇಳುತ್ತಿಲ್ಲ. ಖಂಡಿತ ನಾನು ಬರಬೇಕು. ಸರೋಜೆ ಯೊಡನೆ ನನಗೆ ಮಾತಾಡುವುದಿದೆ."

"ಅವಳ ಹತ್ತಿರ ನೀನು ಮಾತಾಡುವಂತಹುದೇನಿವೆ? ಹಾಗೆಲ್ಲಾ ನೀನು ಅಲ್ಲಿಗೆ ಬರಬಾರದು."

"ಯಾಕೆ ಹೋಗಬಾರದು? ನಾನು ಸರೋಜೆಗೆ ಬುದ್ಧಿ ಹೇಳ ಬೇಕೆಂದುಕೊಂಡಿದ್ದೇನೆ. ಹೇಗಾದರೂ ಸರಿಯೆ, ಅವಳನ್ನು ಆ ಹಾಳು ವೃತ್ತಿಯಿಂದ ಪಾರುಮಾಡಬೇಕೆಂದು ನನ್ನ ಇಷ್ಟ."

"ಅದೆಲ್ಲಾ ಸರಿ ವಾಸು. ಆದರೂ ನನಗೆ ನೀನು ಅಲ್ಲಿಗೆ ಬರುವುದು ಏಕೋ ಇಷ್ಟವಾಗುವುದಿಲ್ಲ."

ಕಂಠಿಯ ಅನುಮಾನವೇನೆಂದು ವಾಸುವಿಗೆ ಗೊತ್ತಾಗಿ ಹೋಯಿತು. ಅವನು ಗೆಳೆಯನಿಗೆ ಬಹಳ ಭರವಸೆಯನ್ನು ಕೊಟ್ಟನು.

"ನಿಜವಾಗಿಯೂ ಕಂಠಿ, ನಾನು ಕೆಡುವುದಕ್ಕೆ ಹೋಗುತ್ತಿಲ್ಲ. ಕೆಟ್ಟುಹೋಗುತ್ತಿರುವವಳನ್ನು ಕಾಪಾಡಲು ಹೋಗುತ್ತಿದ್ದೇನೆ. ನನ್ನ ವಿಚಾರದಲ್ಲಿ ನೀನೇನೂ ಭಯಪಡಬೇಡ."

"ಏನೋ ಎಷ್ಟು ಹೇಳಿದರೂ ನನಗೆ ನಂಬಿಕೆ ಬರುವುದಿಲ್ಲಾಪ್ಪ. ಅಲ್ಲಿ ಒಂದು ಬಾರಿ ಸಿಕ್ಕಿಹಾಕಿಕೊಂಡರೆ ಮತ್ತೆ ಮೊದಲಿನಂತೆ ಬರುವ ಭರವಸೆ ಇಲ್ಲ ಒಂದು ಕಾಲದಲ್ಲಿ ನಾನೂ ನಿನ್ನ ಹಾಗೆಯೇ ಹೇಳುತ್ತಿದ್ದೆ."

"ನನಗೂ ನಿನಗೂ ಎಷ್ಟೋ ವಿಚಾರದಲ್ಲಿ ವ್ಯತ್ಯಾಸವಿದೆ."

"ಅದನ್ನೇ ನಾನು ಹೇಳುವುದು. ನನಗಾದರೂ ಕೆಟ್ಟುಹೋದರೆ ದುಃಖಪಡುವವರು ಯಾರೂ ಇಲ್ಲ. ನಿನ್ನ ವಿಚಾರವೇ ಬೇರೆ. ನಿನಗೆ ತಂದೆತಾಯಿಗಳಿಲ್ಲವೆ?"

"ನನಗೆ ತಂದೆ ಇಲ್ಲ. ತಾಯಿ ಇದ್ದಾರೆ."

"ಹೆಂಡತಿ?"

"ಇನ್ನೂ ಮದುವೆಯಾಗಿಲ್ಲ ಕಂಠಿ. ಆದರೆ ನನ್ನ ಸೋದರ ಮಾವನ ಮಗಳೊಡನೆ ಗೊತ್ತಾಗಿಹೋಗದೆ. ಈ ಬೇಸಗೆಯಲ್ಲೇ ನಡೆದರೂ ನಡೆಯಬಹುದು."

ಕಂಠಿಯು ಕೊಂಚ ಹೊತ್ತು ಯೋಚಿಸಿದನು. ಆಮೇಲೆ ಏನೋ ಹೊಳೆಯಲು,

"ವಾಸು, ನೀನು ಖಂಡಿತ ಈ ಹುಚ್ಚು ಕೆಲಸಕ್ಕೆ ಹೋಗ ಬೇಡವೊ," ಎಂದನು.

ಕಂಠಿಯು ವಿಪರೀತ ಉಪಚಾರಕ್ಕೆ ಹೊರಟುದುದನ್ನು ನೋಡಿ ವಾಸುವಿಗೆ ಬಹಳ ಕೋಪ ಬಂದುಬಿಟ್ಟಿತು.

"ಸ್ವಲ್ಪ ಸಹಾಯ ಕೇಳಿದೆನೆಂದು ನಿನಗೆ ತಲೆ ತಿರುಗಿಹೋಗಿರು ವಂತೆ ಕಾಣುತ್ತೆ. ನೀನೇನು ಕರೆದುಕೊಂಡುಹೋಗುವಿಯೋ, ಇಲ್ಲವೋ ಅಷ್ಟು ಹೇಳು," ಎಂದು ಗದರಿಕೊಂಡನು.

ತಾನು ಬಿದ್ದಿರುವ ಹಳ್ಳಕ್ಕೇ ವಾಸುವೂ ಬೀಳಲು ಆಶಿಸುತ್ತಿರುವುದನ್ನು ನೋಡಿ ಕಂಠಿಗೆ ಬಹಳ ವ್ಯಥೆಯಾಯಿತು. ಆ ಅಪಾಯದಿಂದ ಗೆಳೆಯನನ್ನು ಉಳಿಸಲು ಅವನು ಎಷ್ಟೋ ಪ್ರಯತ್ನಪಟ್ಟನು. ಆದರೆ ಯಾವುದೂ ಸಫಲವಾಗಲಿಲ್ಲ. ವಾಸುವಿನ ಮೊಂಡುತನ ಅಸಾಧ್ಯವಾಗಿತ್ತು. "ಸಾಯುವ ರೋಗಿಗೆ ಔಷಧವು ರುಚಿಸುವುದಿಲ್ಲ. ಇವನ ಹಣೆಯಬರಹವೂ ಹೀಗೆ. ವಿನಾಶಕಾಲಕ್ಕೇ ಈ ಬುದ್ಧಿ ಬಂದಿದೆ" ಎಂದು ಕಂಠಿ ಸುಮ್ಮನಾಗಿಹೋದನು.

## ೧೪

ವಾಸುವು ಶ್ರೀಮತಿಯ ಮನೆಗೆ ಹೋಗಿಬರುವುದು ದಿನ ಕ್ರಮೇಣ ಹೆಚ್ಚಾಗುತ್ತಾ ಬಂದಿತು. ಸರೋಜಳ ಸೌಂದರ್ಯ, ಸೌಜನ್ಯಗಳು ಸೂಜಿಗಲ್ಲಿನಂತೆ ವಾಸುವಿನ ಮನಸ್ಸನ್ನು ಆಕರ್ಷಿಸಿಬಿಟ್ಟಿದ್ದುವು. ಆವಳ ದರ್ಶನವಾಗಲು ಒಂದೆರಡು ದಿನ ತಡವಾದರೂ ಸರಿಯೆ, ವಾಸುವಿನ ಭಾಗಕ್ಕೆ ಜಗತ್ತು ಶೂನ್ಯವಾದಂತೆ ತೋರುತ್ತಿತ್ತು. ಅವನ ತೊಳಲಾಟವನ್ನು ಒಂದೆಡೆ ಕಂಠಿಯು ಸಾವಧಾನವಾಗಿ ಗಮನಿಸುತ್ತಾ ವ್ಯಥೆಪಡುತ್ತಿದ್ದರೆ ಅತ್ತ ಶ್ರೀಮತಿ ಮತ್ತೊಂದು ಉದ್ದೇಶದಿಂದ ವಾಸುವಿನ ಮನಸ್ಸಿನ ಹೊಯ್ದಾಟವನ್ನು ಪರಿಶೀಲಿಸುತ್ತಿದ್ದಳು. ಅವನ ಅಭಿಮಾನ ಸರೋಜೆಯ ಮೇಲೆ ಹೆಚ್ಚಿದಂತೆಲ್ಲಾ, ಶ್ರೀಮತಿಗೆ ಅವನ ಮೇಲಿದ್ದ ಅಭಿಮಾನವು ಕಡಮೆಯಾಗುತ್ತಾಬಂದಿತು. ಅವಳು ಈಗ ವಾಸುವಿನಲ್ಲಿ ಮೊದಲಿನಷ್ಟು ಉತ್ಸಾಹವನ್ನು ತೋರಿಸುತ್ತಿರಲಿಲ್ಲ. ಕ್ರಮೇಣವಾಗಿ ಅಲಕ್ಷ್ಯವನ್ನು ತೋರುತ್ತಾ ಬಂದಳು. ಅವಳ ಅನಿರೀಕ್ಷಿತವಾದ ಅಸಮಾಧಾನ ವಾಸುವನ್ನು ಅಧೀರನನ್ನಾಗಿ ಮಾಡಿತು. ಯಾವುದೋ ಒಂದು ಕೋಪವನ್ನು ಮನಸ್ಸಿನಲ್ಲಿಟ್ಟುಕೊಂಡು ಶ್ರೀಮತಿಯು ತನ್ನನ್ನು ಇನ್ನು ಮುಂದೆ ಮನೆಗೆ ಬರದಹಾಗೆ ತಡೆಗಟ್ಟಿದರೆ ಗತಿಯೇನೆಂದು ಯೋಚಿಸಿದನು. ಅವಳ ಅನುಗ್ರಹವು ತಪ್ಪಿದರೆ ತನ್ನ ಭರವಸೆಗಳೆಲ್ಲಾ ಮುಳುಗಿಹೋಗುವುದರಲ್ಲಿ ಸಂಶಯವಿಲ್ಲವೆಂದು ವಾಸುವಿನ ಹೃದಯವಾಣಿ ಕೂಗಿಹೇಳಿತು. ಶ್ರೀಮತಿಯ ಕೋಪಕ್ಕೆ ಕಾರಣವನ್ನು ಎಷ್ಟು ಯೋಚಿಸಿದರೂ ತಾನೇ ಕಂಡುಹಿಡಿಯ

ಲಾರದ ಅವನು ಗೆಳೆಯನೊಡನೆ ಈ ವಿಚಾರವನ್ನು ತೋಡಿಕೊಂಡನು. ಅದಕ್ಕೆ ಕಂಠಿಗೆ ಒರಟಾಗಿ ಜವಾಬು ಕೊಡುವುದನ್ನು ಬಿಟ್ಟು ಮತ್ತೇನೂ ಹೊಳೆಯಲಿಲ್ಲ.

"ವಾಸು, ನಾನೊಂದು ಮಾತು ಹೇಳುತ್ತೇನೆ ಕೇಳು"

"ಏನು?"

"ನೀನು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿಬಿಡು."

"ನಿನಗೆ ಅದೊಂದನ್ನು ಬಿಟ್ಟರೆ ಬೇರೆ ಏನೂ ತೋರುವುದಿಲ್ಲ ವೆಂದು ಕಾಣುತ್ತೆ."

"ಹೌದು ವಾಸು, ನನಗೆ ಅದನ್ನು ಬಿಟ್ಟು ಬೇರೆ ಏನೂ ತೋರುವುದಿಲ್ಲ ಏಕೆಂದು ಕೇಳುತ್ತೀಯೋ? ಹೇಳುತ್ತೇನೆ ಕೇಳು. ಮೊದಲು ನನಗೆ ನಿನ್ನ ಮನಸ್ಸು ಇಷ್ಟು ದುರ್ಬಲವೆಂದು ಗೊತ್ತಿರಲಿಲ್ಲ. ಒಂದು ವೇಳೆ ಗೊತ್ತಿದ್ದರೆ ಖಂಡಿತವಾಗಿಯೂ ಆ ದಿನ ನಿನ್ನನ್ನು ಸಂಗೀತಕ್ಕೆ ಕರೆದೊಯ್ಯುತ್ತಿರಲಿಲ್ಲ. ನನ್ನ ಒಂದು ಅಚಾತುರ್ಯ ನಿನಗೆ ಅವಳ ಸ್ನೇಹವನ್ನು ಮಾಡಿಸಿಬಿಟ್ಟಿತು ಅದನ್ನು ಹೋಗಲಾಡಿಸಿ, ಮತ್ತೆ ನಿನ್ನನ್ನು ಮೊದಲಿನ ಮನುಷ್ಯನನ್ನಾಗಿ ಮಾಡಬೇಕೆಂಬ ಆಸೆ ಯಿಂದ ನಾನಿಷ್ಟು ಹೋರಾಡಬೇಕಾಗಿದೆ."

"ನೀನು ನನ್ನ ವಿಷಯದಲ್ಲಿ ಅಷ್ಟೊಂದು ಚಿಂತೆಪಡುವುದರ ಆವಶ್ಯಕತೆ ಇಲ್ಲ. ಸರೋಜಳ ಗೆಳೆತನದಿಂದ ನನಗೆ ನಷ್ಟವೆಂದು ನೀನು ಭಾವಿಸಿದರೆ, ನಾನು ನನಗೆ ಲಾಭವಾಯಿತೆಂದು ಭಾವಿಸುತ್ತೇನೆ"

"ಹಾಗೆ ಭಾವಿಸದೆ ಮತ್ತೇನು ಮಾಡುತ್ತಿ ಹೇಳು. ಸರೋಜಳ ಮುಖ ದರ್ಶನವಾದರೇ ಸಾಕೆಂದು ನೂರಾರು ಜನ ತಪಸ್ಸು ಮಾಡು ವಾಗ ನಿನಗೆ ಸದಾ ಸರ್ವಕಾಲ ಅವಳ ಸಾಮೀಪ್ಯ ದೊರೆಯುವಂತೆ ಶ್ರೀಮತಿಯು ಕಲ್ಪಿಸಿಕೊಟ್ಟಿದ್ದಾಳೆ. ಎಷ್ಟು ಓದಿದರೇನು, ಅವಳ ಈ ಕೃಪೆಯ ಹಿಂದಿರುವ ಗೂಢಾರ್ಥವನ್ನು ನೀನು ತಿಳಿಯಲಾರದೆ ಹೋಗಿರುವೆ. ಶ್ರೀಮತಿಯಂತಹ ಹೆಂಗಸಿನ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಿನ್ನಂತಹ ಹುಡುಗರು ನೂರು ಬಾರಿ ಜನ್ಮ ಎತ್ತಿ ಬರಬೇಕು?

ವಾಸುವು ಮಾತನಾಡಲಿಲ್ಲ. ಅದಕ್ಕೆ ಮತ್ತೆ ಕಂಠಿಯು,

"ನೀನು ಪ್ರತಿ ದಿವಸವೂ ಬರಿಯ ಕೈಯ್ಯಲ್ಲಿ ಹೋಗಿ, ಸರೋಜಳಿಗೆ ಸೀತೆ, ಸಾವಿತ್ರಿಯರ ಪುರಾಣವನ್ನು ಹೇಳುತ್ತಿದ್ದರೆ ಕೇಳಿಕೊಂಡು ಸುಮ್ಮನಿರುವ ಹೆಂಗಸಲ್ಲ ಶ್ರೀಮತಿ. ಮೊದಮೊದಲು ಏನೋ ಹೊಸ ಗಿರಾಕಿ, ಬಿಟ್ಟುಹೋಗದೆ ಇರಲಿ ಎಂದು ಉಪಚಾರ ಮಾಡುತ್ತಿದ್ದಳು. ಇನ್ನು ಮುಂದೂ ಬರಿಯ ನಿನ್ನ ಬಣ್ಣದ ಮಾತು ಗಳನ್ನು ಕೇಳುತ್ತಾ ಕುಳಿತುಕೊಂಡರೆ ಅವಳ ಜೀವನ ಹೇಗೆ ಸಾಗಬೇಕು? ಒಂದು ಸಾರಿ ಅವಳ ಬಲೆಗೆ ಬಿದ್ದರೆ ಸಾಕು, ಅವರ ಕೈ ಬರಿದು ಮಾಡದೆ ಕಳುಹಿಸುವುದಿಲ್ಲ" ಎಂದನು.

ಇದುವರೆವಿಗೂ ಸುಮ್ಮನಿದ್ದ ವಾಸುವು ಗೆಳೆಯನ ಮುಖವನ್ನು ಕುತೂಹಲದಿಂದ ನೋಡುತ್ತ ಕೇಳಿದನು.

"ನೀನು ನನ್ನ ಪರವಾಗಿ ಇಷ್ಟೆಲ್ಲಾ ಮಾತಾಡುವುದಕ್ಕೆ ಕಾರಣವೇನೂಂತ?"

ತಟ್ಟನೆ, ಕೋಪದಿಂದ ಗಡುಸಾಗಿದ್ದ ಕಂಠಿಯ ಧ್ವನಿಯು ಮೃದುವಾಗಿಹೋಯಿತು. ಅವರ್ಣನೀಯವಾದೊಂದು ಅನುಕಂಪದಿಂದ,

"ನಿನ್ನ ಮೇಲಿನ ವಿಶ್ವಾಸದಿಂದ ವಾಸು. ಅದೇನೋ ನಿನ್ನನ್ನು ಕಂಡರೆ ನನಗೆ ತುಂಬಾ ಪ್ರೀತಿ. ನಿನ್ನ ಹುರುಪು, ಉತ್ಸಾಹಗಳನ್ನು ನೋಡಿದಾಗೆಲ್ಲಾ ನನಗೆ ನನ್ನ ಯೌವನದ ದಿನಗಳ ನೆನಪು ಬರುತ್ತದೆ. ಮುಂದೆ ಸೊಗಸಾಗಿ ಬಾಳುವ ಹುಡುಗ ಅನ್ಯಾಯವಾಗಿ ಹಾಳಾಗುವೆ ಯಲ್ಲಾ ಎಂದು ಎಚ್ಚರಿಸುತ್ತೇನೆ, ಅಷ್ಟೆ" ಎಂದು ಹೇಳಿದನು.

"ಅದು ಸರಿ, ನೀನು ಹೀಗೆ ಹಾರಾಡುವುದು ನನ್ನ ಮೇಲಿನ ವಿಶ್ವಾಸದಿಂದಲೋ ಅಥವಾ ಸರೋಜೆಯ ಮೇಲಿನ ವಿಶ್ವಾಸದಿಂದಲೋ?" ಎಂದು ಕೇಳಿದ.

ಕಂಠಿಯ ಮುಖಕ್ಕೆ ತಣ್ಣೀರನ್ನು ಎರಚಿದ ಹಾಗಾಯಿತು. ವಾಸುವಿನಿಂದ ಅವನು ಇಂತಹ ಮಾತನ್ನು ನಿರೀಕ್ಷಿಸಿರಲಿಲ್ಲ. ಅವಮಾನದ ವಜ್ರಾಘಾತವನ್ನು ತಡೆದುಕೊಳ್ಳಲು ಅವನೊಮ್ಮೆ ಗಹಗಹಿಸಿ ನಕ್ಕನು. ಅಂತಹ ನಗೆಯನ್ನು ಅವನು ಹಿಂದೆಂದೂ ನಕ್ಕಿರಲಿಲ್ಲ. ವಾಸುವು ದುಡುಕು ಮಾತಾಡಿದೆನೆಂದು ಕಂಠಿಯ ಮುಖ ವನ್ನು ನೋಡಿದನು. ಅವನ ಗುಂಡನೆಯ ಕಣ್ಣುಗಳಲ್ಲಿ ತಿರಸ್ಕಾರ,

ಅಪಹಾಸ್ಯಗಳು ಲಾಸ್ಯವಾಡುತ್ತಿದ್ದುವು. ತನಗೆ ಬಿದ್ದ ಪೆಟ್ಟನ್ನು ಪರಿಹರಿಸಿಕೊಂಡಮೇಲೆ ಕಂಠಿಯು ಮತ್ತೆ ಮಾತನಾಡಲು ಶಕ್ತನಾದನು.

"ವಾಸು, ಅಂತಹುದೇನಾದರೂ ನನ್ನ ಮನಸ್ಸಿನಲ್ಲಿದ್ದರೆ ನಿನಗೆ ಮೋಸ ಮಾಡಿ, ತನ್ಮೂಲಕ ಕಾರ್ಯವನ್ನು ಸಾಧಿಸಿಕೊಳ್ಳುವ ಹೇಡಿಯಲ್ಲ ನಾನು. ಹಾಗೇನಾದರೂ ಇದ್ದಪಕ್ಷದಲ್ಲಿ ಮನಬಿಚ್ಚಿ ನಿನ್ನೆದುರಿಗೆ ಎಲ್ಲವನ್ನೂ ತೋಡಿಕೊಳ್ಳುತ್ತಿದ್ದೆ. ನೀನಿಷ್ಟು ನಿಷ್ಠುರವಾಗಿ ಮಾತಾಡಿ ದುದಕ್ಕೆ ನಾನೂ ಒರಟಾಗಿ ಮಾತಾಡಬೇಕಾಗಿದೆ. ಈಗ ನಾನು ಕೇಳುತ್ತೇನೆ ಹೇಳು, ನೀನು ಸರೋಜಳನ್ನು ವಹಿಸಿಕೊಂಡು ಮಾತಾಡುವುದಕ್ಕೆ ಕಾರಣವೇನು?"

"ಕಾರಣವನ್ನು ಹಿಂದೆ ಸಾವಿರ ಬಾರಿ ಹೇಳಿದ್ದೇನೆ. ಮತ್ತೆಮತ್ತೆ ಹೇಳಬೇಕಾದುದರ ಆವಶ್ಯಕತೆ ಇಲ್ಲ. ಆದರೂ ನಿನ್ನನ್ನು ತೃಪ್ತಿಪಡಿಸಲು ಇನ್ನೊಂದು ಸಾರಿ ಹೇಳುತ್ತೇನೆ. ಸರೋಜ ಯಾವನಾದರೂ ಒಬ್ಬನ ಮಡದಿಯಾಗಿ ಬಾಳಲಿ ಎಂದು ನನ್ನ ಇಷ್ಟ."

"ಅದು ಸರಿಯೆ. ಆದರೆ ಆ ಯಾವನಾದರೂ ಒಬ್ಬನು ಎನ್ನುವುದ ರಲ್ಲಿ 'ಆ ಒಬ್ಬನು' ನೀನೇ ಎಂಬ ಒಂದು ಭಾವ ನಿನ್ನ ಮನಸ್ಸಿಗೆ ಎಂದೂ ಬಂದಿಲ್ಲವೋ?"

ತನ್ನ ಹೃದಯದ ಮೂಲೆಯಲ್ಲಿ ಕಂಡೂಕಾಣದ ಹಾಗೆ ಇರುವ, ಆಸೆಪಟ್ಟರೂ ದೊರಕಲಾರದ ಆಕಾಂಕ್ಷೆಯೊಂದನ್ನು ಕಂಠಿಯು ನೇರವಾಗಿ ಹೋಗಿ ಕೆದಕಿ ಕೆರಳಿಸಿ ಹೊರಗೆಡವಿದಾಗ ವಾಸುವಿನ ದೇಹಾದ್ಯಂತವೆಲ್ಲ ನಡುಗಿತು. ಮುಖವು ವಿಕಾರವಾಗಿ, ಎದೆಯು ಡವಡವನೆ ಬಿರುಸಾಗಿ ಹೊಡೆಯತೊಡಗಿತು. ತನ್ನ ದೌರ್ಬಲ್ಯವನ್ನು ಹೊರಗೆ ತೋರ್ಪಡಿಸಬಾರದೆಂದು ಎಷ್ಟು ಎಚ್ಚರಿಕೆಯನ್ನು ತೆಗೆದು ಕೊಂಡರೂ, ತನ್ನ ಹೃದಯವನ್ನು ಭೇದಿಸಿ ಅಂತರಾತ್ಮವನ್ನು ಕೆದಕಿ ಪರೀಕ್ಷಿಸುತ್ತಿರುವ ಕಂಠಿಯ ಹದ್ದಿನ ದೃಷ್ಟಿಯಿಂದ ಅವನಿಗೆ ಪಾರಾಗ ಲಾಗಲಿಲ್ಲ. ಕಂಠಿಯು ಮತ್ತೆ ಅದೇ ನಗೆಯನ್ನು ನಕ್ಕನು. ಅದರ ಅಸಹನೀಯತೆಯನ್ನು ವಾಸುವಿಗೆ ತಡೆಯಲು ತುಂಬ ಕಷ್ಟವಾಯಿತು. ಆದರೂ ಧೈರ್ಯವನ್ನು ತಂದುಕೊಂಡು,

"ಪರವಾಗಿಲ್ಲ ಕಂಠಿ, ನಾನು ಬಿಟ್ಟ ಬಾಣವನ್ನು ನನಗೇ

ಹಿಂದಿರುಗಿಸಿದೆ. ನಿನಗೆ ನಾನೆಷ್ಟು ಬಾರಿ ಹೇಳಿಲ್ಲ, ನನಗೆ ನನ್ನ ಸೋದರಮಾವನ ಮಗಳೊಡನೆ ಮದುವೆಯು ಗೊತ್ತಾಗಿಹೋಗಿದೆ ಯೆಂದು. ಅಲ್ಲದೆ ನಾನು ಬ್ರಾಹ್ಮಣ. ಹೀನ ಜಾತಿಯ ಹುಡುಗಿಯನ್ನು ಮದುವೆಯಾಗುವುದಿಲ್ಲ. ಅವಳ ಜಾತಿಯ ಹುಡುಗನಾರಾದರೂ ಮದುವೆಯಾಗುವ ಹಾಗಿದ್ದರೆ ಅದಕ್ಕೆ ಬೇಕಾದ ಪ್ರೋತ್ಸಾಹವನ್ನು ಕೊಡುತ್ತೇನೆ ಅಷ್ಟೆ."

ಕಂಠೀಯು ಒಂದು ಸಾರಿ ವ್ಯಂಗ್ಯವಾಗಿ ತಲೆಯಾಡಿಸಿದನು.

"ನ್ಯಾಯ ವಾಸು, ನೀನು ಇಲ್ಲಿಯವರೆಗೆ ಹೇಳಿದುದೆಲ್ಲಾ ನ್ಯಾಯ. ನೀನು ನನ್ನನ್ನು ದುಷ್ಟನೆಂದು ಕರೆದರೂ ಚಿಂತೆಯಿಲ್ಲ, ಈ ವಿಷಯದಲ್ಲಿ ನನಗೆ ತೋರಿದ ನಾಲ್ಕು ಮಾತನ್ನು ಹೇಳುತ್ತೇನೆ. ಹೇಳುವ ಮುನ್ನ ನನ್ನ ಮಾತುಗಳು ನಿನ್ನನ್ನು ನೋಯಿಸುವುದು ಖಂಡಿತವಾದುದರಿಂದ ಅದಕ್ಕೆ ಕ್ಷಮೆಯನ್ನೂ ಬೇಡುತ್ತೇನೆ. ವಾಸು ಸರೋಜಳನ್ನು ನೋಡಿದ ಮೊದಲ ದಿನ ನಿನಗೆ ಅವಳ ವಿಚಾರದಲ್ಲಿ ಈಗ ನೀನು ಹೇಳುತ್ತಿರುವ ಅಭಿಪ್ರಾಯವೇ ಇತ್ತು. ಅವಳನ್ನು ಕೆಟ್ಟ ಕಸುಬಿನಿಂದ ಕಾಪಾಡ ಬೇಕೆಂದೇನೋ ನಿಶ್ಚಯಿಸಿದೆ. ಅದಕ್ಕನುಗುಣವಾಗಿ ಅವಳ ಸ್ನೇಹ ವನ್ನೂ ಮಾಡಿದೆ. ಆದರೆ ಈಗ ನಿನಗೆ ಮೊದಲಿನ ಅಭಿಲಾಷೆ ಸ್ವಲ್ಪವೂ ಇಲ್ಲ. ನಿನಗೇ ಅವಳನ್ನು ಹೊಂದಬೇಕೆನ್ನುವ ಆಸೆಯುಂಟಾಗಿ ಹೋಗಿದೆ. ಆದರೆ ಮದುವೆಯೆನ್ನುವುದು ತೀರಾ ಕಷ್ಟಸಾಧ್ಯ. ತಾಯಿಯ ಪ್ರೇಮ ಒಂದು ಕಡೆ ಸೆಳೆಯುತ್ತಿದ್ದರೆ, ಸರೋಜೆಯ ಸೌಂದರ್ಯ ಮತ್ತೊಂದು ಕಡೆ ಸೆಳೆಯುತ್ತಿದೆ. ಈ ಎರಡು ಸಮಸ್ಯೆ ಗಳನ್ನೂ ಸುಲಭವಾಗಿ ಬಗೆಹರಿಸಲು ನೀನೊಂದು ಮಾರ್ಗವನ್ನು ಹುಡುಕಿದ್ದಿ. ತಾಯಿಯ ಅಭಿಲಾಷೆಯಂತೆ ಮಾವನ ಮಗಳನ್ನು ಮದುವೆಯಾಗುವುದು. ಆಮೇಲೆ ಸಮಾಜ ಸುಧಾರಕನೆಂಬ ಸೋಗು ಹಾಕಿ ಸರೋಜೆಯೊಡನೆ ಕಾಲ ತಳ್ಳುವುದು. ನಾನು ಶ್ರೀಮತಿಯನ್ನು ಬೇಡುವ ಹಾಗೆ ನೀನು ಸರೋಜೆಯನ್ನು ಬೇಡುತ್ತಿದ್ದಿ. ಆದರೆ ನಿನ್ನ ದಾರಿ ಕೊಂಚ ಬಳಸು ಅಷ್ಟೆ. ಆದರೂ ನಿನಗೆ ಯಾಕೆ ಇಷ್ಟು ಬೂಟಾಟಿಕೆ ವಾಸು. ನಿನ್ನ ಅಭ್ಯುದಯವನ್ನೇ ಕಾಯುತ್ತಿರುವ ತಾಯಿ ಯನ್ನು ನೆನಸಿಕೊ. ಯಾವ ಪಾಪವನ್ನೂ ಕಾಣದ ಆ ಹುಡುಗಿಗೆ

ಮದುವೆಗೆ ಮೊದಲೇ ಏಕೆ ಅನ್ಯಾಯ ಮಾಡುತ್ತಿ? ಇನ್ನು ಕಂಡವರ ಕಣ್ಣಿಗೆ ಮಣ್ಣೆರಚುವ ಆಟ ಸಾಕು."

ಬೂಟಾಟಿಕೆ! ಸೋಗು!! ವಾಸುವಿಗೆ ಕೋಪದಿಂದ ಕಣ್ಣು ಕತ್ತಲಿಟ್ಟಿತು. ಆಪಾದ ಮಸ್ತಕವೂ ಕೆಂಡದಂತೆ ಉರಿಯಿತು. ಮನುಷ್ಯನ ಸಹನೆಗೂ ಒಂದು ಮಿತಿ ಇಲ್ಲವೆ? ವಾಸುವು ಕಂಠಿಯ ಕಪಾಳಕ್ಕೆ ಒಂದು ಬಿಗಿಯಬೇಕೆಂದು ಕೈ ಎತ್ತಿದನು. ಆದರೆ ದೇವರ ದಯೆಯಿಂದ ಏಟು ತಿನ್ನಲು ಕಂಠಿಯು ಅಲ್ಲಿರಲಿಲ್ಲ. ವಾಸುವಿನ ಕೈ ಗಾಳಿಯಲ್ಲೇ ನಿಂತಿತು. ಕೂಡಲೇ ಅವನಿಗೆ ತನ್ನ ಅಚಾತುರ್ಯವನ್ನು ಕಂಡು ತನಗೇ ನಾಚಿಕೆಯಾಯಿತು. "ಸದ್ಯ ತೊಲಗಿಹೋದ. ಅದೇನು, ಹಣೆಯ ಮೇಲೆ ಬರೆದಿರುವುದನ್ನು ಓದುವಹಾಗೆ ಮುಖ ನೋಡಿ ಅಷ್ಟೊಂದು ಒದರಿಬಿಟ್ಟನಲ್ಲ!" ಎಂದು ವಾಸುವು ಅಲ್ಲಿಯೇ ಕುರ್ಚಿಯ ಮೇಲೆ ಕುಕ್ಕರಿಸಿಕೊಂಡನು. ಅವನ ಹೃದಯದ ಬಡಿತ ಇನ್ನೂ ಕಮ್ಮಿಯಾಗಿರಲಿಲ್ಲ. ಕೈಕಾಲುಗಳ ಕಂಪನ ಇನ್ನೂ ನಿಂತಿರಲಿಲ್ಲ.

ಶರೀರವು ವಾಸುವಿನ ಹತೋಟಿಗೆ ಬರಲು ಕಡೆಯ ಪಕ್ಷ ಕಾಲು ಗಂಟೆಯಾದರೂ ಬೇಕಾಯಿತು. ಬುದ್ಧಿಯು ಒಂದು ಸ್ಥಿಮಿತಕ್ಕೆ ಬಂದಮೇಲೆ ಅವನು ನಡೆದುದೆಲ್ಲವನ್ನೂ ನಿಧಾನವಾಗಿ ಮೆಲಕುಹಾಕ ತೊಡಗಿದನು. ಕಂಠಿಯ ನುಡಿಗಳು ಒಂದೊಂದಾಗಿ ಒಂದು ಕಿವಿಯಲ್ಲಿ ಮೊಳಗಿಹೋಗುತ್ತಿತ್ತು. ಪ್ರತಿಯೊಂದು ಮಾತಿನಲ್ಲೂ ಕಪಟವಲ್ಲದ ಸಹಜತೆ ಎದ್ದು ತೋರುತ್ತಿತ್ತು. ಪ್ರತಿಯೊಂದು ಮಾತಿನ ಅರ್ಥವೂ ಮಕ್ಕಳಿಗೆ ಹೇಳುವಷ್ಟರ ಮಟ್ಟಿಗೆ ಸ್ಪಷ್ಟವಾಗಿತ್ತು. ಈಗ ಕೇವಲ ಅಸ್ಪಷ್ಟವಾಗಿದ್ದುದು ತನ್ನ ಮನಸ್ಸೇ! ಹಾಗಾದರೆ ನನ್ನದೊಂದು ಸೋಗೇ? ಬೂಟಾಟಿಕೆಯೆ?" ವಾಸುವು, "ಇಲ್ಲ" ಎಂಬ ಉತ್ತರವು ಬರುವುದೆಂಬ ಭರವಸೆಯಿಂದ ಹೃದಯದ ಮೇಲೆ ಕೈ ಇಟ್ಟು ನೋಡಿಕೊಂಡನು. ಹೃದಯದ ಯಾವ ತುದಿಯಿಂದಲೂ ಆ ಉತ್ತರವು ಬರಲಿಲ್ಲ. ಭಯ, ನಿರಾಶೆಗಳು ಅವನನ್ನು ಅಧೀನನನ್ನಾಗಿ ಮಾಡಿದುವು. ಬಹಳ ಹೊತ್ತು ಯೋಚಿಸಿ, "ಕಂಠಿಯು ಕೋಪದ ಭರದಲ್ಲಿ, ಏನೇನು ಹೇಳಿದನೋ ಅದೆಲ್ಲ ನಾನು ಬದುಕಿರುವಷ್ಟೇ ನಿಜವಾದದ್ದು. ನಾನು ನನ್ನ ಆತ್ಮಬಲವನ್ನು ಕಳೆದುಕೊಂಡಿದ್ದೇನೆ. ನನ್ನನ್ನೇ ಕಾಪಾಡಿಕೊಳ್ಳ

ಲಾರದ ನನಗೆ ಇನ್ನೊಬ್ಬರ ಗೊಡವೆ ಏಕೆ? ಅವರವರ ಬಾಳನ್ನು ತಿದ್ದಿಕೊಳ್ಳುವುದು ಅವರವರ ಜವಾಬ್ದಾರಿ. ಇದಕ್ಕೆ ನಾನು ಯಾಕೆ ಹಾಳಾಗಲಿ. ನಾಳೆ ಸರೋಜೆಗೊಂದು ಕಾಗದ ಬರೆಯುತ್ತೇನೆ. ಅದರಲ್ಲಿ, ನಿನ್ನನ್ನು ಇನ್ನು ಮುಂದೆ ಕಾಪಾಡಿಕೊಳ್ಳುವುದು ನಿನ್ನ ಭಾರವಾಗಿದೆ. ಸಮಯದಲ್ಲಿ ಸಹಾಯ ಬೇಕಾದರೆ ನೀಡಲು ಸಿದ್ಧವಾಗಿದ್ದೇನೆ. ಆದರೆ ಮನೆಗೆ ಮಾತ್ರ ಬರುವುದಿಲ್ಲ. ಬಾ ಎಂದು ನೀನು ಕರೆಯಲೂ ಬೇಡ ವೆಂದು ತಿಳಿಸುತ್ತೇನೆ. ಅವಳು ನನ್ನ ಮಾತನ್ನು ಮೀರಿ, ಅಂಗಲಾಚಿ ಕರೆ ಕಳುಹಿಸಿದರೂ ಹೋಗುವುದಿಲ್ಲ. ಮನಸ್ಸನ್ನು ಸಡಿಲ ಮಾಡು ವುದಿಲ್ಲ. ಖಂಡಿತವಾಗಿಯೂ ಇಲ್ಲ" ಎಂದು ಶಪಥ ಮಾಡಿದನು. ಆಡಿದ ಮಾತುಗಳನ್ನೇ ಮತ್ತೆ ಮತ್ತೆ ಆಡಿಕೊಂಡನು. ಒಂದೆಡೆ ಚಲನೆ ಇಲ್ಲದೆ ಕುಳಿತರೆ ಎಲ್ಲಿ ತನ್ನ ನಿರ್ಧಾರವು ಮುರಿದುಬೀಳುವುದೋ ಎಂದು ಕೋಣೆಯಲ್ಲಿ ಶತಪಥ ಸುತ್ತಿದನು. ಹೀಗೆ ಅದೆಷ್ಟು ಹೊತ್ತು ಕಳೆದನೋ ತಿಳಿಯದು. ಗಂಟೆ ಆರು ಹೊಡೆದಾಗಲೇ ಅವನಿಗೆ ಬಾಹ್ಯ ಪ್ರಪಂಚದರಿವು. ಗಡಿಯಾರ ಸರೋಜೆಯ ಮನೆಗೆ ಹೋಗುವ ಹೊತ್ತಾಯಿತು, ಎಂದು ಎಚ್ಚರಿಸಿತು. ಅದರೊಡನೆಯೇ ಸರೋಜೆಯ ಚೆಲುವಿನ ನಿಲುವು ಕಣ್ಣೆದುರಿಗೆ ಬಂದು ನಿಂತಿತು. ಕ್ಷಣಮಾತ್ರವಾದರೂ ಮರೆತಿದ್ದ ಮನೋವೇದನೆಯನ್ನು ಮತ್ತೆ ನೆನಪಿಗೆ ತಂದ ಗಡಿಯಾರ ವನ್ನು ಒಡೆದುಹಾಕಿಬಿಡಲೇ ಎಂದುಕೊಂಡನು. ಕೂಡಲೆ ತನ್ನ ದೌರ್ಬಲ್ಯಕ್ಕೆ ಹೀಗಾದರೆ, ನಿರ್ಜೀವ ವಸ್ತು ಅದು ಏನು ಮಾಡೀತು ಎನಿಸಿತು.

## ೧೫

ಸರೋಜ ಈ ದಿನ ತನಗಾಗಿ ಕಾದಿರುತ್ತಾಳೆ. ತಾನು ಎಷ್ಟು ಹೊತ್ತಾದರೂ ಹೋಗುವುದಿಲ್ಲ. ನಿರಾಶೆಯಿಂದ ಗಾಬರಿಪಡುತ್ತಾಳೆ. ನಾಳೆಯೂ ಹಾಗೆ. ನಾಡಿದ್ದೂ ಹೋಗುವುದಿಲ್ಲ, ಮುಂದೆ ಇನ್ನೆಂದೂ ಹೋಗುವುದಕ್ಕಾಗುವುದಿಲ್ಲ...............ವಾಸುವಿಗೆ ಅಸಹಾಯತೆಯಿಂದ ತಲೆಯನ್ನು ಪರಚಿಕೊಂಡು ಒಂದು ಬಾರಿ ಜೋರಾಗಿ ಕಿರಿಚಿಕೊಳ್ಳ ಬೇಕೆನಿಸಿತು. ತಾನು ಗಂಡಸಾಗಿ ಇಷ್ಟು ಬಲಹೀನನಾಗಿರುವೆನೆಂಬುದು,

ಅವನಿಗೆ ಹಿಂದೆಂದೂ ಅರಿವಾಗಿರಲಿಲ್ಲ. ನ್ಯಾಯಾನ್ಯಾಯ ವಿಮರ್ಶೆ ಮಾಡಲು ಮೆದುಳಿನಲ್ಲಿ ಶಕ್ತಿ ಸಾಲದೆ ಅವನು, "ಇಷ್ಟು ನಾನು ಹೆದರಿಕೊಳ್ಳಬೇಕಾದರೂ ಯಾತಕ್ಕೆ? ತಪ್ಪು ಮಾಡಿದವರಿಗೆ ಹೆದರಿಕೆ. ನಾನು ಕೆಟ್ಟ ಉದ್ದೇಶದಿಂದ ಹೋಗುತ್ತಿದ್ದರೆ ಆಗ ಈ ಚಿಂತೆ ಇರಬೇಕಾದುದು ನ್ಯಾಯ. ನಾನು ಈಗ ಹಾಗೇನೂ ಹೋಗುತ್ತಿಲ್ಲ. ಆದ್ದರಿಂದ ಅಕ್ಕನಿಗೂ ಹೆದರಬೇಕಾಗಿಲ್ಲ. ಪಾರ್ವತಿಗೂ ಮರುಗಬೇಕಾದುದಿಲ್ಲ. ಇನ್ನು ಆ ಕಂಠಿ. ಅವನೊಬ್ಬ ಹುಚ್ಚ. ಕಾಮಾಲೆ ರೋಗದವನಿಗೆ ಜಗತ್ತೆಲ್ಲಾ ಹಳದಿಯಾಗಿ ತೋರುವಂತೆ, ಅವನಿಗೆ ಎಲ್ಲರ ಮನಸ್ಸೂ ತನ್ನ ಮನಸ್ಸಿನಂತೆಯೇ ಎಂದು ಹೊಳೆಯುತ್ತದೆ. ಅವನ ಮಾತಿಗೆ ಬೆರಗಾಗಿ ಇಷ್ಟು ಹೊತ್ತು ಚಿಂತಿಸಿದೆನಲ್ಲಾ, ಎಂತಹ ಪೆಚ್ಚಾ!" ಎಂದು ಕೋಟನ್ನು ಮೈಗೆ ಸಿಕ್ಕಿಸಿಕೊಂಡು ಶ್ರೀಮತಿಯ ಮನೆಯ ಕಡೆಗೆ ಹೊರಟನು. ತಲೆಯು ಕೆದರಿದೆ ಎಂಬುದರ ನೆನಪೂ ಅವನಿಗೆ ಬಂದ ಹಾಗೆ ತೋರಲಿಲ್ಲ.

* * * * *

ವಾಸುವು ಮೈಲಾಪುರಕ್ಕೆ ಹೊರಟುಹೋದ ಮೇಲೆ ಸೀತಕ್ಕ ದಿನವೊಂದನ್ನು ಯುಗವಾಗಿ ಕಳೆಯುತಿದ್ದರು. ಅವರಿಗೆ ಏತರಲ್ಲೂ ಆಸಕ್ತಿ ಇರಲಿಲ್ಲ. ಕೆಲಸ ಮಾಡಲು ಅದೂ ಬಹಳವಾಗಿ ಇರುತ್ತಿರಲಿಲ್ಲ. ದಿವಸಕ್ಕೆಲ್ಲಾ ಮಾಡ ಬೇಕಾಗಿದ್ದ ಅಡುಗೆಯೆಂದರೆ ಒಬ್ಬರ ಒಪ್ಪತ್ತಿನ ಊಟಕ್ಕೆ ಮಾತ್ರ. ಸೀತಕ್ಕ ಹನ್ನೆರಡು ಗಂಟೆಗೆ ಊಟಮಾಡಿದರೂ ಮಾಡಿದರೇ, ಇಲ್ಲವೆ ಒಂದು ಗಂಟೆಯಾದರೂ ಸರಿಯೆ. ಮಾಡಿಕೊಳ್ಳಲು ಬೇಸರವೆಂದು ರಾತ್ರಿಯ ಫಲಹಾರವನ್ನೂ ತಪ್ಪಿಸಿಬಿಟ್ಟಿದ್ದರು. ತೋರಿದಾಗ ಸ್ನಾನ ಮಾಡಿ ಅಡುಗೆಯನ್ನು ಬೇಯಿಸಿ ಊಟ ಮಾಡಿದರೆ ದಿವಸದ ಕೆಲಸವೆಲ್ಲಾ ಮುಗಿದ ಹಾಗಿತ್ತು. ಸೀತಮ್ಮನವರು ಸಾಮಾನ್ಯವಾಗಿ ಹಗಲು ಹೊತ್ತನ್ನೆಲ್ಲಾ ಜಗಲಿಯ ಮೇಲೆ ಕಳೆದುಬಿಡುತ್ತಿದ್ದರು. ಮಾತಿಗೆ ಭಾಗಮ್ಮನವರು ಬರುತ್ತಿದ್ದರಾದರೂ ಕೊಂಚ ದಿವಸದಿಂದ ಅವರ ಗಂಡನಿಗೆ ಖಾಯಿಲೆಯಾಗಿದ್ದ ಕಾರಣ ಅವರ ಭೇಟಿ ಮೊದಲಿನಷ್ಟಿರಲಿಲ್ಲ. ಮೊದ ಮೊದಲು ಸೀತಕ್ಕನಿಗೆ ಒಬ್ಬರೇ ಕುಳಿತುಕೊಳ್ಳಲು ಬಹಳ ಬೇಸರವಾಗುತ್ತಿತ್ತು. ಆದರೆ ಅದಕ್ಕೆ ಉಪಶಮನವೇನೂ ದೊರೆಯಲಿಲ್ಲವಾಗಿ ಅವರು

ಅದನ್ನೇ ಅಭ್ಯಾಸ ಮಾಡಿದರು. ಸುಮ್ಮನೆ ಬೀದಿಯಲ್ಲಿ ಹೋಗುತ್ತಿರು ವವರನ್ನು ನೋಡುತ್ತಿರುವುದು, ಬೇಸರವಾದರೆ ದೇವರ ನಾಮವನ್ನು ಸಣ್ಣಗೆ ಹಾಡುವುದು ಅದೂ ಬೇಜಾರಾಗಿ ತೂಕಡಿಕೆ ಹತ್ತಿದರೆ ಅಲ್ಲಿಯೇ ಉರುಳಿಕೊಂಡು ಕೊಂಚ ನಿದ್ರೆಮಾಡುವುದು ಅವರ ದಿನಚರಿಯ ಕಾರ್ಯಕ್ರಮವಾಗಿತ್ತು. ಆದರೆ ಬೆಳಗ್ಗೆ ಹತ್ತು ಗಂಟೆ, ಸಾಯಂಕಾಲ ಐದು ಗಂಟೆ ಎಂದರೆ ಮಾತ್ರ ಅವರಿಗೆ ಎಲ್ಲಿಲ್ಲದ ಉತ್ಸಾಹ. ಮಗನ ಕಾಗದಕ್ಕೆ ಕಾತರವಾಗಿ ಟಪ್ಪಾಲು ಜವಾನನನ್ನು ಇದಿರುನೋಡುತ್ತಿದ್ದರು. ಅದು ಯಾವ ಹುಚ್ಚೋ, ಬೆಳಗ್ಗೆ ಕಾಗದ ಬಂದಿದ್ದರೂ ಸಂಜೆಗೆ ಅಂಚೆ ಯವನನ್ನು ನಿರೀಕ್ಷಿಸುವ ಪದ್ಧತಿಯನ್ನು ಅವರು ಬಿಡುತ್ತಿರಲಿಲ್ಲ. ಅವನು 'ಪೋಸ್ಟ್' ಎಂದು ಒಂದು ದಪ್ಪ ಹೊಟ್ಟೆಯ ಕವರನ್ನು ತಂದು ಜಗಲಿಯ ಮೇಲೆ ಹಾಕಿದರೆ, ಅದನ್ನು ತೆಗೆದುಕೊಳ್ಳುವಾಗ ಸೀತಕ್ಕನ ಕೈ ಆತುರ ದಿಂದ ನಡುಗುತ್ತಿತ್ತು. ಕೈಗೆ ಕಾಗದ ಬಂದರೂ ಅದನ್ನು ಒಡೆದು ತಟ್ಟನೆ ಓದಿಕೊಳ್ಳುವ ಭಾಗ್ಯವನ್ನು ಅವರು ಪಡೆದಿರಲಿಲ್ಲ. ಎಲ್ಲಿಯೋ ಹೋಗಿ ರುತ್ತಿದ್ದ ಎದರು ಮನೆಯ ಹುಡುಗ ಶಾಮಿಯು ಬರುವ ವರೆಗೂ ಕಾಯ ಬೇಕಾಗಿದ್ದಿತು. ಮೊತ್ತಮೊದಲು ವಾಸುವು ಬರೆದಿದ್ದುದು ಬಲು ಒಕ್ಕಣೆಯ ಕಾಗದ. ಆ ಕಾಗದವನ್ನು ಸೀತಮ್ಮನವರು ಶಾಮಿಗೆ ಏಕಾದಶಿ ದಿವಸ ಮಾಡಿದ್ದ ತಂಬಿಟ್ಟಿನುಂಡೆಯನ್ನು ಕೊಟ್ಟು ಉಪಚರಿಸಿ ಎರಡು ಬಾರಿ ಓದಿಸಿ ಕೇಳಿದ್ದರು. ಅವರ ಆ ಜುಗುಪ್ಸೆಯ ಜೀವನದಲ್ಲಿ ತೀರಾ ಆಶಾದಾಯಕ ವಸ್ತುಗಳೆಂದರೆ ಆ ಕಾಗದಗಳು. ಅವರು ಅವುಗಳನ್ನು ಬಹಳ ಹುಷಾರಿನಿಂದ ಕಾಪಾಡುತ್ತಿದ್ದರು.

ಮೂರು ತಿಂಗಳು ಹೇಗೆ ಉರುಳಿದುವೋ ತಿಳಿಯದು. ಬೇಸಗೆಯ ರಜೆ ಬರಲು ಇನ್ನೂ ತಿಂಗಳು ಬೇಕಾಗಿತ್ತು. ಈ ದೀರ್ಘ ವಿರಾಮದಲ್ಲಿ ವೆಂಕಟಪತಯ್ಯನು ತಂಗಿಯ ಯೋಗಕ್ಷೇಮವನ್ನು ವಿಚಾರಿಸಲು ಒಂದೈದಾರು ಬಾರಿ ಬಂದಿದ್ದನು. ಬಂದಾಗಲೆಲ್ಲಾ ಸೀತಕ್ಕನನ್ನು ಆಹ್ವಾನಿಸದೇ ಇರುತ್ತಿರಲಿಲ್ಲ. ಸೀತಕ್ಕನೇ ಊರಿಗೆ ಮುಂಚೆ ಅವಸರ ವೇನೆಂದು ಸುಮ್ಮನಾಗಿದ್ದರು. ಮದುವೆಯ ದಿನಗಳು ಹತ್ತಿರ ಬಂದ ಹಾಗೆಲ್ಲಾ ವೆಂಕಟಪತಯ್ಯನ ತಗಾದೆ ಜಾಸ್ತಿಯಾಗುತ್ತಾ ಬಂದಿತು.

"ಮನೆಯ ದೊಡ್ಡ ಹೆಣ್ಣು ಮಕ್ಕಳು ಯಾರೂ ಬಂದಿಲ್ಲ. ಅವಳೂ

ಒಬ್ಬೊಂಟಗಿತ್ತಿ ನೀನು ಬಂದರೆ ಕೊಂಚ ಸಹಾಯವಾಗುವುದಿಲ್ಲವೇ?" ಎಂದು ಬಲವಂತ ಮಾಡಿದನು. ಸೀತಕ್ಕ ಇನ್ನು ಬಿಗುಮಾನಮಾಡುವುದು ಸರಿಯಲ್ಲವೆಂದು ನಂಜುಂಡಳ್ಳಿಗೆ ಹೋದರು.

ನಂಜುಂಡಳ್ಳಿಗೆ ಹೋದ ಮೇಲೆ ಸೀತಮ್ಮನವರಿಗೆ ದಿವಸವನ್ನು ಕಳೆಯಲು ಅಷ್ಟು ಕಷ್ಟವಾಗಲಿಲ್ಲ. ಅವರು ಬಂದ ಕೊಂಚ ದಿನಕ್ಕೆಲ್ಲಾ ಸಾವಿತ್ರಿಯ ಹೆಣ್ಣು ಮಕ್ಕಳೂ ಅತ್ತೆಯ ಮನೆಗಳಿಂದ ಬಂದರು. ವೆಂಕಟ ಪತಯ್ಯನ ಮನೆ ಮಕ್ಕಳುಮರಿಯಿಂದ ತುಂಬಿ ಗಿಜಿಗಿಜಿಗುಟ್ಟುತ್ತಿತ್ತು. ಸಾಮಾನ್ಯವಾಗಿ ಊಟವಾದ ಮೇಲೆ ಎಲ್ಲರೂ ಹಜಾರವನ್ನು ಸೇರಿ ಬಿಡುತ್ತಿದ್ದರು. ಸೀತಕ್ಕ ತಮ್ಮ ಹಪ್ಪಳ ಒತ್ತುವ ಮಣೆ, ಹಿಟ್ಟು, ಲಟ್ಟಣಿಗೆಗಳನ್ನು ಎತ್ತಿಕೊಂಡು ಒಂದು ಮೂಲೆಯನ್ನು ಹಿಡಿಯುತ್ತಿದ್ದರು. ಅತ್ತ ಇನ್ನೊತ್ತಟ್ಟಿಗೆ ಸಾವಿತ್ರಿಯು ಶಾವಿಗೆ ರವೆಯನ್ನೂ, ಮಡಿ ಕೋಲನ್ನೂ ತಂದು ತನ್ನ ಅಂಗಡಿಯನ್ನು ಸ್ಥಾಪಿಸುತ್ತಿದ್ದಳು. ಸರಿ, ಅವಳ ಒಬ್ಬೊಬ್ಬ ಹೆಣ್ಣು ಮಕ್ಕಳೂ ಬೀಸುವುದು, ಕುಟ್ಟುವುದು ಎಂದು ಒಂದಲ್ಲ ಒಂದು ಕೆಲಸವನ್ನು ಹಿಡಿದು ತಮ್ಮ ತಮ್ಮ ಜಾಗಗಳಲ್ಲಿ ಕುಳಿತು ಕೊಳ್ಳುತ್ತಿದ್ದರು. ಅನಂತರದ ಕೆಲಸವೆಂದರೆ ಹರಟೆಯ ಪ್ರಾರಂಭ. ಎಲ್ಲರ ಕೈಗಳೂ ಕೆಲಸ ಮಾಡುತ್ತಲೇ ಇದ್ದುವು. ಬಾಯಿಗೆ ಮಾತ್ರ ಬಿಡುವಿರುತ್ತಿರಲಿಲ್ಲ. ಆ ಹರಟೆಯ ಗ್ಯಾಂಗಿನಲ್ಲಿ ಹೊತ್ತು ಎಷ್ಟಾಯಿ ತೆಂಬುದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅಂತೂ ಮದುವೆಯ ಸಿದ್ಧತೆಯೆಲ್ಲಾ ಸಾಂಗವಾಗಿ ನೆರವೇರಿದುವು. ಅಷ್ಟರಲ್ಲಿ ವಾಸುವು ತನಗೆ ಇನ್ನು ಹದಿನೈದು ದಿನಕ್ಕೆಲ್ಲಾ ರಜೆಯು ಪ್ರಾರಂಭವಾಗುವುದೆಂದು ಬರೆದಿದ್ದನು. ಆದಕಾರಣ ಲಗ್ನ ವಿಡಿಸುವುದಕ್ಕೆ ಯಾವ ತೊಂದರೆಯೂ ಬರಲಿಲ್ಲ. ವಾಸುವಿನ ಬರವಿಗೆ ಮೊದಲೇ ಲಗ್ನ ಪತ್ರಿಕೆಯಾಗಿಹೋಯಿತು. ಸೀತಕ್ಕ ಎಲ್ಲವನ್ನೂ ಮಗನಿಗೆ ತಿಳಿಸಿ, ಸಾಧ್ಯವಾದಷ್ಟು ಬೇಗ ಬಂದು ಬಿಡುವಂತೆ ಕಾಗದ ಬರೆಸಿದರು.

## ೧೬

ಸಾಮಾನ್ಯವಾಗಿ ರಾತ್ರಿಯ ಹೊತ್ತು ಕಂಠಿ ಮನೆಗೆ ಬರುವ ವೇಳೆಗೆ ವಾಸುವು ಮಲಗಿಬಿಡುತ್ತಿದ್ದನು. ಆದರೆ ಆ ದಿವಸ ಅವನಿಗೆ ಹೊತ್ತಿನ

ಮೇಲೆ ಪರಿಜ್ಞಾನವೇ ಇರಲಿಲ್ಲ. ಶಿಲಾಮೂರ್ತಿಯಂತೆ ಕುರ್ಚಿಯ ಮೇಲೆ ಕುಳಿತಿದ್ದನು. ಮುಂದಿದ್ದ ಮೇಜಿನ ಮೇಲೆ ಆ ದಿವಸ ತಾನೆ ಬಂದ ಸೀತಕ್ಕನ ಕಾಗದ ಮತ್ತು ಲಗ್ನ ಪತ್ರಿಕೆಯ ಪ್ರತಿಯೊಂದು ಬಿದ್ದಿದ್ದುವು. ವಾಸುವು ಸುಮ್ಮನೆ ಎದುರುಗಡೆ ಗೋಡೆಯ ಮೇಲೆ, ಸರಿಯಾದ ದಾರಿ ಕಾಣದೆ ಪರದಾಡುತ್ತಿರುವ ಕುರುಡು ನೊಣವೊಂದನ್ನು ನೋಡುತ್ತಿದ್ದನು. ಅದರ ಪರದಾಟವನ್ನು ಗಮನಿಸಿದಾಗ ಅವನಿಗೆ ತನ್ನ ಸದ್ಯದ ಸ್ಥಿತಿಯು ನೆನಪಿಗೆ ಬಂದಿತು. ತಾನು ಹುಟ್ಟಿದಂದಿನಿಂದ ಹಿಡಿದು ಮೈಲಾಪುರಕ್ಕೆ ಬಂದ ವರೆಗೂ ನಡೆದ ಘಟನೆಗಳನ್ನು ಯೋಚಿಸಿದನು. ಎಲ್ಲ ಒಂದು ಕನಸಿನಂತೆ ತೋರಿತು. ಮೈನೂರಿನಲ್ಲಿ ಎಡಬಿಡದೆ ಸುಮಾರು ಹದಿನೈದು ವರ್ಷಗಳನ್ನು ಕಳೆದಿದ್ದರೂ ಅವನ ಜೀವನದಲ್ಲಿ ಹೇಳಿಕೊಳ್ಳುವಂತಹ ಯಾವ ಬದಲಾವಣೆಯೂ ನಡೆದಿರಲಿಲ್ಲ. ಆದರೆ ಮೈಲಾಪುರಕ್ಕೆ ಬಂದ ಎರಡು, ಮೂರು ತಿಂಗಳಲ್ಲಿ ಅವನು ಬಹಳ ಬದಲಾಯಿಸಿಹೋಗಿದ್ದನು. ತನ್ನ ಹೃದಯದ ಮೇಲೆ ಅಧಿಕಾರವನ್ನು ನಡಸುವ ಹಕ್ಕು ಸೀತಕ್ಕ ಒಬ್ಬರನ್ನು ಬಿಟ್ಟು ಮತ್ತಾರಿಗೂ ಇಲ್ಲ ಎಂದಿದ್ದ ಅವನ ಚಿಕ್ಕಂದಿನ ಭಾವನೆ ಸಂಪೂರ್ಣವಾಗಿ ನಾಶವಾಗಿಹೋಗಿತ್ತು. ಸರೋಜ ತನ್ನ ಸರಳಗುಣದಿಂದ ವಾಸುವಿನ ಮನಸ್ಸನ್ನು ಸೆರೆ ಹಿಡಿದುಬಿಟ್ಟಿದ್ದಳು. ಅವಳ ಜೀವನದ ಆದರ್ಶ ವ್ಯಕ್ತಿಯೆಂದರೆ ವಾಸು. ಸರೋಜ ಅವನನ್ನು ತನ್ನ ಅಂತರಾಳದಿಂದ ಆರಾಧಿಸುತ್ತಿದ್ದಳು. ಅವನು ಏನು ಅಪೇಕ್ಷಿಸುತ್ತಿದ್ದನೋ ಆ ಅಪೇಕ್ಷೆ ಅವಳಿಗೆ ಚಿಕ್ಕಂದಿನಿಂದಲೂ ಇದ್ದಿತು. ಏನಾದರೂ ತಾಯಿಯ ಹೀನವೃತ್ತಿಗೆ ಬೀಳಬಾರದೆಂದು ಹಗಲಿರಳೂ ಯೋಚಿಸುತ್ತಿದ್ದಳು. ಆದರೆ ಈ ವಿಚಾರದಲ್ಲಿ ಅವಳಿಗೆ ಸಹಾಯ ಮಾಡುವವರಾರೂ ಇರಲಿಲ್ಲ. ವಾಸುವಿನ ಪರಿಚಯವಾದ ಮೇಲೆ. ಅವಳಿಗೆ ನಿರಾತಂಕವಾಗಿ ಹೋಯಿತು. ಅವನು ತನ್ನ ಭಾಗದ ದೇವರು ಕಳುಹಿದ ದೇವದೂತನೆಂದು ಸರೋಜಳು ನಂಬಿದ್ದಳು. ಇಂತಹ ಮುಗ್ಧ ಹುಡುಗಿಯ ವಿಷಯದಲ್ಲಿ ತಾನು ಹೇಗೆ ವರ್ತಿಸಿದರೆ ಒಳ್ಳೆಯದಾದೀತೆಂಬುದು ವಾಸುವಿಗೆ ಹೊಳೆಯಲಿಲ್ಲ. ಅವನು ವಿವೇಕ ಶೂನ್ಯನಾಗಿ ಕುಳಿತಿದ್ದನು

ಕಂಠಿ ರೂಮಿನ ಬಳಿ ಬಂದಾಗ ಒಳಗೆ ಇನ್ನೂ ದೀಪ ಉರಿಯುತ್ತಿರುವುದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ವಾಸುವು ಏನು

ಮಾಡುತ್ತಿರಬಹುದೆಂದು ಅವನು ಬಾಗಿಲನ್ನು ಮೆಲ್ಲನೆ ನೂಕಿದನು. ವಾಸುವು ತನ್ನ ಚಿಂತೆಯಲ್ಲಿ ಬಾಗಿಲು ಹಾಕುವುದನ್ನೂ ಮರೆತಿದ್ದನು. ಬೆಕ್ಕಿನಂತೆ ಸದ್ದಿಲ್ಲದೆ ಕಂಠಿಯು ಬಂದು ತನ್ನ ಬೆನ್ನ ಬಳಿ ನಿಂತಿರುವುದು ಅವನ ಗಮನಕ್ಕೆ ಬರಲಿಲ್ಲ. ಮೇಜಿನ ಮೇಲೆ ಬಿದ್ದಿದ್ದ, ಹಳದಿ ವರ್ಣದ ಲಗ್ನಪತ್ರಿಕೆ ಅವನ ಗೆಳೆಯನ ಕಣ್ಣಿಗೆ ಬಿದ್ದಿತು. ಕಂಠಿ ಅದನ್ನು ಸ್ವಾಭಾವಿಕವಾದ ಕುತೂಹಲದಿಂದ ತೆಗೆದುಕೊಂಡು ಓದಿದನು. ಅದು ವಾಸುವಿನ ಮದುವೆಯದೆಂದು ತಿಳಿಯಲು ಅವನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಅವನನ್ನು ಗೇಲಿ ಮಾಡಲು, "ಮದುವೆಯೆಂದರೆ ಹೀಗೆ ಮೈಮರೆಯುವ ಮನುಷ್ಯರನ್ನು ನಾನು ಎಲ್ಲಿಯೂ ನೋಡಿಲ್ಲ. ನಿನ್ನನ್ನು ಹೀಗೆಯೇ ಹಿಂದಿನಿಂದ ಯಾರಾದರೂ ಎತ್ತಿಕೊಂಡು ಹೋಗಿದ್ದರೂ ಗೊತ್ತಾಗುತ್ತಿರಲಿಲ್ಲವೆಂದು ತೋರುತ್ತೆ" ಎಂದನು.

ವಾಸುವಿಗೆ ಕೊಂಚ ಹೊತ್ತು ಏನೊಂದುತ್ತರವನ್ನೂ ಕೊಡಲು ಸಾಧ್ಯವಾಗಲಿಲ್ಲ. ಮೊದಲೇ ಕಾಂತಿಹೀನವಾಗಿದ್ದ ಅವನ ಮುಖ ತನ್ನ ಮದುವೆಯ ವಿಚಾರವನ್ನು ಕೇಳಿದ ಮೇಲೆ ಮತ್ತಷ್ಟು ಮ್ಲಾನವಾಯಿತು.

"ಕಂಠಿ, ನಿನಗೆ ಚೆಲ್ಲಾಟ. ನನಗೆ ಪ್ರಾಣಸಂಕಟ"

"ನಿನ್ನ ಪ್ರಾಣಸಂಕಟ ಏನೆಂದು ನನಗೆ ಗೊತ್ತು"

"ಏನಿರಬಹುದೆಂದು ಊಹಿಸುತ್ತಿ ?"

"ಚೆನ್ನಾಗಿಯೂ ತಿಳಿದಿರುವ ವಿಷಯವನ್ನು ಊಹಿಸುವುದೇನು ಬಂತು ?

ನೀನು ಆ ಸರೋಜೆಯನ್ನು ಬಿಡಲಾರದೆ ಒದ್ದಾಡುತ್ತಿದ್ದಿ ಅಲ್ಲವೇ ?"

"................................"

"ಆ ದಿವಸ ನಾನು ಅಷ್ಟು ಬಗೆಯಲ್ಲಿ ಹೇಳಿದ್ದೆ, ಅಲ್ಲಿಗೆ ಹೋಗಬೇಡ ಅಂತ. ನನ್ನ ಮಾತನ್ನು ನೀನು ಕೇಳಲಿಲ್ಲ. ಎಷ್ಟೇ ಆಗಲಿ, ಆ ಕಸಬಿನವರ ಕೈಗೆ ಸಿಕ್ಕಿದರೆ ನಮ್ಮನ್ನು ಪಾಪರು ಮಾಡದೆ ಅವರು ಕಳುಹಿಸುವುದಿಲ್ಲ."

"ಕಂಠಿ, ನಿನ್ನ ಶ್ರೀಮತಿ ಹಾಗಿರಬಹುದು. ಆದರೆ ಸರೋಜ ಈ ಕ್ಷುದ್ರ ಬಂಧನದಲ್ಲಿಯೂ ನಿರ್ಮಲಳು."

"ಅವಳು ನಿರ್ಮಲಳೇ ಇರಬಹುದು. ಆದರೆ ನೀನು ಮೊದಲು ನಿನ್ನ ಸ್ಥಿತಿಯನ್ನು ನೆನಸಿಕೊ. ಅವಳಿಗೋಸ್ಕರ ತಾಯಿಯ ಅಭಿಲಾಷೆಗೆ ವಿರುದ್ಧವಾಗಿ ಈ ಮದುವೆ ಬೇಡವೆಂದುಬಿಡಬೇಕೆಂದು ಯೋಚಿಸುತ್ತಿದ್ದೀಯಲ್ಲವೆ?."

ತನ್ನ ಮನಸ್ಸಿನಲ್ಲಿರುವುದನ್ನು ಕಂಠಿ ಅಷ್ಟು ಸುಲಭವಾಗಿ ಕಂಡುಕೊಂಡದನ್ನು ನೋಡಿ ವಾಸುವಿಗೆ ಅತಿಯಾಗಿ ಆಶ್ಚರ್ಯವಾಯಿತು. ಅವನು ಕುತೂಹಲದಿಂದ,

"ನಿನಗೆ ಮನಃಶಾಸ್ತ್ರವೇನಾದರೂ ಬರುತ್ತದೆಯೆ?" ಎಂದನು.

"ನನಗೆ ಯಾವ ಶಾಸ್ತ್ರವೂ ಬರುವುದಿಲ್ಲ. ಕೇವಲ ಅನುಭವದಿಂದ ಹೇಳುತ್ತೇನೆ ಅಷ್ಟೆ."

"ಹಾಗಾದರೆ ಈ ಸಂದರ್ಭದಲ್ಲಿ ನನ್ನನ್ನು ಏನು ಮಾಡು ಎಂದು ಹೇಳುತ್ತಿ. ನನಗಂತೂ ದಿಕ್ಕೇ ತೋರದ ಹಾಗಾಗಿದೆ."

"ಈಗಲಾದರೂ ನನ್ನ ಮಾತನ್ನು ಕೇಳು. ಆ ಹುಡುಗಿಯ ಸಹವಾಸವನ್ನು ನೀನು ಇನ್ನು ಮುಂದೆ ತೊರೆದುಬಿಡುವುದು ಉತ್ತಮ."

"ಕೆಲಸವನ್ನು ಬಾಯಲ್ಲಿ ಹೇಳುವಷ್ಟು ಸುಲಭವಾಗಿ ಕೈಯಿಂದ ಮಾಡುವುದಕ್ಕಾಗುವುದಿಲ್ಲ ಕಂಠಿ. ಸರೋಜ ನನ್ನನ್ನು ಪೂರಾ ನಂಬಿಬಿಟ್ಟಿದ್ದಾಳೆ."

"ನಿನಗೆ ಮದುವೆಯು ನಿಷ್ಕರ್ಷೆಯಾಗಿರುವುದನ್ನು ತಿಳಿದೂ, ತಿಳಿದೂ ನೀನೇಕೆ ಅವಳೊಡನೆ ಅಷ್ಟು ಸಲಿಗೆಯನ್ನು ಬೆಳೆಸಿದೆ?"

"ಅವಳ ಸರಳತೆ ನನ್ನ ಮನಸ್ಸನ್ನು ಸೆಳೆದುಬಿಟ್ಟಿತು. ಅಷ್ಟು ಮಾತ್ರ ನನ್ನಿಂದ ಹೇಳಲು ಸಾಧ್ಯ."

"ಅವಳ ಸರಳತೆ ಹಾಳಾಯಿತು. ಈಗ ನಿನ್ನ ತಾಯಿಯ ಸ್ಥಿತಿಯನ್ನು ನೆನಸಿಕೊ. ಈ ಹೊಸ ಉದ್ಯೋಗವು ಅವರ ಕಿವಿಗೇನಾದರೂ ಮುಟ್ಟಿದರೆ, ಆಕೆ ಎದೆ ಒಡೆದು ಸಾಯುವುದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ."

ತಟ್ಟನೆ ವಾಸುವಿನ ಕಣ್ಮುಂದೆ ಪ್ರೇಮಮಯಿಯಾದ ಸೀತಕ್ಕನ ಚಿತ್ರ ಬಂದು ನಿಂತಿತು. ಅವನು ಅದನ್ನು ಕಣ್ಣರಳಿಸಿ ನೋಡಹತ್ತಿದನು. ಇನ್ನೊಂದು ಕ್ಷಣದಲ್ಲಿ ಆ ಚಿತ್ರವು ಹೊರಟುಹೋಗಿ ಮತ್ತೊಂದು

ಅದರ ಸ್ಥಾನದಲ್ಲಿ ಬಂದು ನಿಂತಿತು. ಕರುಣಾಮಯರಾದ ಸೀತಕ್ಕ ದುರ್ಗಿಯ ಕ್ರೌರ್ಯವನ್ನು ತಾಳಿದ್ದರು. ಮುಖದಲ್ಲಿ ತಿರಸ್ಕಾರದ ನಗೆ ಮೂಡಿತ್ತು. ಆ ಚಿತ್ರವನ್ನು ವಾಸುವಿನಿಂದ ಹೆಚ್ಚು ಹೊತ್ತು ನೋಡಲು ಸಾಧ್ಯವಾಗಲಿಲ್ಲ. ಅವನು ಹುಚ್ಚನ ಹಾಗೆ

"ಕಂಠಿ, ಹಾಗಾದರೆ ನಾನು ಏನು ಮಾಡಬೇಕೆನ್ನುತ್ತಿ?" ಎಂದು ಅರಚಿಕೊಂಡನು.

"ಅಂದಹಾಗೆ ನಿನ್ನ ರಜೆಯು ಎಂದಿನಿಂದ ಪ್ರಾರಂಭ?"

"ನಾಳಿದ್ದಿನಿಂದ. ಆದರೆ ಮನೆಯವರಿಗೆ ಇನ್ನೂ ಹದಿನೈದು ದಿವಸವಾಗಬೇಕು ಎಂದು ಸುಳ್ಳು ಬರೆದಿದ್ದೇನೆ"

"ಬರೆದಿದ್ದರೆ ಚಿಂತೆಯಿಲ್ಲ. ಇನ್ನೇನಾದರೂ ನೆಪ ಹೇಳಿದರಾಯಿತು. ನೀನು ನಾಳಿದ್ದೇ ಈ ಊರು ಬಿಟ್ಟು ಹೊರಡು."

"ಕಂಠಿ, ಹಾಗೆಯೇ ಮಾಡಿಬಿಡು ಅನ್ನುತ್ತೀಯಾ?"

"ಅಷ್ಟಲ್ಲದೆ ಮತ್ತೇನು. ಬೇಸಗೆಯೆಲ್ಲಾ ಅಲ್ಲಿಯೇ ಕಳೆದು ಹೋಗುತ್ತೆ. ಬರುವಾಗ ಆ ಹುಡುಗಿಯನ್ನೂ ಕರೆತಂದುಬಿಡು. ಬೇಕಿದ್ದರೆ ಆ ವೇಳೆಗೆ ಒಂದು ಮನೆ ನೋಡಿರುತ್ತೇನೆ."

"ಆಮೇಲೆ ಸರೋಜಳ ಗತಿ?"

"ಅವಳ ಗತಿಯನ್ನು ಅವರಮ್ಮ ನೋಡಿಕೊಳ್ಳುತ್ತಾಳೆ."

ವಾಸುವು ಮುಖವನ್ನು ಸಿಂಡರಿಸಿಕೊಂಡು,

"ಹೂಂ, ನೋಡಿಕೊಳ್ಳುತ್ತಾಳೇಕೇ, ಹಾಳು ಭಾವಿಗೆ ನೂಕುತ್ತಾಳೆ" ಎಂದನು.

"ಅವಳು ಏನಾದರೂ ಮಾಡಿಕೊಳ್ಳಲಿ. ಅದು ಅವರ ಹಣೆಯ ಬರೆಹ. ಮೊದಲು ನಿನ್ನ ಪಾಡು ನೀನು ನೋಡಿಕೊ."

ಕಂಠಿಯು ಒರಟೊರಟಾಗಿ ಮಾತನಾಡಿದರೂ ತನ್ನ ಹಿತಕ್ಕೇ ಹಾಗೆ ಹೇಳುತ್ತಾನೆಂದು ವಾಸುವಿಗೆ ಗೊತ್ತು. ಆದಕಾರಣ ಅವನು ಕಂಠಿ ಹೇಳಿದಂತೆ ನಡೆಯುವುದೇ ಉತ್ತಮವೆಂದು ನಿರ್ಧರಿಸಿದನು.

*

ಅಂದು ಶಾಲೆಯ ಕೊನೆಯ ದಿನವೆಂದು ಎಲ್ಲರಿಗೂ ಎಲ್ಲಿಲ್ಲದ ಸಂತೋಷವಾಗಿಹೋಗಿತ್ತು. ಉಪಾಧ್ಯಾಯರೂ, ಹುಡುಗರೂ, ಎಲ್ಲಾ ನಾಳೆಯಿಂದ ಇನ್ನು ಮೂರು ತಿಂಗಳು ಭಯವಿಲ್ಲ ಎಂದು ಹೊಸ ಹುಮ್ಮಸ್ಸಿನಿಂದ ಹಾರಾಡುತ್ತಿದ್ದರು. ಆದರೆ ವಾಸುವಿಗೆ ಮಾತ್ರ ಯಾವೊಂದು ಬಗೆಯ ಉತ್ಸಾಹವೂ ಇರಲಿಲ್ಲ ಆ ದಿವಸ ಕೆಲಸವನ್ನು ಹೇಗೆ ಮಾಡಿದನೋ, ಜೊತೆಯವರಿಗೂ ಹೇಳದೆ ಮಂಕನ ಹಾಗೆ ಒಬ್ಬನೇ ರೂಮಿಗೆ ಬಂದುಬಿಟ್ಟನು. ನಾಳೆಯ ಬೆಳಗ್ಗೆಯೆಂದರೆ ರೈಲಿಗೆ ಹೊರಡಬೇಕಾಗಿತ್ತು. ಆದರೆ ಮನಸ್ಸು ಸ್ವಸ್ಥವಿರಲಿಲ್ಲ. ತನ್ನ ಬಟ್ಟೆಬರೆಗಳನ್ನು ಜೋಡಿಸಿಟ್ಟುಕೊಳ್ಳಬೇಕೆಂದು ಪ್ರಯತ್ನಪಟ್ಟನು. ಅವನಿಂದ ಅದೂ ಸಾಧ್ಯವಾಗಲಿಲ್ಲ. ಹೇಳದೆ ಕೇಳದೆ ಸರೋಜೆಯಿಂದ ಅಪರೀಕ್ಷಿತವಾಗಿ ದೂರ ಹೋಗುತ್ತಿರುವೆನಲ್ಲಾ ಎಂದು ಮನಸ್ಸು ಕೊರೆಯುತ್ತಿತ್ತು. ಹಾಗೆ ಹೇಳದೆ ತಾನು ಹೊರಟುಹೋದರೆ, ಅನಂತರ ವಿಷಯ ಗೊತ್ತಾಗಲು ಸರೋಜ ತನ್ನ ವಿಚಾರದಲ್ಲಿ ಎಷ್ಟು ಕೀಳಾದ ಭಾವನೆಯನ್ನು ತಂದುಕೊಳ್ಳಬಹುದು? ವಾಸುವು ಮತ್ತೆ ಆಲೋಚಿಸಿದನು. ಹಾಗೆ ಹೇಡಿಯ ಹಾಗೆ ಓಡಿಹೋಗುವ ಬದಲು, ಅವಳಲ್ಲಿಗೇ ಹೋಗಿ ನಿಜಸ್ಥಿತಿಯನ್ನು ಬಿಚ್ಚಿ ಹೇಳಿ, ಕ್ಷಮೆ ಬೇಡಿ ಬರುವುದೇ ಉತ್ತಮ ಮಾರ್ಗವೆಂದು ತೋರಿತು. ಸದ್ಯಕ್ಕೆ ಅಲ್ಲಿಗೆ ಹೋಗದಂತೆ ಅಡ್ಡಿ ಮಾಡಲು ಕಂಠಿಯೂ ಇರಲಿಲ್ಲ. ವಾಸುವು ಬಿಟ್ಟಿದ್ದನ್ನು ಬಿಟ್ಟಹಾಗೆಯೇ ಹಾಕಿ ಶ್ರೀಮತಿಯ ಮನೆಗೆ ಹೊರಟನು.

ವಾಸುವು ಮೊದಲು ತನ್ನ ಮನೆಗೆ ಬರಲು ಪ್ರಾರಂಭಿಸಿದಾಗ ಶ್ರೀಮತಿ ಒಂದು ಬಗೆಯ ತೃಪ್ತಿಯನ್ನೇ ತೋರಿದ್ದಳು. ಅವನ ಸಹಜವಾದ ಸೌಂದರ್ಯ ಅವಳ ಮನಸ್ಸನ್ನು ಸೋಲಿಸಿಬಿಟ್ಟಿತ್ತು. ಅಲ್ಲದೆ ಅವಳು ವಾಸುವಿಗೆ ಮೈಸೂರಿನಲ್ಲಿ ಮನೆ ಗದ್ದೆಗಳಿರುವ ವಿಚಾರವನ್ನೂ ಕೇಳಿ ತಿಳಿದಿದ್ದಳು. ಅಂತೂ ಈ ಬಗೆಯ ಗುಣವಿಶೇಷಗಳಿಂದ ವಾಸುವಿಗೆ ಸರೋಜೆಯೊಡನೆ ಮಾತುಕತೆಯಾಡುವ ಸೌಲಭ್ಯ ದೊರಕಿತ್ತು. . ಆದರೆ ಎಂದಿನಿಂದ ಸರೋಜ ತಾನು ಹೇಳಿದುದಕ್ಕೆಲ್ಲಾ ಪ್ರತ್ಯಕ್ಷ ಪ್ರತಿಭಟನೆ

ಯನ್ನು ತೋರುತ್ತಾ ಬಂದಳೋ, ಅಂದಿನಿಂದ ಶ್ರೀಮತಿಗೆ ಅವನೆಂದರೆ ಆಗುತ್ತಿರಲಿಲ್ಲ. ತನ್ನ ಮಗಳ ಬುದ್ಧಿಯನ್ನು ಕೆಡಿಸುತ್ತಿರುವನೆಂದೂ, ಇನ್ನು ಮುಂದೆ ಹೇಗಾದರೂ ಮಾಡಿ ಅವನ ಮನೆ ಗದ್ದೆಗಳನ್ನು ಕಸಿದುಕೊಂಡು ಓಡಿಸಿಬಿಡಬೇಕೆಂದೂ ಯೋಚಿಸುತ್ತಿದ್ದಳು. ಹಾಗೆ ತನ್ನ ಉದ್ದೇಶವನ್ನು ಸಾಧಿಸಬೇಕಾದರೆ ಸಾಧ್ಯವಾದಷ್ಟುಮಟ್ಟಿಗೆ ವಾಸುವನ್ನು ಸರೋಜಳಿಂದ ದೂರಮಾಡುವುದೇ ಒಳ್ಳೆಯದೆಂದು ಅವಳಿಗೆ ಹೊಳೆಯಿತು. ಸರೋಜಳಿಗಾಗಿ ವಾಸುವು ಏನನ್ನು ಬೇಕಾದರೂ ಮಾಡುವನೆಂಬುದನ್ನು ಅವಳು ಕೊಂಚ ಕಾಲದಲ್ಲಿಯೇ ಗ್ರಹಿಸಿಬಿಟ್ಟಿದ್ದಳು.

ಅಂದು ವಾಸುವು ನಿಜ ಪರಿಸ್ಥಿತಿಯನ್ನು ತಿಳಿಸಿ ಸರೋಜಳನ್ನು ಸಮಾಧಾನ ಮಾಡುವುದು ಹೇಗೆಂದು ಚಿಂತಿಸುತ್ತಾ ಅವಳ ಮನೆಗೆ ಹೋದಾಗ ಶ್ರೀಮತಿಯು ತಟ್ಟನೆ ಇದಿರುಬಂದಳು.

"ಸರೋಜಾಗೆ ಇವತ್ತು ವೈಹುಷಾರಿಲ್ಲ. ಏನೋ ತಲೆಯನೋವು ಅಂತ ಮಲಗಿಬಿಟ್ಟಿದ್ದಾಳೆ" ಎಂದು ಹೇಳಿದಳು.

ವಾಸುವಿಗೆ ಮುಖಕ್ಕೆ ಹೊಡೆದ ಹಾಗಾಯಿತು. ಆದರೂ ಚೇತರಿಸಿಕೊಂಡು, "ನಾಳೆ ಊರಿಗೆ ಹೋಗುತ್ತೇನೆ. ಹೇಳಿ ಹೋಗೋಣ ಎಂದು ಬಂದೆ" ಎಂದನು.

"ಓಹೋ! ಮತ್ತೆ ಬರುವುದು ಯಾವಾಗ?"

"ಅದೇ ರಜ ಕಳೆದ ಮೇಲೆ"

"ಬಹಳ ಒಳ್ಳೆಯದು ಹೇಳ್ತೀನೆ. ಈಗ ತಾನೆ ಕೊಂಚ ನಿದ್ದೆ ಹತ್ತಿರುವಹಾಗಿದೆ. ಹ್ಹಿಹ್ಹಿಹ್ಹಿ" ಎಂದು ನಕ್ಕು ಶ್ರೀಮತಿ ಹೊರಟು ಹೋದಳು.

ವಾಸುವಿಗೆ ಬೊಕ್ಕೆಯ ಮೇಲೆ ಬರೆಯನ್ನೆಳೆದ ಹಾಗಾಯಿತು. ಅವನ ಹೃದಯ ಮೊದಲೇ ನೊಂದಿತ್ತು. ಅವನ ಭಾಗಕ್ಕೆ ಕ್ರೂರವಾಗಿದ್ದ ಆ ದಿನವನ್ನು ಹಳಿಯುತ್ತಾ ವಾಸುವು ಬೀದಿಗೆ ಬಂದನು. ಅವನಿಂದ ತಲೆಯೆತ್ತಿ ಮೇಲೊಮ್ಮೆ ನೋಡದಿರಲಾಗಲಿಲ್ಲ. ಸರೋಜಳ ಕೊಠಡಿಯ ಕಿಟಕಿ ವಿಶಾಲವಾಗಿ ತೆರೆದಿತ್ತು. ವಾಸುವು ಕೇವಲ ಚಿತ್ತ ಚಾಪಲ್ಯದಿಂದ 'ಅವಳೊಮ್ಮೆ ಯಾತಕ್ಕಾದರೂ ಬಗ್ಗಿ ನೋಡಬಾರದೆ' ಎಂದುಕೊಂಡನು.

ಅವನು ಆ ರೀತಿ ಹೇಳಿಕೊಂಡು ಮುಗಿಸುವುದರೊಳಗೇ ಸರೋಜ ಕಿತ್ತಲೆ ಹಣ್ಣಿನ ಸಿಪ್ಪೆಯನ್ನು ಎಸೆಯಲು ಕಿಟಕಿಯ ಬಳಿ ಬಂದಳು. ಮಂಕಾಗಿ ಮೇಲೆ ನೋಡುತ್ತಾ ನಿಂತಿರುವ ವಾಸುವನ್ನು ನೋಡಿ ಅವಳಿಂದ ನಗು ತಡೆಯಲಾಗಲಿಲ್ಲ.

ತನ್ನ ಮಾತಿಗೆ ಬೆಲೆಯೇ ಇಲ್ಲದ ಹಾಗೆ ಮಗಳು ವಾಸುವನ್ನು ಮತ್ತೆ ತನ್ನೊಡನೆ ಕರೆದುಕೊಂಡು ಹೋಗುತ್ತಿರುವುದನ್ನು ನೋಡಿ ಶ್ರೀಮತಿಯು ಕಿಡಿಕಿಡಿಯಾದಳು. ಆದರೂ ಸಹನೆಯನ್ನು ತಂದು ಕೊಂಡು, "ನಾಳೆ ಊರಿಗೆ ಹೊರಟುಹೋಗಲಿ. ಆಮೇಲೆ ನಿನ್ನನ್ನು ನೋಡಿಕೊಳ್ಳುತ್ತೇನೆ" ಎಂದು ಮನದಲ್ಲಿಯೇ ಸಮಾಧಾನ ಮಾಡಿ ಕೊಂಡಳು.

ವಾಸುವಿನ ಕಾಂತಿಹೀನವಾದ ಮುಖವನ್ನು ನೋಡಿ ಸರೋಜಳಿಗೆ ತುಂಬ ಗಾಬರಿಯಾಯಿತು. ಅವನಿಗೆ ಏನೋ ದೇಹಾಲಸ್ಯವಾಗಿರ ಬೇಕೆಂದು,

"ಯಾಕೆ ತುಂಬ ಸಪ್ಪೆಗಿದ್ದೀರಲ್ಲಾ, ಮೈಹುಷಾರಿಲ್ಲವೆ ?" ಎಂದು ಕೇಳಿದಳು. ಅವಳಿಗೆ ಹಿಂದಿನ ಘಟನೆಯು ನಿಜವಾಗಿಯೂ ತಿಳಿದಿರಲಿಲ್ಲ.

"ಸಪ್ಪೆಯಾಗುವ ಹಾಗೆ ಮಾಡಿ, ಯಾತಕ್ಕೆ ಎಂದು ಕೇಳು ತ್ತೀಯಲ್ಲ ?"

"ಈ ದಿವಸಕ್ಕೆಲ್ಲಾ ನಿಮ್ಮನ್ನು ನಾನು ನೋಡುತ್ತಿರುವುದು ಇದೇ ಮೊದಲು. ಆಡಿರುವುದೂ ಒಂದೇ ಮಾತು. ಅಷ್ಟರಲ್ಲಿ ಸಪ್ಪೆಯಾಗುವ ಹಾಗೆ ಏನು ಮಾಡಿದ್ದೇನೆ ?"

"ನೀನು ಮಾಡದೆ ಇರಬಹುದು. ಆದರೆ ನಿಮ್ಮ ಮನೆಯವರು ಇನ್ಯಾರೋ ಹಾಗೆ ಮಾಡಿದರು. ಸರೋಜ, ನಿಜವಾಗಿಯೂ ಹೇಳು. ಈ ದಿವಸ ನಿನಗೆ ತಲೆ ನೋವು ಬಂದಿತ್ತೆ?"

ಸರೋಜಳಿಗೆ ಬಹಳ ಆಶ್ಚರ್ಯವಾಯಿತು. ಅಂದು ಅವಳು ಎಂದಿಗಿಂತ ಬಹಳ ಲವಲವಿಕೆಯಿಂದ ಇದ್ದಳು. ಹಾಗೆ ಸುಳ್ಳು ಯಾರು ಹೇಳಿರಬಹುದು, ಎನಿಸಿತು.

"ನಿಮಗೆ ಯಾರು ಹಾಗೆ ಹೇಳಿದರು ?"

"ನಿನ್ನ ತಾಯಿ. ಒಂದೆರಡು ಮಾತು ಹೇಳಿ ಹೋಗುತ್ತೇನೇ ಎಂದರೂ ಒಳಗೆ ಬರಲು ಅವಕಾಶ ಕೊಡಲಿಲ್ಲ, ಅವಳಿಗೆ ತುಂಬಾ ಆಯಾಸವಾಗಿದೆಯೆಂದು ಹೇಳಿಬಿಟ್ಟರು."

ತಾಯಿಯು ವಾಸುವಿಗೆ ತನ್ನ ವಿಚಾರದಲ್ಲಿ ಹೀಗೆ ಸುಳ್ಳು ಹೇಳಲು ಕಾರಣವೇನೆಂಬುದು ಅವರಿಗೆ ಸರಿಯಾಗಿ ಹೊಳೆಯದೆ ಹೋದರೂ, ಶ್ರೀಮತಿಯು ಇತ್ತೀಚೆಗೆ ಅವನನ್ನು ಕಂಡರೆ ಬೇಸರಪಡುವ ವಿಷಯವು ನೆನಪಿಗೆ ಒಂದಿತು. ಕೊಂಚವಾದ ಅಸಮಧಾನಕ್ಕೆಲ್ಲಾ ತಾಯಿಯು ಇಷ್ಟು ಕ್ರೂರವಾಗಿ ವರ್ತಿಸಿದುದನ್ನು ಕಂಡು ಸರೋಜೆಗೆ ತುಂಬ ಖೇದವಾಯಿತು. ಅವಳು ಹೇಗಾದರೂ ವಾಸುವನ್ನು ಸಮಾಧಾನ ಮಾಡಬೇಕೆಂದು,

"ಒಂದೊಂದು ವೇಳೆ ವಕ್ರವಾಗಿ ಆಡುವುದು ದೊಡ್ಡವರ ಸ್ವಭಾವ. ಅದನ್ನೇನು ಮನಸ್ಸಿಗೆ ಹಚ್ಚಿಕೊಳ್ಳುವುದು, ಮರೆತು ಬಿಡಿ" ಎಂದಳು.

ವಾಸುವು ಆ ಘಟನೆಯನ್ನು ಮರತರೆ ಆ ದಿವಸದ ಜುಗುಪ್ಸೆಯು ಭಾಗವೆಲ್ಲಾ ಕಳೆದಹಾಗೆ ಎಂದು ಅವಳು ಭಾವಿಸಿದ್ದಳು. ಇನ್ನೂ ಹೆಚ್ಚಿನ ಕ್ಲೇಶವು ತನ್ನನ್ನು ಇದಿರು ನೋಡುತ್ತಿದೆ ಎಂದು ಸರೋಜ ಭಾವಿಸಲಿಲ್ಲ.

"ಸರೋಜ, ಈ ದಿವಸ ನಿನ್ನೊಡನೆ ಸಂತೋಷವಾಗಿ ಕಾಲ ಕಳೆಯಲು ಬಂದಿಲ್ಲ. ನಿನ್ನ ಕಡೆಯ ದರ್ಶನವನ್ನು ತೆಗೆದುಕೊಳ್ಳಲು ಬಂದಿದ್ದೇನೆ" ಎಂದು ವಾಸುವು ತನ್ನ ಜೇಬಿನಲ್ಲಿದ್ದ ಸೀತಮ್ಮನವರ ಪತ್ರವನ್ನೂ, ಲಗ್ನಪತ್ರಿಕೆಯನ್ನೂ ಸರೋಜೆಯ ಕೈಗಿತ್ತನು.

ಸರೋಜ ಕಾಗದವನ್ನು ಮೊದಲು ನಿಧಾನವಾಗಿ ಓದಿದಳು. ಆಮೇಲೆ ಲಗ್ನಪತ್ರಿಕೆಯನ್ನು ಪರಿಶೀಲಿಸಿದಳು. ಮತ್ತೆ ಕಾಗದವನ್ನು ನೋಡುವ ಹಾಗಾಯಿತು. ತಿರುಗಿ ಅದನ್ನೇ ಇನ್ನೂ ಹೆಚ್ಚಿನ ಸಾವಧಾನ ದಿಂದ ನೋಡಿದಳು. ಅವಳು ಕಾಗದವನ್ನು ಓದಬೇಕಾದರೆ ಮುಖದಲ್ಲಿ ಯಾವ ಭಾವಗಳುಂಟಾಗುವುವೋ ಎಂದು ವಾಸುವು ಸರೋಜೆಯ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದನು. ಆದರೆ ಸರೋಜಳ ಮುಖದಲ್ಲಿ ಯಾವುದೊಂದು ಬಗೆಯ ಬದಲಾವಣೆಯೂ ಕಾಣಿಸಲಿಲ್ಲ. ಪತ್ರವನ್ನು ಪೂರ್ಣವಾಗಿ ಓದಿ ಮುಗಿಸಿದ ಮೇಲೆ ಅವಳು, ಸೀಳವಾದ ನಿಟ್ಟುಸಿ ರೊಂದನ್ನು ಬಿಡುತ್ತಾ ಹೇಳಿದಳು.

"ಈ ತೊಂದರೆಯು ಎಂದಾದರೊಂದು ದಿನ ಬರಬಹುದು ಎಂದು ಯೋಚಿಸಿದ್ದೆ. ಆದರೆ ಇಷ್ಟು ಬೇಗ ಎಂದು ತಿಳಿದಿರಲಿಲ್ಲ."

"ಏನು, ನನ್ನ ಮದುವೆ ಇನ್ನಾರೊಡನೆಯಾದರೂ ಆಗಿಬಿಡಬಹುದೆಂದು ಯೋಚಿಸಿದ್ದೆಯಾ!"

"ಹೌದು, ನಮ್ಮ ನಿಮ್ಮಲ್ಲಿ ಎಷ್ಟು ಪರಸ್ಪರ ಪ್ರೇಮವಿದ್ದರೂ ಬ್ರಾಹ್ಮಣನಾಗಿ ಹುಟ್ಟಿ ನೀವು ನನ್ನನ್ನು ಮದುವೆಯಾಗುವುದು ಅಸಾಧ್ಯವೆಂದು ಗೊತ್ತಿತ್ತು. ನನ್ನ ಗುಣ ಹೇಗಾದರೂ ಇರಲಿ. ಒಟ್ಟಿನಲ್ಲಿ ಹೇಳುವುದಾದರೆ ನಾನು ವೇಶ್ಯೆಯ ಮಗಳು."

"ನನ್ನ ಮನಸ್ಸಿಗೆ ನೀನೆಂದಿಗೂ ಹಾಗೆ ಕಾಣಿಸುವುದಿಲ್ಲ ಸರೋಜ."

"ನಿಮಗೆ ನಾನು ಸರಿ ಎಂದು ತೋರಬಹುದು. ಆದರೆ ಸಮಾಜ ಕೇಳುವುದಿಲ್ಲ, ನನ್ನನ್ನೇ ನೀವು ಮದುವೆಯಾಗಿದ್ದಿದ್ದರೆ ಆಗ ಸಮಾಜದಲ್ಲಿ ನಿಮ್ಮ ಗತಿ ಏನಾಗುತ್ತಿತ್ತು ಗೊತ್ತೆ ?"

"ಆ ಸಮಾಜದ ತಂಟೆ ನನಗೆ ಬೇಡ. ಅದು ಹಾಳಾಗಿ ಹೋಗಲಿ."

"ಸುಮ್ಮನೆ ಬಾಯಲ್ಲಿ ಹೇಳಿ ಬಿಟ್ಟರೆ ಆಗುತ್ತದೆಯೆ."

ವಾಸುವಿಗೆ ಮುಂದೇನು ಹೇಳಬೇಕೆಂಬುದು ತಿಳಿಯಲಿಲ್ಲ. ಅವನು ನಿರಾಶೆಯಿಂದ,

"ಇಂತಹ ಸಂದರ್ಭ ಬಂದರೆ ಏನು ಮಾಡಬೇಕೆಂದು ಯೋಚಿಸಿದ್ದೆ? ಕಷ್ಟ ಬರಬಹುದು ಎಂದು ಊಹಿಸಿದ ಮೇಲೆ ಅದರ ಬಿಡುಗಡೆ ಹೇಗೆ ಎನ್ನುವುದನ್ನೂ ಯೋಚಿಸಿರಬೇಕು ತಾನೆ?" ಎಂದನು.

"ನಿಮ್ಮನ್ನು ನೋಡಿ ಸಂತೋಷಪಡುವುದನ್ನು ಬಿಟ್ಟು ನನ್ನಿಂದ ಇನ್ನೇನು ಮಾಡಲು ಸಾಧ್ಯ. ಮನೆಯಲ್ಲಿ ಅವಕಾಶ ದೊರೆಯುವ ಹಾಗಿದ್ದಿದ್ದರೆ ಮದುವೆಗೇ ಬಂದು ಆನಂದ ಪಡುತ್ತಿದ್ದೆ."

ಸರೋಜ ತನ್ನಲ್ಲಿದ್ದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಅಳುವನ್ನು ತಡೆಯುತ್ತಿದ್ದಳು. ಆದರೆ ಅವಳ ಹೃದಯದಲ್ಲಿ ಎಂತಹ ವೇದನೆಯು ಹಿಂಸೆ ಕೊಡುತ್ತಿದೆ ಎನ್ನುವುದನ್ನು ವಾಸುವು ತಿಳಿಯದಿರಲಿಲ್ಲ.

"ಸರೋಜ ನಿನ್ನನ್ನು ನೋಡಿದರೆ ನನಗೆ ಒಂದು ಬಗೆಯ ದಿಗಿಲಾಗುತ್ತಿದೆ."

"ಏಕೆ, ಈಗ ಹೀಗೆ ಹೇಳಿ ಆಮೇಲೆ ಪ್ರಾಣ ಬಿಟ್ಟುಬಿಡುತ್ತೇನೆಂದೆ? ಹಾಗೆಂದಿಗೂ ಇಲ್ಲ. ನನಗೆ ಸಾಯುವಂತಹುದೇನಾಗಿದೆ."

ಸರೋಜ ನಗಲು ಹೋದಳು. ಆದರೆ ನಗು ಬರಲಿಲ್ಲ. ಅದರ ಬದಲು ಅದುಮಿ ಹಿಡಿದಿದ್ದ ದುಃಖ ಉಕ್ಕೇರಿ ಬಂದು ಜೋರಾಗಿ ಅತ್ತುಬಿಟ್ಟಳು.

"ಸಂತೋಷ ಎಂದು ಬಾಯಲ್ಲಿ ಹೇಳುತ್ತಿ. ಹಾಗಾದರೆ ಈ ಅಳು ಏಕೆ?"

"ಅಳುವು ದುಃಖವಾದರೆ ಮಾತ್ರ ಬರುವುದಿಲ್ಲ. ಒಂದೊಂದು ಸಲ ಆನಂದವು ವಿಪರೀತವಾದರೆ ಬರುತ್ತದೆ."

"ನೀನೆಷ್ಟು ಹೇಳಿದರೂ ನನಗೆ ಒಪ್ಪಿಗೆ ಇಲ್ಲ. ನಿಜವಾಗಿಯೂ ಮುಂದೆ ಏನು ಮಾಡಬೇಕೆಂದು ಯೋಚಿಸಿದ್ದಿ?" ವಾಸುವು ಕಾತರನಾಗಿ ಕೇಳಿದನು.

"ಮಾಡುವುದೇನು. ಹೀಗೆಯೇ ಸಂಗೀತವನ್ನು ಅಭ್ಯಾಸಮಾಡುವುದರಲ್ಲಿ ಕಾಲವನ್ನು ಕಳೆಯುವುದು. ಅಂದಹಾಗೆ ನಿಮ್ಮದೊಂದು ಫೋಟೋವನ್ನು ಕೊಟ್ಟು ಹೋಗಿ. ನಿಮ್ಮನ್ನು ನೋಡಬೇಕು ಎಂದು ಆಸೆ ಆದಾಗಲೆಲ್ಲಾ ಅದನ್ನು ನೋಡಿಕೊಳ್ಳುತ್ತೇನೆ."

"ಸರೋಜಾ............"

ಸರೋಜ ತಲೆಯೆತ್ತಿ ವಾಸುವಿನ ಮುಖವನ್ನು ನೋಡಿದಳು ಇಬ್ಬರ ಕಣ್ಣಲ್ಲಿಯೂ ಹನಿಮೂಡಿತ್ತು.

"ಮತ್ತೆ ಯಾರನ್ನಾದರೂ ನೀನು ಮದುವೆಯಾಗಬಾರದೆ?" ವಾಸುವು ಅತ್ಯಂತ ದೀನತೆಯಿಂದ ಕೇಳಿದನು.

"ಈ ಜನ್ಮದಲ್ಲಿ ಸಾಧ್ಯವಿಲ್ಲ."

ಸರೋಜ ಮ್ಲಾನವಾದ ನಗೆಯನ್ನು ನಕ್ಕಳು. ತನ್ನ ವಿಷಯದಲ್ಲಿ ಇಷ್ಟೊಂದು ಪ್ರೇಮವಿಟ್ಟಿರುವ ಆ ಮುಗ್ಧ ಸರೋಜಳಿಗೆ ಏನು ಪ್ರತಿ ಉಪಕಾರ ಮಾಡಬೇಕೆಂಬುದು ವಾಸುವಿಗೆ ಸ್ವಲ್ಪ ಹೊತ್ತು ಹೊಳೆಯಲಿಲ್ಲ.

ಅವನ ಬಾಯಿಂದ "ಸರೋಜ, ನೀನು ನಿಜವಾಗಿಯೂ ದೇವತೆ" ಎಂಬ ನುಡಿಗಳು ಹೊರಟುವು. ಕ್ಷಣಮಾತ್ರದಲ್ಲಿ ಅವಳು ಅವನ ಬಾಹುಗಳಲ್ಲಿ ಸೆರೆಯಾಗಿದ್ದಳು.

# ೧೭

ವಾಸುವು ಮೈಲಾಪುರದಿಂದ ಹೊರಟವನು ಮೈಸೂರಿನಲ್ಲಿ ಯಾರೂ ಇರಲಿಲ್ಲವಾಗಿ, ನೆಟ್ಟಗೆ ನಂಜುಂಡಳ್ಳಿಗೇ ಬಂದನು. ನಾಲ್ಕು ತಿಂಗಳಿಂದ ದೂರನಾಗಿದ್ದ ಮಗನ ಮುಖವನ್ನು ನೋಡಿ ಸೀತಮ್ಮನವರಿಗೆ ತುಂಬಾ ಆನಂದವಾಯಿತು. ಮಗನು ಕಾಣದ ಊರನ್ನು ಒಗ್ಗಿಸಿಕೊಂಡಿರುವನೋ ಇಲ್ಲವೋ ಎಂದು ಅವರು ಹಗಲಿರುಳು ಯೋಚಿಸುತ್ತಿದ್ದರು. ಅವನ ಮುಖವನ್ನು ನೋಡಿದ ಮೇಲೆ ಅವರಿಗೆ ಹಾಗೇನೂ ಇಲ್ಲವೆನಿಸಿತು.

ವಾಸುವು ಈಗ ಮೊದಲಿನ ಹಾಗಿರಲಿಲ್ಲ ನಡೆ, ನುಡಿ ಎಲ್ಲದರಲ್ಲೂ ತಕ್ಕಮಟ್ಟಿಗೆ ಬದಲಾಯಿಸಿಬಿಟ್ಟಿದ್ದನು. ಅವನ ತಲೆಯ ಜುಟ್ಟು ಮಾಯವಾಗಿತ್ತು. ಎಡಗೈಗೆ ಲಕ್ಷಣವಾದ ಗಡಿಯಾರ ಬಂದಿತ್ತು. ಹಿಂದೆ ಇದ್ದ ಕೊಳೆಯ ಟೋಪಿಯ ಸ್ಥಳದಲ್ಲಿ ಹ್ಯಾಟು ಬಂದಿತ್ತು. ಬಟ್ಟೆ ಬರೆಗಳ ವಿಷಯದಲ್ಲೂ ಇದೇ ಬಗೆಯ ಮಾರ್ಪಾಡು ಎಂದು ಹೇಳಬಹುದು. ಇವನ್ನೆಲ್ಲಾ ನೋಡಿದ ಮೇಲೆ, ಅನೇಕ ಬಾರಿ ಮಗನು ಸಂಪಾದಿಸುತ್ತಿರುವ ದುಡ್ಡನ್ನು ಏನು ಮಾಡುತ್ತಿರಬಹುದು ಎಂದು ಯೋಚಿಸುತ್ತಿದ್ದ ಸೀತಕ್ಕನಿಗೆ ಅವನು ನಿಜವಾಗಿಯೂ ಏನು ಮಾಡುತ್ತಿದ್ದನೆಂಬುದು ಹೊಳೆಯಿತು. ಹಾಗೆಯೇ ಹೀಗೆ ದುಂದುಗಾರಿಕೆ ಕಲಿತರೆ ಈಗ ಪರವಾಗಿಲ್ಲವಾದರೂ ಮುಂದೆ ಕಷ್ಟವೆನಿಸಿತು. ಆದರೆ ಬುದ್ಧಿ ಹೇಳಲು ಸಮಯವು ಸರಿಯಾದುದಲ್ಲವೆಂದು ಸೀತಕ್ಕ ಸುಮ್ಮನಾಗಿ ಹೋದರು.

ಮಗನ ವಿಷಯದಲ್ಲಿ ಸೀತಮ್ಮನವರು ಈ ಬಗೆಯಲ್ಲಿ ಆತಂಕಪಡುತ್ತಿದ್ದರೆ, ಅತ್ತ ಅತ್ತೆಯಾಗುವವಳಿದ್ದ ಸಾವಿತ್ರಿಗೆ ವಾಸುವನ್ನು ನೋಡಿ ಹಿಡಿಸಲಾರದಷ್ಟು ಆನಂದವಾಗಿಹೋಗಿತ್ತು. ಇಷ್ಟು ಜನ ಹೆಣ್ಣು ಮಕ್ಕಳ ಮದುವೆಮಾಡಿದುದಕ್ಕೆ ಕ್ರಾಪು ಬಿಟ್ಟು, ಇಂಗ್ಲೀಷು ಮಾತಾಡುವ ಒಬ್ಬ ಅಳಿಯನಾದರೂ ಸಿಕ್ಕಿದನಲ್ಲಾ ಎಂದು ಅವಳು ಬಹಳ ಸಂತೋಷಪಟ್ಟಳು.

ಅಳಿಯನನ್ನು ಮರೆಯಲ್ಲಿ ನಿಂತು ಎಷ್ಟು ನೋಡಿದರೂ ಸಾವಿತ್ರಿಗೆ ತೃಪ್ತಿಯಾಗುತ್ತಿರಲಿಲ್ಲ. ಮನಸ್ಸಿನಲ್ಲಿಯೇ ಇವನ ಕೈ

ಹಿಡಿಯಲು ಪಾರ್ವತಿಯು ಪೂರ್ತಿಯಾಗಿ ಪುಣ್ಯ ಮಾಡಿರಬೇಕೆಂದು ಕೊಳ್ಳುತ್ತಿದ್ದಳು. ಮೊದಲಿನಿಂದಲೂ ಪರಿಚಯಸ್ಥರಾದ ಹಲವರಿಗೆ ಸೀತಮ್ಮನವರು ಈ ಸಂಬಂಧಕ್ಕೆ ಒಪ್ಪಿದ್ದು ತುಂಬ ಆಶ್ಚರ್ಯಕರ ವಾದ ವಿಷಯವಾಗಿಹೋಗಿತ್ತು. ಪಾರ್ವತಿಯ ಹೆಮ್ಮೆಯಂತೂ ಹೇಳತೀರದು. ಹಳ್ಳಿಯ ಹುಡುಗಿಯಾದರೂ ವಯಸ್ಸಿಗೆ ಬಂದುದರಿಂದ ವಾಸುವಿಗೆ ಅವಳು ಅಷ್ಟಾಗಿ ನಾಚುತ್ತಿರಲಿಲ್ಲ. ಅವನು ಒಂದು ಮಾತಾಡಿಸಿದರೆ ಇವಳು ಹತ್ತು ಮಾತಾಡಿಬಿಡುತ್ತಿದ್ದಳು. ಅವನು ಬಂದಾಗಿನಿಂದ ಅವನ ಬಟ್ಟೆಬರೆಗಳನ್ನು ಮತ್ತಾರಿಗೂ ಬಿಡದೆ ತಾನೇ ಒಗೆಯುತ್ತಿದ್ದಳು. ಸಾವಿತ್ರಿಯು ನೋಡಿದವರು ನಕ್ಕಾರು ಬೇಡವೆಂದು ಗದರಿಸಿದರೂ ಕೇಳುತ್ತಿರಲಿಲ್ಲ.

ಮದುವೆಯ ದಿನಗಳು ಓಡೋಡಿಬಂದುವು. ವೆಂಕಟಪತಯ್ಯನಿಗೆ ಕೊಂಚವೂ ಬಿಡುವಿರಲಿಲ್ಲ. ಮದುವೆಯನ್ನು ಎಲ್ಲಿ ನಡಸಬೇಕೆಂದು ತೋರದೆ ಅವನು ತುಂಬ ಪೇಚಾಡುತ್ತಿದ್ದನು. ಸೀತಮ್ಮನವರಿಗೇನೋ ತಮ್ಮ ಮನೆ ಬಾಗಿಲಲ್ಲೇ ಆದರೆ ಚೆನ್ನು ಎಂದಿತ್ತು. ಅದಕ್ಕಾಗಿ ಅವರು ಅಣ್ಣನನ್ನು ಒಂದು ದಿವಸ ಕೇಳಿ ನೋಡಿದರು.

"ಈ ಊರಿನಲ್ಲಿ ನೀನು ಮದುವೆ ಮಾಡಿ ಪೂರೈಸುವ ಹಾಗಿಲ್ಲ. ನೋಡುತ್ತಾ ಹೋದರೆ ಊರೆಲ್ಲಾ ಬಳಗವೇ ಆಗುತ್ತೆ. ಒಬ್ಬರನ್ನು ಕರೆದರೆ ಎಲ್ಲರನ್ನೂ ಕರೆಯಬೇಕು. ಇಲ್ಲವೇ ಯಾರೂ ಬೇಡವೆಂದು ಬಿಡುವುದಕ್ಕೂ ಸಾಧ್ಯವಿಲ್ಲ. ಏನಿಲ್ಲಾ ಎಂದರೂ ಧಾರೆಯ ದಿನ ತಾಂಬೂಲಕ್ಕೆ, ನಾಗೋಲಿಯ ದಿನ ಊಟಕ್ಕೆ ಕರೆಯಬೇಕಾಗುತ್ತೆ."

"ಸರಿ, ನೀನು ಹೇಳಿದ ಹಾಗೆ ಅಷ್ಟೆಲ್ಲಾ ಮಾಡಿದರೆತಾನೇ ಆಕ್ಷೇಪಣೆ ಅನ್ನುವುದು ನಿಲ್ಲುತ್ತೆಯೆ. ಅನ್ನುವವರು ಏನಾದರೂ ಅಂದೇ ಅನ್ನುತ್ತಾರೆ."

"ಅದಕ್ಕೇ ನಾನು ಹೇಳುವುದು, ಮಾಡುವುದೂ ಬೇಡ ಅನ್ನಿಸಿ ಕೊಳ್ಳುವುದೂ ಬೇಡ ಅಂತ. ನೀನು ಮೈಸೂರಿನಲ್ಲಿ ಮಾಡುವ ಪ್ರಯತ್ನ ನೋಡು. ಆ ಮನೆಯಲ್ಲೇ ವಾಸುವಿನ ಮದುವೆ ಆದರೆ, ಅವರ ಆತ್ಮಕ್ಕೂ ಒಂದು ತೃಪ್ತಿಯಾದ ಹಾಗೆ ಆಗುತ್ತೆ."

ವೆಂಕಟಪತಯ್ಯನು ಈ ಆಲೋಚನೆಯನ್ನು ಮೊದಲೇ ಮಾಡಿ ದ್ದನು. ಆದರೆ ಅವನಿಗೆ ಅದು ಅಷ್ಟಾಗಿ ಹಿಡಿಸಿರಲಿಲ್ಲ.

"ಸೀತು, ನೀನೇನೋ ಮೈಸೂರಿನಲ್ಲಿ ಮಾಡುವುದೇ ಸರಿ ಅನ್ನುತ್ತಿ. ಅಲ್ಲಿತಾನೇ ಖರ್ಚು ಕಮ್ಮಿ ಬೀಳುತ್ತೆ ಎಂದುಕೊಂಡೆಯ. ಹಾಲು, ಮೊಸರಿನ ಧಾರಣೆಯೇ ಏರಿಹೋಗುತ್ತೆ. ಇಷ್ಟರ ಮೇಲೆ ಆಡಿಕೆ ಜನ ಅಲ್ಲೂ ಇದ್ದೇ ಇದಾರೆ. ನಮ್ಮನ್ನು ಅಪಹಾಸ್ಯ ಮಾಡುವುದಕ್ಕೆ ಆ ರಾಮಪ್ಪಯ್ಯನವರ ಮನೆಯವರೇ ಸಾಕು."

"ಅವರು ನಗುತ್ತಾರೆ ಅಂತ ನಮ್ಮ ಅನುಕೂಲ ಬಿಡುವುದಕ್ಕಾದೀತೆ?"

"ಅವರು ನಗುತ್ತಾರೆ ಎಂದಲ್ಲ. ಒಟ್ಟಿನಲ್ಲಿ ನನಗೆ ಅಲ್ಲಿ ಮದುವೆಯ ಏರ್ಪಾಡು ಮಾಡಲು ಇಷ್ಟವಿಲ್ಲ. ಅದರಿಂದ ನನಗೆ ಯಾವ ಬಗೆಯ ಪ್ರಯೋಜನವೂ ಇಲ್ಲ."

ಸೀತಮ್ಮನವರಿಗೆ ತುಂಬ ನಿರಾಶೆಯಾಯಿತು.

"ಹಾಗಾದರೆ ಇನ್ನೇನು ಮಾಡುವುದು ಎನ್ನುತ್ತಿ?"

"ಪಶ್ಚಿಮವಾಹಿನಿಯಲ್ಲಿ ಛತ್ರ ದೊಡ್ಡದಾಗಿದೆ. ಪಾತ್ರೆ ಪದಾರ್ಥಗಳಿಗೂ ತಾಪತ್ರಯವಿಲ್ಲ. ಇಷ್ಟರ ಮೇಲೆ ನದಿಯ ತೀರ ಅಲ್ಲೇ ಮಾಡಿಬಿಡುವುದು ಎಂದಿದ್ದೇನೆ."

ಸೀತಮ್ಮನವರಿಗೆ ಇದರಿಂದ ಅಷ್ಟೇನು ಸಮಾಧಾನವಾಗದಿದ್ದರೂ ಅವರು ತಮ್ಮ ಮನದಭಿಪ್ರಾಯವನ್ನು ಹೊರತೋರ್ಪಡಿಸದೆ ಮಾತನ್ನು ಬೇರೆ ಕಡೆಗೆ ತಿರುಗಿಸಿಬಿಟ್ಟರು.

ಮದುವೆಗೆ ಬೇಕಾಗಿದ್ದ ಸಾಮಾನು ಸರಂಜಾಮುಗಳನ್ನು ಎತ್ತಿನ ಬಂಡಿಯಲ್ಲಿ ಸಾಗಿಸಿದ್ದಾಯಿತು. ಇನ್ನುಳಿದವರೆಂದರೆ ಮದುವೆಗೆ ಹೊರಡತಕ್ಕ ಜನರು ಮಾತ್ರ. ಗಂಡಿನವರಿಗೆ ಬಳಗವೇ ಇರಲಿಲ್ಲ. ಹೆಣ್ಣಿನವರಿಗೆ ಬಳಗವಿದ್ದರೂ ಅಳಿಯಂದಿರು, ಮೊಮ್ಮಕ್ಕಳನ್ನು ಬಿಟ್ಟು ಮತ್ತೆ ಯಾರೂ ಬಂದಿರಲಿಲ್ಲ. ಎಲ್ಲಾ ಮನೆಯವರೇ! ವರಪೂಜೆಯ ಹಿಂದಿನ ದಿನವೇ ಮದುವೆ ಮನೆಯವರು ಪಶ್ಚಿಮವಾಹಿನಿಯನ್ನು ಸೇರಿಬಿಟ್ಟರು. ವೆಂಕಟಪತಯ್ಯನು ಮಾತ್ರ ಇವರಿಗೆ ಮೊದಲೇ ಅಡಿಗೆಯವರನ್ನೂ, ಪುರೋಹಿತರನ್ನೂ ಕರೆದುಕೊಂಡು ಹೊರಟು ಹೋಗಿದ್ದನು. ಮದುವೆಗೆ ಆ ದೊಡ್ಡ ಛತ್ರದಲ್ಲಿ ಸೇರಿದ್ದವರೆಂದರೆ ಕೇವಲ ವೆಂಕಟಪತಯ್ಯನ ಸಂಸಾರ ಪೂರ್ತ. ಯಾವ ಅಡ್ಡಿ ಆತಂಕ

ಗಳೂ ಇರಲಿಲ್ಲ. ಕಡೆಯ ಪಕ್ಷ ಬೀಗರಿಂದ ಒಂದು ಸಣ್ಣ ಜಗಳ ನಡೆದೀತೆನ್ನಲು ಗಂಡನ ಕಡೆಯವರಾಗಿ ಇದ್ದವರೆಲ್ಲಾ ಎಂದರೆ ವಾಸು ಮತ್ತು ಸೀತಕ್ಕ. ಕರೆಯಲು ಸೀತಮ್ಮನವರಿಗೆ ಅತ್ತೆ ಮನೆಯ ಕಡೆ ಬಳಗವೇ ಇರಲಿಲ್ಲ. ಭಾಗಮ್ಮನವರ ಮನೆಯವರು ಬಂದಿದ್ದರೆ ಗಂಡಿನವರ ಲೆಕ್ಕಕ್ಕೆ ಸೇರಿಸಬಹುದಾಗಿತ್ತು. ಆದರೆ ಅವರ ಗಂಡನಿಗೆ ಖಾಯಿಲೆಯಾಗಿದ್ದ ಕಾರಣ ಮೈಸೂರಿಂದ ಅವರ ಮನೆಯವರಾಗಿ ಯಾರೂ ಬರಲಿಲ್ಲ. ಅದು ಹಾಗೆ, ಇದು ಹೀಗೆ ಎಂದು ಆಕ್ಷೇಪಣೆ ಬರಲು ಅವಕಾಶವೇ ಇರಲಿಲ್ಲ. ಬೀಗರು ಅಣ್ಣ ಅತ್ತಿಗೆಯರಲ್ಲದೇ ಬೇರೆ ಯಾರಾಗಿದ್ದರೂ ಸಹ ತುಟಿಯನ್ನು ಎರಡು ಮಾಡದ ಜೀವ ಸೀತಕ್ಕನದು. ಅವರು ತಮ್ಮ ಮಗನ ಮದುವೆಯೆನ್ನುವುದನ್ನೇ ಮರೆತುಬಿಟ್ಟಿದ್ದರು. ಕೇವಲ ಅಣ್ಣನ ಮಗಳ ಮದುವೆಗೆ ಬಂದವರ ಹಾಗೇ ಭಾವಿಸಿದ್ದರು. ಅಡುಗೆ ಮನೆಯಲ್ಲಿ ಅಡುಗೆಯವನಿಗೆ ಸಾಮಾನು ಹವಣಿಸುತ್ತಾ ನಿಂತರೆ ಅವರಿಗೆ ಪ್ರಪಂಚವೆಲ್ಲಾ ಮರೆತುಹೋಗುತ್ತಿತ್ತು. ಹೀಗೆ ಕೆಲಸದಲ್ಲಿ ಮಗ್ನರಾಗಿದ್ದಾಗ ಹುಡುಗರುಗಳಲ್ಲಿ ಚಾಪಿಯೋ, ಸುಬ್ಬಿಯೋ ಬಂದು, “ಅತ್ತೆ, ಅಕ್ಕ ಭಾವ ಹಸೇ ಮೇಲೆ ಕುಳಿತಿದ್ದಾರೆ” ಎಂದರೆ ಮಾತ್ರ ಅವರು ಬಿಟ್ಟ ಕೆಲಸವನ್ನೆಲ್ಲಾ ಬಿಟ್ಟಹಾಗೆ ಹಾಕಿ ಓಡಿ ಬರುತ್ತಿದ್ದರು. ಪುರೋಹಿತರು ಮಂತ್ರವನ್ನು ಹೇಳುತ್ತಿದ್ದರೆ ಅತ್ತ ತಮ್ಮ ಪಾಡಿಗೆ ತಾವು ಮಾತಾಡಿಕೊಳ್ಳುತ್ತಾ ಹಸೆಯಮಣೆಯ ಮೇಲೆ ಕುಳಿತಿರುವ ಮಗ ಸೊಸೆಯರನ್ನು ಕಂಬದ ಮರೆಯಲ್ಲಿ ನಿಂತು ನೋಡಿದಾಗ ಅವರ ಹೃದಯ ಉಬ್ಬಿಹೋಗುತ್ತಿತ್ತು. ಅವರ ಕಣ್ಣಿಗೆ ಮದವಣಿಗರಿಬ್ಬರೂ ಸಾಕ್ಷಾತ್ ಪಾರ್ವತಿ ಪರಮೇಶ್ವರರಂತೆಯೇ ತೋರುತ್ತಿದ್ದರು. ಹಾಗೆಯೇ ತಾವು ಮರೆಯಲ್ಲಿ ನಿಂತಿರುವುದನ್ನು ಪಾರ್ವತಿ ಗಂಡನಿಗೆ ತೋರಿಸಿ ನಕ್ಕರೆ, ಅವಳ ದಿಟ್ಟತನಕ್ಕಾಗಿ ಇವರಿಗೂ ನಗು ಬರುತ್ತಿತ್ತು. ಆದರೆ ತಮ್ಮೊಡನೆ ಇದ್ದು, ಒಂದು ಸಂತೋಷವನ್ನೂ ಕಾಣದೆ ಕಣ್ಮರೆಯಾದ ಗಂಡನ ನೆನಪು ಬಂದು ಎಷ್ಟು ತಡೆದರೂ ಕಣ್ಣಿನಲ್ಲಿ ನೀರು ಮಿಡಿಯುತ್ತಿತ್ತು. ಹಸೆಯ ಮಣೆಯ ಮೇಲೆ ಕುಳಿತಿರುವ ಹುಡುಗರನ್ನು ನೋಡಿ ಅವಲಕ್ಷಣವಾಗಿ ಅಳುತ್ತಿರುವೆನಲ್ಲಾ ಎಂದುಕೊಂಡು ಸೀತಕ್ಕ ಆಗ ಕಂಬದ ಮರೆಗೆ ಹೋಗಿ ಕಣ್ಣೊರೆಸಿಕೊಳ್ಳುತ್ತಿದ್ದರು

ಮದುವೆಯ ಮೂರು ದಿವಸಗಳೂ ಮಿಂಚಿನಂತೆ ಕಳೆದುಹೋದುವು. ಇನ್ನೇನು ಲಗ್ನದ ದಿವಸ ಬಂದೇ ಬಿಟ್ಟಿತು ಎಂದು ಆತುರಪಡುತ್ತಿರುವಾಗಲೇ ಅದು ಬಂದು ಕಳೆದು ಹೋಗಿ, ಊರಿಗೆ ಹೊರಡುವ ಕಾಲ ಬಂದಿತಲ್ಲಾ ಎಂದು ಎಲ್ಲರಿಗೂ ಆಶ್ಚರ್ಯವಾಗಿತ್ತು. ಉರುಟಣೆ ಉಯ್ಯಾಲೆಗಳ ಹಾರಾಟದಲ್ಲಿ, ಹಾಸ್ಯ ಕುಚೋದ್ಯಗಳ ಸಂತೆಯಲ್ಲಿ, ಎಲ್ಲರಿಗೂ ಮದುವೆಯ ಮೂರು ದಿವಸಗಳು ಬೆಳಗಿನ ಜಾವದ ಮೂರು ಕನಸಿನಷ್ಟು ಹಗುರವಾಗಿ ಕಳೆದು ಹೋಗಿದ್ದುವು. ಆ ಸುಖಮಯ ಸನ್ನಿವೇಶವನ್ನು ಬಿಟ್ಟು ಹೊರಡಲು ಯಾರಿಗೂ ಮನಸ್ಸಿರಲಿಲ್ಲ. ವೆಂಕಟಪತಯ್ಯನು ನಾಗೋಲಿಯಾದ ಮಾರನೆ ದಿವಸವೇ ಈ ಊರಿಗೆ ಪ್ರಯಾಣ ಮಾಡಿಬಿಡಬೇಕೆಂದಿದ್ದನು. ಆ ದಿವಸ ಅಷ್ಟು ಪ್ರಶಸ್ತವಲ್ಲವಾಗಿದ್ದ ಕಾರಣ ಅದರ ಮಾರನೆ ದಿವಸ ಹೊರಡುವುದೆಂದು ನಿರ್ಧಾರವಾಯಿತು.

ವೆಂಕಟಪತಯ್ಯನನ್ನು ಬಿಟ್ಟು ಮಿಕ್ಕವರೆಲ್ಲಾ ಪಶ್ಚಿಮವಾಹಿನಿಯಲ್ಲೇ ಉಳಿದರು. ಅವನು ಮಾತ್ರ ಸಾಮಾನುಗಳನ್ನು ಸಾಗಿಸಲು ಬಂದಿದ್ದ ಎತ್ತಿನ ಬಂಡಿಯಲ್ಲಿಯೇ ಊರಿಗೆ ಹೊರಟುಬಿಟ್ಟಿದ್ದನು. ಅಷ್ಟೊಂದು ಹಾರಾಟ, ಓಡಾಟಗಳ ಆಯಾಸ ವಿಪರೀತವಾಗಿದ್ದರೂ ಯಾರಿಗೂ ಸುಮ್ಮನೆ ಕುಳಿತು ಕಾಲ ತಳ್ಳುವ ಮನಸ್ಸಿರಲಿಲ್ಲ. ಇಷ್ಟೆಲ್ಲಾ ಜನರು ಒಟ್ಟಿಗೆ ಅಪರೂಪಕ್ಕೆ ಸೇರಿರುವಾಗ ಪಕ್ಕದಲ್ಲಿಯೇ ಇರುವ ಶ್ರೀರಂಗಪಟ್ಟಣಕ್ಕೆ ಎಲ್ಲರೂ ಏಕೆ ಹೋಗಿ ಬರಬಾರದೆನಿಸಿತು, ವೆಂಕಟಪತಯ್ಯನ ಹಿರಿಯ ಮಗಳು ಗೌರಿಗೆ. ಅವಳ ಮನಸ್ಸಿಗೆ ಆ ಅಭಿಪ್ರಾಯ ಬರುವುದೇ ತಡ, ವೆಂಕಟಪತಯ್ಯನ ಇತರ ಹೆಣ್ಣು ಮಕ್ಕಳು ನಾ ಮುಂದು ತಾ ಮುಂದು ಎಂದು ಸಿದ್ಧರಾದರು. ಹೆಂಡತಿಯೊಡನೆ ಕೊಂಚವಾದರೂ ಅಲೆದಾಡಬೇಕೆಂಬ ಚಪಲ ವಾಸುವಿಗೆ ಒಳಗೊಳಗೆ ಇದ್ದ ಕಾರಣ ಅವನೂ ಅವರುಗಳ ಉತ್ಸಾಹಕ್ಕೆ ಅಡ್ಡಿ ಬಂದು, ತನಗೆ ಬಂದ ಆಹ್ವಾನಕ್ಕೆ 'ನ'ಕಾರವನ್ನು ಹೇಳಲಿಲ್ಲ. ಸೀತಕ್ಕ, ಸಾವಿತ್ರಿಯರಿಬ್ಬರನ್ನು ಬಿಟ್ಟು ಮಿಕ್ಕವರು ಕಾಲುನಡಗೆಯಲ್ಲಿಯೇ ಹೋದರೆ ಚೆನ್ನೆಂದು ಹಾಗೆಯೇ ಹೊರಟರು.

ಛತ್ರವನ್ನು ಬಿಟ್ಟು ಹೊರಟಾಗ ಗುಂಪು ದೊಡ್ಡದಾಗಿದ್ದರೂ ದಾರಿ ಸವೆಸುವಾಗ ಮಾತ್ರ ಒಡೆದು ನಾಲ್ಕಾಗಿತ್ತು. ಒಂದೆಡೆ ರೈಲುಚೊಂಬು,

ತಿಂಡಿಯ ಬುಟ್ಟಿಗಳನ್ನು ಹಿಡಿದು ಮನಸ್ಸಿಗೆ ಬಂದಂತೆ ಮಾತು ಕೊಚ್ಚುತ್ತಾ, ವೆಂಕಟಪತಯ್ಯನ ಹಿರಿಯ ಹೆಣ್ಣು ಮಕ್ಕಳು ಹೋಗುತ್ತಿದ್ದರೆ, ಅತ್ತ ರಸ್ತೆಯ ಇನ್ನೊತ್ತಟ್ಟಿಗೆ ಅವರ ಗಂಡಂದಿರು ಸುತ್ತಮುತ್ತಣ ಬಯಲನ್ನು ತೀಕ್ಷ್ಣವಾಗಿ ಪರಿಶೀಲಿಸುತ್ತಾ, ಇದು ಮಗಣ್ಣಗೌಡರ ಜಮೀನು, ಅದು ನಿಂಗನು ಗುತ್ತಿಗೆಗೆ ತೆಗೆದುಕೊಂಡಿರುವ ಹೊಲ” ಎಂದು ತಮಗೆ ಗೊತ್ತಿದ್ದುದು, ಇಲ್ಲದುದು ಎಲ್ಲವನ್ನೂ ಬೆರಸಿ ಒಬ್ಬರಿಗೊಬ್ಬರು ಹೇಳುವುದರಲ್ಲಿ ಮಗ್ನರಾಗಿದ್ದರು. ಇವರೆಲ್ಲರಿಗಿಂತಲೂ ಮುಂದೆ ಇದ್ದವರೆಂದರೆ, ನೆಲವನ್ನು ಹುಡುಕುತ್ತಾ, ಜಿಗಿಯುತ್ತಾ ಹೋಗುತ್ತಿದ್ದ ಚಾಪಿ, ಸುಬ್ಬಿ, ಲಕ್ಷ್ಮಣ ಮೊದಲಾದ ಹುಡುಗರ ತಂಡ. ವಾಸು, ಪಾರ್ವತಿಯರು ಮಾತ್ರ ಎಲ್ಲರಿಗಿಂತಲೂ ಹಿಂದೆ ಬೇಕೆಂದು ಬರುತ್ತಿದ್ದರು. ಅದಷ್ಟು ಕಾಲ ವಿರಾಮದಲ್ಲಿ ಅವರಿಬ್ಬರ ನಡುವೆ ಎಷ್ಟು ಮಾತುಕತೆಗಳು ನಡೆದವೋ ತಿಳಿಯದು. “ಈಗಿನ ಕಾಲದಲ್ಲೇನು, ಮದುವೆಯಾಗುವುದೇ ತಡ. ಗಂಡ ಹೆಂಡತಿಯರಿಗೆ ಪ್ರಪಂಚವನ್ನೇ ತಲೆಕೆಳಗು ಮಾಡುವಷ್ಟು ಹರಟೆ ಸಿಕ್ಕಿ ಬಿಡುತ್ತದೆ” ಎಂದು ಗೌರಿ ಹಂಗಿಸಿದಾಗಲೇ ಪಾರ್ವತಿಯು ಬಂದು ಅಕ್ಕಂದಿರನ್ನು ಸೇರಿಕೊಂಡಿದ್ದು.

ತಲೆಯ ಮೇಲೆ ಬಿಸಲು ಝುಳ ಝುಳನೆ ಕಾಯುತ್ತಿದ್ದು ಕೈಕಾಲು ಸೋತು ಬಳಲಿ ಬೆಂಡಾದರೂ ಯಾರಿಗೂ ಕುಳಿತು ವಿಶ್ರಮಿಸಿಕೊಳ್ಳಬೇಕೆಂಬ ಯೋಚನೆ ಹೊಳೆದಂತೆ ತೋರಗಲಿಲ್ಲ. ವಿಶ್ರಾಂತಿಗೆಂದು ಒಂದೆಡೆ ಕುಳಿತುಕೊಳ್ಳಬೇಕಾದರೆ ಇಲ್ಲಿಯ ವರೆಗೆ ಬರಬೇಕಾಗಿತ್ತೇ ಎಂದು ಅವರು ತಡೆಬಿಡುವಿಲ್ಲದೆ ದೇವಸ್ಥಾನ, ದರಿಯಾದೌಲತ್, ಗುಂಬಸ್ ಎಂದು ಊರೆಲ್ಲಾ ಸುತ್ತಿಬಿಟ್ಟರು. ಹಾಗೆಯೇ ಹಸಿವು ಆಯಾಸಗಳ ಏರಿಕೆಯಲ್ಲಿ ಕಾರ ಹಚ್ಚಿದ ಕಳ್ಳೆಕಾಯಿ ಉಂಡೆ, ಪುರಿ ಉಂಡೆ, ಚಕ್ಕುಲಿ, ಲಾಡು, ಬೇಳೆ ಒಬ್ಬಟ್ಟು ಎಂದು ತಂದಿದ್ದ ಮದುವೆ ಮನೆ ಸರಕುಗಳೆಲ್ಲಾ ಒಂದೊಂದಾಗಿ ಈಚೆ ಬಂದು ಮಾಯವಾಗಿಹೋಗಿದ್ದುವು. ಅಂತೂ ಅಲೆತ ಮೆರೆತಗಳು ಮುಗಿದು ಮನೆಗೆ ಹೋಗುವ ಎನ್ನುವಲ್ಲಿ ಸಂಜೆ ಸಾರಿತ್ತು. ಎಲ್ಲರಿಗೂ ಎಲ್ಲಿಲ್ಲದ ಆಯಾಸ, ಹಸಿವು. ಮತ್ತೆ ನಡೆಯಲು ಹೆಂಗಸರಾರೂ ಸಿದ್ಧವಿರಲಿಲ್ಲವಾದುದರಿಂದ ಪಶ್ಚಿಮವಾಹಿನಿಗೆ ರೈಲಿನಲ್ಲೇ ಮರಳುವುದೆಂದು ನಿರ್ಧಾರವಾಯಿತು.

ಅತ್ತೆ ಛತ್ರದಲ್ಲಿಯೇ ಉಳಿದಿದ್ದ ಸೀತಕ್ಕ ಸಾವಿತ್ರಿಯರು ಆ ದಿನ ಹುಣ್ಣಿಮೆಯಾದ್ದರಿಂದ, ಹುಡುಗರು ಬಂದರೆ ಬೆಳುದಿಂಗಳೂಟ ಮಾಡಿಸ ಬೇಕೆಂದು ಹುಳಿಯನ್ನ, ಮೊಸರನ್ನದ ಏರ್ಪಾಟು ಮಾಡಿಸಿದ್ದರು. ತಿಂಗಳ ಬೆಳಕು ಮಂದವಾಗಿ ಮನೋಹರವಾಗಿತ್ತು. ಹುಡುಗರು, ದೊಡ್ಡವರು ಎಂಬ ಭೇದವಿಲ್ಲದೆ ಸಾವಿತ್ರಿ ಮೊದಲುಗೊಂಡು ಎಲ್ಲರೂ ಓರಣವಾಗಿ ಹೊಳೆಯ ಸೋಪಾನದ ಮೇಲೆ ಕುಳಿತುಕೊಂಡರು. ಅಲ್ಲಿ ಮತ್ತೆ ಹಾಡುಗಳು, ಹಾಸ್ಯವಿನೋದಗಳ ಹೊಸ ಹೊಳೆಯೊಂದು ಹರಿಯಿತು. ಸೀತಮ್ಮನವರೇ ಎಲ್ಲರಿಗೂ ಮನಬಿಚ್ಚಿ ಕೈತುತ್ತು ಹಾಕಿದರು. ಎಲ್ಲರೂ ಉಂಡು ಕೈತೊಳೆಯಲು ದೂರ ಹೋದಾಗ ಪಾತ್ರೆಗಳನ್ನು ಗಲಬರಿಸುವ ನೆಪದಲ್ಲಿ ನೀರಿನ ಬಳಿ ಹೋಗಿ, ತಮ್ಮಿಂದ ಬಹಳ ದೂರ ಹೊರಟು ಹೋಗಿದ್ದ ಗಂಡನನ್ನು ನೆನೆದು ಕಣ್ಣೀರನ್ನು ನದಿಯ ನೀರಿ ನೊಡನೆ ಬೆರಸದೆ ಮಾತ್ರ ಅವರು ಬರಲಿಲ್ಲ.

ನಂಜುಂಡಳ್ಳಿಗೆ ಮರಳಿದ ಮೇಲೆ ಈ ದಿನ ತಿಂಗಳ ನಾಗೋಲಿ, ಇನ್ನೊಂದು ದಿನ ಶುಕ್ರವಾರ, ಮತ್ತೊಂದು ದಿನ ಊರಿಗೆ ಹೊರಟ ದೊಡ್ಡ ಅಳಿಯಂದರ ಔತಣವೆಂದು ದಿನಗಳು ಉರುಳಿಹೋದುವು. ಬೇಸಗೆ ರಜೆಯು ಕಣ್ಮುಚ್ಚಿ ಕಣ್ಣು ತೆರೆಯುವುದರೊಳಗೆ ಎನ್ನುವಷ್ಟು ಬೇಗ ಕಳೆದುಹೋಯಿತು. ಹೇಗಿದ್ದರೂ ಹುಡುಗಿಯು ದೊಡ್ಡವಳಾಗಿ ದ್ದಾಳೆ. ಪ್ರಸ್ತದ ಶಾಸ್ತ್ರವನ್ನೂ ಮಾಡಿಬಿಟ್ಟರೆ ವಾಸವು ಒಂಟಿಯಾಗಿರು ವುದು ತಪ್ಪುತ್ತದೆ ಎಂದು ಸೀತಕ್ಕ ಅಭಿಪ್ರಾಯಪಟ್ಟರು. ಆದರೆ ಸಾವಿತ್ರಿಗೆ ಮಾತ್ರ ಮದುವೆಯಾದ ಕೂಡಲೆ ಮಗಳನ್ನು ಕಳುಹಿಸಲು ಮನಸ್ಸು ಹಿಂಜರಿಯಿತು.

"ಈಗಾಗಲೇ ಆತುರವೇನು, ಮದುವೆಯಾದ ಮೇಲೆ ಹುಡುಗಿ ಒಂದು ವರ್ಷವಾದರೂ ತೌರುಮನೆಯಲ್ಲಿದ್ದರೆ ಏನೋ ಒಂದಿಷ್ಟು ಪೂಜೆ, ಪುರಸ್ಕಾರಗಳನ್ನಾದರೂ ಮಾಡಬಹುದು. ಆಮೇಲೆ ನಿಧಾನವಾಗಿ ಅತ್ತಿಗೇನೂ ಜೊತೆಯಲ್ಲಿ ಹೋಗಿ ಸಂಸಾರವನ್ನು ಹೂಡಿಸಿ ಬಂದರೆ ಸರಿಹೋಗುತ್ತೆ. ಈಗ ಇದ್ದಕ್ಕಿದ್ದ ಹಾಗೆ ಆ ಹುಡುಗೀನ ಸಂಸಾರ ಮಾಡು ಎಂದರೆ ಏನು ಮಾಡುತ್ತೆ" ಅಂದಳು.

"ಸಂಸಾರ ಎಂದರೆ ಏನು ನೂರು ಜನಕ್ಕೆ ಅಡುಗೆ ಮಾಡಿ ನಿಭಾ

ಯಿಸಬೇಕಾಗಿದೆಯೆ. ಇರೋರು ಇಬ್ಬರು. ಹೇಗೋ ಕೊಂಚ ದಿನ ಕಾಲ ತಳ್ಳುವುದು. ಆಮೇಲೆ ಅವನಿಗೆ ಮೈಸೂರಿಗೇ ವರ್ಗವಾದರೂ ಆಗಬಹುದು" ಎಂದರು ಸೀತಕ್ಕ.

ಇದುವರೆಗೂ ಮಾತಾಡದೆ ಇದ್ದ ವೆಂಕಟಪತಯ್ಯನು ಮಧ್ಯೆ ಬಾಯಿ ಹಾಕಿ,

"ಅದೆಲ್ಲಾ ಸರಿ ಸೀತು. ಪಾರ್ವತೀನ ಅವನು ಜೊತೆಯಲ್ಲೇ ಮಹರಾಯನ ಹಾಗೆ ಕರೆದುಕೊಂಡು ಹೋಗಲಿ. ಅದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ನೀನು ಯಾಕೆ ಅಲ್ಲಿ ಒಬ್ಬಳೇ ಕಾಲ ಹಾಕಬೇಕೂಂತ? ಚಿಕ್ಕಪುಟ್ಟ ಹುಡುಗರು ಸಂಸಾರ ಮಾಡುವುದನ್ನು ನೋಡಬೇಕೆನ್ನುವ ಆಸೆ ನಿನಗಿಲ್ಲವೆ? ಜೊತೆಯಲ್ಲಿ ನೀನಿದ್ದರೆ ಅವರಿಗೂ ಒಂದು ಧೈರ್ಯ. ನಿನಗೂ ಒಂದು ಸಂತೋಷ" ಎಂದನು.

"ಆದರೆ ಈಗ ನನಗೆ ಅಲ್ಲಿಗೆ ಹೋಗುವ ಇಷ್ಟವಿಲ್ಲ ವೆಂಕು. ಅವನಿಗಾಗಿರುವುದು ಖಾಯಂ ಕೆಲಸವೂ ಅಲ್ಲ. ಇನ್ನೆರಡು ತಿಂಗಳಿಗೆ ಮೈಸೂರಿಗೇ ಏನಾದರೂ ಹಾಕುವುದಾದರೆ, ಎಲ್ಲರೂ ಮನೆಯನ್ನು ಖಾಲಿ ಮಾಡಿ ಯಾಕೆ ಹೋಗಬೇಕು. ಅಲ್ಲದೆ ಹೊಸದಾಗಿ ಮದುವೆಯಾದವರು, ಒಂದೆರಡು ದಿನ ಸ್ವತಂತ್ರವಾಗಿ ಚೆಲ್ಲಾಟವಾಡಿಕೊಂಡಿರಲಿ ಬಿಡು. ಪಾಪ, ನಾನೇಕೆ ಶಿವಪೂಜೆಯ ಮಧ್ಯೆ ಕರಡಿ ಬಿಟ್ಟಹಾಗೆ ಹೋಗಲಿ."

ತಾಯಿಯ ಧಾರಾಳವನ್ನು ಕಂಡು ವಾಸುವು ಮೂಕನಾಗಿ ಹೋದನು.

"ಹಾಗಾದರೆ ಅತ್ತೆ ಇರುವ ಮನೆಗೆ ಹೆಣ್ಣುಮಕ್ಕಳನ್ನು ಕೊಡುವುದೇ ಕಷ್ಟ ಅಂದ ಹಾಗಾಯಿತಲ್ಲ ಅತ್ತಿಗೆ" ಎಂದಳು ನಗುತ್ತ ಸಾವಿತ್ರಿ.

"ನಾನು ಆ ರೀತಿ ಹೇಳಲಿಲ್ಲ. ಏನೊ ಸಮಯ ಸಂದರ್ಭ ಹೀಗೆ ಒದಗಿಬಂದಿರುವುದರಿಂದ ಹಾಗೂ ಸರಿ, ಹೀಗೂ ಸರಿ ಎಂದು ಹೇಳಿದೆ"

ಇದುವರೆಗೂ ನಾಚಿಕೆಯಿಂದ ಸುಮ್ಮನಿದ್ದ ಪಾರ್ವತಿ,

"ಅತ್ತೆ, ನೀವು ಹೀಗೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳುವುದಾದರೆ ನಾನು ನಿಮ್ಮೊಡನೆ ಮೈಸೂರಿಗೇ ಬಂದುಬಿಡುತ್ತೇನೆ. ಮೈಲಾಪುರಕ್ಕೆ ನೀವು ಬಂದ ಹೊರತೂ ಹೋಗುವುದಿಲ್ಲ" ಎಂದು ಹೇಳಿದಳು.

ಸೀತಕ್ಕ ಸೊಸೆಯ ಸರಳತೆಗೆ ಸಂತೋಷಪಟ್ಟರು.

ಇತ್ತ ಮನೆಯವರೆಲ್ಲಾ ಕಲೆತು ಒಂದು ವಿಚಾರವಾಗಿ ಚರ್ಚೆ ನಡಸುತ್ತಿದ್ದರೆ. ಅತ್ತ ವಾಸುವಿನ ಮನಸ್ಸು ಎಲ್ಲೆಲ್ಲಿಯೋ ಓಡುತ್ತಿತ್ತು. ಅವನಿಗೆ ತಾಯಿಯೂ ತನ್ನೊಡನೆ ಬರಲಿ ಎಂದು ತುಂಬಾ ಆಸೆ. ಆದರೆ ಅವರು ಬರುವುದಾದರೆ ಕರೆದುಕೊಂಡು ಹೋಗುವ ಧೈರ್ಯವಿರಲಿಲ್ಲ. ತಾನು ಮುಂದೆ ಎಷ್ಟು ಸರಿಯಾಗಿ ನಡೆದುಕೊಂಡರೂ, ತನ್ನ ಮತ್ತು ಸರೋಜಳ ಸ್ನೇಹ ಎಂದಾದರೂ ಸೀತಕ್ಕನ ಕಿವಿಗೆ ಬೀಳಬಹುದೆಂಬ ಹೆದರಿಕೆ ಅವನಲ್ಲಿ ಮೂಡಿತ್ತು. ಹೃದಯದಲ್ಲಿನ ಒಳತೋಟೆಯನ್ನು ಎಷ್ಟು ದಿನವೆಂದು ಬಚ್ಚಿಡುವುದಕ್ಕೆ ಸಾಧ್ಯ? ಎಲ್ಲವನ್ನೂ ತಾಯಿಗೆ ಬಿಚ್ಚಿ ಹೇಳಿಬಿಡುವುದು. ಅವರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ತನ್ನನ್ನು ಕ್ಷಮಿಸಿದರೂ ಕ್ಷಮಿಸಬಹುದೆಂದು ಯೋಚಿಸಿದನು ಆದರೆ ಒಂದು ವೇಳೆ ಹಾಗಾಗದಿದ್ದರೆ? ತನ್ನ ಮುಂದಿನ ಬಾಳೆಲ್ಲಾ ಕಹಿಯಾಗಿ ಕೊನೆಯಾಗುವುದರಲ್ಲಿ ಸಂಶಯವಿಲ್ಲ. ವಾಸುವು ಸದ್ಯಕ್ಕೆ ಅಂತಹ ತೊಂದರೆಯನ್ನು ತೆಗೆದುಕೊಳ್ಳುವುದು ಬೇಡವೆಂದು ನಿರ್ಧರಿಸಿದನು. ಲೋಕಾರೂಢಿಯಾಗಿ ಸೀತಕ್ಕನನ್ನು ತನ್ನೊಡನೆ ಬರುವಂತೆ ಕೇಳಿದನು. ಅವರು ಅವನಿಗೂ ಎಲ್ಲರಿಗೆ ಕೊಟ್ಟ ಜವಾಬು ಹೇಳಿದರು. ವಾಸುವು ಹೆಚ್ಚಿನ ಬಲವಂತಕ್ಕೆ ಹೋಗಲಿಲ್ಲ.

## ೧೯

ವಾಸುವು ಹೊಸಮನೆಗೆ ಹೊಸ ಹೆಂಡತಿಯೊಡನೆ ಬಂದು ಸೇರಿದನು. ಆದರೆ ಹಳೆಯ ಗೆಳೆಯನನ್ನು ದೂರ ಕಳುಹಿಸಲು ಇಷ್ಟಪಡಲಿಲ್ಲ. ಮನೆಯ ಸಾಮಾನುಗಳನ್ನು ಓರಣವಾಗಿ ಜೋಡಿಸಿಡುತ್ತಿದ್ದ ಕಂಠಿಗೆ ವಾಸುವು,

"ಕಂಠಿ, ಇನ್ನು ಮೇಲೆ ನೀನು ಅಡುಗೆ ಮನೆಯಲ್ಲಿ ಕೈ ಬಾಯಿ ಸುಟ್ಟುಕೊಳ್ಳಬೇಕಾಗಿಲ್ಲ" ಎಂದು ಹೇಳಿದನು.

"ಒಳ್ಳೆಯ ಚೆನ್ನಾಗಿ ಹೇಳಿದೆ. ರಾಜನಿಗೆ ರಾಜ್ಯ ಬಂದರೆ ರಾಗಿ ಬೀಸುವುದು ತಪ್ಪುತ್ತಯೇ ಅಂತ, ನಿನಗೆ ಹೆಂಡತಿ ಬಂದರೆ ನನಗಾದ ಲಾಭ ಏನು ಹೇಳು"

"ಅದೇ ಹೇಳಿದೆನಲ್ಲಾ ಅಡುಗೆ ತಪ್ಪಿಹೋಗುವುದೆಂದು"

"ವಾಸು, ಇನ್ನೂ ನಾನು ನಿನ್ನ ಜೊತೆಯಲ್ಲಿ ವಾಸ ಮಾಡುವುದು ಸಾಧ್ಯ ಎಂದು ಹೇಳುತ್ತೀಯಾ ? ಆಗ ಅಂದರೆ ಇದ್ದವರು ನಾವುನಾವು ಗಂಡಸರು ಹೇಗಿದ್ದರೂ ಸರಿಹೋಗುತ್ತಿತ್ತು "

ಕಂಠಿಯು ಈ ರೀತಿ ಹೇಳುವಾಗ ವಾಸುವಿನ ಮುಖವನ್ನು ತೀಕ್ಷ್ಣವಾಗಿ ಪರಿಶೀಲಿಸದೆ ಇರಲಿಲ್ಲ.

"ಈಗಲೂ ಸರಿಹೋಗುತ್ತೆ, ಸರಿಹೋಗದ ಹಾಗೇನು."

"ಸುಮ್ಮನೆ ಬಾಯಿ ಉಪಚಾರಕ್ಕೆ ಹೇಳಿದರೆ ಆಗುವುದಿಲ್ಲ. ಇಲ್ಲಿ ಕೇಳು, ನನ್ನ ಸ್ವಭಾವ ನಿನಗೆ ತಿಳಿದೇ ಇದೆ ಯಾವುದೋ ಹೊತ್ತಿಗೆ ಬರುವುದು. ಯಾವಾಗಲೋ ತಿನ್ನುವುದು. ಇದನ್ನೆಲ್ಲಾ ಸವರಿಸಿಕೊಳ್ಳಲು ನಿನ್ನ ಹೆಂಡತಿಗೆ ಬೇಜಾರೇ ಆಗಬಹುದು."

"ಮೊದಲು ಕೊಂಚ ದಿನ ಹಾಗೆ. ಆಮೇಲೆ ಎಲ್ಲಾ ತಾನೇ ಸರಿಹೋಗುತ್ತೆ." ವಾಸುವನ್ನು ಒಪ್ಪಿಸಲು ಅವನ ಗೆಳೆಯನಿಗೆ ಕೊನೆಗೂ ಸಾಧ್ಯವಾಗಲಿಲ್ಲ. ಅವನು ನಿರುಪಾಯನಾಗಿ ಆ ದಿವಸವೇ ತನ್ನ ಸಾಮಾನುಗಳನ್ನು ವಾಸುವಿನ ಮನೆಗೆ ಸಾಗಿಸಿದನು.

ಕಂಠಿಯು ತನ್ನ ಜೀವನದಲ್ಲಿ ನೂರೆಂಟು ಅಡ್ಡಹಾದಿಗಳನ್ನು ಹಿಡಿದು ಹಾಳಾಗಿದ್ದರೂ ಇತರರ ವಿಷಯದಲ್ಲಿ, ಅದರಲ್ಲೂ ವಾಸುವಿನಂತಹ ಸರಳ ವ್ಯಕ್ತಿಗಳಲ್ಲಿ ಬಹಳ ನಯವಾಗಿ ವರ್ತಿಸುತ್ತಿದ್ದನು. ತನ್ನ ನಡವಳಿಕೆಗಳನ್ನು ತಿಳಿದಿದ್ದರೂ ವಾಸುವು ಕೇವಲ ಹಿಂದಿನ ಉಪಕಾರ ಸ್ಮರಣೆಯಿಂದ ತನ್ನನ್ನು ಮನೆಗೆ ಸೇರಿಸಿಕೊಳ್ಳುತ್ತಿರುವುದನ್ನು ಕಂಡು ಅವನಿಗೆ ತುಂಬಾ ಆಶ್ಚರ್ಯ, ಆನಂದಗಳಾದುವು, ವಾಸುವಿನಿಂದ ಪಡೆದಿರುವ ವಿಶ್ವಾಸವನ್ನು ಪಾರ್ವತಿಯಿಂದಲೂ ಪಡೆದುಕೊಳ್ಳಬೇಕೆಂದು ಅವನ ಮನಸ್ಸು ಆತುರಪಟ್ಟಿತು. ಪಾರ್ವತಿಯೆಂದರೆ ವಿಶೇಷ ಮರ್ಯಾದೆಯನ್ನು ತೋರತೊಡಗಿದನು. ಅಲ್ಲದೆ ಅವಳು ಹುಡುಗಿಯೆಂದೂ, ಅದಕ್ಕಾಗಿ ಕೊಂಚ ದಿವಸ ತಾನೇ ಅಡುಗೆ ಮಾಡುವುದಾಗಿಯೂ ಹಠಮಾಡಿದನು. ಅವನ ಸಂಸಾರದ ಹುಚ್ಚು ನೋಡಿ ವಾಸುವಿಗೆ ಏನು ಹೇಳಬೇಕೋ ತೋರಲಿಲ್ಲ. ಕಂಠಿಯ ತಾಪತ್ರಯವನ್ನು ನೋಡಲಿಕ್ಕಾಗದೆ ವಾಸುವು,

"ಏನೋ ಮಾಡಿ ಹಾಕಿದುದನ್ನು ತಿಂದುಕೊಂಡು ಸುಖವಾಗಿರಬಾರದೆ. ಇಲ್ಲದ ಕಷ್ಟವನ್ನೇ ಕಟ್ಟಿಕೊಳ್ಳುತ್ತಿ" ಎಂದನು.

"ಇದರಲ್ಲೆಲ್ಲಾ ಕಷ್ಟ ಅನ್ನೋದು ಏನು ಬಂತು. ಒಂದಾನೊಂದು ಕಾಲದಲ್ಲಿ ಈ ಕೆಲಸವೇ ನನ್ನ ಜೀವನೋಪಾಯವಾಗಿರಲಿಲ್ಲವೆ?"

"ಏನು ಕೆಲಸವೊ ನಾನು ಕಾಣೆನಪ್ಪ, ನನಗಂತೂ ನೋಡುವುದಕ್ಕೆ ಬೇಜಾರು."

"ನಿನಗೆ ಬೇಜಾರಾದರೆ ನನಗೆ ಬೇಜಾರಾಗಿಲ್ಲ. ಮದುವೆಯಾದ ಮಾತ್ರಕ್ಕೆ ಹೆಣ್ಣು ಮಕ್ಕಳಿಗೆ ಕೆಲಸ, ಬದಕು ಎಲ್ಲಾ ಆ ಕ್ಷಣದಲ್ಲಿ ಬಂದು ಬಿಡುತ್ತದೆ ಅಂತ ನೀನು ತಿಳಿದಿರುವ ಹಾಗಿದೆ.

"ಅವಳಿಗೆ ಕೆಲಸ ಬರುವುದಿಲ್ಲವೆಂದು ನೀನು ಹೇಳಬೇಕು. ಹಳ್ಳಿಯಲ್ಲಿ ಬೆಳೆದವಳು, ಬೇಕಾಗಿದ್ದರೆ ನಿನಗೇ ಹೇಳಿಕೊಡುತ್ತಾಳೆ.

"ಹಳ್ಳಿಯ ಒರಟಾಟದ ಕೆಲಸ ಬಂದರೆ ಪರವಾಗಿಲ್ಲ, ಪಟ್ಟಣ ವಾಸದ ನಾಜೂಕಿನ ಅಡುಗೆಯನ್ನು ಹೇಳಿಕೊಡುತ್ತೇನೆ, ನೋಡುವಿಯಂತೆ."

ವಾಸುವಿಗೆ ಕಂಠಿಯ ಹುಚ್ಚು ಉತ್ಸಾಹವನ್ನು ನೋಡಿ ನಗುವು ಬಂದಿತು. ಅವನು,

"ಹೂಂ, ಏನೇನು ತರಪೇತು ಮಾಡುತ್ತೀಯೋ ಮಾಡು, ನೋಡೋಣ" ಎಂದನು.

ಅಂತೂ ಕಂಠಿಯ ಪಾಠವು ಬಿರುಸಾಗಿ ನಡೆಯುಹತ್ತಿತು. ಅವನು ಪಾರ್ವತಿಗೆ ಬಗೆಬಗೆಯ ಕಾರ, ಸಿಹಿ ತಿಂಡಿಗಳನ್ನೂ, ಅಡುಗೆಗಳನ್ನೂ ಶಾಸ್ತ್ರೋಕ್ತವಾಗಿ ಮಾಡಿ ತೋರಿಸಿ ಹೇಳಿಕೊಡುತ್ತಿದ್ದನು. ಅವನಿಗೆ ಅವಳನ್ನು ಅಡುಗೆಯಲ್ಲಿ ಅಸಮಾನಳು ಎನ್ನಿಸಿಬಿಡಬೇಕೆಂಬ ಹುರುಪಿತ್ತು, ಪಾರ್ವತಿಯೂ ಅವನ ಆಶೆಗಳಿಗನುಗುಣವಾಗಿ ನಡೆದುಕೊಳ್ಳುತ್ತಿದ್ದಳು. ಕೊಂಚ ದಿನದಲ್ಲಿಯೇ ಅವಳು ಕಂಠಿಯು ಇನ್ನೇನು ಹೇಳಿಕೊಡಬೇಕಾದುದೂ ಬಾಕಿ ಇಲ್ಲವೆಂದು ಹೇಳುವಷ್ಟರ ಮಟ್ಟಿಗೆ ಮನೆಗೆಲಸಗಳಲ್ಲಿ ಚತುರಳಾಗಿಬಿಟ್ಟಳು.

ದಿನಕಳೆದಂತೆಲ್ಲಾ ವಾಸುವಿನ ಸಂಸಾರ ಚಕ್ರವು ಸುಗಮವಾಗಿ ನಡೆಯತೊಡಗಿತ್ತು. ಆದರೆ ಕಾಲ ಮುಂದೆ ಹೋದ ಹಾಗೆಲ್ಲಾ ಕಂಠಿಯ ಚಿತ್ತಶಾಂತಿ ದೂರವಾಗುತ್ತಾ ಬಂದಿತ್ತು. ಪಾರ್ವತಿಯಲ್ಲಿ ತನ್ನ ಗೌರವವನ್ನು ಕಾಪಾಡಿಕೊಳ್ಳಲು ಅವನು ತನ್ನ ನಡವಳಿಕೆಯಲ್ಲಿ ಅನೇಕ

ಮಾರ್ಪಾಡುಗಳನ್ನು ಮಾಡಿಕೊಂಡಿದ್ದನು. ಮನೆಯಲ್ಲಿ ಎಂದೂ ಬೀಡಿ ಯನ್ನು ಸೇದುತ್ತಿರಲಿಲ್ಲ. ರಾತ್ರಿ ಒಂಭತ್ತುಗಂಟೆಯ ಮೇಲೆ ಯಾವತ್ತೂ ಮನೆಗೆ ಬರುತ್ತಿರಲಿಲ್ಲ. ಮಾತಾಡುವುದರಲ್ಲಿಯೂ ಅಷ್ಟೆ. ಬಹಳ ಎಚ್ಚರಿಕೆ ಯಿಂದ ಇರುತ್ತಿದ್ದನು. ಆದರೆ ಈ ಬಗೆಯ ಹೊಸ ಮಾರ್ಪಾಡು ಅವನಲ್ಲಿ ಹೆಚ್ಚಿಗೆ ದಿವಸ ಉಳಿಯಲು ಸಾಧ್ಯವಾಗಲಿಲ್ಲ. ಅವನ ಹಳೆಯ ಸ್ವೇಚ್ಛಾ ಚಾರ ಅವನನ್ನು ಮತ್ತೆ ಬಾ ಎಂದು ಹಿಂದಕ್ಕೆ ಜಗ್ಗಿ ಎಳೆಯತೊಡಗಿತ್ತು. ಅರಣ್ಯದಲ್ಲಿ ಸ್ವತಂತ್ರವಾಗಿ ಓಡಾಡುತ್ತಾ ಇದ್ದ ಸಿಂಹವನ್ನು ತಂದು ಬೋನಿನಲ್ಲಿಟ್ಟಿದ್ದ ಹಾಗಿತ್ತು ಅವನ ಪರಿಸ್ಥಿತಿ. ಹೀಗಿರುವಲ್ಲಿ ಒಂದು ದಿನ ಕಂಠಿಯು ಚಪಲವನ್ನು ತಡೆಯಲಾರದೆ, ಬಾಳೆಗಿಡದ ಬುಡದ ಬಳಿ ನಿಂತು ಬೀಡಿ ಸೇದುತ್ತಿದ್ದನು. ಪಾತ್ರೆಗಳನ್ನು ಹೊರಗೆ ಹಾಕಲು ಬಂದ ಪಾರ್ವತಿಯು ಅದನ್ನು ಕಂಡುಬಿಟ್ಟಳು. ಪಟ್ಟಣವಾಸದ ವಿಚಿತ್ರ ಜೀವನಗಳನ್ನು ಕಂಡರಿಯದೇ ಬೆಳೆದಿದ್ದ ಅವಳಿಗೆ ಕಂಠಿಯ ಈ ಹೊಸ ನಡವಳಿಕೆ ಆಶ್ಚರ್ಯ ಗಾಬರಿಗಳೆರಡನ್ನೂ ಉಂಟುಮಾಡಿತು. ತನ್ನ ಕುತೂಹಲವನ್ನು ದಿನವೆಲ್ಲಾ ಹೇಗೆ ತಡೆದಿಟ್ಟಿದ್ದಳೋ ತಿಳಿಯದು. ರಾತ್ರಿ ವಾಸುವು ಮನೆಗೆ ಬರುವುದೇ ತಡ, ಗಂಡನೊಡನೆ ಗುಟ್ಟಾಗಿ ವಿಚಾರ ಮಾಡಿದಳು.

"ಕೋಪ ಮಾಡುವುದಿಲ್ಲವೆಂದರೆ ಒಂದು ತಮಾಷೆ ಹೇಳುತ್ತೇನೆ."

"ಪಾರ್ವತಿ, ನಿನ್ನ ಬುದ್ಧಿ ಎಷ್ಟು ಚುರುಕು ನೋಡು, ಯಾರೇ ಆಗಲಿ ತಮಾಷೆ ಹೇಳಿದರೆ ನಗುತ್ತಾರೆಯೇ ಹೊರತು, ಕೋಪಿಸಿ ಕೊಳ್ಳುತ್ತಾರೆಯೆ?"

"ಏನೋ ನಿಮ್ಮ ಸಮಾಚಾರ. ಹೇಗೆ ಮಾಡಿದರೂ ಕಷ್ಟ. ಮಾತಾಡಿಸುವುದಕ್ಕೇ ಭಯವಾಗುತ್ತೆ."

"ಹೌದು ಪಾಪ, ನಾನೆಂದರೆ ನಿನಗೆ ಅಷ್ಟು ಹೆದರಿಕೆ"

ವಾಸುವು ತುಂಟನಗುವೊಂದನ್ನು ನಕ್ಕನು. ಪಾರ್ವತಿಯ ಮುಖವು ನಾಚಿಕೆಯಿಂದ ನಸುಗೆಂಪಾಯಿತು.

"ಆ ಮಾತು ಹೋಗಲಿ ಬಿಡಿ. ವಿಷಯ ಎಲ್ಲಿಂದಲೋ ಎಲ್ಲಿಗೋ ಹೋಯ್ತು. ನಿಮ್ಮ ಸ್ನೇಹಿತರ ನಡೆನುಡಿಗಳಲ್ಲಿ ಏನಾದರು ವ್ಯತ್ಯಾಸವನ್ನು ಕಂಡಿದ್ದೀರಾ ಎಂದು ಕೇಳಿದೆ."

ವಾಸುವು ಅನುಮಾನದಿಂದ ಅವಳ ಮುಖವನ್ನು ನೋಡಿ,

"ಏನು ಸಮಾಚಾರ? ನನಗೇನೂ ತಿಳಿಯದು, ಹೇಳು" ಎಂದನು.

ಅದಕ್ಕೆ ಪಾರ್ವತಿಯು ಮೆಲ್ಲನೆ,

"ಅವರು ಬೀಡಿ ಸೇದುತ್ತಾರೆ!" ಎಂದು ತಾನು ಕಂಡ ಆಶ್ಚರ್ಯವನ್ನು ಹೇಳಿದಳು.

"ಹೌದು, ಸೇದುತ್ತಾನೆ. ಅದರಲ್ಲಿ ಆಶ್ಚರ್ಯವೇನು ಬಂತು?"

"ಒಳ್ಳೆ ಚೆನ್ನಾಗಿ ಹೇಳಿದಿರಿ ಮರ್ಯಾದಸ್ಥರು ಯಾರೇ ಆಗಲಿ ಹಾಗೆ................"

"ಮನುಷ್ಯನ ಮರ್ಯಾದೆಯನ್ನು ಇಷ್ಟು ಸಣ್ಣ ಮಾನದಿಂದ ಅಳೆಯು ಯುವುದಕ್ಕಾದೀತೆ ಪಾರ್ವತಿ? ಬೀಡಿ ಸೇದುವುದು ಅವನಿಗೊಂದು ಚಟ. ನಿನಗೆ, ನನಗೆ ಕಾಫಿ ಇದ್ದ ಹಾಗೆ ಅವನಿಗೆ ಬೀಡಿ."

"ಹಾಗಾದರೆ ಕಾಫಿಗೂ, ಬೀಡಿಗೂ ಏನೂ ವ್ಯತ್ಯಾಸವೇ ಇಲ್ಲಾ ಅನ್ನಿ"

"ಮಾಡಿದರೆ ಉಂಟು, ಇಲ್ಲದಿದ್ದರೆ ಇಲ್ಲ."

ವಾಸುವಿನ ಮೊಂಡುತನಕ್ಕೆ ಏನು ಉತ್ತರಕೊಡಬೇಕೆಂದು ಪಾರ್ವತಿಗೆ ಹೊಳೆಯಲಿಲ್ಲ, ಅವಳು ನಗುತ್ತಾ,

"ವಾದ ಮಾಡುವುದರಲ್ಲಿ ನಿಮ್ಮನ್ನು ನಾನು ಸೋಲಿಸುವುದುಂಟೆ, ಏನೋ ತೋರಿದುದನ್ನು ಹೇಳಿದೆ" ಎಂದಳು.

ವಾಸುವು ಅವಳ ಕೆನ್ನೆಯನ್ನು ಮೃದುವಾಗಿ ಸವರುತ್ತಾ,

"ಅದನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡ ಪಾರ್ವತಿ, ನೋಡುವುದಕ್ಕೆ ಮನುಷ್ಯ ಸ್ವಲ್ಪ ಒರಟು. ಆದರೆ ಸ್ವಭಾವ ಬಲು ಒಳ್ಳೆಯದು, ಒಂದು ವೇಳೆ ಕೆಟ್ಟ ಚಾಳಿಯೇನಾದರೂ ಇದ್ದರೆ, ಅದು ಅವನಿಗೆ ಬಾಧಕವೇ ಹೊರತು ಇತರರಿಗೇನೂ ಅಲ್ಲ" ಎಂದು ಸಮಾಧಾನ ಮಾಡಿದನು.

ಪಾರ್ವತಿ ತೃಪ್ತಿಗೊಂಡು ಸುಖವಾಗಿ ನಿದ್ರೆಹೋದಳು.

ಪಾರ್ವತಿಯು ಈ ಬಗೆಯ ಸಮಾಧಾನದಿಂದ ಒಂದು ವಾರವೂ ಇರಲು ಸಾಧ್ಯವಾಗಲಿಲ್ಲ. ಕಂಪನಿಯಲ್ಲಿ ಬದಲಾವಣೆಗಳು ಬಹಳ ಬೇಗ ನಡೆಯತೊಡಗಿದುವು. ಈತ್ತೀಚೆಗೆ ಪಾರ್ವತಿಗೆ ಕಾಣುವ ಹಾಗೆಯೇ

ಬೀಡಿ ಸೇದುತ್ತಿದ್ದನು. ಅಲ್ಲದೆ ರಾತ್ರಿ ಮನೆಗೆ ಬರುವ ವೇಳೆ ಕ್ರಮವಾಗಿ ಒಂಬತ್ತರಿಂದ ಹನ್ನೊಂದಕ್ಕೆ ಏರಿತು. ಊಟವಾಗುವುದೇ ತಡ ವಾಸುವು ನಿರಾತಂಕವಾಗಿ ನಿದ್ರೆಮಾಡಿಬಿಡುತ್ತಿದ್ದನು. ಆದರೆ ಪಾರ್ವತಿಗೆ ಮಾತ್ರ ಹೊತ್ತೇರಿದಂತೆಲ್ಲಾ ಎದೆ ಹೊಡೆತ ಜಾಸ್ತಿಯಾಗುತ್ತಾ ಇದ್ದಿತು. ಕಂಠಿಗೆ ಊಟಕ್ಕೆ ಬಡಿಸುವ ತಾಪತ್ರಯವೇನೂ ಇಲ್ಲದಿದ್ದರೂ, ಒಬ್ಬಳೆ ಅವೇಳೆಯಲ್ಲಿ ಎದ್ದು ಅವನಿಗೆ ಬಾಗಿಲು ತೆಗೆಯುವುದಕ್ಕೆ ಅವಳಿಗೆ ಅಧೈರ್ಯವಾಗುತ್ತಿತ್ತು, ಕಂಠಿಯು ಮನೆಗೆ ಬರುವ ಮುನ್ನ ಚೆನ್ನಾಗಿ ಕುಡಿದಿದ್ದರೂ ಇರಬಹುದು ಎಂಬ ಯೋಚನೆ ಹೊಳೆದಮೇಲೆ, ಪಾರ್ವತಿಯು ಹೆದರಿಕೆಯನ್ನು ತಡೆಯಲಾರದೆ ಗಂಡನೊಡನೆ ಒಂದು ದಿನ ಖಂಡಿತವಾಗಿ ಮಾತಾಡಿಬಿಟ್ಟಳು.

"ನಿಮ್ಮ ಸ್ನೇಹಿತನನ್ನು ಬೇರೆ ಎಲ್ಲಿಗಾದರು ಕಳುಹಿಸಿಬಿಡಿ"

"ಯಾಕೆ ಪಾರ್ವತಿ, ಏನು ತೊಂದರೆ ಮಾಡಿದ ?"

"ನನಗೆ ತೊಂದರೆಯನ್ನೇನೂ ಮಾಡದಿರಬಹುದು. ಆದರೂ ಅವರನ್ನು ಕಳುಹಿಸಿಬಿಡಿ. ಅವರಿಗೆ ಬೀಡಿ ಸೇದುವುದರ ಜೊತೆಗೆ ಇನ್ನೂ ಕೆಲವು ಬಗೆಯ ಅಭ್ಯಾಸಗಳಿರುವ ಹಾಗೆ ತೋರುತ್ತದೆ."

"ಇದೆ ಪಾರ್ವತಿ ಹೇಳುತ್ತೇನೆ ಕೇಳು, ಅವನು ಸೂಳೆಯ ಮನೆಗೆ ಹೋಗುತ್ತಾನೆ, ಜೂಜಾಡುತ್ತಾನೆ....................

"ಸಾಕು, ಸಾಕು ಅವರ ಚರಿತ್ರೆ. ಇಷ್ಟೆಲ್ಲಾ ತಿಳಿದುಕೊಂಡು ಅವರೊಡನೆ ಸ್ನೇಹ ಮಾಡಿರುವುದು ಸಾಲದೆ ಮನೆಯಲ್ಲಿ ಬೇರೆ ತಂದಿಟ್ಟುಕೊಂಡಿದ್ದೀರಿ. ನಾಳೆ ನಾಲ್ಕು ಜನ ನೋಡಿದವರಲ್ಲಿ ನಮಗೆ ಮರ್ಯಾದೆ ಬರಬೇಡವೆ ? ಬೀದಿಯ ಪೋಲಿಯೊಬ್ಬನನ್ನು ಮನೆಗೆ ಸೇರಿಸಿರುವುದರ ಅರ್ಥವಾದರೂ ಏನು ?"

"ನೋಡಿದವರಿಗೆ ಹೆದರಿಕೊಂಡು ಅವನನ್ನು ಕಳುಹಿಸಿಬಿಡು ಎನ್ನುತ್ತೀಯಾ ?"

"ನೋಡಿದವರಿಗಲ್ಲದಿದ್ದರೂ ನಮಗೋಸ್ಕರವೇ ಹಾಗೆ ಮಾಡಿ. ಅವರೇನೋ ಮೊದಲು ಹೇಗೆ ಇದ್ದರೋ ಹಾಗೆಯೇ ಇದ್ದಾರೆ. ಆದರೂ ಹೆದರಿಕೆ ಅನ್ನುವುದು ನನಗೆ ಇರುವುದಿಲ್ಲವೆ. ಯಾರ ಮನಸ್ಸು ಯಾವ ಕಾಲದಲ್ಲಿ ಹೇಗೆ ತಿರುಗುತ್ತದೋ! ಅದೂ ಅಲ್ಲದೆ ಅವರಿಗೇನು

ಇರುವುದಕ್ಕೆ ಸ್ವಂತ ಮನೆ, ಮಠ, ಹೆಂಡತಿ ಮಕ್ಕಳೊಂತ ಯಾರು ಇಲ್ಲವೆ ?"

"ಇಲ್ಲ ಪಾರ್ವತಿ, ಇದ್ದಿದ್ದರೆ ಇಲ್ಲಿ ಯಾಕೆ ಬಂದಿರುತ್ತಿದ್ದ."

"ಅವರಿಗೆ ಯಾರೂ ದಿಕ್ಕಿಲ್ಲದಿದ್ದರೆ ಅದಕ್ಕೆ ನಾವು ಹೊಣೆಯಲ್ಲ. ನೀವು ಇಲ್ಲಿಗೆ ಬಂದು ಇನ್ನೂ ವರ್ಷವೂ ತುಂಬಿಲ್ಲ. ಅಷ್ಟರಲ್ಲಿ ಇದ್ಯಾವ ದಾಕ್ಷಿಣ್ಯ. ನೀವು ಬರುವುದಕ್ಕೆ ಮೊದಲು ಹೇಗೆ ಇದ್ದರೋ ಹಾಗೇ ಇರಲಿ. ಜಗಳ ಮಾಡುವುದು ಬೇಡ. ಏಕೆಂದರೆ ಅವರು ನಮಗೆ ಸಹಾಯ ಮಾಡಿರುವರೇ ಹೊರತು, ತೊಂದರೆ ಮಾಡಿಲ್ಲ. ಉಪಾಯವಾಗಿ ದೂರ ಮಾಡಿಬಿಡಿ."

ವಾಸುವು ಕೊಂಚ ಹೊತ್ತು ಯೋಚಿಸಿದನು. ಈ ಬಾರಿ ಪಾರ್ವತಿಯು ಏನು ಮಾಡಿದರೂ ತನ್ನ ಹಟವನ್ನು ಬಿಡುವ ಹಾಗೆ ತೋರಲಿಲ್ಲ. ಆದರೂ ಕಡೆಯದಾಗಿ ಒಂದು ಮಾತು ಹೇಳಿ ನೋಡುವುದೆಂದು,

"ನೀನು ಹೇಳಿದುದೆಲ್ಲಾ ಸರಿ. ನಿನಗೆ ಅವನ ವಿಚಾರದಲ್ಲಿ ಅಷ್ಟೊಂದು ಜುಗುಪ್ಸೆಯಾದರೆ ಅವನನ್ನೂ ಕಳುಹಿಸಿಬಿಡುವ ಏರ್ಪಾಟನ್ನೇನೋ ಮಾಡುತ್ತೇನೆ. ಆದರೆ ಕಂಠಿಯ ಜೀವನ ಕಥೆಯನ್ನು ನೀನೇನಾದರೂ ಮೊದಲಿನಿಂದ ತಿಳಿದಿದ್ದರೆ, ಅವನ ವಿಚಾರದಲ್ಲಿ ನೀನು ಇಷ್ಟು ಕಠಿಣವಾಗಿ ಮಾತಾಡುತ್ತಿರಲಿಲ್ಲವೆಂದು ಕಾಣುತ್ತದೆ" ಎಂದು, ಕಂಠಿಯ ಜೀವನವನ್ನು ಹೆಂಡತಿಗೆ ವಿಶದವಾಗಿ ವಿವರಿಸಿದನು.

ಪಾರ್ವತಿ ಕಂಠಿಗಾಗಿ ತುಂಬ ಮರುಗಿದಳು. ಅಂತಹ ಮನುಷ್ಯನ ಬಾಳನ್ನು ಹಾಳು ಮಾಡಿದ ಅವನ ಹೆಂಡತಿಯನ್ನು ಮನಸಾರೆ ನಿಂದಿಸಿದಳು. ಆದರೆ ವಾಸುವಿನ ನಿರೀಕ್ಷಣೆಯಂತೆ ತನ್ನ ಹಟವನ್ನೇನೂ ಬಿಡಲಿಲ್ಲ.

"ಹಣೆಯ ಬರಹ ಅನ್ನೋದನ್ನು ಇದನ್ನೇ, ಯಾರಾದರು ಸುಖವಾಗಿದ್ದಾರೆ ಎಂದರೆ ಕೇಳಿ ಸಂತೋಷಪಡಬಹುದು. ಇಲ್ಲದೆ ಹೀಗೇ ಎಂದರೆ ಎಂತಹವರಿಗೂ ಕರುಳು ಚರುಕ್ ಅನ್ನುತ್ತೆ, ನಾನು ಬೇಕಾದರೆ ಹೇಗಾರೂ ಸರಿಹೋಗಿಸಿಕೊಂಡೇನು, ಪಾಪ, ಪ್ರಾಣಿ ತಲೆಯೆತ್ತಿಕೊಂಡೂ ತಿರುಗುವುದಿಲ್ಲ. ಆದರೆ ನನಗೆ ನಿಮ್ಮದೇ ಯೋಚನೆ.

ಗಂಡಸರ ಮನಸ್ಸು ಪಾರಿಜಾತದ ಹೂವಿನಷ್ಟು ಸೂಕ್ಷ್ಮ. ಸಹವಾಸ ಚೆನ್ನಾಗಿದ್ದರೇ ಯಾವುದಾದರೂ ವಿಷಘಳಿಗೆಯಲ್ಲಿ ಏನಾದರೂ ನಡೆದು ಹೋಗಬಹುದು. ಇನ್ನು ಹಾಲು ಕುಡಿದ ಮಗುವೇ ಬದುಕುವುದು ಕಷ್ಟ ಎನ್ನುವಾಗ ವಿಷ ಕುಡಿದ ಮಗುವು ಬದುಕೀತು ಅನ್ನೋ ಭರವಸೆ ಯೇನು?" ಎಂದಳು.

ಪಾರ್ವತಿಯು ಅವಳ ಆತಂಕವನ್ನು ತನ್ನ ಕಡೆಗೆ ತಿರುಗಿಸಿದಾಗ ವಾಸುವಿನ ಕೈಕಾಲುಗಳು ತಣ್ಣಗಾದುವು. ಮುಖವು ಪೆಚ್ಚಾಯಿತು. ಅವಳ ಮತ್ತು ಕಂಠಿಯ ಕಣ್ಣುಗಳಿಗೆ ಮಣ್ಣೆರಚಿ, ತಾನು ಊರಿಗೆ ಬಂದಮೇಲೆ ನಾಲ್ಕೈದು ಬಾರಿ ಶ್ರೀಮತಿಯ ಮನೆಗೆ ಹೋಗಿ ಬಂದುದರ ನೆನಪು ಬಂದು ಅವನೆದೆ ಹೊಡೆದುಕೊಂಡಿತು. ನಾಳೆ ತನ್ನ ಗುಟ್ಟು ಬಯಲಾದರೇ, ಎಂಬ ಯೋಚನೆಯು ಬಂದಾಗ ಅವನು ಹೆಂಡತಿಯನ್ನು ಅಪರಾಧಿಯು ದೀನನಾಗಿ ನೋಡುವಂತೆ ನೋಡಿದನು. ಪಾರ್ವತಿಯು ಬಹಳ ಮಾತಾಡಿ ವಾಸುವನ್ನು ನೋಯಿಸಿದೆನೆಂದು ಬೆರಳು ಕಚ್ಚಿಕೊಂಡಳು. ಆಮೇಲೆ ತನ್ನ ತಪ್ಪನ್ನು ತಿದ್ದಿಕೊಳ್ಳಲು,

"ನಿಮ್ಮನ್ನು ಅವರೊಡನೆ ಹೋಲಿಸಬೇಕೆಂದು ಹೇಳಲಿಲ್ಲ. ಎಂತೆಂತಹ ಮಹಾತ್ಮರುಗಳು ಅನ್ನಿಸಿಕೊಂಡವರೇ ಒಂದೊಂದು ಸಲ ಹಳ್ಳಕ್ಕೆ ಬೀಳುತ್ತಾರೆ ಅನ್ನುತ್ತಾರಲ್ಲ, ಅದಕ್ಕೆ ಹೇಳಿದೆ ಅಷ್ಟೆ" ಎಂದು ಬೇಡಿಕೊಂಡಳು.

ವಾಸುವಿಗೆ ಮಾತ್ರ ಒಳಗಿನ ಎದೆಗುದಿ ಬಹಳವಾಗಿತ್ತು. ಅವನು ಮಾತನ್ನು ಇನ್ನು ಮುಂದೆ ಬೆಳೆಸಲು ಇಷ್ಟವಿಲ್ಲದೆ,

"ಈಗೇನು, ನಿನ್ನ ಇಷ್ಟದಹಾಗೇ ಆಗಲಿ. ನಾಳೆ ಯಾವುದನ್ನೂ ಯೋಚಿಸೋಣ. ಈಗ ಹೊತ್ತಾಯಿತು ಮಲಗಿಕೊ" ಎಂದನು.

ಪಾರ್ವತಿಯು ಸದ್ಯಕ್ಕೆ ಕಂಠಿಯು ಬೇಗ ಬಂದರೆ ಬಾಗಿಲು ತೆರೆದು ದೃಢವಾಗಿ ನಿದ್ರೆ ಮಾಡಬಹುದಲ್ಲಾ ಎಂದು ಯೋಚಿಸುತ್ತಾ, ಹಾಗೆಯೆ ಹಾಸಿಗೆಯ ಮೇಲೆ ಉರುಳಿಕೊಂಡಳು.

ಮಾರನೆ ದಿನ ಬೆಳಿಗ್ಗೆ ವಾಸುವು ತನ್ನ ಕೋಣೆಯಲ್ಲಿ ನೋಟ್ಸ್ ಆಫ್ ಲೆಸನ್ಸ್‌ನ್ನು ಸಿದ್ಧ ಮಾಡಿಕೊಳ್ಳುತ್ತಿದ್ದನು. ಪಾರ್ವತಿ ಅಡುಗೆ ಮನೆಯಲ್ಲಿದ್ದಳು. ಈ ಸಮಯವನ್ನು ನೋಡಿ ಕಂಠಿಯು ಮೆಲ್ಲನೆ

ಬಾಗಿಲನ್ನು ನೂಕಿಕೊಂಡು ವಾಸುವಿನ ಕೋಣೆಗೆ ಬಂದನು. ಅನಿರೀಕ್ಷಿತ ವಾಗಿ ಅವನು ಬಂದುದನ್ನು ನೋಡಿ ವಾಸುವು ಆಶ್ಚರ್ಯದಿಂದ,

"ಏನು ಕಂಠಿ? ಏನೋ ಸಮಾಚಾರ ತಂದಹಾಗಿದೆಯಲ್ಲಾ" ಎಂದನು.

"ಹೂಂ, ಅದಕ್ಕೇ ಇಷ್ಟು ಅವಸರ. ನೀನು ಏನೂ ತಿಳಿದುಕೊಳ್ಳ ದಿದ್ದರೆ ಒಂದು ಮಾತು ಹೇಳುತ್ತೇನೆ. ನಾನು ಈ ದಿವಸ ಮೊದಲಿದ್ದ ರೂಮಿಗೆ ಹೊರಟುಹೋಗಬೇಕೆಂದುಕೊಂಡಿದ್ದೇನೆ."

ಯಾವ ಕೆಲಸವನ್ನು ಮಾಡುವುದು ಕಷ್ಟಾಸಾಧ್ಯವೆಂದು ಯೋಚಿ ಸುತ್ತಿದ್ದನೋ ಅದು ತನಗೆ ತಾನೇ ಆಗಿಹೋಗುತ್ತಿರುವುದನ್ನು ಕಂಡು ವಾಸುವಿಗೆ ಪ್ರಸಂಗವನ್ನು ನಂಬುವುದಕ್ಕೇ ಆಗಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ಆಲೋಚಿಸಿ,

"ಯಾಕೆ ಕಂಠಿ, ಪಾರ್ವತಿ ಏನಾದರೂ ಅಂದಳೇ?" ಎಂದು ಕೇಳಿ ದನು.

"ಇಲ್ಲ ವಾಸು, ಅವರು ನನ್ನನ್ಯಾಕೆ ಅನ್ನುತ್ತಾರೆ ಪಾಪ. ನಿಮಗೆ ಕೊಡುತ್ತಿರುವ ತೊಂದರೆಯನ್ನು ನೋಡಿ ನನಗೇ ನಾಚಿಕೆಯಾಗಿದೆ. ಏನು ಮಾಡಲಿ, ಬಹಳ ದಿನದಿಂದ ಅಂಟಿಬಂದಿರುವ ಅಭ್ಯಾಸಗಳನ್ನು ಒಂದು ತಡವೆಗೇ ಬಿಡು ಎಂದರೆ ಸಾಧ್ಯವಾಗುವುದಿಲ್ಲ. ಅಲ್ಲದೆ ಪ್ರಪಂಚ ದಲ್ಲಿ ಯಾರಿಗಾಗಿ ಒಳ್ಳೆಯವನಾಗಿ ಬಾಳಬೇಕಾಗಿದೆ ಹೇಳು. ಒಳ್ಳೆಯ ಮಾರ್ಗದಿಂದಲೊ, ಕೆಟ್ಟ ಮಾರ್ಗದಿಂದಲೊ ಸ್ವಲ್ಪ ಸುಖವನ್ನು ಕಂಡರೆ ಅಷ್ಟರಲ್ಲಿ ತೃಪ್ತಿಪಡುತ್ತೇನೆ. ಅದೂ ಇಲ್ಲದೆ ಇರು ಎಂದರೆ ತುಂಬಾ ಕಠಿಣವಾಗಿ ತೋರುತ್ತೆ."

ವಾಸುವು ಮತ್ತೆ ಕೊಂಚಕಾಲ ಮಾತಾಡಲಿಲ್ಲ. ಆಮೇಲೆ ನಿಧಾನ ವಾಗಿ,

"ಇಷ್ಟರಮೇಲೆ ನಿನ್ನ ಇಷ್ಟ. ಯಾವ ವಿಷಯದಲ್ಲೂ ಹೆಚ್ಚಿಗೆ ಬಲವಂತ ಮಾಡಲು ನಾನು ಹೋಗುವುದಿಲ್ಲ" ಎಂದನು.

"ಒಂದು ರೀತಿಯಲ್ಲಿ ಅದು ಬಹಳ ಒಳ್ಳೆಯದೇ. ದೇಹಗಳು ದೂರವಾದರೇನಂತೆ, ಮನಸ್ಸು ಹತ್ತಿರವಾಗಿದ್ದರಾಯ್ತು. ಏನಾದರೂ ಹೇಳುವುದಿದ್ದರೆ ನೀನೇ ಅಲ್ಲಿಗೆ ಬಂದರೂ ಸರಿಯೆ; ಇಲ್ಲ ನಾನೇ ಇಲ್ಲಿಗೆ ಬಂದರೂ ಬಂದೇನು. ಇದರಿಂದ ಯಾರಿಗೂ ತೊಂದರೆಯಿರುವುದಿಲ್ಲ."

ಕೆಂಚಿಯು ಇಷ್ಟು ಹೇಳಿ ಸಂತೋಷದಿಂದ ಹೊರಟುಹೋದನು. ಆದರೆ ವಾಸುವು ಮಾತ್ರ ಚಲನವಿಲ್ಲದ ಗೊಂಬೆಯಂತೆ ಅನ್ಯಮನಸ್ಕನಾಗಿ ಆಕಾಶವನ್ನೇ ನೋಡುತ್ತ ಕುಳಿತಿದ್ದನು. ಅವನು ಕಂಚಿಯನ್ನು ಕಳು ಹಿಸಿಬಿಡಲು ಹಿಂಜರಿಯುತ್ತಿದ್ದುದಕ್ಕೆ ಒಂದು ಕಾರಣವಿತ್ತು. ತನ್ನ ಬುದ್ಧಿ ಯನ್ನು ತನ್ನ ಪಡೋಟಿಯಲ್ಲಿಟ್ಟುಕೊಳ್ಳುವ ಶಕ್ತಿಯನ್ನು ಕಳೆದುಕೊಂ ಡಿದ್ದ ಅವನಿಗೆ ಕಂಚಿಯು ಮನೆಯಲ್ಲಿದ್ದುದು ಅವನ ಸ್ವೇಚ್ಛಾಚಾರಗಳಿಗೆ ಒಂದು ಬಗೆಯ ಅಡ್ಡಿಯಾಗಿತ್ತು. ಈಗ ಆ ಆತಂಕವು ದೂರವಾಗುವು ದೆಂದರೆ ಅವನಿಗೆ ಒಂದು ವಿಧದಲ್ಲಿ ಸಂತೋಷವೂ, ಮತ್ತೊಂದು ವಿಧದಲ್ಲಿ ಭಯವೂ ಉಂಟಾಗಿತ್ತು. ಬಹಳ ಹೊತ್ತು ಚಿಂತಿಸಿ ಕೊನೆಗೆ ದೇವರು ಮಾಡಿಸಿದ ಹಾಗಾಗಲಿ ಎಂದು ಸುಮ್ಮನಾದನು.

## ೨೦

ಕಂಚಿಯನ್ನು ದೂರ ಕಳುಹಿಸಿದ ಮೇಲೆ ಪಾರ್ವತಿಗೆ ಅವಳ ಎದೆಯ ಮೇಲಿದ್ದ ಯಾವುದೋ ಒಂದು ಭಾರವನ್ನು ಇಳಿಸಿದಷ್ಟು ಹಗುರವಾಯಿತು. ಮುಂದೆ ಬಂದಿದ್ದ ಭಯಂಕರ ಸಮಸ್ಯೆ ಒಂದು ಕಲಹಕ್ಕೆಡೆ ತಾರದೆ ಬಗೆಹರಿದು ಹೋಯಿತಲ್ಲಾ ಎಂಬ ಸಂತೋಷ ಅವಳಿಗೆ ಎಲ್ಲದರಲ್ಲೂ ಹೊಸ ಹುರುಪನ್ನು ಕೊಟ್ಟಿತ್ತು. ಆದರೆ ಅವಳ ಯಾವೊಂದು ಉತ್ಸಾಹವೂ ವಾಸುವಿನ ಮನಸ್ಸನ್ನು ಆಕರ್ಷಿಸಿ ಸರೋಜ ಳಿಂದ ಅವನನ್ನು ದೂರಮಾಡುವಷ್ಟು ಶಕ್ತಿಶಾಲಿಯಾಗಲಿಲ್ಲ. ವಾಸುವಿನ ಮನಸ್ಸು ದಿನದಿನಕ್ಕೆ ಸರೋಜೆಯ ಕಡೆಗೆ ವಾಲತೊಡಗಿತು. ಅಲ್ಲದೆ ಅವನ ಈ ದಾರಿಯಲ್ಲಿದ್ದ ಮುಳ್ಳುಗಳು ತಮಗೆ ತಾವೇ ಮಾಯವಾಗಿ ದ್ದುವು. ಪಾರ್ವತಿಗೆ ಚಾಡಿ ಹೇಳತಕ್ಕವನಾಗಿದ್ದ ಕಂಚಿ ದೂರ ಹೋಗಿ ದ್ದನು. ಅತ್ತ ಸೀತಮ್ಮನವರಿಗೆ ವಿಷಯವನ್ನು ತಿಳಿಸಬಲ್ಲವನಾಗಿದ್ದ ಕಿಟ್ಟಿಗೆ ಬೇರೆ ಊರಿಗೆ ವರ್ಗವಾಗಿತ್ತು ವಾಸುವು ಸಾಯಂಕಾಲದಿಂದ ರಾತ್ರಿ ಹತ್ತು ಗಂಟೆಯ ವರೆಗೆ ನಿರಾತಂಕವಾಗಿ ಸರೋಜಳ ಮನೆಯಲ್ಲಿ ಕಾಲ ನೂಕತೊಡಗಿದನು. ಸಂಜೆ ತಾನು ಮನೆಗೆ ಬರದಿದ್ದದಕ್ಕೆ ಒಂದೆರಡು ಪಾಠಗಳನ್ನು ಗೊತ್ತುಮಾಡಿಕೊಂಡಿರುವುದಾಗಿ ಪಾರ್ವತಿಗೆ ಸುಳ್ಳು ಹೇಳಿದನು. ಮುಗ್ಧಳಾದ ಪಾರ್ವತಿಗೆ ಯಾವ ಕಪಟವೂ

ಗೊತ್ತಾಗಲಿಲ್ಲ. ಹಳ್ಳಿಯಲ್ಲಿ ಬೆಳೆದ ಅವಳಿಗೆ ನಿಷ್ಕಪಟತೆಯನ್ನು ಬಿಟ್ಟು ವಾಸುವಿನ ಮನಸ್ಸನ್ನು ಆಕರ್ಷಿಸಬಲ್ಲ ಬೇರೆ ಯಾವ ವಿಶೇಷ ಜಾಣತನವೂ ಇರಲಿಲ್ಲ. ಕೈ ಹಿಡಿದ ಗಂಡನನ್ನು ಬಿಚ್ಚಿದ ಮನಸ್ಸಿನಿಂದ ಪ್ರೀತಿಸಬೇಕು ಎಂದು ತಿಳಿದಿದ್ದಳು. ಹಾಗೆಯೇ ತ್ರಿಕರಣ ಶುದ್ಧವಾಗಿ ಪ್ರೀತಿಸುತ್ತಲೂ ಇದ್ದಳು. ಆದರೆ ಸರೋಜಳನ್ನು ಕಂಡ ವಾಸು, ಕೇವಲ ಭಕ್ತಿ ಪ್ರೀತಿಯಿಂದ ತೃಪ್ತಿಪಡುವವನಾಗಿರಲಿಲ್ಲ. ಸರೋಜ ದೇವಿಯಾಗಿದ್ದಳು. ಅವಳಲ್ಲಿ ಇಂತಹುದು ಕಡಿಮೆಯೆಂದು ಹೇಳುವುದಕ್ಕೆ ಅಸಾಧ್ಯವಾಗುತ್ತಿತ್ತು. ಚಿಕ್ಕಂದಿನಿಂದ ಸಾಕಿ ಸಲಹಿದ ಸೀತಮ್ಮನವರೂ ವಾಸುವಿನ ಮನಸ್ಸನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರೋ ಇಲ್ಲವೊ ತಿಳಿಯದು. ಸರೋಜ ಕೇವಲ ಸಂಜ್ಞೆ ಮಾತ್ರದಿಂದ ವಾಸುವಿನ ಮನೋಭಿಪ್ರಾಯಗಳನ್ನು ತಿಳಿದುಕೊಂಡುಬಿಡುತ್ತಿದ್ದಳು. ವಾಸುವು ಎಂದಾದರೂ ಖಿನ್ನನಾಗಿ ಕಂಡರೆ ಕೂಡಲೆ ತನ್ನ ಗಾನ ಲಹರಿಯಲ್ಲಿ ಅವನನ್ನು ತೇಲಿಸಿ ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗಿಬಿಡುತ್ತಿದ್ದಳು. ಅವನು ಪ್ರಸನ್ನನಾಗಿ ಕಂಡರೆ ಅದೆಷ್ಟು ಅವನನ್ನು ಹಾಸ್ಯಮಾಡಿ ಗೋಳು ಹೊಯ್ದುಕೊಳ್ಳುತಿದ್ದಳೋ ಅದನ್ನು ಹೇಳತೀರದು. ವಾಸುವು ಮನೆಗೆ ಹೊರಡುವ ಹೊತ್ತಿಗೆ ಇಬ್ಬರಿಗೂ ನಕ್ಕೂ ನಕ್ಕೂ ಸಾಕಾಗಿ ಹೋಗುತ್ತಿತ್ತು. ಸರೋಜೆಯ ಸಾಮೀಪ್ಯವೆಂದರೆ ವಾಸುವಿಗೆ ಸ್ವರ್ಗವಿದ್ದ ಹಾಗೆ. ಅವಳು ಹಾಡುವುದು ಬೇಡ, ಮಾತಾಡುವುದು ಬೇಡ, ಕೇವಲ ಅವಳೊಂದು ಬಾರಿ ತನ್ನ ಮುಂಗುರುಳುಗಳನ್ನು ಗಾಳಿಯಲ್ಲಿ ತೇಲಿಬಿಟ್ಟು ಮೃದುವಾಗಿ ನಕ್ಕರೇ ಸಾಕು, ವಾಸುವಿಗೆ ಅನಂತ ಸುಖ ದೊರೆತ ಹಾಗಾಗುತ್ತಿತ್ತು. ಅವಳೊಂದು ಬಾರಿ ನಿಬಿಡವಾಗಿ ಬೆಳೆದಿದ್ದ ಕೂದಲುಗಳಿಂದ ಕೂಡಿದ ರೆಪ್ಪೆಗಳನ್ನು ನಿಧಾನವಾಗಿ ತೆರೆದು ಅವನನ್ನು ಪ್ರಶಾಂತವಾಗಿ ನೋಡಿದರೆ, ವಾಸುವು ಮಂತ್ರಮುಗ್ಧವಾದ ಹಾವಿನಂತೆ ಅವಳನ್ನೇ ನೋಡುತ್ತಾ ಕುಳಿತುಬಿಡುತ್ತಿದ್ದನು. ಅವನು ಆಗಾಗ್ಗೆ ತನ್ನನ್ನು ಬಿಟ್ಟ ಕಣ್ಣು ಬಿಟ್ಟಹಾಗೇ ನೋಡುವುದನ್ನು ಕಂಡು, ಒಂದು ಬಾರಿ ಸರೋಜ,

"ನನ್ನನ್ನು ಯಾಕೆ ಹಾಗೆ ನೋಡುತ್ತೀರಿ?" ಎಂದು ಕೇಳಿದಳು.

"ನೀನು ಯಾಕೆ ಇಷ್ಟು ಚೆನ್ನಾಗಿರುವೆ?"

"ನೀವು ಹೇಳುವಷ್ಟು ಚೆಲುವು ನನ್ನಲ್ಲಿ ಇಲ್ಲವಾದರೂ, ನಿಮ್ಮ ಬಾಯಿಂದ ಹೊಗಳಿಸಿಕೊಳ್ಳುವುದು ಎಂದರೆ ನನಗೆ ತುಂಬಾ ಆಸೆ."

"ಬರಿಯ ಹೊಗಳಿಕೆ ಅಲ್ಲಾ ಸರೋಜ. ನನಗೆ ಒಂದೊಂದು ದಿನ ನೀನು ಯಾಕೆ ಇಷ್ಟು ಚೆನ್ನಾಗಿದ್ದೀಯೋ ಎಂದು ಹೆದರಿಕೆ ಆಗುತ್ತೆ."

ವಾಸುವಿನ ಮುಖದಲ್ಲಿ ಆಳವಾದ ಅತಂಕವಿದ್ದುದನ್ನು ನೋಡಿ ಸರೋಜ ಅವಕ್ಕಾಗಿಹೋದಳು.

"ನನ್ನ ಮಾತನ್ನು ಕೇಳಿ ನಿನಗೆ ಆಶ್ಚರ್ಯವಾಗಬಹುದು. ಆದರೂ ಹೇಳುತ್ತೇನೆ ಕೇಳು. ನೀನು ಇಷ್ಟೇ ಸುಂದರವಾಗಿದ್ದು, ನಿನ್ನ ಗುಣವು ಮಾತ್ರ ಕುರೂಪನ್ನು ಹೊಂದಿದ್ದರೆ ನನಗಿಷ್ಟು ಹೆದರಿಕೆಯಾಗುತ್ತಿರಲಿಲ್ಲ. ಪರಿಪೂರ್ಣತೆಯೆನ್ನುವುದು ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಇದ್ದರೆ ಈ ಲೋಕದಲ್ಲಿ ಹೆಚ್ಚು ದಿನವಿರಲು ಅದಕ್ಕೆ ಯಾವ ಹಕ್ಕೂ ಇರುವುದಿಲ್ಲ. ಅದು ಬೇಗ ಇಲ್ಲಿಂದ ಪಾರಾಗಿ ಹೊರಟು ಹೋಗುತ್ತದೆ."

ಅದಕ್ಕೆ ಸರೋಜ ನಕ್ಕು,

"ನೀವು ತುಂಬಾ ಪುಸ್ತಕವನ್ನೋದುವ ಹಾಗೆ ಕಾಣುತ್ತೆ. ಕಾದಂಬರಿಗಳನ್ನು ಓದಿಓದಿ, ಏನೇನೋ ಮಾತಾಡುವುದನ್ನು ಕಲಿತು ಬಿಟ್ಟಿದ್ದೀರಿ" ಎಂದು ವಿಷಯುವನ್ನು ಬೇರೆಡೆಗೆ ತಿರುಗಿಸಿಬಿಟ್ಟಳು.

ವಾಸುವು ತನ್ನೊಡನೆ ವಿಶೇಷವಾಗಿ ಕಾಲಹರಣ ಮಾಡು ವುದರಿಂದ ಸ್ವಾರ್ಥಪರಳಲ್ಲದ ಸರೋಜಳಿಗೆ ಒಂದು ವಿಧದಲ್ಲಿ ತುಂಬ ಸಮಾಧಾನವಾಗುತ್ತಿದ್ದರೂ, ಇನ್ನೊಂದು ವಿಧದಲ್ಲಿ ಅಸಮಾಧಾನ ವಾಗುತ್ತಿತ್ತು. ಅವಳು ವಾಸುವನ್ನು ತನ್ನ ದೇವರೆಂದು ಆರಾಧಿಸುತ್ತಿ ದ್ದಳು. ಅವನು ತನ್ನ ಕಣ್ಣಿನಿಂದ ಒಂದು ಘಳಿಗೆ ದೂರವಾದರೂ ಅವಳ ಹೃದಯ ಸಹಿಸಲಾರದೆ ಸಂಕಟಪಡುತ್ತಿತ್ತು. ಇಷ್ಟಾದರೂ ಸರೋಜೆಯು ವಾಸುವು ಬಹಳ ಹೊತ್ತು ಕುಳಿತರೆ,

"ನಿಮಗೆ ನನ್ನೊಡನೆ ಇದ್ದರೆ ಮನೆಯ ಯೋಚನೆಯೇ ಬರುವುದಿಲ್ಲವೆಂದು ತೋರುತ್ತೆ. ಗಂಟೆ ನೋಡಿ ಎಷ್ಟಾಯಿತು!" ಎಂದು ಎಚ್ಚರಿಸುತ್ತಿದ್ದಳು. ಇದಕ್ಕೆ ಕಾರಣವಿಷ್ಟೆ. ತನ್ನಂತೆಯೇ ವಾಸುವನ್ನು ಭಕ್ತಿಯಿಂದ ಆರಾಧಿಸುತ್ತಿರುವ ಇನ್ನೊಂದು ಜೀವದಿಂದ ಅವನನ್ನು ತನ್ನ ಬಳಿಗೆ ಕಸಿದುಕೊಳ್ಳುವ ಅಭಿಲಾಷೆ ಅವಳಿಗಿರಲಿಲ್ಲ.

ಒಂದು ದಿನ ಇದ್ದಕ್ಕಿದ್ದ ಹಾಗೆ ಸರೋಜ ವಾಸುವನ್ನು, "ನಿಮ್ಮ ಹೆಂಡತಿಯನ್ನು ನನಗೆ ತೋರಿಸುವುದಿಲ್ಲವೇ?" ಎಂದು ಕೇಳಿದಳು.

"ಅವಳು ನೀನು ನೋಡಬೇಕೆನ್ನುವಷ್ಟರಮಟ್ಟಿನ ಸುಂದರಿಯೂ ಅಲ್ಲ; ಚತುರೆಯೂ ಅಲ್ಲ"

"ಅವರು ಹೇಗಾದರೂ ಇರಲಿ. ಅದನ್ನು ಪರೀಕ್ಷಿಸುವುದಕ್ಕೆ ನಾನು ಹೋಗುವುದಿಲ್ಲ. ಅವರೊಡನೆ ಕೊಂಚ ಮಾತಾಡಬೇಕಾಗಿದೆ."

ವಾಸುವಿಗೆ ಬೆಚ್ಚಿಬೀಳುವ ಹಾಗಾಯಿತು.

"ಸರೋಜ, ಏನಾದರು ತಮಾಷೆ ಮಾಡುತ್ತಿದ್ದೀಯೋ ಹೇಗೆ?"

ಸರೋಜೆಯು ಪಾರ್ವತಿಯೊಡನೆ ಮಾತಾಡಬೇಕಾಗಿರುವ ಅಂತಹ ಗಹನವಾದ ವಿಚಾರವಾದರೂ ಏನು ಎಂಬುದು ವಾಸುವಿಗೆ ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ.

"ನಾನು ಹಾಸ್ಯ ಮಾಡುತ್ತಿಲ್ಲ. ನಿಜವಾಗಿಯೂ ಅವರೊಡನೆ ನಾನು ಮಾತಾಡಬೇಕು. ಮನಬಿಚ್ಚಿ ಅವರೆದುರು ನನ್ನ, ನಿಮ್ಮ ಸಂಬಂಧವನ್ನು ವಿಶದವಾಗಿ ಹೇಳಬೇಕು"

"ಅಯ್ಯೋ ದೇವರೆ! ನಿನಗೇನಾದರು ಹುಚ್ಚು ಹಿಡಿದಿದೆಯೋ ಏನೋ ಗೊತ್ತಾಗಲಿಲ್ಲ. ಪಾರ್ವತಿಯ ಬಳಿ ನೀನು ಹೋಗಿ ನಮ್ಮ ಗೆಳೆತನವನ್ನು ವಿಶದವಾಗಿ ವಿವರಿಸುವುದು? ಅದರ ಪರಿಣಾಮ ಏನೆಂದು ಗೊತ್ತೆ?"

"ನನಗೆ ಗೊತ್ತಿಲ್ಲ, ಹೇಳಿ"

"ಮೊದಲು ನಿನ್ನನ್ನು ಕತ್ತು ಹಿಡಿದು ಆಚೆ ತಳ್ಳುತ್ತಾಳೆ. ಆಮೇಲೆ ನನ್ನ ಮುಖವನ್ನು ನೋಡುವುದಕ್ಕೂ ಇಷ್ಟಪಡುವುದಿಲ್ಲ."

"ಹಾಗೆಂದಿಗೂ ಆಗುವುದಿಲ್ಲ. ಅವರು ಒಳ್ಳೆಯವರೆಂದು ನನಗನಿಸುತ್ತದೆ. ನಾನು ಎಲ್ಲವನ್ನೂ ಸರಿಯಾಗಿ ಹೇಳುತ್ತೇನೆ. ನಿಮ್ಮ ದೇವರೇ ನನ್ನ ದೇವರು. ನಾವಿಬ್ಬರೂ ಒಂದೇ ಸಾಗರವನ್ನು ಸೇರುವ ಎರಡು ನದಿಗಳಿದ್ದ ಹಾಗೆ. ನಮ್ಮ ನಮ್ಮಲ್ಲಿ ಮನಸ್ತಾಪ ಬೇಡ. ದ್ವೇಷಾಸೂಯೆಗಳಿಲ್ಲದೆ ಅಕ್ಕತಂಗಿಯರಾಗಿ ಬಾಳೋಣ ಎಂದು ಹೇಳುತ್ತೇನೆ."

ಸರೋಜೆಯ ಹುಚ್ಚು ಉತ್ಸಾಹವನ್ನು ನೋಡಿ ವಾಸುವಿಗೆ ತಲೆಯ ಮೇಲೆ ಆಕಾಶವೇ ಕಳಚಿಬಿದ್ದ ಹಾಗಾಯಿತು.

"ಸರೋಜ, ನಿನ್ನ ಬುದ್ಧಿಗೆ ಅಳಬೇಕೋ, ನಗಬೇಕೋ

ತಿಳಿಯುವುದಿಲ್ಲ. ನಿನ್ನ ತಿಳಿವಳಿಕೆ ಎಲ್ಲರಲ್ಲೂ ಇರುತ್ತದೆ ಎಂದುಕೊಂಡೆಯಾ? ಪಾರ್ವತಿಯು ಒಳ್ಳೆಯ ಹುಡುಗಿಯೇನೋ ನಿಜ. ಆದರೆ ಹಳ್ಳಿಯಲ್ಲಿ ಬೆಳೆದವಳು. ಅವಳಿಗೆ ನಿನ್ನ ಈ ತರ್ಕ, ನ್ಯಾಯಗಳು ಅರ್ಥವಾಗುವುದಿಲ್ಲ. ನೀನು ಇಂತಹವರ ಮನೆಯಲ್ಲಿ ಹುಟ್ಟಿದವಳೆಂದು ತಿಳಿದರೂ ಸಾಕು, ನಿರ್ದಾಕ್ಷಿಣ್ಯವಾಗಿ ಅವಳು ನಿನ್ನನ್ನು ಮನನೋಯುವಂತೆ ಏನಾದರೂ ಅಂದುಬಿಡುತ್ತಾಳೆ. ಇಲ್ಲವೇ ನಾನು ಮೊದಲು ಹೇಳಿದ ಕೆಲಸ ಮಾಡುವುದಕ್ಕೂ ಸಿದ್ಧವೇ. ಆಮೇಲೆ ನಿನ್ನ ಗತಿ ದೇವರಿಗೇ ಗೊತ್ತು."

ಕೋಪದಿಂದ ಸರೋಜೆಯ ಮುಖ ಕೆಂಪೇರಿತು. ಸ್ವಾಭಾವಿಕವಾಗಿ ಅವಳು ಉಗ್ರವಾಗಿರುವುದನ್ನು ವಾಸುವು ಹಿಂದೆಂದೂ ನೋಡಿರಲಿಲ್ಲ.

"ಹಾಗಾದರೆ ಈ ಮೋಸದ ಬಾಳಿನಲ್ಲೇ ನನ್ನನ್ನು ಕಾಲ ತಳ್ಳು ಎಂದು ಹೇಳುತ್ತೀರಾ?"

"ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತಿದ್ದೀಯಾ ನೋಡು. ನಾನು ನಿನ್ನನ್ನು ಮೋಸದ ಜೀವನ ನಡೆಸೆಂದು ಹೇಳಲಿಲ್ಲ. ಆದರೆ ಪಾರ್ವತಿಗೆ ಇದನ್ನೆಲ್ಲ ಹೇಳಲು ಇನ್ನೂ ಕಾಲಾವಕಾಶವಿದೆ ಎಂದು ಹೇಳಿದೆ ಅಷ್ಟೆ. ನಿನಗೆ ಅಷ್ಟೊಂದು ಕುತೂಹಲವಿದ್ದರೆ, ನಿನಗೆ ತೋರಿದಹಾಗೇ ಮಾಡು. ಅದರ ಫಲಿತಾಂಶವನ್ನು ಮಾತ್ರ ನನಗೆ ಭಾವಿಸಿಕೊಳ್ಳುವುದಕ್ಕೂ ಭಯವಾಗುತ್ತದೆ."

ಸರೋಜ ಕೊಂಚ ಹೊತ್ತು ಯೋಚನೆ ಮಾಡಿದಳು. ವಾಸುವು ಹೇಳುತ್ತಿರುವುದರಲ್ಲಿ ಸತ್ಯಾಂಶವಿದ್ದಿತು. ತಾನು ಎಷ್ಟೇ ಪರಿಶುದ್ಧವಾಗಿದ್ದರೂ, ತನ್ನ ಹಿನ್ನಲೆಯ ಕಳಂಕ ಮಾತ್ರ ಸತ್ತರೂ ತಪ್ಪುವುದಿಲ್ಲವೆಂದು ಅವಳು ಚೆನ್ನಾಗಿ ಮನಗಂಡಿದ್ದಳು. ಒಟ್ಟು ಸಮಾಜವೇ ತನ್ನ ಜಾತಿಯನ್ನು ನ್ಯಾಯಾನ್ಯಾಯಗಳ ಪರಿವಿಲ್ಲದೆ ಕೀಳೆಂದು ಸಾರುವಾಗ, ಇನ್ನು ಪಾರ್ವತಿಯಂತಹ ತಿಳಿವಳಿಕೆ ಇಲ್ಲದ ಹುಡುಗಿ ತಿರಸ್ಕಾರ ಮಾಡದೆ ಇರುವುದಾದರೂ ಹೇಗೆ? ಸರೋಜ ಸಹಾಯಶೂನ್ಯಳಾದಳು. ಸಮಾಜವನ್ನು ಮನಸಾರೆ ಹಳಿದಳು. ಬಾಳು ಬಹಳ ಕಹಿಯೆಂದು ಅವಳಿಗೆ ಆ ದಿನ ಹೊಳೆದ ಹಾಗೆ ಹಿಂದೆಂದೂ ತೋರಿರಲಿಲ್ಲ.

## ೨೧

"ಅಂತೂ ಶ್ರೀಮತಿಯೂ ನಿನ್ನ ಬಲೆಗೆ ಬಿದ್ದಳು ಅನ್ನು"

ಬಟ್ಟೆಗಳನ್ನು ಮಡಿಸುತ್ತಾ ಕಂಠಿಯು ವ್ಯಂಗ್ಯವಾಗಿ ನಕ್ಕು ವಾಸುವಿನ ಮುಖವನ್ನು ನೋಡಿದನು. ಅವನ ಮುಖದಲ್ಲಿ ಜಯಾಪಜಯಗಳು ಸಮಾನವಾಗಿ ಮುದ್ರಿತವಾಗಿದ್ದುವು. ನಿರಾಶೆಯ ನಗೆಯೊಂದನ್ನು ನಗುತ್ತಾ ವಾಸುವು ಹೇಳಿದನು :

"ಅವಳನ್ನು ಬಲೆಗೆ ಹಾಕಿಕೊಳ್ಳುವ ಮಾರ್ಗ ಯಾವುದೂ ಅನ್ನುವುದು ಗೊತ್ತಾಯಿತು. ಆದರೆ ಅದಕ್ಕೆ ತಕ್ಕ ಸಾಧನೆ ಇಲ್ಲ."

"ಹಾಗೆಂದರೆ ?"

"ನನಗೆ ಬರುವ ಅಲ್ಪ ವೇತನದಲ್ಲಿ ಮನೆಯ ಸಂಸಾರವನ್ನೂ ನೋಡಿಕೊಂಡು, ಶ್ರೀಮತಿಯನ್ನೂ ಸಂತೋಷಪಡಿಸಲು ಸಾಧ್ಯವಿಲ್ಲ ಕಂಠಿ. ಇಷ್ಟಲ್ಲದೆ ಜೊತೆಗೆ ಮನೆಯಲ್ಲಿ ಅವಳಿಗೆ ಸದಾ ರೋಗ. ಈ ಊರ ಹವ ಒಂಟಲಿಲ್ಲವೋ ಏನೋ ಸದಾ ನರಳುತ್ತಾ ಬಿದ್ದಿರುತ್ತಾಳೆ.''

"ಅಷ್ಟು ಗಟ್ಟಿಮುಟ್ಟಾದ ಹುಡುಗಿಗೆ ರೋಗವೇನು ಬಂತು. ಎಲ್ಲೋ ಮನಸ್ಸಿಗೆ ಕೊರಗು ಹಚ್ಚಿಕೊಂಡಿರಬೇಕು. ಕೊಂಚ ಒರಟಾದ ಮಾತ್ರಕ್ಕೆ ನೀನು ಅವಳಲ್ಲಿ ಅಷ್ಟೊಂದು ಕ್ರೋಧ ತೋರಬಾರದು."

ಕಂಠಿಯು ಬುದ್ಧಿವಾದವನ್ನು ಕೇಳಿ ವಾಸುವಿಗೆ ರೇಗಿಹೋಯಿತು.

"ನೀನು ಅವಳನ್ನು ವಹಿಸಿಕೊಂಡು ಮಾತಾಡಬೇಡ. ನನಗೆ ಬಹಳ ಬೇಜಾರಾಗುತ್ತದೆ," ಎಂದನು.

ಕಂಠಿಗೆ ವಾಸುವು ಕೋಪ ಬಂದ ವೇಳೆಯಲ್ಲಿ ಎಷ್ಟು ವಿವೇಕ ಹೀನವಾಗಿ ಆಡುತ್ತಾನೆ ಎಂಬುದು ಮೊದಲಿನಿಂದಲೂ ಗೊತ್ತು. ಅದರಿಂದ ಅವನನ್ನು ಮುಂದೆ ವಿಶೇಷವಾಗಿ ಕೆರಳಿಸಲು ಇಷ್ಟಪಡಲಿಲ್ಲ.

"ನನ್ನ ಮಾತು ಅಂದರೆ ಈಚೆಗೆ ಏಕೋ ನಿನಗೆ ಹಿಡಿಸುವುದಿಲ್ಲ. ಅಷ್ಟು ಬೇಜಾರಾಗುವ ಹಾಗಿದ್ದರೆ ನಾನ್ಯಾಕೆ ಮಾತಾಡಲಿ. ನೀನಾಗಿ ನೀನೇ ಏನಾದರೂ ಹೇಳಿದರೆ ಕೇಳಿಕೊಂಡು ಸುಮ್ಮನಾಗುತ್ತೇನೆ" ಎಂದನು.

ತಾನು ಬಂದಿರುವ ವಿಷಯವನ್ನು ತಿಳಿಸಲು ವಾಸುವಿಗೆ ತುಂಬ ದಾಕ್ಷಿಣ್ಯವಾಯಿತು. ಆದರೂ ಆ ಭಾವನೆಗಳನ್ನೆಲ್ಲಾ ಅಮುಮಿಕೊಂಡು ಹೇಳಿದನು :

"ನೀನು ಕೋಪ ಮಾಡುವುದಿಲ್ಲ ಎಂದರೆ ಒಂದು ಮಾತು ಕೇಳುತ್ತೇನೆ"

"ಕೋಪ ಅನ್ನುವುದು ಹೋಗಿ ಆರು ವರ್ಷವಾಯಿತು ಅಂತ ಆ ದಿನವೇ ಹೇಳಿದ್ದೆನಲ್ಲಾ."

"ಹಾಗಾದರೆ ಹೇಳು, ಸಂಪಾದನೆಯ ಯೋಚನೆಗೇ ಹೋಗದೆ ಇಷ್ಟು ಷೋಕಿ ಮಾಡಲು ನಿನಗೆ ಎಲ್ಲಿಂದ ದುಡ್ಡು ಬರುತ್ತದೆ?"

"ಸಂಪಾದಿಸದೆ ಯಾವ ವಸ್ತುವೇ ಆಗಲಿ ಬರುವುದಿಲ್ಲ."

"ನಾನು ಕಂಡಹಾಗೆ ನೀನು ವ್ಯಾಪಾರವನ್ನೂ ಸರಿಯಾಗಿ ಮಾಡುವುದಿಲ್ಲ. ಹಾಗಾದರೆ ಇನ್ನು ಹೇಗೆ ಸಂಪಾದನೆ ಮಾಡುತ್ತಿ?"

ವಾಸುವಿನ ಅರ್ಥವಿಲ್ಲದ ಪ್ರಶ್ನೆಗಳನ್ನು ಕೇಳಿ ಕಂಠಿಗೆ ಕೊಂಚ ಬೇಸರವೇ ಆಯಿತು. ಅವನು ಹುಬ್ಬು ಗಂಟಿಕ್ಕಿ,

"ಹೇಗೆ ಸಂಪಾದನೆ ಮಾಡುತ್ತಿ ಅಂದರೆ? ಅದಕ್ಕೊಂದು ಮಾರ್ಗವಿದೆ. ಅದರಲ್ಲಿ ಮಾಡುತ್ತೇನೆ" ಎಂದು ಹೇಳಿದನು.

ಹಣ ಸಂಪಾದನೆಗೆ ಕಂಠಿಯು ಅವಲಂಬಿಸಿದ್ದ ಅದ್ಭುತ ಮಾರ್ಗ ವನ್ನು ತಿಳಿಯಲು ವಾಸುವಿಗೆ ಅಸಾಧ್ಯವಾದ ಕುತೂಹಲವುಂಟಾಯಿತು.

"ಆ ಮಾರ್ಗವನ್ನು ನನಗೂ ತೋರಿಸೆಂದೇ ನಾನು ಇಲ್ಲಿಯ ವರೆಗೆ ಬಂದುದು."

"ಒಂದು ಮಾರ್ಗವನ್ನು ತಿಳಿದು ಅರ್ಧ ಹಾಳಾಗಿದ್ದಿ. ಇನ್ನು ಇನ್ನೊಂದನ್ನೂ ತಿಳಿದು ಸಂಪೂರ್ಣವಾಗಿ ನಾಶವಾಗುವಿಯಂತೆ. ಸುಮ್ಮನೆ ಹೀಗೆ ಇಂತಹ ವಿಷಯಗಳಲ್ಲಿ ನನ್ನ ಸಲಹೆಯನ್ನು ಕೇಳಿ, ಕೇಳಿ ನನಗೇಕೆ ಕರ್ಮವನ್ನು ಕಟ್ಟುತ್ತಿ"

"ನೀನಾಗಿ ನೀನು ಹೇಳಿಕೊಟ್ಟರೆ ಆಗ ಪಾಪದ ಭೀತಿ. ಈಗ ಏನು ತಪ್ಪಿದ್ದರೂ ನನ್ನದೇ ಹೊರತು ನಿನ್ನದಲ್ಲ."

ವಾಸುವು ಮೊದಲ ಬಾರಿ ಮಾಡಿದಂತೆ ಮೊಂಡು ಹಿಡಿದು ಕುಳಿತನು. ಕಂಠಿಯು ಅವನನ್ನು ತಪ್ಪಿಸಿಕೊಳ್ಳಲು ಮಾಡಿದ ಪ್ರಯತ್ನ ವೆಲ್ಲ ವ್ಯರ್ಥವಾಯಿತು. ಕೊನೆಗೆ ಸಾಕಾಗಿ,

"ಈ ದಿನ ರಾತ್ರಿ ಒಂಭತ್ತು ಗಂಟೆಗೆ ನನ್ನ ರೂಮಿನ ಬಳಿ ಬಾ. ಮನೆಯಲ್ಲಿ ಎರಡನೆಯ ಷೋ ಸಿನಿಮಾಕ್ಕೆ ಹೋಗುತ್ತೇನೆ ಎಂದು ಹೇಳಿಬಿಟ್ಟಿರು. ಒಂದು ವೇಳೆ ಬರುವುದು ಬಹಳ ಹೊತ್ತಾದರೂ ಭಯವಿರುವುದಿಲ್ಲ. ನಿಧಾನವಾಗಿ ನಾನು ಕಂಡುಕೊಂಡಿರುವ ಹಾದಿಯನ್ನು ಪರಿಶೀಲಿಸುವಿಯಂತೆ" ಎಂದನು.

ವಾಸುವು ಜಯ ಗಳಿಸಿದ ಯೋಧನಂತೆ ಮನೆಗೆ ಮರಳಿದನು.

ಯಾವಾಗ ಕಂಠಿಯು ರಾತ್ರಿ ಬರುವಂತೆ ಹೇಳಿದನೋ ಆವಾಗಲೇ ವಾಸುವಿನ ಚುರುಕು ಬುದ್ಧಿಗೆ ಹೊಳೆಯಿತು. ಕಂಠಿಯು ಅವಲಂಬಿಸಿದ್ದ ಮಾರ್ಗವೆಂತಹುದೆಂದು. ಕೊಂಚ ಯೋಚನೆ ಮಾಡಿದ ಮೇಲೆ ತಾನು ಅಂತಹ ಹೀನ ವೃತ್ತಿಗೆ ಇಳಿಯಬಾರದೆಂದುಕೊಂಡನು. ಆದರೆ ವಿಧಿಯಿಲ್ಲ. ಅವನಿಗೆ ದುಡ್ಡು ಬೇಕಾಗಿತ್ತು. "ಶ್ರೀಮತಿಗೆ ಹಣವಿಲ್ಲದವರಲ್ಲಿ ಗೌರವವಿಲ್ಲ" ಎಂದು ಹಿಂದೆ ಕಂಠಿ ಹೇಳಿದ್ದ ಮಾತು ಅವನ ಕಿವಿಯಲ್ಲಿ ಮೊಳಗುತ್ತಿತ್ತು. ಹಣವನ್ನು ಗಳಿಸಿ, ಶ್ರೀಮತಿಯನ್ನು ಸಂತೋಷಪಡಿಸಿ, ತನ್ಮೂಲಕ ಸರೋಜೆಯ ಸಾಮೀಪ್ಯವನ್ನು ಹೊಂದಲು ಅವನ ಮನಸ್ಸು ಕಾತುರಪಡುತ್ತಿತ್ತು. ವಾಸುವು ಏನಾದರೂ ಸರಿಯೆ ಜೂಜುಗಾರಿಕೆಯನ್ನು ತನ್ನ ಪಕ್ಕದ ವೃತ್ತಿಯನ್ನಾಗಿ ಮಾಡಿಕೊಳ್ಳಲು ಮನವೊಪ್ಪಿಸಿಬಿಟ್ಟನು.

ಮೊದಲು ಕೊಂಚ ದಿವಸ ವಾಸುವಿಗೆ ತನ್ನ ಹೊಸ ವೃತ್ತಿಯನ್ನು ಒಗ್ಗಿಸಿಕೊಳ್ಳಲು ಕಷ್ಟವಾಯಿತು. ಆದರೆ ಆಮೇಲೆ ಮೈಲಾಪುರದ ಮೂಲೆಯಲ್ಲಿದ್ದ ಜೂಜುಕೋರರ ಆರಾಧ್ಯಸ್ಥಾನವಾದ ಮುರಕು ಮನೆಗೆ ಹೋಗಿಬರುವುದು, ಶ್ರೀಮತಿಯ ಮನೆಗೆ ಹೋಗಿ ಬರುವಷ್ಟೇ ಹಗುರವಾಯಿತು. ಸ್ವಲ್ಪ ದಿವಸಗಳಲ್ಲಿಯೇ ಅವನು ಉತ್ತಮ ದರ್ಜೆಯ ಇಸ್ಪೀಟ್ ಆಟಗಾರನ ಪದವಿಗೇರಿಬಿಟ್ಟನು.

## ೨೨

ಪಾರ್ವತಿ ಮತ್ತು ವಾಸುವು ಮೈಲಾಪುರಕ್ಕೆ ಹೊರಟುಹೋದ ಮಾರನೆ ದಿನವೇ ಸೀತಮ್ಮನವರು ಮೈಸೂರಿಗೆ ಬಂದುಬಿಟ್ಟರು. ಮಗ ಸೊಸೆಯರು ಇಲ್ಲದೇ ತಾವು ನಂಜುಂಡಳ್ಳಿಯಲ್ಲಿರುವುದು ಅವರ

ಮನಸ್ಸಿಗೆ ಬಿಕೋ ಎನಿಸುತ್ತಿತ್ತು. ನಮ್ಮೂರಿಗೆ ಹೋಗಬೇಕೆನ್ನುವ ಆತುರ ವಿಪರೀತವಾಗಿತ್ತು. ಯಾರು ಎಷ್ಟು ಹೇಳಿದರೂ ಕೇಳದೆ ಸೀತಮ್ಮನವರು ಮೈಸೂರಿಗೆ ಮರಳಿಬಿಟ್ಟರು.

ಅವರು ಬರುವಲ್ಲಿ ಬಾಡಿಗೆಗಿದ್ದವರು ತಮಗೆ ಬೇರೆ ಊರಿಗೆ ವರ್ಗವಾಗಿಹೋಗಿದ್ದ ಕಾರಣ ಮನೆಯನ್ನು ಬಿಟ್ಟು ಹೊರಟುಹೋಗಿದ್ದರು. ಮೊದಲೇ ನೂರೆಂಟು ಯೋಚನೆಗಳ ಗೊಂದಲದಲ್ಲಿ ಸಿಕ್ಕಿಬಳಲಿದ್ದ ಅವರ ಮನಸ್ಸಿಗೆ ಇದೊಂದು ಹೊಸ ಚಿಂತೆಯಾಯಿತು. ವಾಸುವಿಗೆ ಕೆಲಸವಾಗಿ ಆರೇಳು ತಿಂಗಳುಗಳಾದರೂ ಮೊದಲ ಬಾರಿ ಕಳುಹಿಸಿದ ಹದಿನೈದು ರೂಪಾಯಿಗಳನ್ನು ಬಿಟ್ಟು ಆಮೇಲೆ ಅವನು ಒಂದು ಕಾಸನ್ನೂ ಕಳುಹಿಸಿರಲಿಲ್ಲ. ಅಲ್ಲದೆ ಮದುವೆಗೆ ಬಂದಾಗಲೂ ಸಹ ಖರ್ಚಿಗೆಂದು ಏನನ್ನೂ ಕೊಡಲಿಲ್ಲ. ಗದ್ದಲದಲ್ಲಿ ಸೀತಕ್ಕ ದುಡ್ಡು ಕಾಸಿನ ವಿಚಾರವನ್ನೇ ಮರೆತುಬಿಟ್ಟಿದ್ದರು. ಆದರೆ ಈಗ ಮಾತ್ರ ಮನಸ್ಸು ಮಗನ ಉದಾಸೀನತೆಗೆ ಮರುಗಿತು. ವಾಸುವಿಗೆ ಕೆಲಸವಾಯಿತಲ್ಲಾ ಎನ್ನುವ ಸಂಭ್ರಮದಲ್ಲಿ ಅವರು ಆ ಆರು ತಿಂಗಳನ್ನು ಹೇಗೋ ತಮ್ಮ ಕೈಲಿದ್ದ ಪುಡಿಗಾಸುಗಳನ್ನು ಖರ್ಚು ಮಾಡಿ ತಳ್ಳಿದ್ದರು. ಈಗ ಉಪ್ಪಿಗೆಂದರೆ ಅವರ ಬಳಿ ಮೂರುಕಾಸಿರಲಿಲ್ಲ. ಮನೆಯಲ್ಲಿ ನಾಲ್ಕು ಕಾಳು ಭತ್ತವಿದ್ದರೆ ಜೀವನವೆಲ್ಲ ನಡೆಯಲು ಸಾಧ್ಯವೆ? ಬೇಯಿಸಲು ಸೌದೆಯಾದರೂ ಬೇಕಾಗಿತ್ತು. ಮಗನನ್ನು ದುಡ್ಡು ಕಳುಹಿಸೆಂದು ಬೇಡುವುದಕ್ಕಿಂತ ಯಾರಿಗಾದರೂ ಮನೆಯನ್ನು ಮತ್ತೆ ಬಾಡಿಗೆಗೆ ಕೊಟ್ಟು, ಅದರಲ್ಲಿ ಜೀವನ ಮಾಡುವುದು ಉತ್ತಮವೆಂದು ಅವರಿಗೆ ಹೊಳೆಯಿತು. ಅದೇ ಮೇರೆ ಮನೆಯ ಮುಂದಿನೆರಡು ಕೋಣೆಗಳನ್ನು ಮಹರಾಜ ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಾದ ರಾಮು, ಶಾಮುವಿಗೆ ಬಾಡಿಗೆಗೆ ಕೊಟ್ಟರು.

ತಿಂಗಳು ತಿಂಗಳಿಗೆ ಬಾಡಿಗೆ ರೂಪದಲ್ಲಿ ಬರುತ್ತಿದ್ದ ಆ ಎಂಟು ರೂಪಾಯಿಗಳಲ್ಲಿ ಸೀತಮ್ಮನವರ ಜೀವನ ಹಗುರವಾಗಿ ಸಾಗಿಹೋಗುತ್ತಿದ್ದಿತು. ಈಗ ಹೊತ್ತು ಕಳೆಯಲೂ ಸಹ ಅವರು ಮೊದಲಿನ ಹಾಗೆ ತಾಪತ್ರಯಪಡಬೇಕಾಗಿರಲಿಲ್ಲ. ಭಾಗಮ್ಮನವರ ಗಂಡನು ಈಚೆಗೆ ಕೊಂಚ ಚೇತರಿಸಿಕೊಂಡಿದ್ದರಿಂದ ಅವರು ಹಿಂದಿನಂತೆಯೇ ತಪ್ಪದೆ

ಹರಟೆಗೆ ಬರುತ್ತಿದ್ದರು. ಅಲ್ಲದೆ ಶಾಮಿ ಮತ್ತು ರಾಮಣ್ಣ ನಿಗೂ ಸೀತಮ್ಮ ನವರಲ್ಲಿ ವಿಪರೀತ ಹೊಂದಿಕೆಯಾಗಿಬಿಟ್ಟಿತ್ತು. ಹೆಸರು ಮಾತ್ರಕ್ಕೆ ಅವರು ರೂಮು ಮಾತ್ರ ತೆಗೆದುಕೊಂಡಿದ್ದರೇ ಹೊರತು ಮನೆಯೆಲ್ಲಾ ಅವರದೇ ಆಗಿತ್ತು ಎಂದರೆ ಅತಿಶಯೋಕ್ತಿಯೇನೂ ಇಲ್ಲ. ಆ ಹುಡುಗರು ಹಾಗೆ ಮನೆಯಲ್ಲಿ ಚಟುವಟಿಕೆಯಿಂದ ಓಡಾಡಿ ಕೊಂಡಿದ್ದರೆ ಸೀತಕ್ಕನಿಗೆ ಒಂದು ಬಗೆಯ ಸಮಾಧಾನ. ಒಂದು ಸಮಾಧಾನ ದಿಂದ ಅವರಿಗೆ ನೆಮ್ಮದಿ ಉಂಟಾಗಿದ್ದರೆ ಮತ್ತೊಂದು ಅಸಮಾಧಾನ ಆ ನೆಮ್ಮದಿಯನ್ನು ಹುಟ್ಟಿದಲ್ಲಿಯೇ ಮರ್ದನ ಮಾಡಲೆಳಸುತ್ತಿತ್ತು. ಆ ಘೋರವಾದ ಅತೃಪ್ತಿಯೆಂದರೆ ವಾಸುವು ಸರಿಯಾಗಿ ಕಾಗದ ಬರೆಯದೇಹೋದುದು. ಏನೋ ಬಲವಂತಕ್ಕೆ ಬರೆಯುವವನಂತೆ ತಿಂಗಳಿಗೊಮ್ಮೆ ಎರಡು ಸಾಲು ಗೀಚಿ ಹಾಕುತ್ತಿದ್ದನು. ಮೊದಲು ವಾಸುವಿನ ಕಾಗದವು ಐದು ಪುಟಕ್ಕೆ ಕಮ್ಮಿ ಇರುತ್ತಿರಲಿಲ್ಲ. ಈವಾಗಿನ ಈ ಬದಲಾವಣೆಗೆ ಕಾರಣವೇನೆಂದು ಸೀತಕ್ಕ ಬಹಳವಾಗಿ ಯೋಚಿಸಿ ದರು. ಬಹಳ ಚಿಂತಿಸಿ "ಮೊದಲೆಂದರೆ ಇದ್ದವನೊಬ್ಬ, ಈಗ ಎಷ್ಟೇ ಆಗಲಿ ಸಂಸಾರ ಅನ್ನುವುದು ತಲೆಗೆ ಕಟ್ಟಿದೆ. ಸುಮ್ಮನೆ ಹತ್ತು ಪುಟ ಬರೆಯಲು ಅವನಿಗೆ ಪುರುಸೊತ್ತು ಎಲ್ಲಿ ಬರಬೇಕು" ಎಂದು ಸಮಾಧಾನ ಮಾಡಿಕೊಂಡರು. ಕೂಡಲೆ ವಾಸುವಿಗಿಂತ ಸಾವಿರ ವಿಧದಲ್ಲಿ ಜವಾಬುದಾರಿ, ತಾಪತ್ರಯಗಳನ್ನು ಹೊತ್ತಿದ್ದ ಕಿಟ್ಟಿಯು ವಾರ ವಾರಕ್ಕೆ ತಪ್ಪದೆ ಕಾಗದ ಬರೆಯುವುದರ ನೆನಪು ಬಂದಿತು. ಅವನಿಗಿಲ್ಲದ ತೊಂದರೆ ಇವನಿಗಿದೆಯೆ? ಸೀತಕ್ಕನಿಗೆ ಬಗೆಹರಿಯಲಿಲ್ಲ. ಹೀಗೆ ವಿಮರ್ಶಿಸಿ, ಆಲೋಚಿಸಿ ಸಾಕಾಗಿ ಅವರು, ಒಬ್ಬೊಬ್ಬರ ಸ್ವಭಾವ ಒಂದೊಂದು ರೀತಿಯೆಂದು ಸುಮ್ಮನಾಗಿಬಿಡುತ್ತಿದ್ದರು. ಆದರೆ ತಾವು ಮಾತ್ರ ತಪ್ಪದೆ ವಾರವಾರಕ್ಕೆ ಹುಡುಗರು ಯಾರ ಕೈಲಿಯಾದರೂ ಸರಿಯೆ ಮಗನಿಗೆ ಪತ್ರವನ್ನು ಬರಸದೆ ಇರುತ್ತಿರಲಿಲ್ಲ.

ಆಶೆ ನಿರಾಶೆ, ಉತ್ಸಾಹ ನಿರುತ್ಸಾಹಗಳ ತುಮುಲ ಯುದ್ಧದಲ್ಲಿ ಸೀತಮ್ಮನವರು ತೊಳಲುತ್ತಿರುವಾಗಲೇ ದಸರೆಯ ದಿನಗಳು ಓಡೋಡಿ ಬಂದುವು. ಇನ್ನೊಂದು ನಾಲ್ಕೈದು ದಿವಸಕ್ಕೆಲ್ಲಾ ರಾಮಣ್ಣ ಮತ್ತು ಶಾಮಿ ತಮ್ಮೂರುಗಳಿಗೆ ಹೊರಡುವವರಿದ್ದರು. ಆ ಹುಡುಗರನ್ನು

ಹದಿನೈದು ದಿವಸಗಳು ಆಗಲಿ ಇರಬೇಕಲ್ಲಾ ಎಂಬುದು ಸೀತಮ್ಮನವರ ಸಂಕಟ. ತುಂಬಿದ ಮನೆ ಬಿಕೋ ಎನ್ನುತ್ತದೆ ಎಂದು ಅವರು ಮಮ್ಮಲ ಮರುಗಿದರು. ಹಾಗೆಯೇ ತಮ್ಮ ಹುಡುಗರನ್ನು ದೂರ ಕಳುಹಿಸಿ, ಕಂಡವರ ಮಕ್ಕಳಿಗೆ ಬಾಯಿಬಿಡುತ್ತಿರುವುದು ಶುದ್ಧ ಪೆಚ್ಚುತನವೆನ್ನಿಸಿತು. ಏಕೋ ಅವರಿಗೆ ಮಗ ಸೊಸೆಯರನ್ನು ನೋಡಬೇಕೆಂಬ ಹಂಬಲ ಬಹಳವಾಗಿತ್ತು. ಆದರೆ ಹಿಂದಿನ ಕಾಗದದಲ್ಲಿ ವಾಸುವು ಪಾರ್ವತಿಗೆ ಕೊಂಚ ಅಲಸಿಕೆಯಾಗಿದೆಯೆಂದೂ, ಕೇವಲ ಹತ್ತು ದಿನಗಳಿಗಾಗಿ ಮನೆ ಬಾಗಿಲು ಬಿಟ್ಟು ಬರುವುದು ಅಷ್ಟೇನೂ ಹಿತವಿಲ್ಲವೆಂದೂ ಬರೆದಿದ್ದನು. ಸೀತಕ್ಕನಿಗೆ ಈ ಬಗೆಯ ಸಬೂಬುಗಳು ಅಷ್ಟಾಗಿ ಹಿಡಿಸಲಿಲ್ಲ. ಅವರು ಶಾಮಿಯು ಊರಿಗೆ ಹೋಗುವ ಮೊದಲು, ಅವನಿಂದ ಮಗನಿಗೆ ಓಲೆ ಬರೆಸಿದರು. ಅದರಲ್ಲಿ ರಜೆಗೆ ವಾಸು ಪಾರ್ವತಿಯರು ಖಂಡಿತವಾಗಿಯೂ ಬರಬೇಕೆಂದೂ, ತಮಗೆ ತೀರಾ ಖಾಯಿಲೆಯೆಂದೂ ತಿಳಿಸಿದರು. ಯಾವ ಉಪಾಯದಿಂದಲೇ ಆಗಲಿ ವಾಸುವು ಊರಿಗೆ ಬಂದರೆ ಸಾಕೆಂಬುದು ಅವರ ಆಸೆ. ಅವರ ಆಸೆಗೆ ತಕ್ಕಹಾಗೆ ಮೈಲಾಪುರದಿಂದ ಮರುಜವಾಬು ಬಂದೇ ಬಂದಿತು. ಪಾರ್ವತಿಗೆ ಖಾಯಿಲೆಯು ಜಾಸ್ತಿಯಾಗಿರುವುದರಿಂದ ಅವಳನ್ನು ಮೈಸೂರಿಗೆ ಕರೆತಂದು ಬಿಡುವುದಾಗಿ ವಾಸುವು ತಿಳಿಸಿದ್ದನು.

ಪಾಡ್ಯದ ದಿವಸ ಸಾಯಂಕಾಲದಲ್ಲಿ ಸೀತಕ್ಕನ ಸಡಗರ ಹೇಳುವಂತಿರಲಿಲ್ಲ. ಬಿಸಿಬಿಸಿಯಾಗಿ ಅಡುಗೆಯನ್ನು ಮಾಡಿಟ್ಟುಕೊಂಡು ಮಗ ಸೊಸೆಯರ ಬರವನ್ನು ಕಾದಿದ್ದೂ ಕಾದಿದ್ದೇ! ಅವರ ಹೃದಯ, ಮಕ್ಕಳ ಮುಖವನ್ನು ಕಂಡೇನೇ ಎಂದಿತ್ತು. ಆದರೆ ಅವರಿಬ್ಬರನ್ನೂ ನೋಡಿ ಸೀತಮ್ಮನವರಿಗೆ ಸಂತೋಷವಾಗುವ ಬದಲು ದುಃಖವೇ ಆಯಿತೆನ್ನಬೇಕು. ಪಾರ್ವತಿಯು ಗುರುತು ಸಿಗಲಾರದಷ್ಟು ಬಡವಾಗಿ ಹೋಗಿದ್ದಳು. ಅವಳ ಮುಖದಲ್ಲಿ ಕೊಂಚವಾದರೂ ಕಾಂತಿ ಇರಲಿಲ್ಲ. ನೋಡಿದ ಕೂಡಲೆ ಯಾರೇ ಆಗಲಿ ಇವಳಿಗೇನೋ ಖಾಯಿಲೆಯೆಂದು ಹೇಳಬಹುದಾಗಿತ್ತು. ಕಣ್ಣಿನ ಹೊಳಪು ಮಾಯವಾಗಿತ್ತು. ತುಟಿಯಲ್ಲಿ ರಕ್ತದ ಗುರುತೂ ಇರಲಿಲ್ಲ. ಹಿಂಡಿದ ಬಟ್ಟೆಯಷ್ಟು ನಿಶ್ರಾಣವಾಗಿತ್ತು ಅವಳ ದಟ್ಟಪುಷ್ಟವಾಗಿದ್ದ ಶರೀರ. ಅತ್ತ ವಾಸುವೂ ಸಹ ಮೊದಲಿಗೆ

ಈಗ ತುಂಬಾ ಬಡವಾಗಿಹೋಗಿದ್ದನು. ಅವರಿಬ್ಬರೆಂದರೆ ತಮ್ಮ ಒಳ ಜೀವ ಎಂದು ಭಾವಿಸಿದ್ದ ಸೀತಕ್ಕನಿಗೆ, ಹುಡುಗರು ಹಿಂದಾಗಿರುವುದನ್ನು ಕಂಡು ಹಿಡಿಸಲಾರದಷ್ಟು ಅಳುವೇ ಬಂದುಬಿಟ್ಟಿತು.

ಆ ಅಷ್ಟು ಅಲ್ಪ ವಿರಾಮದಲ್ಲಿ ಸೀತಮ್ಮನವರು ಪಾರ್ವತಿ, ವಾಸುವಿಗೆ ಅದೆಷ್ಟು ಆರೈಕೆ ಮಾಡಿದರೋ ಅದನ್ನು ವರ್ಣಿಸುವುದಸಾಧ್ಯ. ಎರಡು ಬಾರಿ ಎಣ್ಣೆ ನೀರು ಹಾಕಿ ಮೂರನೆ ಬಾರಿಗೆ ಬಲವಂತ ಮಾಡುತ್ತೇನೆಂದು ಅವರು ಯೋಚಿಸುತ್ತಿರುವಾಗಲೇ ಸ್ಕೂಲುಗಳಿಗೆ ಬಂದಿದ್ದ ರಜೆಯು ತೀರಿಹೋಯಿತು. ಅವರು ಮಗನನ್ನು ಮತ್ತೆ ಕಳುಹಲಾರದೆ ವಾತ್ಸಲ್ಯದ ಅತಿರೇಕದಿಂದ,

"ಕೆಲಸ ಹೋದರೆ ಅಷ್ಟೇ ಆಯಿತು. 'ರಾಮ' ಎಂದು ದೇವರ ಮೇಲೆ ಭಾರ ಹಾಕಿ ರಾಜೀನಾಮೆ ಕೊಟ್ಟುಬಿಡು. ಹುಟ್ಟಿಸಿದ ದೇವರು ಹುಲ್ಲು ಸಿದ್ಧ ಮಾಡಿಯೇ ಇರುತ್ತಾನೆ. ಏನೋ ಇಲ್ಲೇ ತೋರಿದ್ದನ್ನು ಮಾಡುವುದು," ಅಂದರು.

"ಇಷ್ಟು ಸಣ್ಣ ವಿಷಯಕ್ಕೆಲ್ಲಾ ಕೆಲಸ ಬಿಟ್ಟು ಕೂತರೆ ಬದುಕಿದ ಹಾಗೆಯೇ ಸರಿ. ಅವಳು ಬೇಕಾದರೆ ಇಲ್ಲೇ ಇರಲಿ. ನಾನು ಹೋಗುತ್ತೇನೆ."

"ನೀನೇನು ಮಹಾ ಗಟ್ಟಿ ಅಂತ ಅಂದ್ಕೊಂಡಿದ್ದಿಯೇನು. ಹಾಗೆ ನೋಡಿದರೆ ಹೋಗುವಾಗ ಅವಳೇ ನಿನಗಿಂತ ಎಷ್ಟೋ ಚೆನ್ನಾಗಿದ್ದಳು. ಅಲ್ಲೆಲ್ಲಾ ಮಾಡೋರಿಲ್ಲದೆ ಖಾಯಿಲೆ ಬಿದ್ದರೆ ಏನು ಗತಿ ?"

"ಹಾಗೇನಿಲ್ಲ. ನನಗೆ ಅಲ್ಲಿಯ ಹವ ಚೆನ್ನಾಗಿ ಒಂಟಿದೆ."

ಇದುವರೆಗೂ ಮಾತಾಡದಿದ್ದ ಪಾರ್ವತಿ,

"ಏನು ಒಂಟಿದೆಯೊ ದೇವರಿಗೇ ಗೊತ್ತು. ಸುಖವಾಗಿ ಊಟವನ್ನೇ ಬಿಡುತ್ತಾ ಬಂದಿದ್ದಾರೆ" ಎಂದಳು.

ವಾಸುವಿನ ಅಂತಃಕರಣವನ್ನು ಕಲಕಿದಹಾಗಾಯಿತು. ಆದರೂ ತನ್ನ ಮನೋಭಾವವನ್ನು ಅದುಮುತ್ತಾ

"ಇವಳಿಗೆ ಖಾಯಿಲೆಯ ದೆಸೆಯಿಂದ ಅನ್ನ ಸೇರುವುದಿಲ್ಲವಲ್ಲ, ಅದಕ್ಕೆ ನನಗೂ ಊಟ ಬೇಡವಾಗಿದೆ ಎಂದು ಹೇಳುತ್ತಾಳೆ, ಇವಳ ಮಾತನ್ನು ಕೇಳಿದರೆ ಬದುಕಿದಹಾಗೆಯೇ ಸರಿ"

ಎಂದು ಹೇಳಿ ಅಲ್ಲಿಂದ ಹೊರಟುಹೋದನು. ಸೀತಮ್ಮನವರು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು.

೨೩

ಹೊರಗೆ ತಿಂಗಳ ಬೆಳಕು ಪ್ರಶಾಂತವಾಗಿ ಹರಡಿತ್ತು. ಮೇಲೆ ಬಾನಿನಲ್ಲಿ ಮನಮೋಹಕವಾದ ಚಂದ್ರನ ರಜತ ಬಿಂಬ; ವಾಸುವು ತನ್ನ ಹಾಸಿಗೆಯ ಮೇಲೆ ಉರುಳಿಕೊಂಡು ಆಗಸವನ್ನು ಶೂನ್ಯವಾಗಿ ನೋಡುತ್ತಾ ಕೋಣೆಯಲ್ಲಿ ಮಲಗಿದ್ದನು. ಅತ್ತ ಇನ್ನೊತ್ತಟ್ಟಿಗೆ ಕಂಠಿಯು ಹಾಸುಗೆ ಇದ್ದಿತು. ಏಕಾಗ್ರತೆ ಇಲ್ಲದ ಮನಸ್ಸಿನಿಂದ ಅವನು ಕಾದಂಬರಿಯೊಂದರ ಹಾಳೆಗಳನ್ನು ತಿರುವಿಹಾಕುತ್ತಿದ್ದನು. ಕಂಠಿಯು ವಾಸುವು ಮೈಸೂರಿನಿಂದ ಬಂದಮೇಲೆ ಅವನ ಬಲವಂತಕ್ಕಾಗಿ ಅವನ ಮನೆಯಲ್ಲೇ ಬಂದಿರುತ್ತಿದ್ದನು.

"ಕಂಠಿ"

"ಆಂ?"

ಕಂಠಿಯು ಆಕಳಿಸುತ್ತಾ ಗೆಳೆಯನ ಮುಖವನ್ನು ನೋಡಿದನು. ವಾಸುವಿನ ಕಣ್ಣಲ್ಲಿ ನೀರು ಮೂಡಿರುವುದನ್ನು ನೋಡಿ ಅವನಿಗೆ ಗಾಬರಿ ಆಶ್ಚರ್ಯಗಳು ಏಕಕಾಲದಲ್ಲಿ ಆದುವು.

"ನೀನು ಈಗ ಕೊಂಚ ಹೊತ್ತಿನಲ್ಲಿ ಹೇಳಿದ ವಿಷಯ ಖಂಡಿತ ವಾಗಿಯೂ ನಿಜ ಅನ್ನುತ್ತೀಯಾ?" ವಾಸುವು ದೀನವಾಗಿ ಕೇಳಿದನು.

"ಇಂತಹ ವಿಷಯದಲ್ಲಿ ನಾನು ತಮಾಷೆ ಮಾಡುತ್ತಿಲ್ಲ. ಸುಳ್ಳು ಹೇಳಿ ನಿನ್ನಿಂದ ಏನು ಗಳಿಸಬೇಕಾಗಿದೆ."

"ಸುಳ್ಳು ಹೇಳಿದೆ ಅನ್ನಲಿಲ್ಲ. ಆದರೂ ಹಾಗಿದ್ದ ಶ್ರೀಮತಿಗೆ ಇಷ್ಟು ಒಳ್ಳೆಯ ಬುದ್ಧಿ ಬಂದುದು ಆಶ್ಚರ್ಯವೆ."

"ಒಳ್ಳೆಯ ಬುದ್ಧಿ ಏನು ಬಂತು?"

ಮಲಗಿಕೊಂಡಿದ್ದ ಕಂಠಿ ಸರಕ್ಕನೆ ಎದ್ದು ಕುಳಿತನು. ಅವನ ಅಮಿತವಾದ ಕುತೂಹಲವನ್ನು ನೋಡಿ ವಾಸುವಿಗೆ ಒಂದೆರಡು ಗಳಿಗೆ ಏನನ್ನೂ ಹೇಳಲಾಗಲಿಲ್ಲ. ಕೊಂಚ ಕಾಲವಾದನಂತರ,

"ಅಲ್ಲ, ಮಗಳನ್ನೂ ತನ್ನ ದಾರಿಗೇ ತರದೆ, ಒಳ್ಳೆಯ ವ್ಯಕ್ತಿ ಯೊಬ್ಬನಿಗೆ ಕೊಟ್ಟು ಮದುವೆ ಮಾಡುವುದು ಒಳ್ಳೆಯ ಬುದ್ಧಿಯಲ್ಲವೆ?"

"ಅದಕ್ಕೇ ನಿನ್ನನ್ನು ಕೊಂಚ ಎಳಸು ಅನ್ನುವುದು. ಅದರಿಂದ ಅವಳಿಗೆ ಲಾಭವಿದೆ; ಹಾಗೆ ಮಾಡುತ್ತಾಳೆ. ಇದಕ್ಕಿಂತ ಹೆಚ್ಚು ದುಡ್ಡು, ನೀನು ಹೇಳಿದ ಮಾರ್ಗದಿಂದ ಸಿಗುತ್ತದೆ ಎನ್ನುವುದಾದರೆ ಅವಳು ತನ್ನ ಈಗಿನ ಮನಸ್ಸನ್ನು ಬದಲಾಯಿಸಿಬಿಡುವುದಕ್ಕೂ ಹಿಂಜರಿಯುವುದಿಲ್ಲ, ತಿಳಿದುಕೊ."

"ಅಷ್ಟೇ ಅನ್ನುತ್ತೀಯಾ?"

"ಅಷ್ಟಲ್ಲದೇ........"

ವಾಸುವು ಮತ್ತೆ ನಿರಾಶೆಯಿಂದ ಕಿಟಕಿಯ ಕಡೆಗೆ ತಿರುಗಿಕೊಂಡನು. ಕಂಠಿ ಮಾತ್ರ ಹಾಳೆಗಳನ್ನು ತಿರುವಿಹಾಕುತ್ತಿದ್ದರೂ ಮನಸ್ಸಿನಲ್ಲಿ ಮತ್ತೇನನ್ನೋ ಯೋಚಿಸುತ್ತಿದ್ದನು. ಅನಂತರ ಏನೋ ಹೊಳೆಯಲು,

"ಹನಸೋಗೆಯಲ್ಲಿ ಸಾಹುಕಾರನಂತೆ. ತುಂಬಾ ಅನುಕೂಲಶಾಲಿಯೆಂದು ಕೇಳಿದ್ದೆ" ಎಂದನು.

"ಓಹೋ"

"ಶ್ರೀಮತಿಯ ರಣಹದ್ದಿನ ಚುರುಕು ದೃಷ್ಟಿಗೆ ಇಂತಹ ವ್ಯಕ್ತಿ ಬಿದ್ದುದರಲ್ಲಿ ಆಶ್ಚರ್ಯವೇನಿಲ್ಲ."

ಇದುವರೆಗೂ ಸುಮ್ಮನೆ ಮಲಗಿ ಕೇಳುತ್ತಿದ್ದ ವಾಸುವು ಸರಕ್ಕನೆದ್ದು,

"ಹುಡುಗನೋ, ಮುದುಕನೋ?" ಎಂದು ಕೇಳಿದನು.

"ಹುಡುಗನೇನು, ಐವತ್ತರ ಹತ್ತಿರವಿರಬಹುದು. ಕಪ್ಪಗೆ ಗುಜ್ಜಾನೆ ಮರಿಯಂತಹ ಶರೀರ."

"ಆದರೂ ಇದನ್ನೆಲ್ಲಾ ಹೇಗೆ ಪತ್ತೆ ಹಚ್ಚಿದೆ ಕಂಠಿ? ದಿವಸವೂ ಸರೋಜೆಯನ್ನು ನೋಡಿ ಮಾತಾಡುತ್ತೇನೆ. ಎಂದಿನಂತೆ ತೋರುತ್ತಾಳೆಯೇ ಹೊರತು ನನ್ನ ಬಳಿ ಈ ವಿಷಯವಾಗಿ ಒಮ್ಮೆಯಾದರೂ ಬಾಯಿ ಬಿಟ್ಟಿಲ್ಲ."

"ಹೇಗೆತಾನೆ ಹೇಳಿಕೊಳ್ಳುತ್ತಾಳೆ? ಒಂದು ಕಡೆ ತಾಯಿಯ ಬಲವಂತ. ಮತ್ತೊಂದು ಕಡೆ ನಿನ್ನ ಮೇಲಿನ ಪ್ರೀತಿ."

ವಾಸುವಿಗೆ ವೈನವಿರೆದ್ದಿತು. ಸಮೀಪದಲ್ಲಿದ್ದ ಕಡ್ಡಿಯ ಚೂರೊಂದನ್ನು ದೂರಕ್ಕೆ ಬಿರುಸಾಗಿ ಎಸೆದು ಹೇಳಿದನು:

"ನೀನು ಏನು ಬೇಕಾದರೂ ಅನ್ನು, ಸರೋಜ ಈ ಮದುವೆಗೆ ಒಪ್ಪುವುದಿಲ್ಲ. ಒಂದು ವೇಳೆ ಬಲವಂತವಾಗಿ, ಏನಾದರೂ ಆದರೆ ಪ್ರಾಣ ಬಿಡುತ್ತಾಳೆಯೇ ಹೊರತು ಸೋಲುವುದಿಲ್ಲ."

"ಸರಿ, ನೀನು ಕಾದಂಬರಿಗಳನ್ನು ಓದಿ, ಓದಿ ಮರುಳಾಗಿಬಿಟ್ಟಿದ್ದಿ. ದಿನಂಪ್ರತಿ ಎಷ್ಟೋ ಹುಡುಗ ಹುಡುಗಿಯರಿಗೆ ಈ ಬಗೆಯ ನಿರಾಶೆಗಳಾಗುತ್ತಲೇ ಇರುತ್ತವೆ. ಹಾಗೆ ಎಲ್ಲಾ ಸಾಯುವಹಾಗಿದ್ದರೆ ಈಗಿನ ಆಹಾರಾಭಾವವಾದರೂ ತಪ್ಪುತ್ತಿತ್ತು. ಏನೋ ಮೊದಲು ಕೊಂಚ ಬೇಸರವಾಗಬಹುದು. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕಾಲ ಕ್ರಮೇಣದಲ್ಲಿ ಆ ಜೀವನವೇ ಸರಿಹೋಗುತ್ತಾ ಬರುತ್ತದೆ."

ಕಂಠಿಯ ಅಭಿಪ್ರಾಯವು ವಾಸುವಿಗೆ ಬಹಳ ಒಪ್ಪಿತು. ಸರೋಜ ಇನ್ನೊಬ್ಬನ ಮಡದಿಯಾಗುತ್ತಾಳೆ. ಕಾಲಕ್ರಮೇಣದಲ್ಲಿ ಸಾಹುಕಾರನ ಮಡದಿಯಾಗಿಯೇ ಸರಿಹೋಗುತ್ತಾಳೆ. ವಾಸುವಿಗಾದ ನಿರಾಶೆಯನ್ನು ಹೇಳಲು ಸಾಧ್ಯವಿಲ್ಲ. ಅವನು ನಿಡಿದಾದ ನಿಟ್ಟುಸಿರೊಂದನ್ನೆಳೆದು,

"ಶ್ರೀಮತಿಯ ಕೈಗೆ ಎಷ್ಟು ಬರಬಹುದೆಂದು ಎಣಿಸುತ್ತಿ?" ಎಂದು ಕೇಳಿದನು. ಕಂಠಿಗೆ ನಿದ್ದೆಯ ಬಿರುಸು ಜೋರಾಗಿತ್ತು, ಅವನು ಹಾಸಿಗೆಯ ಮೇಲೆ ಉರಳಿಕೊಂಡು ಆಕಳಿಸುತ್ತಾ,

"ಎಷ್ಟು ಬಂದೀತು. ಒಂದೈದು ಸಾವಿರ ಗಿಟ್ಟಿದರೂ ಗಿಟ್ಟ ಬಹುದು," ಎಂದನು.

ವಾಸುವಿಗೆ ಹಣದ ಪ್ರಮಾಣ ಬಹಳ ಕಡಮೆಯಾಗಿ ತೋರಿತು. ಅಷ್ಟು ಅಲ್ಪವಾದ ಹಣಕ್ಕೆ ಸರೋಜೆಯಂತಹ ರತ್ನವನ್ನು ಕಳೆದು ಕೊಳ್ಳುವುದೇ? ಒಟ್ಟಿನಲ್ಲಿ ಶ್ರೀಮತಿಗೆ ಬೇಕಾಗಿದ್ದುದು ದುಡ್ಡು. ಅದು ಹನಸೋಗೆಯವನಿಂದ ಬಂದರೇನು? ಹುಣಸೂರಿನವನಿಂದ ಬಂದ ರೇನು? ನಾಯಿಯನ್ನು ಮಾರಿ ಬಂದ ದುಡ್ಡಾದ ಮಾತ್ರಕ್ಕೆ ಬಗುಳುತ್ತಾ ಬರುವುದಿಲ್ಲ. ಆದ್ದರಿಂದ ಅಷ್ಟು ಹಣವನ್ನು ಹೇಗಾದರೂ ಒದಗಿಸಿ ತಾನೇ ಏಕೆ ಸರೋಜಳನ್ನು ಉಳಿಸಿಕೊಳ್ಳಬಾರದು? ಈ ಆಲೋಚನೆಯು ಬಂದುದೇ ತಡ, ವಾಸುವಿಗೆ ನವಶಕ್ತಿಯು ಬಂದಿತು. ಅವನು "ಕಂಠಿ, ಕಂಠಿ," ಎಂದು ಕರೆದನು. ಆದರೆ ಕಂಠಿಯು ಅವನ ಹರಟೆಯನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ನಿರಾತಂಕವಾಗಿ

ನಿದ್ರೆಹೋಗಿ, ಗೊರಕೆ ಹೊಡೆಯುತ್ತಿದ್ದನು. ಗೆಳೆಯನು ಅಷ್ಟು ಬೇಗ ನಿದ್ರೆಹೋದುದನ್ನು ಕಂಡು ಹತಾಶನಾಗಿ ವಾಸುವು ಒಬ್ಬನೆ ಯೋಚಿಸ ಹತ್ತಿದನು. ಆ ರಾತ್ರಿಯೆಲ್ಲಾ ಅವನು ಎರಡು ಗಂಟೆಗಳ ಕಾಲ ನಿದ್ರೆ ಮಾಡಿದ್ದರೆ ಹೆಚ್ಚು. ಎಷ್ಟು ಯೋಚಿಸಿದರೂ ದುಡ್ಡು ಬರುವ ಮಾರ್ಗವೊಂದೂ ಹೊಳೆಯಲಿಲ್ಲ. ಸಾಲ ಮಾಡಲು ಅದನ್ನು ಅವನಿಗೆ ಕೊಡುವಂತಹ ಪರಿಚಯಸ್ಥರು ಸಹ ಯಾರೂ ಇರಲಿಲ್ಲ. ವಾಸುವಿಗೆ ಸದ್ಯಕ್ಕೆ ಉಳಿದಿದ್ದುದು ಒಂದೇ ಮಾರ್ಗ. ಅದೆಂದರೆ ತನ್ನ ಹೆಸರಿನಲ್ಲಿದ್ದ ಗದ್ದೆಯನ್ನು ಗುಟ್ಟಾಗಿ ಮಾರುವುದು. ಆಮೇಲೆ ಮನೆಯು ಸೀತಮ್ಮನವರ ಹೆಸರಿನಲ್ಲಿದ್ದ ಕಾರಣ ಅವರಲ್ಲಿ ಇಲ್ಲದ ಗೋಳುಕರೆಯನ್ನು ಹೇಳಿ, ಮನೆಯ ಮೇಲೆ ಕೊಂಚ ಸಾಲವನ್ನು ತೆಗೆದುಕೊಳ್ಳುವುದು. ವಾಸುವು ಹೀಗೆ ಮಾಡುವುದೇ ಸರಿಯೆಂದುಕೊಂಡನು. ಆದರೆ ಇಷ್ಟೆಲ್ಲವನ್ನು ಮಾಡಿದರೂ ಹಣವು ಮಾತ್ರ ಮೂರು ಸಾವಿರವನ್ನು ಮುಟ್ಟುವಹಾಗಿರಲಿಲ್ಲ. ಮಿಕ್ಕ ಹಣವನ್ನು ಹೇಗೆ ಸೇರಿಸುವುದೆಂದು ಅವನು ಆಲೋಚಿಸಿ ಸಾಕಾದನು. ಏನೂ ತೋರದಿರಲು ಕೊನೆಗೆ ಬೇಸರದಿಂದ ಜೂಜಿನಲ್ಲಿಯಾದರೂ ಸಂಪಾದಿಸಿಯೇ ತೀರುವೆನೆಂದು ಪಣತೊಟ್ಟು ಮಲಗಿ ನಿದ್ರೆಹೋದನು.

## ೨೪

ವಾಸುವು ಪಾರ್ವತಿಯನ್ನು ಮೈಸೂರಿನಲ್ಲಿ ಬಿಟ್ಟು ಹೊರಟು ಹೋದ ಮೇಲೆ ಸೀತಮ್ಮನವರಿಗೆ ಜೀವನವನ್ನು ನಡಸಲು ವಿಪರೀತ ಕಷ್ಟವಾಯಿತು. ಮೊದಲೆಂದರೆ ಇದ್ದವರೊಬ್ಬರು. ಊಟವೋ ಉಪವಾಸವೋ ಹೇಗೋ ಒಂದು, ಸವರಿಸಿಕೊಂಡುಬಿಡುತ್ತಿದ್ದರು. ಈಗ ಹಾಗಿರಲಿಲ್ಲ. ಮತ್ತೊಂದು ಜೀವದ ಜವಾಬುದಾರಿ ಅವರದಾಗಿತ್ತು. ಅದರಲ್ಲೂ ಪಾರ್ವತಿಯು ಖಾಯಿಲೆಯವಳು. ಔಷಧ ಪಥ್ಯಗಳು ನಡೆಯಬೇಡವೆ? ಸೀತಕ್ಕನಿಗೆ ಏನೂ ಹೊಳೆಯಲಿಲ್ಲ. ಬರುವ ಹತ್ತು ರೂಪಾಯಿಗಳಲ್ಲಿ ಇಬ್ಬರ ಜೀವನವನ್ನು ನಡೆಸಲು ತೀರಾ ಕಷ್ಟವಾಗಿತ್ತು. ಅವರು ಪಾರ್ವತಿಯ ಕೈಯಿಂದ ಮಗನಿಗೆ ದುಡ್ಡು ಕಳುಹಿಸುವಂತೆ ಹೇಳಿ ಕಾಗದ ಬರಸಿದರು. ಆದರೆ ಅದಕ್ಕೆ ಯಾವ ಉತ್ತರವೂ

ವಾಸುವಿನಿಂದ ಬರಲಿಲ್ಲ. ಇದರಿಂದ ಸೀತಮ್ಮನವರಂತಹ ನಿಧಾನ ಸ್ವಭಾವದವರಿಗೂ ಕೊಂಚ ಕೋಪವೇ ಬಂದಿತು. ಅವರು ಮಗನ ಈ ವರ್ತನೆಯನ್ನು ಬೇರೆ ವಿಧದಲ್ಲಿ ಅರ್ಥ ಮಾಡಿಕೊಂಡರು. ಮಗನು ಜಿಪುಣತನವನ್ನು ಮಾಡುತ್ತಿರುವನೆಂದು ಭಾವಿಸಿ,

"ಪಾರ್ವತಿ, ಕೈಲಿ ಕಾಸು ಹಿಡಿತ ಮಾಡುವುದೇನೋ ಸರಿಯಾ ವರೂ ನನಗೆ ಇಷ್ಟು ಜಿಪುಣತನ ಹಿಡಿಸುವುದಿಲ್ಲ" ಎಂದರು.

ಪಾರ್ವತಿಗೆ ಆಶ್ಚರ್ಯವಿಷಾದಗಳು ಏಕಕಾಲದಲ್ಲಿ ಆದುವು.

"ಏನು ಅವರು ದುಡ್ಡು ಉಳಿಸುತ್ತಿದ್ದಾರೆ ಅಂದುಕೊಂಡಿರಾ?" ಎಂದು ಕೇಳಿದಳು.

"ಹೂಂ. ಅವನಿಗೆ ಚಿಕ್ಕಂದಿನಿಂದಲೂ ಆ ಬುದ್ಧಿ. ಯಾವುದೇ ಆಗಲಿ ವಿಪರೀತವಾದರೆ ಕಷ್ಟ." ಸೀತಕ್ಕ ನಕ್ಕರು. ಪಾರ್ವತಿಗೆ ಅವರ ಸರಳ ಮನಸ್ಸನ್ನು ಕಂಡು ದುಃಖವೇ ಆಯಿತು. ತನಗೆ ತಿಳಿದ ಮಟ್ಟಿಗೆ ಅವರ ಮಗನ ಇತ್ತೀಚಿನ ದುರ್ಗುಣಗಳನ್ನೆಲ್ಲಾ ತೋಡಿಕೊಂಡುಬಿಡಲೇ ಎಂದು ಯೋಚಿಸಿದಳು. ಆದರೆ ಧೈರ್ಯ ಬರಲಿಲ್ಲ. ತನ್ನಲ್ಲಿ ಉಂಟಾಗಿದ್ದ ಉದ್ವೇಗವನ್ನೆಲ್ಲ ಅದುಮಿಕೊಂಡು,

"ಕೂಡಿಹಾಕಲಿ, ಕೂಡಿಹಾಕಲಿ. ಕಷ್ಟಕ್ಕೆ ಇಲ್ಲದ, ಸುಖಕ್ಕೆ ಬಾರದ ಆ ದುಡ್ಡು ಯಾವ ರಾಜ್ಯವನ್ನು ಕಟ್ಟುವುದಕ್ಕೋ ದೇವರಿಗೇ ಗೊತ್ತು," ಎಂದು ಅಲ್ಲಿಂದ ಹೊರಟುಹೋದಳು.

ಪಾರ್ವತಿಯ ಆರೋಗ್ಯವು ಮತ್ತೆ ನೆಟ್ಟಗಾಗಲು ಸೀತಮ್ಮನವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅವಳ ಹುಷಾರಿನ ಆತಂಕದಲ್ಲಿ ಅವರು ತಮ್ಮ ಮಡಿ ಮೈಲಿಗೆ, ಊಟ ನಿದ್ರೆ, ಎಲ್ಲವನ್ನೂ ಮರೆತುಬಿಟ್ಟಿದ್ದರು. ಸಾಮಾನ್ಯವಾಗಿ ಪಾರ್ವತಿಗೆ ದಿನ ಬಿಟ್ಟು ದಿನ ಜ್ವರವು ಬರುತ್ತಿತ್ತು. ಆ ದಿವಸಗಳಲ್ಲಿ ಸೀತಕ್ಕನಿಗೆ ಎಲ್ಲಿಲ್ಲದ ಭಯ; ಆತಂಕ. ಅವಳು ಛಳಿ ಬಂದು ನಡುಗುತ್ತಿದ್ದರೆ ಇವರು ಅಳುತ್ತಾ ಹೋಗಿ ಭಾಗಮ್ಮನವರನ್ನು ಕರೆತರುತ್ತಿದ್ದರು. ಇಷ್ಟೆಲ್ಲಾ ಕಷ್ಟಸುಖಗಳಿಗೆ ತಲೆಯನ್ನು ಕೊಟ್ಟಿದ್ದರೂ, ಸೀತಮ್ಮನವರು ಇನ್ನೊಬ್ಬರ ಸಂಕಟವನ್ನು ನೋಡಿದಾಗ ಎದೆಗೆಡದ ಶಕ್ತಿಯನ್ನು ಸಂಪಾದಿಸಿರಲಿಲ್ಲ. ಅಂತೂ ಅವರ ಅನನ್ಯ ಶ್ರಮದಿಂದ ಪಾರ್ವತಿಯ ರೋಗವು ಹರಿಯಹತ್ತಿತ್ತು. ಎಡೆಬಿಡದ ಅವರ ಆರೈಕೆಯ

ಫಲವಾಗಿ ಅವಳ ಗುಳಿಬಿದ್ದ ಕೆನ್ನೆಗಳು ಹೊಸದಾಗಿ ಉಬ್ಬುತ್ತಿದ್ದುವು. ಕಣ್ಣಲ್ಲಿ ನವೀನ ಕಾಂತಿಯೊಂದು ಮೂಡುತ್ತಿತ್ತು. ಅವಳ ಮೊದಲಿನ ರೂಪ ಮತ್ತೆ ಬರುತ್ತಿರುವುದನ್ನು ಕಂಡು ಸೀತಕ್ಕ ಹಿಗ್ಗಿಹೋದರು. ಏನಾದರಾಗಲಿ ಹುಡುಗಿಯು ಹಾಸಿಗೆಯಿಂದ ಮೈ ಕೊಡವಿಕೊಂಡು ಎದ್ದಳಲ್ಲಾ ಎಂಬುದೇ ಅವರ ಆನಂದ.

ಅತ್ತೆಯು ಒಂದು ಕಡೆ ಸಂತೋಷಪಡುತ್ತಿದ್ದರೆ, ಸೊಸೆಯು ಎಲ್ಲಿಲ್ಲದ ಯೋಚನೆ ಮಾಡುತ್ತಿದ್ದಳು. ಮನೆಯಲ್ಲಿ ಹಣಕಾಸಿನ ಮುಗ್ಗಟ್ಟು ವಿಪರೀತವಾಗಿಹೋಗಿತ್ತು. ಅವಳನ್ನು ಪರೀಕ್ಷೆ ಮಾಡುತ್ತಿದ್ದ ಲೇಡಿ ಡಾಕ್ಟರು ಮಾತ್ರ ತಪ್ಪದೆ ಹಣ್ಣು ಹಂಪಲು, ಟಾನಿಕುಗಳ ಪಟ್ಟಿಯನ್ನು ಹೋದಾಗಲ್ಲೆಲ್ಲ ಬರೆದುಕೊಡುತ್ತಿದ್ದರು. ಸೀತಕ್ಕನಿಗೆ ಡಾಕ್ಟರು ಹೇಳಿದ ಹಾಗೆ ನಡೆಯಬೇಕೆಂಬ ಬಯಕೆ. ಆದರೆ ಯಾವುದೂ ನಡೆಯುವಹಾಗಿರಲಿಲ್ಲ. ಈ ವಿಷಯದಲ್ಲಿ ಅವರು ಪಾರ್ವತಿಯೊಡನೆ ಏನಾದರೂ ಹೇಳಲು ಹೋದರೆ,

"ಅಯ್ಯೊ ಸುಮ್ಮನಿರಿ ಅತ್ತೆ. ಒಟ್ಟಿನಲ್ಲಿ ಅವರಿಗೆ ನಾನು ಬೇಡ. ಸತ್ತರೆ ಸುಖವಾಯಿತು ಅಂದುಕೊಂಡಿದ್ದಾರೆ. ಸುಮ್ಮನೆ ನೀವೇಕೆ ಒದ್ದಾಡುತ್ತೀರಿ" ಎಂದು ರೇಗಾಡಿಬಿಡುತ್ತಿದ್ದಳು. ಅವಳ ಕೋಪಕ್ಕೆ ಹೆದರಿ ಸುಮ್ಮನಾಗುವುದನ್ನು ಬಿಟ್ಟು ಸೀತಕ್ಕನಿಗೆ ಮತ್ತೇನೂ ತೋರುತ್ತಿರಲಿಲ್ಲ. ಸೊಸೆಗೆ ಬಂದಿರುವುದು ಮಲೇರಿಯಾ ರೋಗಕ್ಕಿಂತ ಹಿರಿದಾಗಿ ಮನೋರೋಗವೆಂಬುದನ್ನು ಅವರು ಕಡೆಯ ವರೆಗೂ ಕಂಡುಕೊಳ್ಳಲಿಲ್ಲ.

ವಾಸುವು ಊರಿಗೆ ಹೋದ ಮೇಲೆ ಒಂದೆರಡು ಕಾಗದಗಳನ್ನು ಬರೆದಿದ್ದನು. ಪ್ರತಿ ಕಾಗದವೂ ಕೆಲಸದ ಮುಗ್ಗಟ್ಟು, ಹಣಕಾಸಿನ ತಾಪತ್ರಯಗಳಿಂದಲೇ ತುಂಬಿರುತ್ತಿತ್ತು. ಆಮೇಲೆ ಆ ಬಗೆಯ ಪತ್ರಗಳು ಬರುವುದೂ ನಿಂತುಹೋಯಿತು. ಮಗನು ಆರೋಗ್ಯವಾಗಿರುವನೋ, ಇಲ್ಲವೇ ಪಾರ್ವತಿಯ ಹಾಗೆ ಖಾಯಿಲೆ ಬಿದ್ದಿರುವನೋ ಎಂದು ಚಿಂತಿಸಿ, ಚಿಂತಿಸಿ, ಸೀತಮ್ಮನವರು ಒದ್ದಾಡಿಹೋದರು. ಕಿಟ್ಟಿಯ ಕಾಗದವೇನಾದರೂ ಬಂದರೆ ಸರಿ, ಭಾಗಮ್ಮನವರ ಮನೆಗೆ ಓಡುತ್ತಿದ್ದರು. ಭಾಗಮ್ಮನವರ ಗಂಡನನ್ನು ದೀನವಾಗಿ, "ವಾಸುವಿನ

ವಿಷಯವಾಗಿ ಏನಾದರೂ ಬರೆದಿದ್ದಾನೆಯೆ ?" ಎಂದು ಕೇಳುತ್ತಿದ್ದರು. ಕಿಟ್ಟಿಯೇನೋ ವಾಸುವಿನ ವಿಚಾರವಾಗಿ ಪ್ರತಿ ಕಾಗದದಲ್ಲಿಯೂ ಬರೆಯುತ್ತಿದ್ದನು. ಆದರೆ ಅವನು ಏನನ್ನು ಬರೆಯುತ್ತಿದ್ದನೆಂಬುದನ್ನು ಸೀತಕ್ಕನಿಗೆ ತಿಳಿಸುವ ಧೈರ್ಯ ಮಾತ್ರ ಆ ಇಬ್ಬರು ಮುದುಕರಲ್ಲಿ ಯಾರಿಗೂ ಇರುತ್ತಿರಲಿಲ್ಲ. ಆದರೂ ಸೀತಮ್ಮನವರ ಹೃದಯದ ವೇದನೆಯನ್ನು ಕೊಂಚ ಕಮ್ಮಿ ಮಾಡಲು, "ಮೊನ್ನೆ ನಮ್ಮ ಹುಡುಗ ಊರಿಗೆ ಬಂದಿದ್ದಾಗ, ವಾಸು ಸಿಕ್ಕಿದ್ದನಂತೆ. ಅವನು ಹುಷಾರಾಗಿರುವುದಾಗಿಯೂ, ತುಂಬಾ ಕೆಲಸದ ಅವಾಂತರವಿರುವುದಾಗಿಯೂ ಹೇಳಿದನಂತೆ" ಎಂದು ಭಾಗಮ್ಮನವರ ಗಂಡನು ಹೇಳುತ್ತಿದ್ದರು. ಅಷ್ಟು ಅವರ ಬಾಯಿಂದ ಬಂದರೆ ಸಾಕು, ಸೀತಕ್ಕ ಉತ್ಸಾಹದಿಂದ ಮನೆಗೆ ಓಡಿಬರುತ್ತಿದ್ದರು. ಒಂದೇ ಹಾಡಾಗಿದ್ದ ಈ ಸಮಾಚಾರವನ್ನು ಪಾರ್ವತಿಯ ಕಿವಿಗೂ ಹಾಕುತ್ತಿದ್ದರು. ಆದರೆ ಅವಳಿಗೆ ಮಾತ್ರ ಇದರಿಂದ ಸಮಾಧಾನವಾಗುತ್ತಿರಲಿಲ್ಲ. ಗಂಡನು ಕಂಠಿಯ ಸಹವಾಸದಿಂದ ಅಡ್ಡಹಾದಿಗೆ ಬಿದ್ದಿದ್ದರೂ ಇರಬಹುದೆಂದು ಅವಳು ಊಹಿಸಿದ್ದಳು.

ಇತ್ತ ಭಾಗಮ್ಮನವರ ಮತ್ತು ಅವರ ಯಜಮಾನರಿಗೆ ವಾಸುವಿನ ನಡವಳಿಕೆಯು ಬಗೆಹರಿಸಲಾರದ ಸಮಸ್ಯೆಯಾಗಿಹೋಗಿತ್ತು.

ಅವರ ಮಗನಲ್ಲದೆ ಮತ್ತೆ ಬೇರೆ ಯಾರಾದರೂ ಹಾಗೆ ಆರೋಪಣೆಗಳ ಮಳೆಯನ್ನು ವಾಸುವಿನ ಮೇಲೆ ಕರೆದಿದ್ದರೆ ಅವರು ಖಂಡಿತವಾಗಿಯೂ ನಂಬುತ್ತಿರಲಿಲ್ಲ. ಭಾಗಮ್ಮನವರ ತಳಮಳವನ್ನಂತೂ ಹೇಳುವುದಕ್ಕೆ ಅಸಾಧ್ಯವಾಗಿತ್ತು. ಅವರು ವಾಸುವನ್ನು ತಮ್ಮ ಮಗನೆಂದೇ ಭಾವಿಸಿದ್ದರು. ಅವನು ಹಾಗೆ ಹಾಳಾಗುತ್ತಿದ್ದಾನೆ ಎಂದರೆ ಅವರ ಜೀವ ಹೇಗೆ ತಾನೇ ಸುಮ್ಮನಿರಲು ಸಾಧ್ಯ? ಇದೆಲ್ಲಾ ಸುಳ್ಳಿರಬೇಕು ಎಂದು ಅವರಿಗನಿಸುತ್ತಿತ್ತು. ಒಂದು ದಿನ ಗಂಡನೊಡನೆ ಗುಟ್ಟಾಗಿ ಈ ವಿಷಯದಲ್ಲಿ ಚರ್ಚೆ ಮಾಡಿದರು.

"ಅಲ್ಲ, ಮಗು ಬರೆದಿರೋದೆಲ್ಲಾ ನಿಜ ಅಂತ ನಂಬುತ್ತೀರಾ ?"

"ನಿಜವಲ್ಲದೆ ಸುಳ್ಳುಯಾಕೆ ಬರೀತಾನೆ. ಅವನಿಗೆ ವಾಸುವಿನ ಮೇಲೆ ದಾಯಾದಿ ಮತ್ಸರವೇನಾದರೂ ಇದೆಯೆ. ಏನೋ ಜೊತೆಯ

ನನು ಮುಳಗುತ್ತಿದ್ದಾನಲ್ಲಾ ಅಂತ ಸಂಕಟ ತಡೆಯಲಾರದೆ ಬರಕೋ
ಖಾನೆ ಪಾಪ."

"ಕಿಟ್ಟಿಗೆ ವಾಸುವಿನಲ್ಲಿ ದ್ವೇಷ ಅಂತ ನಾನು ಹೇಳಲಿಲ್ಲಾಂದ್ರೆ.
ಾದರೂ ಚಿನ್ನದಂತಹ ಹುಡುಗ ಒಂದು ವರುಷದಲ್ಲಿ ಹೀಗೆ ಬದಲಾಯಿಸು
ತ್ತಾನೆಯೇ ಅಂತ. ನೋಡಿ, ಅವನು ಈ ಕೆಲಸಕ್ಕೆ ಸೇರಿ ಇಲ್ಲಿಗೆ ಹೆಚ್ಚು
'ಡಿಮೆ ವರ್ಷಕ್ಕೆ ಬಂತು. ಅಷ್ಟರಲ್ಲಿ ಈ ಬದಲಾವಣೆ!"

"ಅಯ್ಯೋ ಕೆಡುವುದು ಎಷ್ಟು ಹೊತ್ತಿನಲ್ಲಿದೆ. ಒಳ್ಳೆಯ ದಾರಿಯಲ್ಲಿ
ಡೆಯಬೇಕಾದರೆ ಕಷ್ಟ. ಹಾಲನ್ನು ಒಡಸಬೇಕಾದರೆ ಒಂದು ಸೇರು
ಳಿ ಹಿಂಡುತ್ತೀವೇನು? ಒಂದು ತೊಟ್ಟು ಸಾಕು. ಹಾಗೆಯೇ ಕಾಲವು
ಚ್ಚು, ಕಮ್ಮಿ ಎಂದು ಹೇಳುವುದಕ್ಕಾಗುವುದಿಲ್ಲ. ಯಾರೋ ಗಂಟು
ದ್ದಿದ್ದಾರೆ; ಹುಡುಗ ಹಾಳಾಗುತ್ತಿದ್ದಾನೆ."

"ಸೀತಮ್ಮ ಮಗನ್ನ ಕಳುಹಿಸುವಾಗ ಬಲೆ ಗೋಳಾಡಿದಳು. ನಿನ್ನ
ಗನೇನು ಪೋಲಿಯೇ, ಪುಂಡನೇ, ಅಳುವುದ್ಯಾಕೆ ಎಂದು ನಾನೇ
ದಿದ್ದೆ. ಹೀಗಾಗುತ್ತೇ ಅಂತ ಯಾರಿಗೆ ಗೊತ್ತು. ಹೋಗಲಿ ಅವನನ್ನು
ರಿಗೆ ತರಲು ಸಾಧ್ಯವಿಲ್ಲ ಅಂತೀರಾ?"

"ಸಾಧ್ಯವಿಲ್ಲದ ಹಾಗೇನೂ ಇಲ್ಲ. ಆದರೆ ಈಗಿನ ಸಂದರ್ಭದಲ್ಲಿ
ಸ್ಟವೆಂದೇ ಹೇಳಬೇಕಾಗುತ್ತದೆ. ಯಾರಾದರೂ ಸರಿಯಾದವರು ಹತ್ತಿರ
ದ್ದರೆ ಕೊಂಚ ಬೆದರಿಕೆ ಇಡಬಹುದಾಗಿತ್ತು. ಈಗ ಅಲ್ಲಿ ಹೇಳುವ
ಲ್ಲ, ಕೇಳುವವರಿಲ್ಲ. ಸದಾ ಸರೋಜೆಯೋ, ಸರಸ್ವತೀನೋ ಅವಳ
ನೆಯಲ್ಲಿ ಸಾಯ್ತಾನಂತೆ. ಆ ಹಾಳು ಕಸಬಿನವರಿಗೆ ತಿಳಿಯದ ವಿದ್ಯವೇ
. ಏನು ಬುದ್ಧಿಯನ್ನೇ ಕೆಡಿಸಿಬಿಟ್ಟಿದ್ದಾರೋ ಹೇಗೋ. ಹುಡುಗ
ಣವಾಗಿದ್ದ. ಅಲ್ಲದೆ ಆಸ್ತಿ ಬೇರೆ ಇದೆ."

ಭಾಗಮ್ಮನವರಿಗೆ ಆವೇಶವನ್ನು ತಡೆಯಲಾಗಲಿಲ್ಲ.

"ಕಿಟ್ಟೀಗಾದರೂ ಬರೆದು ನೋಡೀಂದ್ರೆ. ಅವನಿಗೇನಾದರೂ ಬುದ್ಧಿ
ದಕ್ಕೆ ಸಾಧ್ಯವಾದರೆ ಹೇಳಿ ನೋಡಲಿ. ಅದೂ ಒಂದು ಚಪಲ"

ಗಮ್ಮನವರ ಗಂಡನಿಗೆ ರೇಗಿ ಹೋಯಿತು.

ಇದೇ ನಿನ್ನ ವಿವೇಕ. ಜೊತೆಯವನು ಹೋಗಿ ಹೀಗೆಲ್ಲಾ ಮಾಡ

ಬೇಡ ಅಂದರೆ ಅವನು ಕೇಳುತ್ತಾನೆಯೇ. ಉತ್ತರ ಕೊಡದೆ ಹೋದರೂ ಆಯ್ತು; ಇಲ್ಲವೇ ನೀನ್ಯಾರು ಕೇಳೋಕ್ಕೆ ಎಂದು ದಬಾಯಿಸಿ ಕಳುಹಿಸಿದರೂ ಆಯ್ತು," ಎಂದು ಹೇಳಿದರು.

ಭಾಗಮ್ಮ ಹತಾಶಳಾಗಿ ಕಂಬನಿಗರೆಯುತ್ತಾ ಹೊರಟುಹೋದರು.

## ೨೫

"ಪಾರ್ವತಿ"

"ಆ"

"ಆಸ್ಪತ್ರೆಗೆ ಹೋಗಿದ್ದೆಯಾ?"

"ಹೂಂ, ಹೋಗಿದ್ದೆ. ಹೋಗಿದ್ದು ಈಗ ತಾನೇ ಬಂದೆ."

"ಡಾಕ್ಟರು ಏನು ಹೇಳಿದರು?"

"ಈವತ್ತು ಚೆನ್ನಾಗಿ ಪರೀಕ್ಷೆಮಾಡಿ, ಅದೇನೇ ಎಂದು ಹೇಳಿದರು."

"ಇಷ್ಟು ತಿಂಗಳು ಎಂದು ಹೇಳಲಿಲ್ಲವೆ?

"ಐದಾಗಿದೆ ಎಂದು ಅವರ ಅಭಿಪ್ರಾಯ."

ಇಷ್ಟರಲ್ಲಿ ಬಾಗಿಲು ದಡದಡ ಎಂದಿತು. ಪಾರ್ವತಿಯು ಯಾರಿರಬಹುದೆಂದು ಹೋಗಿ ಕದವನ್ನು ತೆಗೆದಳು. ಉಪ್ಪು ಸಾಲ ಕೇಳಲು ಭಾಗಮ್ಮನವರು ಕೈಲೊಂದು ಬಟ್ಟಲನ್ನು ಹಿಡಿದುಕೊಂಡು ಒಳಗೆ ಬಂದರು.

"ಪಾತು, ಒಂದು ಬಟ್ಟಲುಪ್ಪಿದ್ದರೆ ಬೇಕಾಗಿತ್ತು."

"ಓಹೋ, ಒಳಗೇ ನಡೆಯಿರಿ. ಅಡುಗೆಮನೆಯಲ್ಲಿ ಅತ್ತೆ ಇದಾರೆ"

ಪಾರ್ವತಿ ಬಾಗಿಲನ್ನು ಮುಚ್ಚುತ್ತಾ.

ಎಂದಳು. ...ಮ್ಮನವರು ಅಡುಗೆ ಮನೆಗೆ ಹೋದರು. ಸೀತಕ್ಕ ಅವರು

ಭಾಗ... ...ೀಡಿ, ಕುಳಿತುಕೊಳ್ಳಲು ಮಣೆಯನ್ನು ಕೊಡುತ್ತಾ,

ಬಂದುದನ್ನು ನ... ...ಗಮ್ಮ. ಇನ್ನೊಂದು ಸ್ವಲ್ಪ ಹೊತ್ತಿಗೆಲ್ಲಾ ನಾನೇ

"ಬನ್ನಿ ಭಾ... ...ಕೆಂದುಕೊಂಡಿದ್ದೆ" ಎಂದರು.

ನಿಮ್ಮನ್ನು ಕರೆಯಬೇ... ...ೀತಮ್ಮ. ಒಂದು ಬಟ್ಟಲುಪ್ಪಿದರೆ ಬೇಕಾಗಿತ್ತು.

"ಏನಿಲ್ಲ ಕಣೆ ಸಿ... ...ಗ ಅಷ್ಟು ಸಲ ಹೇಳಿಕಳುಹಿಸಿದ್ದೆ. ಬರುವಾಗ

ಬೆಳಗ್ಗೆ ಪೇಟೆಗೆ ಹೋಗುವ...

"ಅದಕ್ಕೇನಂತೆ ಕೊಡುತ್ತೇನೆ, ಪಾತು, ಆ ಬಟ್ಟಲಲ್ಲಿ ಭಾಗಮ್ಮನವರಿಗೆ ಉಪ್ಪು ತುಂಬಿಕೊಡು" ಎಂದರು ಸೀತಕ್ಕ. ಆಮೇಲೆ ಏನೋ ತೋರಲು,

"ಈ ಗಂಡಸರ ಹಣೆಯು ಬರಹವೇ ಅಷ್ಟು. ಎಲ್ಲಕ್ಕೂ ಧೋರಣೆ" ಎಂದರು.

"ಅಯ್ಯೋ ಸುಮ್ಮನೇನಾದೂ ಇದು ಮತ್ತೆ, ಧೋರಣೆಯೇನು ಬಂತು--ಅಂತಹ ವಿದ್ಯೆ. ಹೇಗಿದ್ದರೂ ಊಟದ ಹೊತ್ತಿಗೆ ಎಲ್ಲಿಂದಲಾದರೂ ತಂದು ಹವಣಿಸುತ್ತಾಳೆ ಎಂದು ಗೊತ್ತು."

ಸೀತಮ್ಮ ನಕ್ಕರು. ಅನಂತರ ಸಾರಿಗೆ ಹುಳಿಯನ್ನು ಕಿವುಚುತ್ತಾ ಹೇಳಿದರು.

"ಅವರ ಕಾಲ ಹಾಗೆಯೇ ಕಳೆದು ಹೋಗುತ್ತೆ. ನಮ್ಮ ಕಾಲ ಹೀಗೆಯೇ ತಳ್ಳುತ್ತೆ. ಎಲ್ಲಾ ಅವರವರು ಕೇಳಿಕೊಂಡು ಬಂದದ್ದು"

ಏನು ಕೇಳುವುದೋ, ಏನು ಬಿಡುವುದೋ ದೇವರಿಗೇ ಗೊತ್ತು. ಒಟ್ಟಿನಲ್ಲಿ ನೀಸಬೇಕಾದರೆ ನನಗೆ ಜೀವವೇ ಹೋಗುತ್ತೆ."

ಭಾಗಮ್ಮ ಪಾರ್ವತಿಯು ಉಪ್ಪುತುಂಬುವುದನ್ನೇ ನೋಡುತ್ತಾ ಕುಳಿತರು. ಆಮೇಲೆ ಮೊದಲು ಸೀತಕ್ಕ ಅಂದ ಮಾತು ನೆನಪಿಗೆ ಬಂದಿತು.

"ಅದೇನೋ ನನ್ನನ್ನು ಕರೆಯಬೇಕೆಂದಿದ್ದೆ ಎಂದು ಹೇಳಿದೆಯಲ್ಲಾ ಯಾಕೆ?"

ಸೀತಮ್ಮನವರು ಪಾರ್ವತಿಯನ್ನು ನೋಡುತ್ತಾ, ಹೇಳಿದರು.

"ಈಗ ಇರುವ ಚಿಂತೆಗಳ ಜೊತೆಗೆ ಇನ್ನೊಂದು ಹೊಸ ಯೋಚನೆ ಬಂದಿದೆ"

ಭಾಗಮ್ಮನವರಿಗೆ ಏನೂ ಅರ್ಥವಾಗಲಿಲ್ಲ.

"ನೀವು ಕಂಡಹಾಗೆ ಇವಳು ಇಲ್ಲಿಗೆ ಬಂದಾಗಿನಿಂದ ಹೊರಗಾಗಿರಲಿಲ್ಲ............"

"ಹೌದೌದು, ಹಿಂದೊಮ್ಮೆ ಇದನ್ನೇ ನೀನು ಹೇಳಿದ್ದೆ" ಭಾಗಮ್ಮ ತಲೆಯಾಡಿಸಿದರು.

"ಆ ದಿನ ಏನೋ ಖಾಯಿಲೆಯ ದೋಷವೆಂದು ಮಾತಾಡಿಕೊಂಡಿದ್ದೆವಲ್ಲಾ ? ಈಗ ಡಾಕ್ಟರು ಹೇಳಿದರಂತೆ, ಐದು ತಿಂಗಳಾಗಿದೆ ಅಂತ."

"ಐದು ತಿಂಗಳು! ಸೀತಮ್ಮ, ಏನಾದರು ಹಾಸ್ಯ ಮಾಡುತ್ತೀಯೋ ಹೇಗೆ?"

"ಹಾಸ್ಯವಿಲ್ಲ ಭಾಗಮ್ಮನೋರೆ, ಈಗ ತಾನೇ ಆಸ್ಪತ್ರೆಯಿಂದ ಬಂದಳು. ಬೇಕಾದರೆ ಅವಳನ್ನೇ ಕೇಳಿ."

ಭಾಗಮ್ಮನವರು ತನ್ನನ್ನು ನೋಡುವುದನ್ನು ಕಂಡು ಪಾರ್ವತಿಗೆ ತುಂಬ ನಾಚಿಕೆಯಾಯಿತು.

"ಎಲೆಲಾ ಹುಡುಗಿ! ನನ್ನ ಕಣ್ಣಿಗೇ ಮಣ್ಣೆರಚಿಬಿಟ್ಟಿದ್ದೆ, ಪರವಾಗಿಲ್ಲ. ಇನ್ನು ಮುಂದೆ ಹೇಗೆ ಬಚ್ಚಿಟ್ಟುಕೊಳ್ಳುತ್ತೀಯೋ ನೋಡುತ್ತೇನೆ."

"ಆದರೂ ಭಾಗಮ್ಮ, ಇವಳು ಹೀಗೆ ಅಂತ ನನಗೆ ಇಲ್ಲಿಯ ವರಿಗೂ ಸುಳಿವೇ ಗೊತ್ತಾಗಲಿಲ್ಲ" ಎಂದರು ಸೀತಕ್ಕ.

"ಗೊತ್ತಾಗದೇ ಹೋದರೇನಂತೆ ಬಿಡು. ಮೊಮ್ಮಗ ಹುಟ್ಟುತ್ತಾನೆ" ಎಂದರು ನಗುತ್ತಾ ಭಾಗಮ್ಮ.

"ಮೊಮ್ಮಗನ ಮುಖ ನೋಡುವುದು ಹಾಗಿರಲಿ ಭಾಗಮ್ಮ, ಈಗ ಹಿಟ್ಟಿನ ಮಡಕೆಗಳು ಲೊಟಗುಟ್ಟುತ್ತಿವೆಯಲ್ಲಾ ಅದಕ್ಕೆ ಏನು ಹೇಳು ತ್ತೀರಿ. ಐದು ತಿಂಗಳು ಅಂದ ಮೇಲೆ ಚೊಚ್ಚಲು ಬಸುರಿಗೆ ಅಷ್ಟೋ, ಇಷ್ಟೋ ಆರೈಕೆ ಔಷಧಿ ಅಂತ ಮಾಡಬೇಕೊ ಬೇಡವೊ?"

"ಹಾಗನ್ನಕುಂಟೇಮ್ಮಾ. ಅದರಲ್ಲೂ ಚೊಚ್ಚಲು. ದೇಹ ಕೆಟ್ಟು ಹೋದರೆ ಕಷ್ಟ"

"ನೋಡಿ, ತಿಳಿದೂ ತಿಳಿದೂ ಹೇಗೆ ಸುಮ್ಮನಿರಲಿ. ನಿಮ್ಮ ಹತ್ತಿರ ಹೇಳುವುದಕ್ಕೇನಂತೆ ಹೇಳ್ತೀನೆ ಕೇಳಿ. ನೀವು ಕಂಡ ಹಾಗೆ ವಾಸು ಮೂರು ಕಾಸೂ ಕಳುಹಿಸುವುದಿಲ್ಲ. ಬರೋ ಹತ್ತು ರೂಪಾಯಿ ಬಾಡಿಗೆ ಯಲ್ಲಿ ಕಾಲ ನೂಕುತ್ತಿದ್ದೇವೆ. ಇದರಲ್ಲಿ ಹೊಟ್ಟೆಗೆ ಸಾಲದಿರುವಾಗ ಇನ್ನು ಆರೈಕೆಗೆಲ್ಲಿ ತರಲಿ ಭಾಗಮ್ಮ?"

ಭಾಗಮ್ಮನವರು ಪಾರ್ವತಿಯನ್ನು ನೋಡಿ,

"ಕೊಂಚ ನಿನ್ನ ಗಂಡನಿಗೆ ಕಾಗದ ಬರೆಯಮ್ಮ. ಸ್ವಲ್ಪವಾದರೂ ದುಡ್ಡು ಕಳುಹಿಸಲಿ. ಇಲ್ಲದಿದ್ದರೆ ಅವಳು ಹೇಗೆ ಮಾಡಬೇಕು" ಎಂದರು.

"ಅಯ್ಯೋ ಎಲ್ಲಾ ಮಾಡಿಯಾಯ್ತು. ಕಾಗದ ಬರೆದೂ ಬರೆದೂ

ವಾಸುವು ಗಂಟಲನ್ನು ಸರಿ ಮಾಡಿಕೊಂಡನು. ತೀರಾ ಸರಳ ಮನಸ್ಸಿನವರಾದ ಸೀತಮ್ಮನವರಿಗೆ ವಾಸುವು ತನ್ನ ಕಪಟದ ಕಟ್ಟುಕತೆಯನ್ನು ಹೇಳುವಾಗ ಅವನ ಮನಸ್ಸಿನಲ್ಲಿ ಯಾವ ಒಗೆಯ ಒಂದು ಅಪರಾಧದ ಆಂದೋಳನವೂ ಆಗದೆ ಇರಲಿಲ್ಲ; ಆದರೆ ಬೇರೆ ಯಾವ ಮಾರ್ಗವೂ ಇರಲಿಲ್ಲವಾಗಿ ಅವನು ಅದನ್ನೆಲ್ಲಾ ಹೇಗೋ ಸಹಿಸಿಕೊಂಡನು. ಸ್ವಲ್ಪವೂ ಅನುಮಾನ ಬರದಂತೆ ದುಃಖವನ್ನು ನಟಿಸುತ್ತಾ, ಕೇವಲ ಕೆಲವು ಹೊಟ್ಟೆಕಿಚ್ಚಿನ ವ್ಯಕ್ತಿಗಳ ಕ್ರೌರ್ಯದಿಂದ ತನಗೆ ಕೆಲಸ ಹೋಗುವ ಸ್ಥಿತಿ ಬಂದೊದಗಿದೆಯೆಂದೂ, ಅದರಿಂದ ಪಾರಾಗಲು ಧನ ಸಹಾಯ ಬೇಕಾಗಿದೆಯೆಂದೂ ಹೇಳಿದನು. ಸೀತಮ್ಮನವರು ಭೂಮಿಗೇ ಕುಸಿದುಹೋದರು. ಸಂಕಟದ ಉದ್ವೇಗವನ್ನು ತಡೆಯಲಾರದೆ,

"ಆವಾಗ ಗಿಣೀಗೆ ಹೇಳಿದ್ಹಾಗೆ ಹೇಳಿದ್ದೆ, ಹೋಗಬೇಡ ಅಂತ. ನೀನು ಕೇಳಲಿಲ್ಲ. ಈಗ ನೋಡು ಅದರ ಫಲ" ಎಂದರು.

"ಅಯ್ಯೋ ಅದೆಲ್ಲಾ ಅದೃಷ್ಟದ ಮೇಲೆ ಹೋಗುತ್ತೆ ಅಕ್ಕ. ಈಗ ಕಿಟ್ಟಿ ಕೆಲಸಕ್ಕೆ ಸೇರಿ ಯಾವ ಕಾಲವಾಯಿತು, ಅವನಿಗೆ ನನ್ನ ಹಾಗೆಯೇ ಆಯಿತೆ? ಏನೋ ಎಲ್ಲ ಗ್ರಹಚಾರ."

"ಅದೇ ನಾನು ಹೇಳುವುದೂವೇ. ನನಗಿನ್ನೂ ಗ್ರಹಚಾರ ಬಿಡುಗಡೆಯಾಗಿಲ್ಲ. ಯಾವುದು ಮಾಡಿದರೂ ಕಷ್ಟ.''

ಸೀತಕ್ಕ ನಿಟ್ಟುಸುರುಗೆರೆದು ಚಿಂತಿಸಿದರು. ಅನಂತರ ಏನೋ ತೋರಲು,

"ಇನ್ನೂ ಒಂದು ವಾಸು. ಹಾಳು ಕೆಲಸ ಹೋದರೆ ಹೋಗಲಿ. ಅದಕ್ಕಾಗಿ ದುಡ್ಡು ಖರ್ಚು ಬೇಡ; ಕಾಸು ಖರ್ಚೂ ಬೇಡ. ಸುಮ್ಮನೆ ಇಲ್ಲೇ ಏನಾದರೂ ಒಂದು ಕೆಲಸ ನೋಡಿಕೊಳ್ಳಬಾರದೆ'' ಎಂದರು.

"ಅದೇನೋ ನಿಜವೇ. ಆದರೆ ಈಗಿನ ಸಂದರ್ಭದಲ್ಲಿ ಹಾಗೂ ಮಾಡುವ ಹಾಗಿಲ್ಲ. ತೆರುವ ದುಡ್ಡನ್ನು ತೆತ್ತು ಬೇಕಾದರೆ ಕೆಲಸವನ್ನು ಬಿಡಬಹುದೇ ಹೊರತು, ಅದಕ್ಕೆ ಮೊದಲು ಇಲ್ಲಿಗೆ ಓಡಿಬಂದರೆ ಕತ್ತಲೆ ಮನೆಯನ್ನು ಕಾಣಬೇಕಾಗುತ್ತದೆ."

ಮಗನ ಮಾತನ್ನು ಕೇಳಿ ಸೀತಮ್ಮನವರ ಕೈಕಾಲುಗಳ ಶಕ್ತಿಯೇ ಉಡುಗಿಹೋಯಿತು. ಅವರು ಗಾಬರಿಯಿಂದ,

"ಅಯ್ಯೋ, ನಾನು ತಿಳಿವಳಿಕೆ ಇಲ್ಲದೆ ಹುಚ್ಚುಹುಚ್ಚಾಗಿ ಏನೋ ಹೇಳಿದೆನೆಂದು ಸದ್ಯಕ್ಕೆ ಹಾಗೆ ಮಾಡಿಬಿಟ್ಟೆಯೇನಪ್ಪಾ. ಈಗಾಗಿರುವುದೇ ಸಾಕಾಗಿದೆ. ಇದಕ್ಕೆಲ್ಲಾ ಏನು ಮಾಡಲುತಾನೇ ಸಾಧ್ಯ. ಏನೋ ಹಿಂದಿನ ಜನ್ಮದ ಋಣ ಅಂತ ತೀರಿಸುವುದು. ಈಗ್ಗೆ ಬೇಕಾಗಿದ್ದರೆ ಮನೆಯ ಆಧಾರದ ಮೇಲೆ ನಿನಗೆ ಬೇಕಾಗುವಷ್ಟು ಹಣವನ್ನು ತೆಗೆದುಕೊ. ಆಮೇಲೆ ದೇವರು ಕೊಟ್ಟಾಗ ಅದನ್ನು ತೀರಿಸಿಬಿಡುವುದು" ಎಂದರು.

ಆ ಒಂದು ಕ್ಷಣದಲ್ಲಿ ಅವರಿಗೆ ಲಕ್ಷ್ಮೀದೇವಿ ಕಲಶದಲ್ಲಿನ ದುಡ್ಡು ಮರೆತುಹೋಗಿತ್ತು. ವಾಸುವು ಮಾತ್ರ, ತನ್ನ ಕಪಟನಾಟಕವು ಜಯಪ್ರದವಾಗಿ ನಡೆದುಹೋದುದನ್ನು ಕಂಡು ಮನದಲ್ಲಿಯೇ ಹಿಗ್ಗಿಹೋದನು.

ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆಲ್ಲಾ ಜಟಕಾಗಾಡಿಯು ಮನೆಯ ಮುಂದೆ ಬಂದು ನಿಂತಿತು. ಸೀತಮ್ಮನವರು ಅಣ್ಣಾನೇನಾದರೂ ಬಂದನೇನೊ ಎಂದು ಬಾಗಿಲ ಬಳಿ ಇಣಿಕಿ ನೋಡಿದರು. ಆದರೆ ಅವರ ನಿರೀಕ್ಷೆಗೆ ಬದಲಾಗಿ ವಾಸುವು ಗಾಡಿಯಿಂದಿಳಿದನು. ಸಾಕೇ ಬಿಸಿಲು ಹೊತ್ತಾಗಿದ್ದ ಕಾರಣ ಮಗನು ನಡೆಯಲಾರದೆ ಗಾಡಿಯಲ್ಲಿ ಬಂದಿರಬಹುದೆಂದು ಸೀತಕ್ಕ ಸುಮ್ಮನಾದರು. ಆದರೆ ಆ ದಿವಸ ಸುಮ್ಮನೇ ಸೀತಮ್ಮನವರು ಯೋಚಿಸಿದುದಲ್ಲಾ ತಪ್ಪೇ ಆಗುತ್ತಾ ಬಂದಿತ್ತು. ವಾಸುವು ಒಳಗೆ ಬಂದವನು ಕೋಟನ್ನೂ ಸಹ ಬಿಚ್ಚದೆ,

"ಅಕ್ಕ ಹೊರಡುತ್ತೀ ತಾನೇ?" ಎಂದನು.

"ಈ ಉರಿ ಬಿಸಿಲಿನಲ್ಲಿ ಎಲ್ಲಿಗೆ ವಾಸು?"

"ಅದೇ ಬೆಳಗ್ಗೆ ಹೇಳಿದ್ದೆಯಲ್ಲಾ........"

ಬೆಳಗ್ಗೆ ಏನು ಹೇಳಿದ್ದೆನೆಂದು ಸೀತಕ್ಕ ಯೋಚಿಸಿದರು. ಬಹಳ ಹೊತ್ತು ಚಿಂತಿಸಿದ ಮೇಲೆ ಅವರಿಗೆ ಮನೆಯನ್ನು ಆಧಾರ ಮಾಡುವ ವಿಷಯವು ನೆನಪಿಗೆ ಬಂದಿತು. ಅವರು ವಾಸುವನ್ನು ಮೊದಲಿನ ವಾಸುವೆಂದೇ ಭಾವಿಸಿದ್ದರು. ಅವನಿಗೆ ಈ ಬಗೆಯ ವ್ಯವಹಾರಗಳಲ್ಲಿ ಏನೂ ತಿಳಿವಳಿಕೆಯಿಲ್ಲವೆಂದೂ, ಆಧಾರ ಭೋಗ್ಯಗಳೆಂದರೆ ಒಂದು ದಿನದಲ್ಲಿ ನಡೆದುಹೋಗುವ ಕೆಲಸವೆಂದು ಅವನು ತಿಳಿದಿರುವನೆಂದೂ ಯೋಚಿಸಿ, ಮಗನ ಕಪಟವಿಲ್ಲದ ಬುದ್ಧಿಗೆ ತಮ್ಮೊಳಗೆ ತಾವೇ ನಕ್ಕರು.

"ವಾಸು, ನೀನು ಬಿ. ಎ. ಪಾಸು ಮಾಡಿದರೂ, ನನ್ನಲ್ಲಿ ಇರುವಷ್ಟು ವ್ಯವಹಾರ ಜ್ಞಾನ ಅನ್ನೋದು ನಿನ್ನಲ್ಲಿ ಇಲ್ಲ. ಆಧಾರ ಮಾಡುವುದು ಎಂದರೆ ಆಟ ಆಡಿದಷ್ಟು ಸುಲಭ ಎಂದುಕೊಂಡೆಯಾ? ಅದಕ್ಕೆ ನಮಗೆ ಗೊತ್ತಿರುವ ಸರಿಯಾದ ನಂಬಿಕಸ್ತರನ್ನು ಹಿಡಿದು, ನಮ್ಮ ವಸ್ತುವಿಗೆ ಅಪಾಯ ಬರದ ಹಾಗೆ ಕೆಲಸ ಮಾಡಬೇಕು. ಸುಮ್ಮನೆ ಹಾಗೆ ಸಿಕ್ಕಾಪಟ್ಟೆ ದುಡುಕಿದರೆ ಕಷ್ಟ."

"ಆ ವಿಷಯವನ್ನೆಲ್ಲಾ ನಾನು ಸರಿಯಾಗಿ ಮಾಡಿದ್ದೇನೆ."

"ಸರಿಮಾಡಿದೇನೆ ಅಂದರೆ ಏನರ್ಥ ವಾಸು. ದುಡ್ಡು ಕೊಡುವವರು ಯಾರು? ಏನು?........"

ಸೀತಕ್ಕ ಚರ್ಚೆಗೆ ಆರಂಭಿಸಲು ವಾಸುವಿಗೆ ಜುಗುಪ್ಸೆ, ಕ್ರೋಧಗಳು ಏಕಕಾಲದಲ್ಲಿ ಬಂದುವು. ಆದರೂ ಅದನ್ನು ಅದುಮುತ್ತಾ,

"ಅದೆಲ್ಲಾ ಈಗ ಹೊರಟಾಗ ಯಾಕಕ್ಕಾ? ಇನ್ನು ಕೊಂಚ ಹೊತ್ತಿಗೆಲ್ಲಾ ತಾನೇ ಗೊತ್ತಾಗುತ್ತದೆ ನಡಿ!" ಎಂದನು.

ಸಹನೆಯ ಪ್ರತಿಬಿಂಬದಂತಿದ್ದ ಸೀತಮ್ಮನವರಿಗೂ ಕೋಪ ಉಕ್ಕೇರಿ ಬಂದಿತು.

"ಬಹಳ ಚೆನ್ನಾಗಿ ಹೇಳಿದೆ. ಅವರು ಚಿಕ್ಕವಯಸ್ಸಲ್ಲಿ ನಮ್ಮನ್ನು ಕೈಬಿಟ್ಟು ಹೋದಾಕ್ಷಣ ನಿನಗೆ ಹೇಳುವವರು, ಕೇಳುವವರು ಯಾರೂ ಇಲ್ಲವೆ? ಇಂತಹ ವಿಷಯದಲ್ಲಿ ನಿಮ್ಮ ಮಾವನಿಗೆ ಒಂದು ಮಾತು ತಿಳಿಸದಿದ್ದರೆ, ಅವನು ಏನು ತಾನೇ ತಿಳಿದುಕೊಳ್ಳುವುದಿಲ್ಲಾ? ಹೀಗೆಲ್ಲಾ ಸುಮ್ಮನೆ ಹುಡುಗಾಟ ಮಾಡುವುದು ಖಂಡಿತವಾಗಿಯೂ ನನಗೆ ಚೆನ್ನಾಗಿ ಕಾಣುವುದಿಲ್ಲಾಪ್ಪ. ಇಷ್ಟರ ಮೇಲೆ ನಿನ್ನ ಇಷ್ಟ."

"ಸರಿ, ನನ್ನ ಇಷ್ಟ ನೀನು ಹೊರಡುವುದು. ನಡಿ, ಅಲ್ಲಿ ಗಾಡಿಯವನು ಜೋರೆ ಅರಚಿಕೊಳ್ಳುತ್ತಿದ್ದಾನೆ." ವಾಸುವು ಅರ್ಧ ಸಡಿಲವಾಗಿದ್ದ ಕೋಟನ್ನು ಮೈಗೆ ತುರುಕುತ್ತಾ ಹೇಳಿದನು.

"ಗಾಡಿಯವನು ಅರಚಿಕೊಳ್ಳುತ್ತಾನೆ ಅಂತ ನಾನು ಮನೆಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ."

ಸೀತಕ್ಕ ಮೊಂಡು ಹಿಡಿದು ಕುಳಿತರು. ಅವರಿಗೆ ವಿಪರೀತವಾಗಿ ಅಳುವು ಬಂದಿತು. ಹೋ ಎಂದು ಅಳ ಹತ್ತಿದರು. ಜೊತೆಗೆ

ಿದಳು. ವಾಸುವು ಕೆರಳಿ ಕೆಂಡವಾದನು.
ಪಾರ್ವತಿಯೂ ದನಿಗೂ ಗಮ್ಮನವರಿಗೆ ಕೇಳಿಸಿ, ತನ್ನ ಕೆಲಸಕ್ಕೆಲ್ಲಿ
ಇವರಿಬ್ಬರ ಆರ್ಭಟವೆಲ್ಲ ಭಾ ದಿಗಿಲು ಆವರಿಸಿತ್ತು. ಆದಕಾರಣ
ಸಂಚುಕಾರ ಬಂದೀತೊ ಎಂಬ ೆಂದು ರೌದ್ರಾವತಾರವನ್ನು ತಾಳಿ
ಇನ್ನು ಜಾಗ್ರತೆ ಮಾಡದಿದ್ದರೆ ಕೇ ನಾಲಗೆಯನ್ನು ಹಿರಿದುಕೊಂಡು
"ಹೊರಡುವಿಯೋ ಇಲ್ಲವೇ ನಿನ್ನೆದುರಿಗ ವನ ಆಕ್ರೋಶಕ್ಕೆ ಅಂಜಿ
ಪ್ರಾಣಬಿಡಲೋ" ಎಂದು ಅರಚಿದನು. . ಸೀತಕ್ಕ ಕೇಲುಕೊಟ್ಟ,
ಅತ್ತೆ ಸೊಸೆಯರಿಬ್ಬರು ಸುಮ್ಮನಾಗಬೇಕಾಯಿತ ಗೆ ಭಾಗಮ್ಮನವರೆಲ್ಲಿ
ಬೊಂಬೆಯಂತೆ ಬಾಗಿಲಿಗೆ ಬಂದರು. ಆಗ ಅವ ಭಾಗಮ್ಮನವರಿಗೆ
ಕಾಣಿಸಿಕೊಳ್ಳುವರೋ ಎಂದು ಭಯವಾಯಿತು. ನ್ನು ತಿರುಗಿಸಿ
ಮುಖವನ್ನು ತೋರಿಸಲಾರದೆ ಸೀತಕ್ಕ, ಬೇರೆಡೆಗೆ ಮುಖ ಅವರು
ಕೊಂಡರು. ಗಾಡಿಯು ಬಹುದೂರ ಸಾಗುವ ವರೆಗೂ
ಪಕ್ಕದ ಮನೆಯ ಕಡೆಗೆ ತಿರುಗುವ ಸಾಹಸಕ್ಕೆ ಹೋಗಲಿಲ್ಲ.

ಸಬ್ ರಿಜಿಸ್ಟ್ರಾರರ ಆಫೀಸಿಗೆ ಹೋದಮೇಲೆ ಅಲ್ಲಿ ಆಧಾರ ಪತ್ರ ವನ್ನು ಓದಿದಾಗ ಸೀತಕ್ಕನಿಗೆ ತಿಳಿಯಿತು—ತಾವು ಎಂತಹ ಪೆಚ್ಚು ತಿಂದಿದ್ದಾರೆಂಬುದು. ಮನೆಯು ಆಧಾರವಾಗಿದ್ದುದು ಶ್ರೀಕಂಠಯ್ಯ ನವರಿಗೆ ಬಾಲ್ಯದಿಂದಲೂ ಶತ್ರುಗಳಾಗಿದ್ದ ಹುಣಸೂರು ನಂಜಪ್ಪನವರಿಗೆ. ಸಮಯವನ್ನು ಕಾದು ಕತ್ತಿಯನ್ನು ಮಸೆಯುತ್ತಿದ್ದ ಅವರಿಗೆ ವಾಸುವು ತಾನಾಗಿ ಹೋಗಿ ಕೊರಳನ್ನು ಕೊಟ್ಟನಲ್ಲ, ಎಂದು ಸೀತಕ್ಕನಿಗೆ ಬಹಳ ಖೇದವಾಯಿತು. ಅಲ್ಲದೆ ಅಂತಹವರ ಸಹವಾಸಕ್ಕೆ ಕೈ ಹಾಕಿದ ಮೇಲೆ ತಮ್ಮ ಮನೆಯು ಉಳಿಯುವ ಸಂದರ್ಭವೂ ಕಡಮೆಯಾಗಿ ತೋರಿತು. ಮೊದಲೇ ವಿಚಾರವು ಅವರಿಗೆ ತಿಳಿದಿದ್ದರೆ, ಹೀಗೆ ಮಾಡಬೇಡವೆಂದು ಮಗನೊಡನೆ ಮೊಂಡು ಹಿಡಿಯುತ್ತಿದ್ದರೊ ಏನೊ! ಅದಕ್ಕಿಂತಲೂ ಅವರಿಗೆ ನೂರು ಮಡಿ ಹೆಚ್ಚು ದುಃಖವನ್ನು ತಂದ ವಿಷಯವೆಂದರೆ ವಾಸುವು ನಡಸಿದ್ದ ಮೋಸ. ಸೀತಕ್ಕ ಮನೆಯಲ್ಲಿ ಮಾತು ಬಂದಿದ್ದಾಗ ಆಧಾರವನ್ನು ನಾನ್ನೂರಕ್ಕೊ, ತಪ್ಪಿದರೆ ಐನೂರಕ್ಕೋ ಮಾಡುವಂತೆ ಹೇಳಿದ್ದರು. ವಾಸುವೇನೂ ಅದಕ್ಕೆ ಪ್ರತಿಭಟಿಸಿರಲಿಲ್ಲ. ಆದಕಾರಣ ಸೀತಮ್ಮನವರಿಗೆ ಮಗನು ತಾವು ಖಚಿತವಾಗಿ ಹೇಳಿರುವ ಹಣಕ್ಕೆ ಆಧಾರಮಾಡಿರುವನೆಂಬ ಭರವಸೆ ಇದ್ದಿತು. ಆದರೆ ಆಧಾರಪತ್ರವನ್ನು

ಓದಿದಾಗ, ವಾಸುವು ತೆಗೆದುಕೊಂಡಿರುವ ಹಣ ಸಾವಿರವೆಂದು ತಿಳಿಯಲು ಸೀತಕ್ಕ ಅಲ್ಲಿಯೇ ಕುಸಿದುಹೋದರು. ವಾಸುವು ಇಂತಹ ಮೋಸ ಮಾಡುವನೆಂದು ಅವರು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಅವನ ಮೊದಲಿನ ಗುಣಗಳನ್ನು ಯೋಚಿಸಿದರೆ, ಅವನ ಪ್ರಕೃತದ ಗುಣಗಳನ್ನು ಕನಸಿನಲ್ಲಿ ನೆನೆಯುವುದಕ್ಕೂ ಸಾಧ್ಯವಿರಲಿಲ್ಲ. ಪತ್ರವನ್ನು ಓದಿದ ಮೇಲೆ ಸೀತಮ್ಮನವರು ತಮ್ಮ ಒಪ್ಪಿಗೆಯನ್ನು ಸೂಚಿಸಬೇಕಾಯಿತು. ಆ ಒಂದು ಕ್ಷಣದಲ್ಲಿ ಕ್ರೋಧದ ಅತಿರೇಕವನ್ನು ತಡೆಯಲಾರದ ಅವರಿಗೆ, ಇದೆಲ್ಲ ಶುದ್ಧ ಮೋಸವೆಂದು ಹೇಳಿಬಿಡುವ ಮನಸ್ಸಾಯಿತು. ಆದರೆ ಅವರಿಗೆ, ಮೋಸಮಾಡಿದವನು ಹೊರಗಣ ವ್ಯಕ್ತಿಯಾಗಿರಲಿಲ್ಲ. ಕೇವಲ ತಮ್ಮ ಮಗ. ಕಷ್ಟದಲ್ಲಿ, ಕ್ಲೇಶದಲ್ಲಿ ಎದೆಗೆಡದೆ ಕಣ್ಣೀರಿನಿಂದ ಮೀಯಿಸಿ ಬೆಳಸಿ ತಾವು ಸಾಕಿದ ತಮ್ಮ ಒಬ್ಬನೇ ಮಗ—ವಾಸು. ಸೀತಮ್ಮನವರು ಆಡಲು ಹೋದ ಮಾತನ್ನು ಹಾಗೆಯೇ ನುಂಗಿಕೊಂಡರು. ಮಗನಿಗೆ ಅಪಮಾನವನ್ನು ಮಾಡಿ, ತನ್ಮೂಲಕ ತಮ್ಮ ಮರ್ಯಾದೆಯನ್ನು ಕಳೆದು ಕೊಳ್ಳುವ ಸಣ್ಣ ಕೆಲಸಕ್ಕೆ ಅವರು ಹೋಗಲಿಲ್ಲ.

ಪತ್ರಕ್ಕೆ ಸೀತಕ್ಕನ ಹೆಬ್ಬೆಟ್ಟಿನ ಗುರುತು ಬಿದ್ದಿತು. ಅವರು ಯಂತ್ರದಂತೆ ಮಗನು ಹೇಳಿದ ಹಾಗೆಲ್ಲ ನಡೆದುಕೊಂಡರು. ನಂಜಪ್ಪ ನವರು ಎಣಿಸಿಕೊಟ್ಟ ನೋಟಿನ ರಾಶಿಯು ಸೀತಕ್ಕನ ಕಣ್ಣಿಗೂ ಬೀಳದೆ ಎಂದೋ ವಾಸುವಿನ ಕೋಟಿನಲ್ಲಿ ಐಕ್ಯವಾಗಿದ್ದುವು. ಯಾವ ಒಂದು ಮಾತನ್ನೂ ಆಡದೆ ಅವರು ಮತ್ತೆ ಹೊರಗೆ ಬಂದರು. ಅವರನ್ನು ಕರೆತಂದಿದ್ದ ಗಾಡಿಯೇ ಅವರಿಗಾಗಿ ಕಾದಿತ್ತು.

"ನೀನು ಮನೆಗೆ ಹೋಗು. ನನಗೆ ಕೊಂಚ ಕೆಲಸವಿದೆ."

ವಾಸುವು ಅಪರಾಧಿಯಂತೆ ತಲೆಯನ್ನು ತಗ್ಗಿಸಿ ಹೇಳಿದನು. ಸೀತಕ್ಕ ಅವನಿಗೆ ಏನೊಂದುತ್ತರವನ್ನೂ ಕೊಡಲಿಲ್ಲ. ತಡವರಿಸುತ್ತಾ ಗಾಡಿಯನ್ನು ಹತ್ತಿಕೊಂಡರು. ಒಂದು ಅವರ್ಣನೀಯವಾದ ಶೂನ್ಯತೆಯು ಅವರನ್ನು ಆವರಿಸಿತ್ತು. ಸಮಾಧಿ ಸ್ಥಿತಿಯಲ್ಲಿರುವವರಂತೆ ಸುಮ್ಮನೆ ಕುಳಿತಿದ್ದರು. ಗಾಡಿಯು ಚಲಿಸುತ್ತಿದೆ ಎಂಬುದರ ಅನುಭವವೂ ಅವರಿಗಿರಲಿಲ್ಲ. ಮನೆಯು ಸಿಕ್ಕಿದರೂ ಇಳಿಯ ಬೇಕೆಂಬುದು ಹೊಳೆಯಲಿಲ್ಲ. ಗಾಡಿಯವನು "ಇಳೀತೀರಾ ಅಮ್ಮಣ್ಣಿ" ಎಂದಾಗಲೇ ಅವರಿಗೆ ಇಹ ಪ್ರಪಂಚದ ಅರಿವು.

ಸೀತಕ್ಕ ದಢಕ್ಕನೆ ಇಳಿದು ಮೆಟ್ಟಿಲನ್ನು ಮುಗ್ಗರಿಸುತ್ತಾ ಒಳಗೆ ನಡೆದರು. ಆ ದಿವಸ ಪಾರ್ವತಿಗೂ ಸಹ ಭೂತ ಬಡಿದಷ್ಟು ಬೆಪ್ಪು ಬಂದಿತ್ತು. ಅತ್ತೆಯು ಹೊರಟು ಹೋದ ಮೇಲೆ ಅವಳಿಗೆ ಮತ್ತೆ ಬಾಗಿಲನ್ನು ಹಾಕಿಕೊಳ್ಳಬೇಕೆಂಬುದು ತಿಳಿಯಿತೊ ಇಲ್ಲವೊ. ಅವಳೇನೊ ಎರಡು ದನಗಳನ್ನೂ ತೆರೆದು ಬಿಟ್ಟು, ತಾನು ಒಳಗೆ ಕೆಲಸದಲ್ಲಿ ಮಗ್ನಳಾಗಿದ್ದಳು. ಇದೇ ಕೆಲಸವನ್ನು ಅವಳು ಇನ್ನೆಂದಾದರೂ ಮಾಡಿದ್ದರೆ ಸೀತಮ್ಮನವರ ಬಾಯಿಂದ ಎಷ್ಟು ಬೈಗಳಗಳನ್ನು ಕೇಳಬೇಕಾಗಿದ್ದಿತೊ. ಆದರೆ ಆ ದಿವಸ ಮಾತ್ರ ಸೀತಕ್ಕನಿಗೆ ಅಸಮಾಧಾನದ ಬದಲು, ಸಮಾಧಾನವೇ ಆಯಿತು ಬಾಗಿಲು ತೆರೆಯೆಂದು ಕೂಗಲು ಸಹ ಅವರಿಗೆ ಶಕ್ತಿ ಇರಲಿಲ್ಲ.

ಸೀತಮ್ಮನವರು ಒಳಗೆ ಹೋದವರೇ ಹಜಾರದಲ್ಲಿ ತಣ್ಣಗಿದ್ದ ನೆಲದ ಮೇಲೆ ಉರುಳಿಕೊಂಡರು. ಮಿಂಚಿಗಿಂತಲೂ ವೇಗವಾಗಿ ನಡೆದು ಹೋದ ಘಟನೆಗಳನ್ನು ನೆನೆದು ಅಳಲು ಅವರಿಗೆ ತುಂಬಾ ಪುರುಸೊತ್ತು ಸಿಕ್ಕಿತ್ತು. ಹಾಗೆ ಅವರು ಗೋಳಾಡಿದರೆ ಬೇಡವೆಂದು ಅಡ್ಡಿಮಾಡುವವರೂ ಸದ್ಯಕ್ಕೆ ಎದುರಿಗೆ ಯಾರೂ ಇರಲಿಲ್ಲ. ಆದಕಾರಣ ಸೀತಕ್ಕ ಮನದಣಿಯ ಅತ್ತರು. ತಮ್ಮಲ್ಲಿ ಅಡಗಿದ್ದ ಕಣ್ಣೀರೆಲ್ಲವನ್ನೂ ಖರ್ಚು ಮಾಡಿದರು. ಅಂತೂ ಒಳಗಿನ ಕೆಲಸವನ್ನೆಲ್ಲಾ ಮುಗಿಸಿ ಪಾರ್ವತಿಯು ಹಜಾರಕ್ಕೆ ಬಂದಾಗ ಅವರಿಗೆ ಅತ್ತೂ, ಅತ್ತೂ ಸಾಕಾಗಿ ಗಾಢವಾದ ನಿದ್ರೆಯು ಬಂದುಬಿಟ್ಟಿತ್ತು.

ಮತ್ತೆ ಸೀತಮ್ಮನವರಿಗೆ ಎಚ್ಚರವಾದಾಗ ಗಂಟೆ ಆರಾಗಿತ್ತು. ಆಗತಾನೇ ಅಸ್ತಮಿಸಿರುವ ಸೂರ್ಯನ ಹೊಂಗಿರಣದ ಪ್ರಭಾವವಾಗಿ ಎಲ್ಲೆಡೆಯಲ್ಲೂ ಹೊಂಬಣ್ಣ ಹರಡಿತ್ತು. ಆ ಎಳೆಯ ಬೆಳಕು ಸೀತಕ್ಕನಿಗೆ ಸಂಜೆಯ ಕುರುಹಾಗಿ ತೋರಲಿಲ್ಲ. ಅವರಿಗೆ ತಾವು ಮಧ್ಯಾಹ್ನ ಮಲಗಿಕೊಂಡುದರ ನೆನಪು ಕೊಂಚವೂ ಇರಲಿಲ್ಲ. ಅದರ ಬದಲು ಅವರಿಗೆ ತಾವು ರಾತ್ರಿ ಮಲಗಿಕೊಂಡಂತೆಯೂ, ಈಗ ಬೆಳಗಾಗಿರಬೇಕೆಂದೂ, ತಮಗೆ ಎಚ್ಚರವಾದುದು ಕೊಂಚ ತಡವಾಯಿತೆಂದೂ ತೋರಿತು. ಆತುರದ ಆವೇಗದಲ್ಲಿ ಸೀತಕ್ಕ ದಡದಡನೆ ಎದ್ದು ತಮ್ಮ ಮಾಮೂಲಿನ ಪದ್ಧತಿಯಂತೆ "ಏಳು ಹನುಮಂತ, ಏಳು ಬಲವಂತ"

ಚ್ಚಲು
ಟ್ಟಣವು
ನ್ನು
ನ

ಎಂದು ಉದಯರಾಗ ಹಾಡುತ್ತಾ, ನೀರೊಲೆಗೆ ಉರಿ ಹಾಕಲು ಮನೆಯ ಕಡೆಗೆ ಧಾವಿಸಿದರು. ಕೂಡಲೇ ಕೈಲಿ ಬೆಂಕಿ ಪೊ ಇಲ್ಲದುದು ನೆನಪಿಗೆ ಬಂದಿತು. ಸಾಮಾನ್ಯವಾಗಿ ಹುಡುಕುವ ಕಷ್ಟ ತಪ್ಪಿಸಿಕೊಳ್ಳಲು ಸೀತಮ್ಮನವರು ಬೆಂಕಿ ಪೊಟ್ಟಣವನ್ನು ತಲೆದಿಂ ಕೆಳಗಿಟ್ಟುಕೊಂಡು ಮಲಗುತ್ತಿದ್ದರು. ಅದೇ ರೂಢಿಯಂತೆ ಪೊಟ್ಟಣವನ್ನು ತರಲು ಹಜಾರಕ್ಕೆ ಬಂದರು. ಅಲ್ಲಿ ಅವರ ಮಡಿ ಚಾಪೆಯಿರಲಿಲ್ಲ. ಿಂಬಿಗೆ ಇಟ್ಟುಕೊಳ್ಳುತ್ತಿದ್ದ ಕಾಲು ಮಣೆಯೂ ಇರಲಿಲ್ಲ. ತಾವು ಎದ್ದು ಹೋದ ಮೇಲೆ ಪಾರ್ವತಿಯೇನಾದರೂ ತೆಗೆದಿಟ್ಟಳೇನೊ ಎಂದು ಅವರು, ಅಲ್ಲಿಯೇ ಮೂಲೆಯಲ್ಲಿ ಕುಳಿತು ಚಿಮಣಿಯನ್ನು ಒರೆಸುತ್ತಿದ್ದ ಅವಳನ್ನು ಕಾಣದೆ, "ಪಾತು, ಇಲ್ಲೇ ಬೆಂಕಿಪೆಟ್ಟಿಗೆ ಇರಿಸಿದ್ದೆ. ನೀನೇ ನಾದರೂ ಕಂಡೆಯಾ ?" ಎಂದು ಕೂಗಿದರು. ಪಾರ್ವತಿಗೆ ಯಾವುದೂ ಅರ್ಥವಾಗಲಿಲ್ಲ. ಅವಳು ಅತ್ತೆಯು ಬಹುಶಃ ರಾತ್ರಿಯ ಅಡುಗೆಗೆ ಒಲೆ ಹೊತ್ತಿಸಲು ಕೇಳುತ್ತಿರುವರೆಂದು,

"ಏಕೆ, ಅಗ್ಗಿಷ್ಟಿಕೆಯಲ್ಲಿ ಕೆಂಡ ಇದೆಯಲ್ಲಾ ದೇವರ ದೀಪ ಬೇಕಾದರೆ ಇನ್ನೂ ಕೊಂಚ ಹೊತ್ತಾದ ಮೇಲೆ ಹೊತ್ತಿಸಿದರಾಯಿತು." ಂದಳು. ಸೀತಮ್ಮನವರು ಪೆಕ್ಕಸ ಬೆರಗಾಗಿ ನೋಡಿದರು. ಅವರಿಗೆ ನಂತರ ಅರ್ಥವಾಯಿತು, ಆಗ ಸಂಧ್ಯಾಕಾಲವೆಂದು. ತಮ್ಮ ಮರುಳು ನಕ್ಕಾಗಿ ತಾವೇ ನಕ್ಕು, "ಏನೋ ನನ್ನ ಬುದ್ಧಿ ತೀರಾ ಕೆಟ್ಟು ಹೋಯಿತು." ಎಂದು ಒಳಗೆ ಹೋದರು. ಅಲ್ಲಿ ಮಾಡಲು ಏನು ಲಸವೂ ಇದ್ದಂತೆ ತೋರಲಿಲ್ಲ. ಒಂದು ವೇಳೆ ಇದ್ದಿದ್ದರೂ ಅದನ್ನು ಮಾಡುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ದಿನವೆಲ್ಲ ವಿಶೇಷವಾಗಿ ಅತ್ತು ಯಾಸಗೊಂಡುದರ ಪರಿಣಾಮವಾಗಿ ಸೀತಕ್ಕನಿಗೆ ತಲೆ ಕೊಂಚ ಾರವಾಗಿ, ಮೈ ಬೆಚ್ಚಗಾಗಿತ್ತು. ಹೇಳಲಿಕ್ಕೆ ಬಾರದ ಸಂಕಟವೊಂದು ವರನ್ನು ಕಾಡುತ್ತಿತ್ತು. ಎಲ್ಲಿಯಾದರೂ ಬಿದ್ದುಕೊಂಡರೇ ಸಾಕೆಂದು ನಿಸಿದ್ದರಿಂದ ಅವರು, ತಮ್ಮ ಮಡಿ ಚಾಪೆ ಕಾಲುಮಣೆಗಳನ್ನು ತೆಗೆದು ಂಡು ತಮ್ಮ ಮಾಮೂಲಿನ ಮೂಲೆಯನ್ನು ಸೇರಿದರು. ಊಟಕ್ಕೆ ಡಿಸುವ ಕೆಲಸವನ್ನು ಎಂದೂ ಯಾರಿಗೂ ಬಿಡದ ಸೀತಕ್ಕ ಆಯಾಸದ ಿಕೆಯಿಂದ ಕೈಲಿ ಸಾಗದೇ ಹೋಗಲು, ಸೊಸೆಗೆ, "ಪಾತ, ಏಕೊ ನನಗೆ

ವಾಯು ಕೆರಳಿದ ಹಾಗಿದೆ ಕಣೆ. ಅವನು ಬಂದರೆ ಬಡಿಸಿ, ನೀನೂ ಊಟಮಾಡಿಬಿಡು. ಕಸಮುಸರೆಗೆ ಒಬ್ಬಳೇ ಹೋಗಬೇಡ. ನಾಳೆ ನಿಧಾನವಾಗಿ ಮಾಡಿಕೊಂಡರಾಯಿತು" ಎಂದರು. ಅವರ ಧ್ವನಿ ಭಾರವಾಗಿರುವುದನ್ನು ಕಂಡು ಪಾರ್ವತಿಗೆ ಗಾಬರಿಯಾಯಿತು. "ಒಂದಿಷ್ಟು ಮೆಣಸಿನ ಕಷಾಯವನ್ನಾದರೂ ಮಾಡಿಕೊಡಲೆ?" ಎಂದಳು. ಸೀತಕ್ಕ ಒಲ್ಲೆನೆಂದು ಹಾಗೆಯೇ ಮಲಗಿಕೊಂಡರು.

ಸೀತಕ್ಕ ಮಲಗಿದ ಕೊಂಚ ಹೊತ್ತಿಗೆಲ್ಲ ಅವರಿಗೆ ಜೋಂಪು ಹತ್ತಿಬಿಟ್ಟಿತು. ನಿದ್ರೆಯೆಂದರೆ ನಿದ್ರೆಯಲ್ಲ. ಎಚ್ಚರವೆಂದರೆ ಪೂರ್ಣ ಎಚ್ಚರವಲ್ಲ. ಒಮ್ಮೆ ನರಳುವುದು, ಒಮ್ಮೆ ಹೊರಳುವುದನ್ನು ಅವರು ನಿರಾತಂಕವಾಗಿ ನಡಸಿದ್ದರು. ಅವರ ಸನಿಹದಲ್ಲಿಯೇ ಪಾರ್ವತಿಯು ಗೋಡೆಗೆ ಬೆನ್ನನ್ನು ಆತುಕೊಂಡು ಕುಳಿತಿದ್ದಳು. ಮಾತಾಡಲು ಜೊತೆಗೊಬ್ಬರಿಲ್ಲ. ಮಾಡುವುದಕ್ಕೆ ಕೆಲಸವೂ ಇರಲಿಲ್ಲ. ಸುಮ್ಮನೆ ಅತ್ತೆಯ ನರಳಾಟವನ್ನು ನೋಡುವುದು; ಇಲ್ಲವೇ ಮಿಣಿ ಮಿಣಿಗುಟ್ಟುವ ದೀಪವನ್ನು ನೋಡುವುದು ಅವಳ ಕೆಲಸವಾಗಿತ್ತು. ಎಷ್ಟು ಹೊತ್ತು ತಾನೇ ಹಾಗೆ ಕುಳಿತಿದ್ದಾಳು? ಬೆಳಗಿನಿಂದಲೂ ದುಡಿದು ಆಯಾಸಗೊಂಡಿದ್ದ ಜೀವ. ಕೂತಿದ್ದಲ್ಲಿಯೇ ತೂಕಡಿಕೆ ಬಂದಿತು. ಅವಳಿಗರಿಯದಂತೆಯೇ ಪಾರ್ವತಿಯು ನೆಲದ ಮೇಲೆ ಉರುಳಿಕೊಂಡು ನಿದ್ದೆಮಾಡುತ್ತಿದ್ದಳು. ಮೊದಲಿನ ಷೋ ಸಿನಿಮವನ್ನು ಮುಗಿಸಿಕೊಂಡು ಹತ್ತೂವರೆ ಗಂಟೆಗೆ ಬಂದ ವಾಸು ಬಾಗಿಲನ್ನು ದಡ, ದಡ ಎನಿಸಿದಾಗಲೇ ಅವಳಿಗೆ ಎಚ್ಚರ. ಪಾರ್ವತಿ ಬಾಗಿಲನ್ನು ತೆರೆದಳು. ಏಕೆ ಇಷ್ಟು ಹೊತ್ತಾಯಿತೆಂದು ಗಂಡನನ್ನು ಕೇಳಲಿಲ್ಲ. ಅವನೊಡನೆ ಮಾತಾಡಬೇಕೆಂಬ ಅಭಿಲಾಷೆಯೇ ಅವಳಿಗುಂಟಾಗುತ್ತಿರಲಿಲ್ಲ.

ಪಾರ್ವತಿಯು ಅಡುಗೆಮನೆಯಲ್ಲಿ ಊಟಕ್ಕೆ ಸಿದ್ಧ ಮಾಡಿ ಗಂಡನಿಗಾಗಿ ಕಾಯುತ್ತಾ ಕುಳಿತಳು. ಆಗತಾನೇ ನಿದ್ರೆಯಿಂದ ಏದ್ದಿದ್ದ ಕಾರಣ ಕಣ್ಣು ಬೇಡ ಬೇಡವೆಂದರೂ ಎಳೆದುಕೊಂಡುಹೋಗುತ್ತಿತ್ತು. ಎಷ್ಟು ಹೊತ್ತು ನಿರೀಕ್ಷಿಸಿದರೂ ಪತಿರಾಯನ ಆಗಮನವಾಗಲಿಲ್ಲ. ತಾನೇ ಹೋಗಿ ಕರೆಯುವ ಮನಸ್ಸಿಲ್ಲದಿದ್ದರೂ, ಕಾದೂ, ಕಾದೂ ಸಾಕಾಗಿ ನಿದ್ರೆಯ ಅತಿಶಯವನ್ನು ತಡೆಯಲಾರದೇಹೋದಾಗ ಅವಳು

ವಾಸುವಿನ ಕೋಣೆಯ ಬಳಿ ನಿಂತು "ಎಲೆ ಹಾಕಿದ್ದೇನೆ" ಎಂದಳು. ಅವನು ಹಾಸಿಗೆಯಿಂದಲೇ ತಿರುಗಿಯೂ ನೋಡದೆ ಊಟ ಬೇಡವೆಂದು ಹೇಳಿದನು. ಪಾರ್ವತಿ ಮರುಮಾತಾಡಲಿಲ್ಲ. ಅಡುಗೆಮನೆಗೆ ಹೋಗಿ ಹಾಕಿದ್ದ ಎಲೆಯನ್ನು ತೆಗೆದಿಟ್ಟು, ಅನ್ನ ಸಾರುಗಳ ಮೇಲೆ ಸರಿಯಾಗಿ ಮುಚ್ಚಿ, ಬಾಗಲಿಕ್ಕಿಕೊಂಡುಬಂದು, ಅತ್ತೆಯ ಸಮೀಪದಲ್ಲಿಯೇ ಚಾಪೆಯೊಂದನ್ನು ಎಳೆದುಕೊಂಡು ಉರುಳಿಕೊಂಡಳು. ಸೀತಕ್ಕ ಎಚ್ಚರವಾಗಿದ್ದಿದ್ದರೆ ಅವಳನ್ನು ಹಾಗೆ ಉಪವಾಸ ಮಲಗಲು ಎಂದೂ ಬಿಡುತ್ತಿರಲಿಲ್ಲ.

## ೨೭

"ಪಾತ.. ...."

"ಏನತ್ತೇ?"

"ಹೀಗೆ ಇವನು ದುಡ್ಡನ್ನೂ ತೆಗೆದುಕೊಂಡುಬಿಟ್ಟು ನಿನ್ನ ಗತಿ ಏನೆಂದೂ ಕೇಳದೆ ಹೊರಟುಹೋದನಲ್ಲಾ ಏನು ಮಾಡುವುದು?"

"ಮಾಡುವುದೇನು? ಹಣೆಯಲ್ಲಿ ಬರೆದ ಕರ್ಮ ಎಂದು ಅನುಭವಿಸುವುದು. ಆದರೂ ಅಷ್ಟು ಹಣವನ್ನೂ ಅವನೇ ತೆಗೆದುಕೊಂಡು ಹೋದರೆ?"

ಪಾರ್ವತಿಗೆ ಆಫೀಸಿನಲ್ಲಿ ವಾಸುವು ನಡಸಿದ್ದ ಮೋಸವು ಇನ್ನೂ ತಿಳಿದಿರಲಿಲ್ಲ. ಸೀತಕ್ಕ ಅವಳಿಗೆ ನಡೆದುದೆಲ್ಲವನ್ನೂ ವಿಶದವಾಗಿ ಹೇಳಿದರು. ಅತ್ತೆ ಸೊಸೆಯರಿಬ್ಬರೂ ಮನಃಪೂರ್ತಿ ಅತ್ತುದಾಯಿತು. ಕೊನೆಗೆ ಸೀತಕ್ಕನವರು ನಿಟ್ಟುಸಿರುಬಿಡುತ್ತಾ,

"ಏನೋ ಕಷ್ಟಕಾಲ ಬಂದಿತ್ತು; ಅದರ ನಿವಾರಣೆಗೆ ಪ್ರಯತ್ನಪಟ್ಟಿಯೂ ಆಯಿತು. ಇನ್ನು ಉಳಿಯುವುದು, ಹಾಳಾಗುವುದು ಅವನ ಮೇಲಿನ ಭಾರ" ಎಂದರು.

ಪಾರ್ವತಿಗೆ ಏಕೋ ಈ ಮಾತು ಅಷ್ಟಾಗಿ ರುಚಿಸಲಿಲ್ಲ.

"ಅತ್ತೇ, ತುಂಬಾ ವಿವೇಕಿಗಳು ಅನ್ನಿಸಿಕೊಂಡವರ ಮೇಲೆಯೇ ಕೆಲವು ಬಾರಿ ಜವಾಬುದಾರಿ ಅನ್ನೋದನ್ನು ಹಾಕಿದರೆ ಕೆಲಸ ಕೆಡುತ್ತವೆ. ಅಂತಹುದರಲ್ಲಿ ಹೀಗೆ ತಪ್ಪು ಹಾದಿಯಲ್ಲಿ ಹೋಗುತ್ತಿರು

ವವರ ಮೇಲೆ ಭಾರ ಹಾಕಿ ಬದುಕಿದವರುಂಟೆ? ನೀವು ಆಫೀಸಿನಲ್ಲಿಯೇ ನಾನೂರಕ್ಕೆ ಮೇಲೆ ನೂರು ಕಾಸು ಹೆಚ್ಚಾದರೂ ಒಪ್ಪುವುದಿಲ್ಲ, ಅಂತ ಜಗಳವಾಡಬೇಕಾಗಿತ್ತು. ಇಂತಹ ಸಂದರ್ಭಗಳಲ್ಲಿ ಮಾನ ಏನು ಬಂತು? ಮರ್ಯಾದೆ ಏನು ಬಂತು? ನಾಳೆ ಮನೆಯೂ ಮಾರಿಹೋದರೆ ನಿಲ್ಲಲು ತಾವಿಲ್ಲದೆ ಬೀದಿಯಲ್ಲಿ ಅಲೆದುಕೊಳ್ಳುವುದಕ್ಕಿಂತಲೂ ಕೇಡೇ ನಮ್ಮ ವಸ್ತುವಿಗೆ ಹೋರಾಡುವುದು. ಅದೂ ಅಲ್ಲದೆ ಅವರ ಕೈಗೆ ದುಡ್ಡು ಕೊಡುವುದು ಅವರಿಗೇ ಒಳ್ಳೆಯದಲ್ಲ. ಕಳ್ಳೇಪುರಿ ಎರಚಿದ ಹಾಗೆ ಸ್ನೇಹಿತರೆಲ್ಲರಿಗೂ ಎರಚಿ, ಬರೀ ಕೈ ಮಾಡಿಕೊಂಡು ಬರುತ್ತಾರೆ."

ಸೀತಮ್ಮನವರಿಗೆ ಪಾರ್ವತಿಯು ಹೇಳುತ್ತಿರುವುದೆಲ್ಲಾ ಸರಿಯಾಗಿ ತೋರಿತು. ಹಾಗೆಯೇ ಸಂಕಟವೂ ಜಾಸ್ತಿಯಾಯಿತು. ಮಗನನ್ನು ದೂರಲು ಮನಸ್ಸು ಬರದೆ,

"ನೋಡು ಪಾತು, ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು ಅಂತ. ಹಾಗೆ ಮಾಡಬಾರದಾಗಿತ್ತು. ಏನೋ ಆಗ ಹಾಗೆ ಹೊಳೆಯಿತು; ಮಾಡಿಬಿಟ್ಟೆ. ಒಂದು ವೇಳೆ ನಾನು ಹಣ ಕೊಡಿಸಲು ಒಪ್ಪದೇಹೋಗಿ, ಅವನು ಕೋಪದಿಂದಲೋ, ದುಃಖದಿಂದಲೋ ಕೆರೆ ಭಾವಿಯನ್ನು ಮಗುಚಿಕೊಂಡಿದ್ದರೆ, ನಾನು ನೀನೂ ಈ ಮನೆಯನ್ನು ಇಟ್ಟುಕೊಂಡು ತಾನೇ ಏನು ಸಂತೋಷಪಡಬೇಕಾಗಿತ್ತು ಹೇಳು? ಆಗ ಅನ್ಯಾಯ ಮಾಡಿದೆವು ಅನ್ನೋ ಸಂಕಟ ಬರುತ್ತಿತ್ತೊ ಇಲ್ಲವೊ? ಏನೋ ದೇವರ ಮನೆ. ಹಿಂದೆ ಕೊಟ್ಟಿದ್ದ; ಈಗ ತೆಗೆದುಕೊಳ್ಳಬಹುದು. ಅಷ್ಟಕ್ಕೆ ಯಾಕೆ ಯೋಚನೆ. ಹೋಗು, ಎದ್ದು ಹೋಗಿ ಡಬ್ಬದಲ್ಲಿ ಅಕ್ಕಿ ಎಷ್ಟು ದಿನಕ್ಕೆ ಬಂದೀತು ಎಂದು ನೋಡು. ಯಾಕೋ ಕಾಳ ಇನ್ನೂ ಭತ್ತವನ್ನು ತರಲಿಲ್ಲ." ಎಂದರು.

ಪಾರ್ವತಿಯು ಅಕ್ಕಿಯ ಡಬ್ಬವನ್ನು ಪರಿಶೀಲಿಸಿದಳು. ಅಕ್ಕಿಯು ತೀರಾ ತಳಕ್ಕೆ ಹೊರಟುಹೋಗಿತ್ತು.

"ಇನ್ನೆಂಟು ದಿವಸ ಬಂದರೆ ಹೆಚ್ಚು."

"ಅಯ್ಯೋ ಹಾಗಂದರೇನು ಗತಿಯಮ್ಮಾ ಒಂದು ವಾರ ಅನ್ನೋದು ಒಂದು ನಿಮಿಷದಲ್ಲಿ ಬಂದಷ್ಟು ಬೇಗ ಬರುತ್ತದೆ. ಹೋದ ಸಾರಿ ಇಷ್ಟರ ವೇಳೆಗೆಲ್ಲಾ ಭತ್ತ ಬಂದು ಹದಿನೈದು ದಿನಗಳಾಗಿತ್ತು.

ಈ ಸಾರಿ ಯಾಕೆ ಹಾಗೆ ಮಾಡಿದನೋ ತಿಳಿಯದು. ವೆಂಕೂಗಾದರೂ ಒಂದು ಕಾಗದ ಬರಿ. ಒಂದು ಸಲ ನೋಡಿಕೊಂಡಾದರೂ ಬರಲಿ."

"ನಾನೂ ಅದನ್ನೇ ಹೇಳಬೇಕೂಂತಿದ್ದೆ. ಈ ಕೆಲಸ ಮೊದಲೇ ಮಾಡಿದ್ದಿದ್ದರೆ ಎಷ್ಟೋ ಚೆನ್ನಾಗಿತ್ತು. ಸುಮ್ಮನೆ ಆ ಹಾಳಾದವನಿಗೆ ಕಾದು ಕುಳಿತಿದ್ದಾಯಿತು. ಅವನೇನು ಇದಾನೆಯೋ, ಅಥವಾ ಹೋಗೇ ಬಿಟ್ಟನೋ ದೇವರಿಗೆ ಗೊತ್ತು. ನನ್ನ ಮದುವೆಗೆ ಬಂದಿದ್ದಾಗಂತೂ ತುಂಬಾ ಹಿಂದಾಗಿಹೋಗಿದ್ದ."

ಸೀತಮ್ಮನವರಿಗೆ ಗಾಬರಿಯು ಇನ್ನೂ ಜಾಸ್ತಿಯಾಯಿತು.

"ಹೌದು ಪಾತು, ಅದೂ ಸಾಧ್ಯವೇ. ಮುದುಕನಿಗೆ ಮಕ್ಕಳು ಮರೀನೂ ಇಲ್ಲ. ಕಂಡವರು ಕಂಡದನ್ನು ಎತ್ತಿಕೊಂಡು ಹೋಗಿದ್ದರೆ ನಾನ್ಯಾರನ್ನಾ ಅಂತ ಹುಡುಕಲಿ. ಹೋಗು, ಒಂದು ಕಾಗದಾನ ನಾಳೆಯೇ ವೆಂಕೂಗೆ ತಲಪುವಂತೆ ಬರೆದುಹಾಕು" ಎಂದರು.

ಕಾಳ ಸೀತಮ್ಮನವರ ಮಾವನ ಕಾಲದ ಮುದುಕ. ಹಿಂದಿನಿಂದಲೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಒಳ್ಳೆಯ ನಂಬಿಕೆಯನ್ನು ಗಳಿಸಿದ್ದ. ಭತ್ತದ ಕೊಯಲಾಗುವುದೇ ತಡ. ಕೂಡಲೇ ಮೈಸೂರಿಗೆ ಓಡಿಬಂದು,

"ಎಂದು ತರಲವ್ವಾ" ಎಂದು ಕೇಳಿಕೊಂಡು ಹೋಗುತ್ತಿದ್ದ. ವಾಸುವು ಮೊದಲು ಹುಡುಗನಾಗಿದ್ದ ಕಾರಣ ಕಾಳನೇ ಕಂದಾಯ ವನ್ನೂ ಕಟ್ಟಿಬಿಡುತ್ತಿದ್ದ. ಆದಕಾರಣ ಸೀತಮ್ಮನವರಿಗೆ ಯಾವು ದೊಂದು ತೊಂದರೆಯೂ ಇಲ್ಲದೆ ವರ್ಷಾಕಾಲಕ್ಕೆ ಭತ್ತವು ಮನೆಯ ಮುಂದೆ ಬಂದು ಬೀಳುತ್ತಿತ್ತು. ಆದರೆ ಈ ಬಾರಿ ತಡವಾಗಲು ಸೀತಮ್ಮ ನವರಿಗೆ ಎಲ್ಲಿಲ್ಲದ ಗೀಳು ಹಿಡಿಯಿತು. ವೆಂಕಟಪತಯ್ಯನು ಎಂದು ಬಂದಾನೋ ಎಂದು ಕಾದು ಕುಳಿತರು.

ಪಾರ್ವತಿ ಮತ್ತು ಸೀತಕ್ಕನ ನಿರೀಕ್ಷಣೆಯಂತೆಯೇ ವೆಂಕಟಪತಯ್ಯನು ಇನ್ನು ಮೂರು ನಾಲ್ಕು ದಿವಸಕ್ಕೆಲ್ಲಾ ಮೈಸೂರಿಗೆ ಬಂದನು. ಸೀತಕ್ಕನಿಗೆ ಹೇಳಲಾರದ, ಇತರರೆದುರಿಗೆ ತೋಡಿಕೊಳ್ಳ ಲಾರದ ನೂರೆಂಟು ಆತಂಕಗಳಿದ್ದುವು. ಅವನ್ನು ಹೊರಗೆಡುವವರೆಗೂ ಸೀಸದಷ್ಟು ಭಾರವಾಗಿದ್ದ ಅವರ ಹೃದಯವು ಹಗುರವಾಗುವಂತಿರ

ಲಿಲ್ಲ. ಸೀತಕ್ಕ ತಮ್ಮ ಸುಖದುಃಖಗಳ ಹೇಳಿಕೆಗಳನ್ನೆಲ್ಲಾ ವೆಂಕಟಪತಯ್ಯನಿಗಾಗಿ ಮೀಸಲಿಟ್ಟಿದ್ದರು. ಚಾಚೂ ತಪ್ಪದೆ ಮಗನ ವಿಚಿತ್ರ ಪರಿವರ್ತನೆ, ಮನೆಯ ವಿಷಯ, ಪಾರ್ವತಿಯು ಬಸುರಿಯಾಗಿರುವುದು ಎಲ್ಲವನ್ನೂ ಹೇಳಿ ಮುಗಿಸಿದರು. ವೆಂಕಟಪತಯ್ಯನು ಮಾತಾಡಲಿಲ್ಲ. ಮಾತಾಡಲು ಉಸಿರು ಸಹ ಅವನಿಗಿರಲಿಲ್ಲ. ಯಾವುದೊಂದು ವಿಷಯವನ್ನೂ ತನ್ನ ಕಿವಿಗೇ ಹಾಕದೆ ಹಳ್ಳಕ್ಕೆ ಬಿದ್ದಿರುವ ತಂಗಿಯ ವಿಷಯದಲ್ಲಿ ಅವನಿಗೆ ಕೊಂಚ ಕೋಪವೇ ಬಂದಿತ್ತು.

"ಅಲ್ಲ ಸೀತು, ಇಷ್ಟು ಅವಾಂತರವಾಗುವ ವರೆಗೆ ಏನು ಮಾಡುತ್ತಿದ್ದೆ. ನನಗೆ ಒಂದು ಕಾಗದ ಹಾಕಬಾರದಾಗಿತ್ತೇ. ಬಾಕಿಯ ವಿಷಯಗಳು ಹಾಗಿರಲಿ, ಕೊನೆಗೆ ಪಾರ್ವತಿಯು ಇಲ್ಲಿಗೆ ಬಂದಿರುವ ವಿಷಯವೂ ನನಗೆ ಗೊತ್ತಿಲ್ಲ. ನಾನೇ ಇಲ್ಲಿಗೆ ಬರೋಣ, ನಿನ್ನನ್ನೂ ನೋಡಿದಹಾಗೆ ಆಗುತ್ತೆ, ಎಲ್ಲರ ಯೋಗಕ್ಷೇಮವೂ ತಿಳಿಯುತ್ತೆ ಎಂದರೆ, ಆ ಕಡೆಯ ಎರಡು ಹುಡುಗರಿಗೆ ದೊಡ್ಡ ಸಿಡುಬೆದ್ದು ಬದುಕುವುದೇ ಕಷ್ಟವಾಯಿತು. ಈ ಗಲಾಟೆಗಳ ನಡುವೆ ನಾನುತಾನೇ ಹೇಗೆ ಬರಲಿ? ವಾಸುವಿಗೆ ಯೋಗಕ್ಷೇಮಕ್ಕೆ ಆಗಾಗ್ಗೆ ಕಾಗದ ಹಾಕುತ್ತಿದ್ದೆ. ಜವಾಬು ಬರೆಯುತ್ತಿದ್ದರೂ ಅವನು ಪಾರ್ವತಿಯು ಇಲ್ಲಿಗೆ ಬಂದಿರುವ ವಿಷಯವನ್ನು ನನಗೆ ತಿಳಿಸಲೇ ಇಲ್ಲ. ನಾನು ನಿಮ್ಮ ಕಾಗದ ಬರುವ ವರೆಗೂ ಇವಳು ಮೈಲಾಪುರದಲ್ಲೇ ಇದ್ದಾಳೆ ಎಂದು ಕೊಂಡಿದ್ದೆ" ಎಂದು ಹೇಳಿದನು.

"ನೋಡು ವೆಂಕು, ಹೇಳಿದರೆ ನಾಚಿಕೆಗೇಡು. ನಿನಗೇನೋ ಒಂದು ಜವಾಬಾದರೂ ಬರೆದುಹಾಕುತ್ತಿದ್ದ ಎನ್ನುತ್ತಿ. ನಮಗೆ ಅದೂ ಇಲ್ಲ. ನವರಾತ್ರಿಗೆ ಬಂದವನು ಇವಳಿಗೆ ಖಾಯಿಲೆ ಎಂದು ಇಲ್ಲಿಯೇ ಬಿಟ್ಟುಹೋದ. ಸರಿ ಆಮೇಲೆ ಕಾಗದವೂ ಇಲ್ಲ, ಪತ್ರವೂ ಇಲ್ಲ. ನಿನಗಾದರೂ ಹೇಳಿಕಳುಹಿಸೋಣವೆಂದರೆ ಪಾರ್ವತಿಯೇ ಇಷ್ಟಪಡ ಲಿಲ್ಲ. ಇಷ್ಟಕ್ಕೇನೆ ಇಲ್ಲದ ಗಾಬರಿ ಏಕೆ ಮಾಡಬೇಕು ಎಂದು ಸುಮ್ಮನಿದ್ದುದಾಯಿತು "

"ಏನೋ ನನ್ನ ಕಿವಿಗೂ ಮೊದಲು ಒಂದು ಮಾತು ಹಾಕಿದ್ದಿದ್ದರೆ

ಏಷ್ಟೋ ಚೆನ್ನಾಗಿತ್ತು. ಕಳೆದುಹೋದುದಕ್ಕೆ ಈಗ ಯೋಚಿಸಿದರೇನು ಬಂತು ? ಎಂದು ವೆಂಕಟಪತಯ್ಯನು ಹೇಳಿದನು. ಅವನಿಗೆ ಹೆಚ್ಚು ಹೇಳಲು ಮುಂದೆ ಏನೂ ಹೊಳೆಯಲಿಲ್ಲ.

ಪಾರ್ವತಿಯ ಕಾಗದವು ಬಂದ ಮಾರನೆಯ ದಿವಸವೇ ವೆಂಕಟಪತಯ್ಯನು ಪಾಲಳ್ಳಿಗೆ ಹೋಗಿದ್ದನು. ಅವನಿಗೆ ಸೀತಕ್ಕನ ಗದ್ದೆಯೇನೂ ಹೊಸದಾಗಿರಲಿಲ್ಲ. ಅವರು ನಂಜುಂಡಳ್ಳಿಯಲ್ಲಿದ್ದಾಗ ಅವನೇ ಪ್ರತಿ ಬಾರಿಯೂ ಹೋಗಿ ಭತ್ತವನ್ನು ತೆಗೆಸಿಕೊಂಡು ಬರುತ್ತಿದ್ದನು. ಆ ಪರಿಚಯದ ನೆನಪಿನಿಂದಲೇ ಅವನು ಅಷ್ಟು ಸರಾಗವಾಗಿ ಪಾಲಳ್ಳಿಗೆ ಹೋದದ್ದು. ವೆಂಕಟಪತಯ್ಯನು ಗದ್ದೆಯ ಬಳಿ ಹೋಗಿ ನೋಡಲು ಭತ್ತದ ಕೊಯ್ಲಾಗಿ ಭೂಮಿ ಬರಡು ಬಿದ್ದು ನಿಂತಿತ್ತು. ಭತ್ತವನ್ನು ಮನೆಗೆ ಏನಾದರೂ ಸಾಗಿಸಿದ್ದಾನೇನೋ ಎಂದು ವೆಂಕಟಪತಯ್ಯನು ಕಾಳನ ಮನೆಗೆ ಹೋದನು. ಅಲ್ಲಿ ಯಾರೂ ಇರಲಿಲ್ಲ. ಮನೆಗೆ ಬೀಗ ಹಾಕಿತ್ತು. ವೆಂಕಟಪತಯ್ಯನು ಗಾಬರಿ ಯಿಂದ ಸುತ್ತಮುತ್ತಲ ಒಕ್ಕಲುಗಳನ್ನು ವಿಚಾರಿಸಹತ್ತಿದನು. ಆ ವೇಳೆಗೆ ಸರಿಯಾಗಿ ಕಾಳನ ಬಂಧುವಾದ ನಿಂಗನು ಅಲ್ಲಿಗೆ ಬಂದದ್ದು ವೆಂಕಟಪತಯ್ಯನಿಗೆ ಎಷ್ಟೋ ಸರಾಗವಾಯಿತು.

"ನಿಂಗ, ಈ ಮನೇಲಿದ್ದ ಕಾಳ ಎಲ್ಲಿ ಹೋದ, ನಿಂಗೇನಾದರೂ ಗೊತ್ತೇನೋ ? ಕೊಯ್ಲಾದರೂ ಇನ್ನೂ ಮನೆಗೆ ಭತ್ತ ಬಂದಿಲ್ಲ. ಯಾವ ಸಮಾಚಾರಾನೂ ಕಳುಹಿಸದೆ ಎಲ್ಲೋ ಹೊರಟುಹೋಗಿದ್ದಾನೆ."

"ಕಾಳ್ನೇ ಸೋಮಿ, ಕೈಲಾಸಕ್ಕೆ ಹೋದ. ಮೊನ್ನೆ ನಾನೇ ಸಂಕಪಯ್ಯನವರ ಮನೆಗೆ ಹೋಗಿ ಎಲ್ಲಾ ಅಳೆದು ಬಂದಿವ್ನಿ, ಇನ್ನೂ ಬರಲಿಲ್ಲ ಅಂತೀರಲ್ಲಾ " ಎಂದ ನಿಂಗ.

ಸೀತಮ್ಮನವರ ಗದ್ದೆಯ ಭತ್ತವು ಸಂಕಪಯ್ಯನವರ ಮನೆಗೆ ಹೋಗಲು ಕಾರಣವನ್ನು ಕಂಡುಹಿಡಿಯಲಾರದೆ ವೆಂಕಟಪತಯ್ಯನು ಬಹಳ ಪೆಚ್ಚಾದನು. ತನ್ನ ಗುರುತೇನಾದರೂ ನಿಂಗನಿಗೆ ಸಿಕ್ಕದೆ ಹೋಯಿತೇನೋ ಎಂದು,

"ನಿಂಗ ನಾನ್ಯಾರು ಅನ್ನೋದು ತಿಳೀದೇನೋ ?" ಎಂದು ಕೇಳಿದನು.

"ನೀವು ಗೊತ್ತಿಲ್ಲದ ಹಾಗೇನ ಸ್ವಾಮಿ. ಸೀತವ್ನೋರ ಅಣ್ಣೋರಲ್ವೇ. ವಾಸಪ್ಪನೋರು ಚಿಕ್ಕೋರಾಗಿದ್ದಾಗ ನೀವೇ ಬರ್ತಿದ್ರಿ"

"ಮತ್ತೆ ಗೊತ್ತಿದ್ದೂ ಯಾಕೆ ಏನೇನೋ ಹೇಳುತ್ತಿ. ಈಗ ನಾನು ಬಂದಿರುವುದು ಸೀತವ್ನೋರ ಗದ್ದೇನ ನೋಡಿಕೊಂಡುಹೋಗೋಕ್ಕೆ.''

ನಿಂಗನ ಮುಖ ಕೂಡಲೇ ವಿವರ್ಣವಾಯಿತು. ನಿಜವಾದ ವಿಷಯವನ್ನು ತಿಳಿಯದಿದ್ದ ವೆಂಕಟಪತಯ್ಯನಿಗೆ ಅವನು ಎಲ್ಲವನ್ನೂ ವಿಶದವಾಗಿ ಹೇಳಿದನು. ಆರು ತಿಂಗಳ ಹಿಂದಿನಿಂದಲೂ ಕಾಳನಿಗೆ ಖಾಯಿಲೆಯಾಗಿತ್ತೆಂದೂ, ತನ್ನ ಕೈಲಿ ಸಾಗದೇಹೋಗಲು, ನಿಂಗನಿಂದ ಮಾಡಿಸುತ್ತಿದ್ದನೆಂದೂ, ಆದರೆ ಅಷ್ಟರಲ್ಲೇ ವಾಸುವು ಗದ್ದೆಯನ್ನು ಪಟ್ಟಣದ ಸಂಕಪ್ಪಯ್ಯನವರಿಗೆ ಮಾರಿಬಿಟ್ಟುದರಿಂದ ಅವರು ಕಾಳನ ಕೈ ತಪ್ಪಿಸಿ ತನಗೇ ಗುತ್ತಿಗೆಗೆ ಕೊಟ್ಟರೆಂದೂ ಹೇಳಿದನು. ಗದ್ದೆಯು ಮಾರಿಹೋಗಿ ಆಗಲೇ ಆರುತಿಂಗಳಾಗುತ್ತಾ ಬಂದಿತೆಂಬುದನ್ನು ಕೇಳಿ ವೆಂಕಟಪತಯ್ಯನ ಎದೆ ಒಡೆದುಹೋಯಿತು, ಹಾಗೆಯೇ ಅಷ್ಟು ಪ್ರಾಮಾಣಿಕನಾದ ಕಾಳನು ಸೀತಕ್ಕನಿಗೆ ಸುದ್ದಿಯೇಕೆ ಮುಟ್ಟಿಸಲಿಲ್ಲವೆಂದು ದೋಷವೂ ಬಂದಿತು. ಆದರೆ ನಿಂಗನು, ಗದ್ದೆಯನ್ನು ಮಾರಿದ ಎಂಟು ದಿನಕ್ಕೆಲ್ಲಾ ಕಾಳನು ಸತ್ತುಹೋದನೆಂದೂ, ಅವನ ಹೆಂಡತಿ ಚಿನ್ನಮ್ಮ ಮನೆಮಠಗಳನ್ನು ಬಿಟ್ಟು ನಾಗನಹಳ್ಳಿಗೆ ಹೋಗಿ, ಅಣ್ಣನ ಮನೆಯನ್ನು ಸೇರಿಕೊಂಡಳೆಂದೂ ಹೇಳಿದ ಮೇಲೆ ವೆಂಕಟಪತಯ್ಯನಿಗೆ ಕಾಳನ ವಿಷಯದಲ್ಲಿದ್ದ ಅಸಮಧಾನ ಕಮ್ಮಿಯಾಯಿತು.

"ಎಂತಹ ಗದ್ದೆ ಸ್ವಾಮಿ, ಕಳ್ಳನ ಕೈಗೆ ಕೊಟ್ಟರೂ ನಾಲ್ಕು ಸಾವಿರಕ್ಕೆ ಮೋಸವಿರಲಿಲ್ಲ. ತಕ್ಷಣ ಹಣ ಬೇಕೆಂದು ಎರಡೂವರೆ ಸಾವಿರಕ್ಕೆಲ್ಲಾ ಕೊಟ್ಟುಬಿಟ್ಟರು. ಐನೋರಂತೂ ಹುಡುಗ್ರೂ ಅಂದ್ರೆ ನೀವಾರು ದೊಡ್ಡೋರು ಬುದ್ಧಿ ಹೇಳ್ಬಾರ್ದಾಗಿತ್ತಾ? ಕಾಳ್ನಂತೂ ಏಳಕ್ಕಾಗದೋನು ತಡವರಿಸಿಕೊಂಡ್ಬಂದು ಐನೋರ ಕಾಲಿಗ್ಬಿದ್ದ ಸ್ವಾಮಿ. ಬೇಡಾ, ಬೇಡಾ ಅಂತ ಕಣ್ಣಾಗೆ ನೀರು ತಂದ್ಕೊಂಡ. ಕೇಳ್ದೆಹೋದ್ರು. ಅವನ್ಗಂತೂ ಅದೇ ಕೊರಗು. ಸೀತವ್ನನೋರ ಮೊಗ ಇನ್ನು ನೋಡಾಕ್ಕಿಲ್ಲ ಅಂತ ಗೋಳಾಡ್ದ. ಆಮೇಲೆ ಎಂಟೇ ದಿನ ಅವನು ಜೀವ ಇಟ್ಕೊಂಡಿದ್ದಿದ್ದು'' ಎಂದು ನಿಂಗನು ಹೇಳಿದಾಗ

ವೆಂಕಟಪತಯ್ಯನಿಗೆ ಜಗತ್ತೆಲ್ಲಾ ಶೂನ್ಯವಾಗಿ ತೋರುತ್ತಿತ್ತು. ಗಾಳಿಯು ಅವನನ್ನು ಎಲ್ಲಿಯೋ ಹೊಡೆದುಕೊಂಡು ಹೋಗುತ್ತಿದ್ದಂತೆ ಭಾಸವಾಗುತ್ತಿತ್ತು. ನೀಳವಾದ ನಿಟ್ಟುಸಿರೊಂದನ್ನೆಳೆದು ಅವನು ನೇರವಾಗಿ ಮೈಸೂರಿಗೆ ನಡೆದುಬಿಟ್ಟನು.

ಸೀತಕ್ಕ ಮತ್ತು ಪಾರ್ವತಿಯರು ತಮ್ಮ ಪ್ರಲಾಪವನ್ನು ಮುಗಿಸುವುದನ್ನೇ ವೆಂಕಟಪತಯ್ಯನು ಕಾದಿದ್ದರು. ಮೊದಲೇ ನೊಂದಿರುವ ಅವರಿಗೆ ಮತ್ತೊಂದು ಕೆಟ್ಟ ಸಮಾಚಾರವನ್ನು ಹೇಳಲು ಅವನಿಗೂ ಜೀವ ಅಳುಕಿತು. ಕೇಳಿದ ಕೂಡಲೆ ಎಲ್ಲಿಯಾದರೂ ಎದೆ ಒಡೆದು ಸತ್ತಾರೆಂದು ಮೊದಲು ವೇದಾಂತ ಬೋಧನೆಗೆ ಪ್ರಾರಂಭಿಸಿದನು.

"ಸೀತು, ಈ ಪ್ರಪಂಚವೆಲ್ಲಾ ಒಂದು ಮಾಯೆ ನೋಡು. ನಮ್ಮ ಜೀವನ ಒಂದು ನಾಟಕ ಇದ್ದ ಹಾಗೆ. ನಾಟಕದಲ್ಲಿ ಡೈರೆಕ್ಟರು ಕುಣಿಸಿದ ಹಾಗೆ ನಟರು ಸ್ಟೇಜಿನ ಮೇಲೆ ಕುಣಿಯುತ್ತಾರೆ, ಅಳುತ್ತಾರೆ, ನಗುತ್ತಾರೆ, ಸಾಧ್ಯವಾದದ್ದು, ಅಲ್ಲದ್ದು ಎಲ್ಲ ಮಾಡುತ್ತಾರೆ. ಹಾಗೆಯೇ ನಮ್ಮ ಜೀವ ಇರುವ ತನಕ ನಮ್ಮ ಮಕ್ಕಳು ಎಂದು ಗೋಳಾಡುವುದು. ದಿಟವಾಗಿ ಹೇಳುವುದಾದರೆ ಯಾರಿಗೂ ಯಾರೂ ಇಲ್ಲ."

"ಅದೆಲ್ಲಾ ಸರಿ ವೆಂಕು, ನಾಟಕವಾದ ಮೇಲೆ ಯಾರಿಗೆ ಯಾರೋ ಅನ್ನೋದು ನಿಜ. ಇನ್ನೂ ನಾಟಕವಾಗುತ್ತಿರುವಾಗಲೇ ಹೀಗಾದರೆ ನಮ್ಮ ಜನರಲ್ಲಿ ನಗೆಪಾಟಲಲ್ಲವೆ?"

"ಹೌದು, ನಗೆಪಾಟಲು ಅಂದರೆ ಏನು ಬಂತು ಹೋಯ್ತು. ಎಲ್ಲಾ ಹಿಂದೆ ನಾವು ಮಾಡಿದ ಪಾಪಶೇಷ. ನಗ್ತಾ ನಗ್ತಾ ಮಾಡೋದು; ಅಳ್ತಾ ಅಳ್ತಾ ಅನುಭವಿಸುವುದು ಅಂತಾರಲ್ಲ ಹಾಗೆ."

"ನಿಜ ವೆಂಕು. ಇವೆಲ್ಲ ಕರ್ಮಶೇಷ ತಾನೆ. ಇಲ್ಲದೆ ಹೋದರೆ ಹೀಗಾಗುವುದಕ್ಕೆ ಕಾರಣವಿಲ್ಲ."

ಸೀತಮ್ಮನವರು ತಮಗೆ ತಾವೇ ಸಮಾಧಾನವನ್ನು ಮಾಡಿಕೊಂಡರು. ಯಾರಿಗೇ ಆಗಲಿ ನಿರಾಶೆಯ ಅತಿರೇಕವು ವಿಪರೀತವಾಗಿದ್ದಾಗ ವೇದಾಂತ ಹಿಡಿಸುವುದು ಬಹಳ ಸುಲಭ. ಸೀತಕ್ಕ ಪಾರ್ವತಿಯರೂ ಇದೇ ಸ್ಥಿತಿಯಲ್ಲಿದ್ದರು. ಇಬ್ಬರಿಗೂ ಜೀವನದಲ್ಲಿ ನಿರಾಶೆ ಕವಿದಿತ್ತು.

ಸೀತಕ್ಕ ಅತ್ತಿದ್ದರು. ಭಾರವಾಗಿದ್ದ ಹೃದಯ ಇದರಿಂದಲಾದರೂ ಹಗುರ ವಾದೀತೇನೊ ಎಂಬ ಚಪಲದಿಂದ ಮನಸ್ಸಿಗೆ ದಣಿವಾಗುವಷ್ಟು ತಮ್ಮ ಕಹಿ ಅನುಭವಗಳನ್ನು ಅಣ್ಣನ ಮುಂದೆ ತೋಡಿಕೊಂಡು ಗೋಳಾಡಿ ದ್ದರು. ಯಾವುದರಿಂದಲೂ ಮನಃಶಾಂತಿ ದೊರೆಯಲಿಲ್ಲ. ಕೇವಲ ಬರಿಯ ದೇಹಶ್ರಮವೆನಿಸಿತು. ಅದು ಎಂತಹ ಕಠಿಣವಾದ ಮಾರ್ಗವೇ ಇರಲಿ, ಮನಃಶಾಂತಿ ದೊರೆಯುವ ಹಾಗಿದ್ದರೆ ಅದನ್ನು ಹಿಡಿಯಲು ಸೀತಕ್ಕ ಸಂಪೂರ್ಣವಾಗಿ ಸಿದ್ಧರಾಗಿದ್ದರು. ಈಗ ಅಣ್ಣನು ವೈರಾಗ್ಯವನ್ನು ಬೋಧಿಸಲು ಅವರ ಹೃದಯಕ್ಕೆ ಅಮೃತವನ್ನೆರದಷ್ಟು ಹಿತವಾಯಿತು. ಮನಸ್ಸು ಹಗುರವಾಯಿತು. ದೀರ್ಘವಾದ ಉಸಿರು ಬಿಡುತ್ತಾ,

"ಯಾರಿಗೆ ಯಾರೋ ಹುಚ್ಚಪ್ಪ ಅನ್ನುವ ಹಾಗೆ. ಅವನು ಹುಟ್ಟಿ ದಾಗ ನಾ ಪಟ್ಟ ಬವಣೆ, ಬೆಳೆಸಿದಾಗ ನಾ ಪಟ್ಟ ಆಸೇನ ನೀನು ಕಾಣೆಯಾ? ಜೊತೆ ಹುಡುಗರ ಸಂಗಡ ಹೋದರೆ ಕೆಟ್ಟುಹೋಗುತ್ತಾ ನೆಂದು ಅಂಗೈಲಿ ಮುಚ್ಚಿಟ್ಟು ಸಾಕಿದೆ. ಈಗ ಕಣ್ಮರೆಯಲ್ಲಿ ದೂರವಿರು ವಾಗ ಆ ಹಾಳುಮೂಳು ಸ್ನೇಹಗಳು ಗಂಟುಬಿದ್ದುವು. ಇಲ್ಲಿದ್ದಾಗ ಒಬ್ಬರೊಡನೆ ಒಂದು ದಿನ ಗಟ್ಟಿಯಾಗಿ ಮಾತಾಡಿದವನಲ್ಲ." ಎಂದರು.

"ಅಲ್ಲಿಯೂ ಹಾಗೆಯೇ ಇದ್ದರು ಅತ್ತೆ. ನಮ್ಮ ಪಕ್ಕದಲ್ಲಿದ್ದ ರಂಗಮ್ಮ, 'ಪಾರ್ವತಮ್ಮ, ನಿಮ್ಮ ಯಜಮಾನರು ದೇವರಂತಹ ಮನು ಷ್ಯರು. ಒಬ್ಬರನ್ನೂ ಕತ್ತೆತ್ತಿ ನೋಡುವುದಿಲ್ಲ' ಎಂದು ಹೇಳುತ್ತಿದ್ದರು. ಆ ಹಾಳಾದವನು ಕಂಠಿ—ಅವನ ಸ್ನೇಹ ಒಂದು ಬಿಟ್ಟು ಮಿಕ್ಕ ಎಲ್ಲಾ ವಿಷಯದಲ್ಲೂ ಸರಿಯಾಗೇ ಇದ್ದರು. ಅವನ ಜೊತೆ ಬಿಡಿ ಎಂದು ದಿನ ಬೆಳಗ್ಗೆ ಹೇಳುತ್ತಿದ್ದೆ. ನನ್ನ ಹೆದರಿಕೆಗೆ ಆತ ಮನೆಗೆ ಬರುವುದನ್ನು ಕೊಂಚ ಕಮ್ಮಿ ಮಾಡಿದ್ದ. ಆದರೆ ಅಷ್ಟರಲ್ಲಿ ನನಗೆ ಈ ಮಹಾಮಾರಿ ಖಾಯಿಲೆ ಬಂದುಬಿಟ್ಟಿತು. ನಾನು ಹೊರಟು ಬಂದುದು ಅವರಿಗೆ ಎಲ್ಲಿಲ್ಲದ ಸರಾಗ ವಾಯಿತು."

"ಪಾತಿ, ಬರುವ ಕಾಲಕ್ಕೆ ಶನಿಯು ನಾನಾ ರೂಪದಲ್ಲಿ ಬರುತ್ತಾ ನಂತೆ. ನಮ್ಮ ಭಾಗಕ್ಕೆ ಆ ಕಂಠಿಯ ರೂಪದಲ್ಲಿ ಬಂದಿದ್ದಾನೆ ಅಷ್ಟೆ," ಎಂದು ವೆಂಕಟಪತಯ್ಯನು ತನ್ನ ಮುಂದಿನ ಕತೆಯನ್ನು ಪ್ರಾರಂಭಿಸಿ ದನು. ಗದ್ದೆ ಹೋಯಿತು; ಮನೆ ಆಧಾರವಾಯಿತು. ಸೀತಕ್ಕನಾಗಲಿ,

ಪಾರ್ವತಿಯಾಗಲೀ ಅಳುವ ಪ್ರಯತ್ನಕ್ಕೆ ಹೋಗಲಿಲ್ಲ. ಅತ್ತೂ, ಅತ್ತೂ ಕಣ್ಣೀರ ಬುಗ್ಗೆಗಳು ಬತ್ತಿಹೋಗಿದ್ದುವು. ಅವರ ಪರಿಸ್ಥಿತಿ ನಿತ್ಯ ಸಾಯು ವವರಿಗೆ ಅಳುವವರು ಯಾರು ಎನ್ನುವಂತಿತ್ತು.

ಕುಗ್ಗಿ ಕುಸಿದುಹೋಗಿದ್ದ ಮೂವರಲ್ಲಿ ಮೊದಲು ಧೈರ್ಯವನ್ನು ತಂದುಕೊಂಡವರೆಂದರೆ ಸೀತಕ್ಕ. ಅವರು ಹೃದಯವನ್ನು ಕಲ್ಲು ಮಾಡಿ ಕೊಂಡರು. ಕಳೆದುಹೋದ ವಸ್ತುವಿಗೆ ಮರುಗುವುದಕ್ಕಿಂತ ನಾಳಿನ ಯೋಚನೆಯನ್ನು ಮಾಡುವುದು ಉತ್ತಮವೆಂದು,

"ಅದೇ ಹೇಳಿದೆನಲ್ಲಾ ಯಾರಿಗೆ ಯಾರು ಅಂತ. ಹೋಯಿತೆಂದು ದುಃಖಪಡಲು ಗದ್ದೆ ಯಾರದ್ದು? ಮನೆ ಯಾರದ್ದು? ಎಲ್ಲ ಋಣಾನುಬಂಧ ಎಲ್ಲಿಯ ವರೆಗೊ ಅಲ್ಲಿಯ ವರೆಗೆ. ಅದಕ್ಕೆ ಮೊದಲು ಹೋಗು ಎಂದರೆ ಹೋಗುವುದಿಲ್ಲ. ಬಾ ಎಂದರೆ ಬರುವುದಿಲ್ಲ. ಇನ್ನು ನಾಳೆ ನಮ್ಮ ಗತಿ ಏನು ಅದನ್ನು ಹೇಳು" ಎಂದರು.

"ಸರ್ವ ನಾಶವಂತೂ ಆಗಿಹೋಯಿತು. ಇನ್ನು ಇಳಿಯ ಮುಳು ಗಿದವರಿಗೆ ಚಳಿಯೇನು, ಮಳೆಯೇನು ಎಂದು ಎಲ್ಲಕ್ಕೂ ಸಿದ್ಧವಾಗ ಬೇಕು. ಕಷ್ಟವೋ ಸುಖವೋ ನಮ್ಮೂರಿಗೆ ನಡೆಯಿರಿ. ಈ ಮನೆ ಪೂರ್ತಿ ಬಾಡಿಗೆಗೆ ಕೊಟ್ಟರಾಯಿತು, ತಳ್ಳಿದಷ್ಟು ದಿವಸ ತಳ್ಳಲಿ."

"ನನ್ನ ಜೀವ ಇರೋ ತನಕ ಈ ಮನೆ ಬಿಟ್ಟು ಕದಲುವುದಿಲ್ಲ ವಂಕು. ಯಾಕೆಂದರೆ ನಾನು ಎದುರಿಗೆ ಇರುವಾಗಲೇ ಹೀಗೆ ಮಾಡು ವವನು, ನಾನೇನಾದರೂ ಕಣ್ಮರೆಯಾದರೆ ಗದ್ದೆಗಾದ ಗತಿಯೇ ಇದಕ್ಕೂ ಸಿದ್ಧ."

"ಹಾಗಾದರೆ ಮತ್ತೇನು ಮಾಡಬೇಕೆನ್ನುತ್ತಿ?"

"ಇನ್ನೆರಡು ತಿಂಗಳು ಹೇಗಾದರೂ ಸವರಿಸಿಕೊಳ್ಳುವುದು. ಆಮೇಲೆ ಇವಳನ್ನು ಬಾಣಂತಿತನಕ್ಕೆ ಕರೆದುಕೊಂಡು ಹೋದರೆ ಮತ್ತೆ ನನ್ನೊಬ್ಬ ಳದೇ ಜೀವನ. ಬೇಸಿಗೆಯ ಹೊತ್ತಿಗೆ ಯಾವುದು ಏನಾಗುತ್ತದೋ ನೋಡೋಣ."

ತಂಗಿಯ ಹಟಸ್ವಭಾವವನ್ನು ಚೆನ್ನಾಗಿ ಅರಿತಿದ್ದ ವೆಂಕಟಪತಯ್ಯನು ಹೆಚ್ಚಿನ ಬಲವಂತಕ್ಕೆ ಹೋಗಲಿಲ್ಲ. ಮಗನಲ್ಲಿ ಬಹಳವಾಗಿ ಅಪನಂಬಿಕೆ ಯನ್ನು ತಂದುಕೊಂಡಿದ್ದ ಸೀತಕ್ಕ ಇನ್ನು ಮುಂದೆ ಲಕ್ಷ್ಮೀದೇವಿ ಕಲಶ

ದಲ್ಲಿದ್ದ ಹಣವನ್ನು ಅಲ್ಲಿಯೇ ಬಿಡಲು ಇಷ್ಟಪಡಲಿಲ್ಲ. ಇದೂ ಅಲ್ಲದೆ ಪಾರ್ವತಿಯ ಕೊರಳಿನಲ್ಲಿ ಚಿನ್ನದ ಚೈನಡ್ಡಿಕೆಯೊಂದಿತ್ತು. ಏನಿಲ್ಲ ವೆಂದರೂ ಒಂದು ಮುನ್ನೂರು, ನಾನೂರು ರೂಪಾಯಿಗಳಿಗೆ ಮೋಸವಿರ ಲಿಲ್ಲ. ಅದೂ ವಾಸುವಿನ ಕಣ್ಣಿಗೆ ಬಿದ್ದರೆ ಉಳಿಯುವ ಹಾಗಿಲ್ಲವೆನಿಸಿತು ಸೀತಮ್ಮನವರ ನೊಂದ ಮನಸ್ಸಿಗೆ. ಅದರಿಂದ ಅವರು ಆ ದುಡ್ಡನ್ನೂ, ಚೈನನ್ನೂ ಬ್ಯಾಂಕಿನಲ್ಲಿಟ್ಟುಬಿಡುವಂತೆ ಅಣ್ಣನಿಗೆ ಕೇಳಿಕೊಂಡರು. ಆ ಆಲೋಚನೆಯು ಉಚಿತವೆಂದು ತೋರಲು ವೆಂಕಟಪತಯ್ಯನು ಹಾಗೆಯೇ ಮಾಡಬೇಕಾಯಿತು

## ೨೮

"ವಾಸು, ನೀನು ಹೀಗೆ ಅನ್ನ ನೀರು ಬಿಟ್ಟು ಕೊರಗಹತ್ತಿದರೆ ನಿನ್ನ ಸತ್ತ ಸರೋಜಳೇನೂ ಮತ್ತೆ ಮೇಲೆದ್ದು ಬರುವುದಿಲ್ಲ ಗೊತ್ತೆ?"

"ಗೊತ್ತು ಕಂಠಿ, ಅವಳು ಬರುವುದಿಲ್ಲ. ನಾನೇ ಹೊರಟು ಹೋಗೋಣ ಎಂದು ಮಾಡಿಬಿಟ್ಟಿದ್ದೇನೆ."

"ತುಂಬಾ ಚೆನ್ನಾಗಿ ಹೇಳಿದೆ. ನಿನ್ನನ್ನು ನಂಬಿ ಜೀವ ಹಿಡಿದಿರುವ ಆ ಹುಡುಗಿ, ತಾಯಿಯರು ಒಂದೇ ತಡವೆಗೆ ಯಾವುದಾದರೂ ಕೆರೆ ಯನ್ನೋ ಬಾವಿಯನ್ನೋ ನೋಡಿಕೊಳ್ಳಬೇಕು ಅನ್ನು."

"ಅದು ಅವರ ಹಣೆಯ ಬರೆಹವಾಗಿದ್ದರೆ ನಾನೇನು ಮಾಡಲಿ. ಈಗ ಪರಿಸ್ಥಿತಿ ಹಾಗೆ ಬಂದುಹೋಗಿದೆ."

ಈ ಮೊಂಡು ಉತ್ತರಕ್ಕೆ ಏನು ಹೇಳಬೇಕೆಂಬುದು ತೋರದೆ ಕಂಠಿಯು ಸುಮ್ಮನಾಗಿ ಹೋದನು.

"ನಾನು ಚಿಂತಿಸುತ್ತಿರುವುದು ಸರೋಜೆಗೆ ಮಾತ್ರವಲ್ಲ. ಅವಳಿಗೆ ದುಃಖಪಡುತ್ತಿರುವುದು ಐವತ್ತು ಭಾಗವಾದರೆ, ಇನ್ನೈವತ್ತು ಭಾಗ ನನ್ನ ತಾಯಿಗಾಗಿ. ನಾನು ಮಾಡಲು ಹೊರಟು ಒಂದು ಕೆಲಸವಾದರೂ ನೆಟ್ಟ ಗಾಗಲಿಲ್ಲ. ಒಂದೆಡೆ ಸರೋಜಳನ್ನೂ ಉಳಿಸಲಿಲ್ಲ. ಮತ್ತೊಂದೆಡೆ ದುಡ್ಡನ್ನೂ ಕಳೆದುಕೊಂಡೆ. ಎಲ್ಲಕ್ಕಿಂತಲೂ ಹೆಚ್ಚಾಗಿ ತಾಯಿಯ ಪ್ರೇಮವನ್ನು ಕಳೆದುಕೊಂಡೆ."

"ಹಾಗೆನ್ನಬೇಡ ವಾಸು, ನಿನಗೆ ಮಾತೃ ಪ್ರೇಮದ ಬೆಲೆ ಸರಿಯಾಗಿ

ಗೊತ್ತಿಲ್ಲ. ನಾನು ನನ್ನ ತಾಯಿಯನ್ನು ಕಳೆದುಕೊಂಡು ಬಹಳ ದಿವಸ
ವಾದರೂ, ಆ ಮಮತೆಯೆನ್ನುವುದು ಮಾತ್ರ ಇವತ್ತಿಗೂ ನನ್ನ ಬಳಿ
ಇರುವಂತೆಯೇ ತೋರುತ್ತದೆ. ತಾಯಿಯ ಪ್ರೇಮ ನೀನು ತಿಳಿದಿರು
ವಷ್ಟು ತಾತ್ಕಾಲಿಕವಾದುದಲ್ಲ."

"ಅವರು ನನ್ನನ್ನು ಮೊದಲಿನಂತೆಯೇ ಪ್ರೀತಿಯಿಂದ ಕಂಡರೂ,
ನಾನು ಯಾವ ಮುಖವನ್ನು ಹೊತ್ತುಕೊಂಡು ಅವರ ಬಳಿ ಹೋಗಲಿ ?
ನಾನು ಮಾಡಿಕೊಂಡಿರುವ ಅವಾಂತರದಲ್ಲಿ ನನಗೆ ಕೆಲಸವೂ ಹೋಗುವ
ಹಾಗಿದೆ."

"ಕೆಲಸದ ಮನೆ ಹಾಳಾಯಿತು. ಹುಟ್ಟಿದವರೆಲ್ಲಾ ಇದನ್ನೇ ನೆಚ್ಚಿ
ಕೊಂಡು ಹುಟ್ಟುವುದಿಲ್ಲ. ನೀನೇನು ಗಂಡಸಲ್ಲವೇ ? ಒಂದಲ್ಲ ಒಂದು
ಸ್ವಂತ ಉದ್ಯೋಗಕ್ಕೆ ಹೊರಟರಾಯಿತು. ಆಗ ಸ್ವತಂತ್ರವಾಗಿ ನನ್ನಂತೆ
ಇರಬಹುದು."

"ಅದೇನೋ ನಿಜ ಕಂಠಿ. ಆದರೆ ನನ್ನಲ್ಲಿ ಇತ್ತೀಚೆಗೆ ಯಾಕೋ
ಶಕ್ತಿಯೇ ಇಲ್ಲ. ಏನೋ ರೋಗ ತಗುಲಿಹಾಕಿಕೊಂಡಿರುವಂತಿದೆ. ಕೆಟ್ಟ
ಚಾಳಿಯಲ್ಲಿ ನೀನು ನನಗಿಂತ ಸಾವಿರ ಪಾಲು ಹೆಚ್ಚಾದರೂ ನಿನ್ನ ಆರೋ
ಗ್ಯಕ್ಕೆ ಯಾವ ಕುಂದೂ ಬಂದಹಾಗೆ ತೋರುವುದಿಲ್ಲ. ಆದರೆ ನಾನು
ಮಾತ್ರ ಮುದುಕನಾಗಿಬಿಟ್ಟಿದ್ದೇನೆ. ಬೇಕಾದರೆ ನನ್ನ ಮುಖ ನೋಡು."

ಕಂಠಿಯು ವಾಸುವಿನ ಮುಖವನ್ನು ನೋಡಿದನು. ಅವನು ಹೇಳಿ
ದುದರಲ್ಲಿ ಅತಿಶಯೋಕ್ತಿಯೇನೂ ಇರಲಾರದೆನಿಸಿತು. ವಾಸುವು ಬಹಳ
ವಾಗಿ ಇಳಿದುಹೋಗಿದ್ದನು. ಕಣ್ಣುಗಳು ಗುಂಡಿಗಿಳಿದಿದ್ದುವು. ರಕ್ತ
ವಿಲ್ಲದೆ ತುಟಿ ಬಿಳಚಿಕೊಂಡಿತ್ತು. ಕಂಠಿಯು ತನ್ನ ಮನಸ್ಸಿನಲ್ಲಾದ
ಗಾಬರಿಯನ್ನು ತೋರ್ಪಡಿಸದೆ,

"ಇದೆಲ್ಲಾ ನಿನ್ನ ಬರಿಯ ಭಾವನೆ. ಮನಸ್ಸಿನ ಬೇಜಾರಿನಿಂದ
ಕೊಂಚ ಇಳಿದುಹೋಗಿರಬಹುದು. ಅಷ್ಟಕ್ಕೇ ನೀನು ಏನೇನೋ
ಯೋಚಿಸಿಕೊಂಡು ಗಾಬರಿ ಬೀಳುತ್ತಿ" ಎಂದು ಹೇಳಿ ಯಾವುದೋ ಕೆಲ
ಸದ ನೆಪದಿಂದ ಕೋಣೆಯನ್ನು ಬಿಟ್ಟು ಹೊರಟುಹೋದನು.

ವಾಸುವು ಮನೆಯವರಿಗೆ ಮೋಸಮಾಡಿ ತಂದಿದ್ದ ಹಣವೆಲ್ಲವನ್ನೂ
ಕೈಲಿ ಒಂದು ಕಾಸೂ ಉಳಿಯದ ಹಾಗೆ ಜೂಜಿನಲ್ಲಿ ಸೋತುಹೋಗಿದ್ದನು.

ಅತ್ತ ಸರೋಜಳಿಗೆ ಶ್ರೀಮತಿಯ ಚಿತ್ರಹಿಂಸೆ ಅಸಾಧ್ಯವಾಗಿ ಹೋಗಿತ್ತು. ಸರೋಜ ತನಗೆ ಪ್ರತಿಯಾಗಿ ನಡೆಯಲು ವಾಸುವಿನ ದುರ್ಬೋಧನೆಯೇ ಕಾರಣವೆಂದು ಅವಳು, ವಾಸುವು ಮನೆಗೆ ಬಾರದಂತೆ ಕಟ್ಟುಮಾಡಿದಳು. ತಾಯಿಯನ್ನು ಒಲಿಸಿಕೊಳ್ಳಲು ಸರೋಜ ಮಾಡಿದ ಪ್ರಯತ್ನವೆಲ್ಲಾ ವಿಫಲವಾಯಿತು. ಅವಳು ಶ್ರೀಮತಿಯ ಸೆರಗು ಹಿಡಿದು ಕಣ್ಣೀರಿಡುತ್ತಾ, ತನ್ನನ್ನು ಮುದುಕನಿಗೆ ಕೊಡಬೇಡವೆಂದು ಗೋಳಾಡಿದಳು. ಧನಪಿಶಾಚಿಯು ಹಿಡಿದಿದ್ದ ಶ್ರೀಮತಿಗೆ ಕರುಣೆ ಬರಲಿಲ್ಲ. "ಅಯ್ಯೋ ಪೆಚ್ಚು ಹೆಣ್ಣೆ, ನೀನೇನು ಅವನಿಗೇ ಗಂಟು ಅಂದುಕೊಂಡೆಯಾ? ಅವನು ಸತ್ತಮೇಲೆ ಆಸ್ತಿಯೆಲ್ಲಾ ನಿನ್ನದಾಗುತ್ತೆ. ಆಮೇಲೆ ನಿನಗೆ ಇಷ್ಟಬಂದವರನ್ನು ಮಾಡಿಕೊಂಡರಾಯಿತು. ಇಷ್ಟೆಲ್ಲಾ ನಾನು ಮಾಡುತ್ತಿರುವುದು ನಿನಗೆ ದುಡ್ಡು ಬರಲಿ ಅಂತ" ಎಂದು ಸಮಾಧಾನ ಮಾಡಿದಳು. ತನ್ನ ಮುಂದಿನ ಬಾಳನ್ನು ನೆನೆದು ಸರೋಜ ಹುಚ್ಚಳಾಗಿ ಹೋದಳು. ಇನ್ನು ತಾಯಿಯನ್ನು ಬೇಡುವುದು ವ್ಯರ್ಥವೆಂದೆನಿಸಿತು. ಮುಂದೆ ದಾರಿ ಕಾಣದೆ ಸರೋಜ ಕೈಲಿದ್ದ ಉಂಗುರದಲ್ಲಿನ ವಜ್ರವನ್ನರೆದು ಕುಡಿದುಬಿಟ್ಟಳು. ತಾಯಿಗೆ ತನಗಿಂತಲೂ ಧನವೇ ಹೆಚ್ಚಾಗಿ ಇರಬೇಕೆಂದು ತೋರಿದುದರಿಂದ ಅವಳು, ಬೆಲೆಯಿಲ್ಲದೆಡೆ ತನ್ನ ಜೀವ ಇರಬಾರದೆಂದು ದೂರ ಸಾಗಿ ಹೊರಟುಹೋದಳು.

ಸರೋಜಳು ಸತ್ತಮೇಲೆ ವಾಸುವು ಒಂದೈದಾರು ದಿವಸಗಳ ವರೆಗೆ ನಿಜವಾಗಿಯೂ ಹುಚ್ಚನಾಗಿ ಬಿಟ್ಟಿದ್ದನು. ಕಂಠಿಯಂತಹವನು ಅವನಿಗೆ ಮತ್ತೆ ಬುದ್ಧಿ ಸರಿಹೋಗುತ್ತದೊ ಇಲ್ಲವೊ ಎಂದು ಶಂಕಿಸಹತ್ತಿದನು. ರಾತ್ರಿಹಗಲು "ಸರೋಜ, ಸರೋಜ" ಎಂದು ಜಪಮಾಡುವುದೇ ವಾಸುವಿನ ಕೆಲಸವಾಗಿಹೋಗಿತ್ತು. ಊಟ ನಿದ್ರೆಗಳಿಲ್ಲದೆ ಅವನ ದೇಹ ತೀರಾ ಕೃಶವಾಗಿ ಹೋಗಿತ್ತು. ಅಂತಹ ವೇಳೆಯಲ್ಲಿ ಕಂಠಿಯು ಅವನ ಕೈಬಿಟ್ಟಿದ್ದರೆ ತುಂಬಾ ಕಷ್ಟವಾಗುತ್ತಿತ್ತು. ಆದರೆ ಅವನು ಹಾಗೆಂದೂ ಮಾಡಲಿಲ್ಲ. ವಾಸುವನ್ನು ಹಗಲಿರುಳು ಅನುಸರಿಸಿ ಅವನ ಬುದ್ಧಿಯನ್ನು ತಿದ್ದತೊಡಗಿದನು. ಸಣ್ಣ ಮಗುವಿನ ವಿಷಯದಲ್ಲಿರುವಂತೆ ವಾಸುವಿನ ವಿಷಯದಲ್ಲಿ ಅತಿ ಜಾಗರೂಕನಾಗಿರುತ್ತಿದ್ದನು. ಅಂತೂ ಅವನ ದಿನಚರಿಯ ಪರಿಶ್ರಮದಿಂದ ವಾಸುವಿನ ಮನಸ್ಸು ಒಂದು ಹದಕ್ಕೆ ಬರಲು ತಿಂಗಳ ಮೇಲೆ ಬೇಕಾಯಿತು.

ವೆಂಕಟಪತಯ್ಯನು ನಂಜುಂಡಳ್ಳಿಗೆ ಹೊರಟು ಹೋದ ಮೇಲೆ ಮತ್ತೆ ಅತ್ತೆ ಸೊಸೆಯರ ಮೊದಲಿನ ಜೀವನವು ಆರಂಭವಾಯಿತು. ಆದರೆ ಈಗಿನದು ಹಿಂದಿನದಿಕ್ಕಿಂತ ನೀರಸವಾಗಿತ್ತು. ಮೊದಲು ಅಪ್ಪಿತಪ್ಪಿ ಯಾದರೂ ಒಬ್ಬರೊಡನೊಬ್ಬರು ಕೊಂಚಕಾಲ ಹಗುರವಾಗಿ ಹರಟೆ ಹೊಡೆಯುತ್ತಿದ್ದರು. ಈಗ ಅದೂ ತಪ್ಪಿಹೋಯಿತು. ಸೀತಕ್ಕನಂತೂ ಬಾಯೇ ಬಿಡುತ್ತಿರಲಿಲ್ಲ. ಭಾಗಮ್ಮನವರ ಬಲವಂತಕ್ಕೆ ಎರಡು ಮಾತಾಡಿದರೆ ಆಡಿದ ಹಾಗೆ. ಅವರನ್ನು ಮೊದಲಿನ ಹಾಗೆ ಮಗನ ವಿಷಯವಾಗಿ ಪ್ರಶ್ನಿಸಿ ಕಾಡುತ್ತಲೂ ಇರಲಿಲ್ಲ. ಅವರನ್ನು ಕಂಡಾಗ ಭಾಗಮ್ಮನವರಿಗೇ ಹೃದಯ ಕರಗಿ, "ಸೀತಮ್ಮಾ, ನಿನಗೆ ಹುಚ್ಚು. ಅವನಿಗೇನು ದೊರೆ ಹಾಗೆ ಇದಾನೆ. ಇಲ್ಲಿ ನೀವು ಅತ್ತೆ ಸೊಸೆಯರು ಇಲ್ಲದ ಕೊರಗಿನಲ್ಲಿ ಜೀವವನ್ನು ಕೊಂದುಕೊಳ್ಳುತ್ತೀರಿ ಅಷ್ಟೆ" ಎನ್ನುತ್ತಿದ್ದರು. ಅಡುಗೆಯಲ್ಲಿ ಇವರ ಸಮನಾರೂ ಇಲ್ಲ ಎಂದು ಹೆಸರುವಾಸಿಯಾಗಿದ್ದ ಸೀತಕ್ಕನ ಕೈ ಈಗ ತನ್ನ ಗುಣವನ್ನೇ ಕಳೆದುಕೊಂಡಿತ್ತು. ಸಾರಿಗೆ ಉಪ್ಪು ಒಂದು ದಿನ ವಿಪರೀತವಾಗಿ ಹಾಕಿದರೆ ಮತ್ತೊಂದು ದಿನ ಹಾಕುವುದನ್ನೇ ಮರೆಯುತ್ತಿದ್ದರು. ಊಟಕ್ಕೆ ಕುಳಿತ ಪಾರ್ವತಿ "ಅತ್ತೆ, ಹುಳಿಯೆಂದು ಮಾಡಿದ್ದೀರಿ. ಮುಖ್ಯವಾಗಿ ಹುಳಿಯೇ ಹಾಕಿಲ್ಲ. ಪಲ್ಯಕ್ಕೆ ಒಗ್ಗರಣೆಯೇ ಹಾಕಿಲ್ಲದೆ ಬೇಯಿಸಿಬಿಟ್ಟಿರುವಿರಲ್ಲಾ" ಎಂದು ಹಾಸ್ಯಮಾಡಿದರೆ ಅವರು, "ಬಿಡು ಮಗು, ಯಾರು ಇರುವವರು ? ನಾವು ನಾವು ತಾನೇ" ಎಂದು ಬಿಡುತ್ತಿದ್ದರು. ಅತ್ತೆಯನ್ನು ಅಲ್ಲಗಳೆಯುವುದಕ್ಕಲ್ಲವಾದರೂ ಹಾಸ್ಯಕ್ಕಾಗಿ ಪಾರ್ವತಿಯು ಮೊದಲಿಗೆ ಅಡುಗೆಯ ರುಚಿಯನ್ನು ಹೇಳುತ್ತಿದ್ದಳು. ಆಮೇಲೆ ತಾನು ಹಾಗೆ ಹೇಳುವುದರಿಂದ ಅವರಿಗೆ ಅಸಮಾಧಾನವಾಗಬಹುದೇನೊ ಎಂದು ಅದನ್ನೂ ನಿಲ್ಲಿಸಿಬಿಟ್ಟಳು. ಅವಳಿಗೂ ದಿನ ದಿನಕ್ಕೆ ದೇಹಾಲಸ್ಯವು ವಿಪರೀತವಾಗುತ್ತಿತ್ತು. ಅಗತ್ಯವಾಗಿ ಮಾಡಬೇಕಾಗಿದ್ದ ಔಷಧ ಪತ್ಯಗಳಿರಲಿಲ್ಲ; ಆರೈಕೆಯಿರಲಿಲ್ಲ. ತಲೆಗೆ ನೀರೆರೆದುಕೊಂಡು ಎರಡು ತಿಂಗಳಿಗೆ ಬಂದಿತ್ತು. ಭಾಗಮ್ಮನವರು ವಿಚಾರಿಸಿದರೆ ಅವಳು ಏನಾದರೊಂದು ನೆಪವನ್ನು ಹೇಳಿ ನುಣಿಚಿಕೊಳ್ಳುತ್ತಿದ್ದರು. ಇತ್ತ ಸೀತಕ್ಕನಿಗೂ ಮನಸ್ಸು ತೀರಾ ಕೆಟ್ಟು ಹೋಗಿದ್ದುದರಿಂದ ಅವಳಿಗೆ ಉಪಚಾರಮಾಡಬೇಕೆಂಬುದು ಹೊಳೆಯುತ್ತಲೇ ಇರಲಿಲ್ಲ.

ಕಷ್ಟವೋ ಸುಖವೋ ಅಂತೂ ದಿವಸಗಳು ಕಳೆದುಹೋದುವು. ಬೇಸಗೆಯು ಸಮಾಪಿಸುತ್ತಿತ್ತು. ಈ ವಿರಾಮದಲ್ಲಿ ಸೀತಮ್ಮನವರಿಗೆ ವಾಸುವಿನಿಂದ ಎರಡು ಕಾಗದಗಳು ಬಂದಿದ್ದುವು. ಮನೆಯನ್ನು ಆಧಾರೆ ಮಾಡಿದಂದಿನಿಂದ ತನಗೆ ಮನಶ್ಶಾಂತಿ ಇಲ್ಲವೆಂದೂ, ಹೇಗಾದರೂ ಮಾಡಿ ಬರುವ ವರ್ಷದ ಹೊತ್ತಿಗೆಲ್ಲಾ ಹಣವನ್ನು ಸೇರಿಸಿ ಮನೆಯನ್ನು ಬಿಡಿಸಿ ಕೊಳ್ಳುವುದಾಗಿಯೂ ಬರೆದಿದ್ದನು, ಇದರ ಜೊತೆಗೆ ತನಗೆ ಮೈ ಹುಷಾರಿಲ್ಲದೆ ಕಂಠಿಯ ಮನೆಯಲ್ಲಿರುವ ವಿಷಯವೂ ಸೇರಿತ್ತು. ಗದ್ದೆಯ ಮಾತನ್ನೇ ಎತ್ತದೆ ಮಗನು ಏನೂ ಅರಿಯದವನಂತೆ ನಟಿಸಿರುವುದನ್ನು ಕಂಡು ಸೀತಕ್ಕನಿಗೆ ಸಮಾಧಾನಕ್ಕಿಂತ ಅಸಮಧಾನವೇ ಹೆಚ್ಚಾಯಿತು. ಮಗನೆಂದರೆ ಹಗಲಿರುಳು ಚಿಂತಿಸುತ್ತಿದ್ದವರು, ವಾಸುವು ಮೈಗೆ ಹುಷಾರಿಲ್ಲವೆಂದು ಬರೆದಿದ್ದರೂ ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳದೆ "ಪಾತ, ಈ ಕಾಗದದ ಒಕ್ಕಣೆಯನ್ನು ನೋಡಿದರೆ ಇವನು ನಮ್ಮಿಂದ ಇನ್ನೇನನ್ನಾದರೂ ತೆಗೆದುಕೊಂಡು ಹೋಗಲು ಅನುಸರಣೆ ಮಾಡುತ್ತಿರುವ ಹಾಗೆ ತೋರುತ್ತದೆ. ದುಡ್ಡು ಕೇಳಲು ಈಗ ನಮ್ಮ ಬಳಿ ಏನಿದೆ? ಹರಿಶ್ಚಂದ್ರ ಮಾಡಿದ ಹಾಗೆ ನನ್ನನ್ನೂ, ನಿನ್ನನ್ನೂ ಮಾರಿ ಏನಾದರೂ ಗಿಟ್ಟಿಸಿಕೊಳ್ಳಬೇಕು ಅಷ್ಟೆ" ಎಂದರು. ಅವರಿಗೆ ಅಷ್ಟು ಬೇಸರ ಬಂದಿತ್ತು.

"ಅದೇನೋ ನಿಜ. ಆದರೆ ನಮ್ಮನ್ನು ಕೊಂಡು ಕೊಳ್ಳಲು ಒಬ್ಬರು ಸಿಕ್ಕಬೇಕಲ್ಲಾ" ಎಂದಳು ಪಾರ್ವತಿ.

"ಸಿಕ್ಕದ ಹಾಗೇನು. ಎಲ್ಲಿಯಾದರೂ ಆ ಹೊತ್ತಿಗೆ ಹವಣಿಸುತ್ತಾನೆ."

"ಸದ್ಯಕ್ಕೆ ಅಂತಹುದೇನೂ ಆಗಬೇಡ. ಈಗ ಪಡುತ್ತಿರುವ ಪಾಡೇ ಸಾಕಾಗಿದೆ. ಅದೂ ಇರಲಿ, ಬೇಗನೆ ಬಂದು ಕರೆದುಕೊಂಡು ಹೋಗುತ್ತೇನೆ, ಎಂದು ಹೇಳಿದ ಅಪ್ಪ ಬರಲೂ ಇಲ್ಲ; ಒಂದು ಕಾಗದವನ್ನೂ ಹಾಕಲಿಲ್ಲ. ಅಳಿಯನ ಹುಚ್ಚು ಮಾವನಿಗೂ ಹಿಡಿಯಿತೋ!"

"ಇದ್ದರೂ ಇರಬಹುದು, ಅದರಲ್ಲಿ ಆಶ್ಚರ್ಯವೇನೂ ಇಲ್ಲ, ಎಷ್ಟೇ ಆಗಲಿ ಸೋದರ ಮಾವ ನೋಡು" ಸೀತಕ್ಕ ನಕ್ಕರು. ಆದರೆ ಆ ನಗೆಯಲ್ಲಿ ಹಾಸ್ಯವಿರಲಿಲ್ಲ. ಹಿಂಬದಿಯಲ್ಲಿ ಕ್ರೋಧ, ಜುಗುಪ್ಸೆಗಳು ಲಾಸ್ಯವಾಡುತ್ತಿದ್ದುವು. ಪಾರ್ವತಿ ಮುಂದೆ ಅವರನ್ನು ಕೆರಳಿಸುವುದು ಅಪಾಯವೆಂದು ಮಾತನ್ನು ಅಲ್ಲಿಗೇ ಕೊನೆಮುಟ್ಟಿಸಿದಳು.

ಪಾರ್ವತಿಯನ್ನು ಶರೀರ ವ್ಯಾಧಿ ಒಂದು ಕಡೆ ಹಣ್ಣು ಮಾಡುತ್ತಿದ್ದರೆ, ಮನಸ್ಸಿನ ಚಿಂತೆ ಮತ್ತೊಂದೆಡೆ ಹಣ್ಣು ಮಾಡುತ್ತಿತ್ತು. ಅಷ್ಟೊಂದು ಪ್ರೇಮಮಯಿಯಾಗಿದ್ದ ಅತ್ತೆಯೂ ಸಹ ಚಿಂತೆಯ ಅತಿಶಯದಿಂದ ಅವಳನ್ನು ವಿಶೇಷವಾಗಿ ವಿಚಾರಿಸಿಕೊಳ್ಳುತ್ತಿರಲಿಲ್ಲ. ಪುರಸೊತ್ತು ದೊರಕಿದಾಗಲೆಲ್ಲಾ ಅಳುವುದು ಅವಳ ದಿನಚರಿಯ ಕೆಲಸವಾಗಿತ್ತು. ಅತ್ತ ಸೀತಮ್ಮನವರ ಆತಂಕಗಳು ಒಂದಲ್ಲ. ನಿರ್ಬಲೆಯಾಗಿದ್ದ ಸೊಸೆಯನ್ನು ನೋಡಿದಾಗ ಅವರ ಗಾಬರಿ ಮತ್ತಷ್ಟು ಹೆಚ್ಚಾಗುತ್ತಿತ್ತು. ಹೃದಯದಲ್ಲಿ ನಡೆಯುವ ಬಿದರಿಕೆಯನ್ನು ಸಹಿಸಲಾರದೆ ಅವರು ಭಾಗಮ್ಮನವರೊಡನೆ, "ಭಾಗಮ್ಮ, ಎಲ್ಲಕ್ಕಿಂತಲೂ ಹೆಚ್ಚಾಗಿ ಮೊದಲನೆ ಹೆರಿಗೆ. ಅದರಲ್ಲೂ ಇವಳು ತೀರಾ ಬಲವಿಲ್ಲದವಳು. ಮನೆಗಿಂತ ಆಸ್ಪತ್ರೆಯೇ ಮೇಲಲ್ಲವೇ" ಎಂದು ಕೇಳುತ್ತಿದ್ದರು. ಭಾಗಮ್ಮನವರಿಗೂ ಹೀಗೆಯೇ ಮಾಡು ಎಂದು ಹೇಳಲು ಅಧೈರ್ಯ. ಅವರು "ಆಗಲೇಳು, ಎಲ್ಲಾದರೇನಂತೆ, ಯಾವುದು ಅನುಕೂಲವೋ ಅದನ್ನು ಮಾಡುವುದು" ಎಂದರೆ ಸೀತಕ್ಕನಿಗೆ ಎಷ್ಟೋ ಧೈರ್ಯ ಬರುತ್ತಿತ್ತು. ಆದರೂ ಈ ಬಗೆಯ ನೆಮ್ಮದಿ ಇರುತ್ತಿದ್ದುದು ಕ್ಷಣಮಾತ್ರ. ಬೆಳಗಾದರೆ, ಸಂಜೆಯಾದರೆ "ಪಾತು, ಯಾಕೆ ಸಪ್ಪೆಗಿದ್ದೀಯೇ? ಮೈಗೆ ಸರಿಯಿಲ್ಲವೆ?" ಎಂದು ಕೇಳುತ್ತಿದ್ದರು. ಅವಳು ನಗುಮುಖವಾಗಿ ಉತ್ತರ ಕೊಟ್ಟರೆ ಸರಿ, ಒಂದು ಗಳಿಗೆ ಬಾಗಿಲ ಬಳಿ ಕುಳಿತುಕೊಳ್ಳುತ್ತಿದ್ದರು. ಇಲ್ಲದಿದ್ದರೆ ಅವಳ ಇದಿರನ್ನು ಬಿಟ್ಟು ಕದಲುತ್ತಲೇ ಇರಲಿಲ್ಲ.

ಹೀಗೆ ಅತ್ತೆ ಸೊಸೆಯರು ಕಾಲಕಳೆಯುತ್ತಿರುವಲ್ಲಿ ಒಂದು ದಿನ ಬೆಳಗ್ಗೆ ಪಾರ್ವತಿಗೆ ಒಂದು ಪತ್ರವು ಬಂದಿತು. ಪಾರ್ವತಿ ಅತ್ತೆಗೆ ಗೊತ್ತಾಗುವಂತೆ ಗಟ್ಟಿಯಾಗಿ ಓದಿ ಹೇಳತೊಡಗಿದಳು.

ಮಾ|| ಸೌ|| ಪಾರ್ವತಿಗೆ ಲಚ್ಚನ ನಮಸ್ಕಾರಗಳು,

ಅಪ್ಪನಿಗೆ ಮೈಸೂರಿಗೆ ಹೋಗಿ ಬಂದ ಎಂಟು ದಿನಕ್ಕೆಲ್ಲಾ ಸಿಡುಬೆದ್ದುಬಿಟ್ಟಿತು. ಅದೇ ನೆಪವಾಗಿ ಕೈಕಾಲೆಲ್ಲಾ ಹಿಡಿದುಕೊಂಡು ತುಂಬಾ ತೊಂದರೆಯಾಗಿ ಹೋಗಿತ್ತು. ಬದುಕುವುದೇ ಕಷ್ಟವಾಗಿ ತೋರಿದ್ದರಿಂದ ಸೌ|| ಗೌರಿ, ಚಾಪಿ ಎಲ್ಲಾ ಬಂದಿದ್ದರು. ಕೇವಲ ಗಾಬರಿಗೆ ಕಾರಣವೆಂದು ನಿಮಗೆ ಕಾಗದವನ್ನು ಹಾಕಲಿಲ್ಲ. ದೇವರದಯೆ

ಯಿಂದ ಈಗ ಹುಷಾರಾಗಿದಾರೆ. ಸಾಧ್ಯವಾದರೆ ಇನ್ನೊಂದು ವಾರಕ್ಕೆಲ್ಲಾ ಬಂದು ನಿಮ್ಮನ್ನು ಕರೆತರುತ್ತಾರಂತೆ. ಇನ್ನೇನು ವಿಶೇಷವಿಲ್ಲ.

ಇಂತಿ ನಮಸ್ಕಾರಗಳು

ಲಕ್ಷ್ಮಣ.

ಈಗ ಹುಷಾರಾಗಿದಾರೆಂದು ಲಕ್ಷ್ಮಣನು ಬರೆದಿದ್ದರೂ ಸೀತಮ್ಮ ನವರಿಗೆ ಅಪನಂಬಿಕೆ. "ಹೇಗಿರುವನೋ ಏನೋ ಎಂದು ಗೋಳಾಡಿ ದರು. ದುಃಖದಲ್ಲಿಯೂ ಅವರಿಗಾದ ಹಿರಿಯ ಸಮಾಧಾನವೆಂದರೆ ವೆಂಕಟಪತಯ್ಯನು ಜೀವಿತದಿಂದಿರುವುದು. ತಮಗೆ ಬರುವ ಗಂಡಾಂತರ ಗಳೆಲ್ಲ ಹೀಗೆಯೇ ಪಾರಾಗಲೆಂದು. ಅವರು ದೇವರಿಗೆ ತುಪ್ಪದ ದೀಪ ಹೊತ್ತಿಸಿ ಕೈಮುಗಿದರು. ಮನಸ್ಸಿನ ಯೋಚನೆಗಳಲ್ಲಿ ಒಂದು ಬಗೆ ಹರಿದುದಕ್ಕೆ ಅವರಿಗೆ ತುಂಬ ಸಂತೋಷವಾಗಿತ್ತು. ಆ ಸಂತಸದ ಸಂಭ್ರಮದಲ್ಲಿ,

"ಏನಾದರಾಗಲಿ ಅವನು ಹುಷಾರಾಗಿದಾನೆ ಅನ್ನೋ ಸಮಾಚಾರ ಬಂತಲ್ಲ. ನಾವೂ ಒಂದು ಕಾಗದ ಹಾಕಲಿಲ್ಲ. ಅವನೂ ಬರೆಯಲಿಲ್ಲ. ಇವತ್ತು ಬರುತ್ತಾನೆ ನಾಳೆ ಬರುತ್ತಾನೆ ಎಂದು ಕಾದೂ ಕಾದೂ ಸಾಕಾಗಿ ನನಗೆ, ಇವನಿಗೂ ಏನು ಕೆಟ್ಟಬುದ್ಧಿ ಬಂದಿತೋ ಎಂದು ಗಾಬರಿ ಯಾಗಿತ್ತು. ಅವನು ನಿನ್ನನ್ನು ಕರೆದುಕೊಂಡು ಹೋಗುವುದೇನೂ ಬೇಡ. ಸದ್ಯಕ್ಕೆ ತಾನು ಮೈ ಕೊಡವಿಕೊಂಡು ಎದ್ದನಲ್ಲಾ. ಇನ್ನು ಇವನಿಂದ ಯೋಗಕ್ಷೇಮಕ್ಕೆ ಕಾಗದ ಒಂದುಬಿಟ್ಟರೆ ಅಲ್ಲಿಗೆ ಅರ್ಧ ಆತಂಕ ತಪ್ಪಿದ ಹಾಗೆ" ಎಂದರು.

ಅದೇ ನನಗೂ ಯೋಚನೆ. ಹೋದ ಬಾರಿ ಬರೆದ ಕಾಗದದಲ್ಲಿ ಜ್ವರ ಬರುತ್ತಿದೆಯೆಂದು ಬರೆದಿದ್ದರು. ಈಗೇನು ನಿಂತಿದೆಯೋ ಇಲ್ಲವೋ ಒಂದೂ ಗೊತ್ತಾಗಲಿಲ್ಲ. ಒಂದು ವೇಳೆ ಅವರೂ ನನ್ನ ಹಾಗೆ ಖಾಯಿಲೆ ಬಿದ್ದದ್ದರೆ ಅಲ್ಲಿ ನೋಡಿಕೊಳ್ಳುವರು ಯಾರು? ಈ ದಿನ ಸಂಜೆಯ ಟಪ್ಪಾಲು ನೋಡಿ, ಹುಷಾರಿಲ್ಲದಿದ್ದರೆ ರಜ ತೆಗೆದುಕೊಂಡು ಬಂದು ಬಿಡಿ ಎಂದು ನಾನೇ ಕಾಗದ ಹಾಕುತ್ತೇನೆ" ಎಂದು ಪಾರ್ವತಿಯು ಹೇಳಿದಳು.

ಸೀತಕ್ಕ "ಅದೇ ಸರಿ" ಎಂದರು.

ಪಾರ್ವತಿಯ ನಿರೀಕ್ಷಣೆಯಂತೆಯೇ ಸಂಜೆಯ ಹೊತ್ತಿಗೆಲ್ಲಾ ಮೈಲಾಪುರದಿಂದ ಕಾಗದವೊಂದು ಬಂದಿತು. ಲಕ್ಕೋಟೆಯ ಮೇಲೆ ಬರೆದಿರುವ ವಿಳಾಸವನ್ನು ನೋಡಿ ಸೀತಕ್ಕನಂತಹ ಓದು ಬರೆಹ ಬಾರದವರೂ, ಅದು ವಾಸುವಿನ ಕೈ ಬರೆಹವಲ್ಲವೆಂದು ಕಂಡುಹಿಡಿದರು. ಆ ದಿನ ಅದೇಕೋ ಪಾರ್ವತಿಗೆ ಲಕ್ಕೋಟೆಯನ್ನು ಒಡೆಯಲು ಕೈ ತರತರನೆ ನಡುಗುತ್ತಿತ್ತು. ಅವಳ ಗಾಬರಿಯನ್ನು ನೋಡಿ ಸೀತಕ್ಕ,

"ಇದೇನೇ ಹೀಗಾಡುತ್ತಿ, ಕಾಗದ ಓದಬೇಕಾದರೆ ಕೈ ನಡುಗ ಬೇಕೆ. ಒಳ್ಳೇ ಗಾಬರಿಯಾಯ್ತು ನಿನ್ನದು" ಎಂದರು.

ಪಾರ್ವತಿ ನಡುಗುವ ಧ್ವನಿಯಿಂದ ಓದತೊಡಗಿದಳು.

ಶ್ರೀ ಸೀತಮ್ಮನವರಿಗೆ ವಿಜ್ಞಾಪನೆಗಳು,

ನಿಮ್ಮ ಮಗ ವಾಸುವಿಗೆ ಕೊಂಚ ದಿನದಿಂದ ಏತಕ್ಕೋ ಮೈಗೆ ಹುಷಾರಿಲ್ಲವಾಗಿದೆ. ತೆಗೆದುಕೊಳ್ಳುತ್ತಿರುವ ಔಷಧ ಪತ್ಯಗಳೆಲ್ಲಾ ವ್ಯರ್ಥವಾದವೆಂದು ಹೇಳಬಹುದು. ಊರಿಗೆ ಹೋಗುವುದು ಉತ್ತಮ ವೆಂದು ಯಾರು ಎಷ್ಟು ಹೇಳಿದರೂ ಕೇಳುವುದಿಲ್ಲ. ದಿನದಿನಕ್ಕೆ ಕೃಶರಾಗುತ್ತಿದ್ದಾರೆ. ನಿಮಗೆ ವಿಷಯವೇ ಗೊತ್ತಾಗದೆಹೋದರೆ ಪರಿಸ್ಥಿತಿಯು ಶೋಚನೀಯವಾಗಬಹುದೆಂದು ನಾನು ಇಷ್ಟು ಸ್ವಾತಂತ್ರ್ಯ ವಹಿಸಿದ್ದೇನೆ. ನೀವು ಎಷ್ಟು ಜಾಗ್ರತೆ ಮಾಡಿದರೆ ಅಷ್ಟು ಉತ್ತಮ. ಏಕೆಂದರೆ ಅವರ ದೇಹ ಪರಿಸ್ಥಿತಿ ಅಷ್ಟು ಹಿಂದಾಗಿದೆ. ಒಟ್ಟಿನಲ್ಲಿ ದೇವರು ಎಲ್ಲರಿಗೂ ಒಳ್ಳೆಯದು ಮಾಡಬೇಕು.

ಇತಿ ತಮ್ಮವ,
ಎಂ. ಶ್ರೀಕಂಠಯ್ಯ.

ಪಾರ್ವತಿಯು ಓದಿ ಮುಗಿಸುವ ಮೊದಲೇ ಸೀತಮ್ಮನವರು ಅಡುಗೆ ಮನೆಯ ಕಡೆಗೆ ಧಾವಿಸಿದರು. ಅವರು ಹೋದ ರಭಸಕ್ಕೆ ಬೆದರಿ ಪಾರ್ವತಿಯೂ ಸೀತಕ್ಕನನ್ನು ಹಿಂಬಾಲಿಸಿದಳು. ಸೀತಕ್ಕ ಒಳಗೆ ಹೋದವರೇ ದೇವರ ಮುಂದೆ ಕುಳಿತು ಗಳಗಳನೆ ಅಳಹತ್ತಿದರು.

"ಶ್ರೀಕಂಠೇಶ್ವರಸ್ವಾಮಿ, ಆಗ ಮಗುವಾಗಿದ್ದಾಗ ಕಾಪಾಡಿದವನೂ ನೀನೆ, ಈಗ ಕಾಪಾಡುವವನೂ ನೀನೆ, ಎಲ್ಲಾ ನಿನಗೆ ಒಪ್ಪಿಸಿಬಿಟ್ಟಿ ದ್ದೇನೆ" ಎಂದು ಕಂಬನಿಗರೆದರು.

ಇದ್ದುದರಲ್ಲಿ ಧೈರ್ಯವನ್ನು ತಂದುಕೊಂಡವಳೆಂದರೆ ಪಾರ್ವತಿ.

"ಅತ್ತೆ ಅಳುತ್ತಾ ಕುಳಿತರೆ ಹೇಗೆ. ಹೋಗಿ ಭಾಗಮ್ಮನವರನ್ನಾದರೂ ಕರೆದುತರುತ್ತೇನೆ" ಎಂದಳು. ಸೀತಕ್ಕ ತಲೆಯಾಡಿಸಿದರು.

ಭಾಗಮ್ಮನವರೂ, ಅವರ ಯಜಮಾನರೂ ಬಂದಾಗ ಸೀತಕ್ಕ ತಮಗೆ ತೋರಿದಂತೆ ಏನೇನೋ ಮಾತಾಡಿಕೊಳ್ಳುತ್ತಿದ್ದರು. ಭಾಗಮ್ಮನವರನ್ನು ಕಂಡು,

"ಭಾಗಮ್ಮ, ವಾಸುವಿನ ಗತಿ ಕೇಳಿದಿರಾ, ಪಾಪಿ ನಾನು. ಮಗುವಿನ ಮುಖವನ್ನು ನೋಡುತ್ತೇನೆಯೋ ಇಲ್ಲವೋ" ಎಂದು ಅತ್ತರು.

ಪಾರ್ವತಿಯು ಆ ದಿನ ಬಂದ ಎರಡು ಕಾಗದಗಳನ್ನೂ ಭಾಗಮ್ಮನವರ ಗಂಡ ಸೀನಪ್ಪನವರ ಕೈಗಿತ್ತಳು. ಭಾಗಮ್ಮನವರು ಗಂಡನನ್ನು,

"ಆತ ವಾಸುವಿನ ದೇಹಸ್ಥಿತಿ ಹೇಗಿದೆಯೆಂದು ಬರೆದಿದ್ದಾರೆ?" ಎಂದು ಕೇಳಿದರು.

"ಅಂತಹುದೇನು ಇಲ್ಲ. ಏನೋ ನಿಶ್ಶಕ್ತಿ. ಈಗ ಯಾರಾದರೂ ಹೋಗಿ ಕರೆದುಕೊಂಡುಬಂದು ಸರಿಯಾಗಿ ಔಷಧ ಪಥ್ಯ ನಡಸಿದರೆ, ಎಲ್ಲಾ ಸರಿಹೋಗುತ್ತೆ. ಯಾಕೆ, ಈ ಪಾರ್ವತಮ್ಮನೇ ಇಲ್ಲಿಗೆ ಬಂದಾಗ ಹೇಗಾಗಿಹೋಗಿದ್ದಳು. ಈಗ ಸರಿಹೋಗಲಿಲ್ಲವೆ'' ಎಂದರು ಸೀನಪ್ಪ.

ಸೀತಕ್ಕ ತಮ್ಮ ಭಾವನೆಯನ್ನು ಬಚ್ಚಿಡಲಾರದೆ ಹೇಳಿದರು:

''ಅಯ್ಯೋ ಹಾಳು ಹೆಣ್ಣು ಜೀವಾಪ್ಪ. ಕಲ್ಲು ಎತ್ತಿಹಾಕಿದರೂ ಬದಕುತ್ತೇನೆ ಎನ್ನುತ್ತೆ. ಅದು ಸರಿ, ಈಗ ಅಲ್ಲಿಗೆ ಯಾರನ್ನು ತಾನೇ ಕಳುಹಿಸಲು ಸಾಧ್ಯ? ಅಲ್ಲಿ ನಮ್ಮಣ್ಣ ಸಾಯಿತಾ ಬಿದ್ದಿದ್ದಾನೆ, ಇಲ್ಲಿ ಇವಳು ಇವತ್ತೋ, ನಾಳೆಯೋ ಅಂತ ಅನ್ನುತ್ತಿದ್ದಾಳೆ. ನಾನು ಯಾರನ್ನು ನೋಡಿಕೊಳ್ಳಲಿ, ಎಲ್ಲಿ ಹೋಗಲಿ."

ಸೀನಪ್ಪನವರು ಅವರಿಗೆ ಧೈರ್ಯವನ್ನು ತುಂಬುತ್ತಾ,

"ನಾನಿರುವಾಗ ನೀವು ಅದಕ್ಕೆಲ್ಲಾ ಯೋಚನೆ ಮಾಡಬೇಕಾಗಿಲ್ಲವಮ್ಮಾ. ಸಮಯ ಅಂದರೆ ಇದಕ್ಕಿಂತಲೂ ಉಂಟೆ. ನಾನೂ, ಇವಳೂ ಈ ಸಂಜೆಗೇ ಹೊರಟುಬಿಡುತ್ತೇವೆ. ನೀವು ನಿಶ್ಚಿಂತೆಯಿಂದ ಪಾರ್ವತಮ್ಮನ ಬಳಿ ಇರಿ. ಅವಳೂ ಹುಡುಗಿ. ಎಲ್ಲಿಯಾದರೂ ಹೆದರಿಕೊಂಡರೆ ನಿಮಗೆ ತಾನೇ ಕಷ್ಟ" ಎಂದರು.

ಸೀತಮ್ಮನವರಿಗೆ ಭಾಗಮ್ಮ ಮತ್ತು ಸೀನಪ್ಪನವರಿಗೆ ಯಾವ ರೀತಿಯಲ್ಲಿ ಕೃತಜ್ಞತೆಯನ್ನು ಅರ್ಪಿಸಬೇಕೆಂಬುದು ಹೊಳೆಯಲಿಲ್ಲ. ಅವರು ಹೊರಗೆ ಬಂದವರೆ ಸೀನಪ್ಪನವರಿಗೆ ದೊಡ್ಡದಾಗಿ ಕೈ ಮುಗಿಯುತ್ತಾ,

"ಅಪ್ಪ, ಅವನಿಗೆ ಯಾವ ಜನ್ಮದ ತಂದೆತಾಯಿಗಳೋ ನೀವು ನಾನು ಕಾಣೆ. ಅವನು ಹುಟ್ಟಿದಾಗಿನಿಂದಲೂ ಒಂದೇ ಸಮನೆ ಅವನಿಗಾಗಿ ಮರಗುತ್ತಿದ್ದೀರಿ. ಆಗ ಕಾಪಾಡಿದವರೂ ನೀವೆ, ಈಗಲೂ ಅವನನ್ನು ನಿಮಗೇ ಸಂಪೂರ್ಣವಾಗಿ ವಹಿಸಿಬಿಟ್ಟಿದ್ದೇನೆ. ಏನೋ ನನ್ನ ಮಗುವನ್ನು ನೀವು ದೊಡ್ಡ ಮನಸ್ಸು ಮಾಡಿ ಉಳಿಸಿಕೊಟ್ಟರೆ ನಿಮ್ಮ ಹೆಸರು ಹೇಳಿ ದೀಪ ಹೊತ್ತಿಸುತ್ತೇನೆ" ಎಂದರು. ಆ ವೇಳೆಗೆ ಸೀತಕ್ಕನ ದೈನ್ಯವನ್ನು ಕಂಡು ಭಾಗಮ್ಮ ಮತ್ತು ಸೀನಪ್ಪನವರ ಕಣ್ಣುಗಳಲ್ಲಿಯೂ ಕಣ್ಣೀರು ಧಾರಾಳವಾಗಿ ಹರಿಯುತ್ತಿತ್ತು. ಭಾಗಮ್ಮನವರು ಸೀತಕ್ಕನನ್ನು ಸಮಾಧಾನಪಡಿಸುತ್ತಾ,

''ಅಯ್ಯೋ ಅಷ್ಟೊಂದು ದೊಡ್ಡ ಮಾತೇಕೆ ಆಡುತ್ತಿ. ಖಾಯಿಲೆ ಕಸಾಲೆ ಅನ್ನುವುದು ಮನುಷ್ಯರಿಗಲ್ಲದೆ ಮರಕ್ಕೆ ಬರುತ್ತದೆಯೆ ? ದೇವರು ಎಲ್ಲಾ ಒಳ್ಳೆಯದು ಮಾಡುತ್ತಾನೆ. ಏನೂ ಭಯವಿಲ್ಲ. ನಾವು ಈವತ್ತೇ ಹೊರಟುಬಿಟ್ಟು, ಅಲ್ಲಿ ಅವನೇನಾದರೂ ರೈಲು ಪ್ರಯಾಣ ಮಾಡುವಷ್ಟು ಹುಷಾರಿದ್ದರೆ ರೈಲಿನಲ್ಲೇ ಬರುತ್ತೇವೆ. ಇಲ್ಲದಿದ್ದರೆ ಎಷ್ಟು ಖರ್ಚಾದರೂ ಸರಿಯೆ, ಒಂದು ಮೋಟಾರು ಗೊತ್ತುಮಾಡಿಬಿಡುವುದು. ದುಡ್ಡು ಹೋದರೆ ಹೋಗಲಿ. ಸದ್ಯಕ್ಕೆ ಹುಡುಗ ಅವನ ಮನೆಗೆ ಅವನು ಬಂದು ಸೇರಿಕೊಂಡರೆ ಸಾಕಾಗಿದೆ '' ಎಂದರು.

ಇದುವರೆಗೂ ಬರಿಯ ಅಳುವಿನಲ್ಲೇ ಕಾಲ ತಳ್ಳಿದ್ದ ಸೀತಕ್ಕನಿಗೆ ಈಗ ದುಡ್ಡಿನ ನೆನಪು ಬಂದಿತು. ಅವರ ಬಳಿ ಚಿಲ್ಲರೆ ಒಂದೆರಡು ರೂಪಾಯಿಗಳನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ಸೀತಮ್ಮನವರು ಸಂಕೋಚದ ಅತಿರೇಕದಿಂದ ಮೆಲ್ಲನೆ ಭಾಗಮ್ಮನವರ ಕಿವಿಯಲ್ಲಿ,

''ಭಾಗಮ್ಮಾ, ನೀವು ಏನೂ ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳುತ್ತೇನೆ. ನನ್ನ ಸಂಸಾರದಲ್ಲಿನ ಕಷ್ಟಸುಖ ನಿಮಗೆ ತಿಳಿಯದೇ ಏನೂ ಇಲ್ಲ. ನನ್ನ ಬಳಿ ಸದ್ಯಕ್ಕೆ ದುಡ್ಡಿಲ್ಲ. ನೀವು

ದಯವಿಟ್ಟು ಪಾರ್ವತಿಯು ಊಟದ ತಟ್ಟೆಯನ್ನು ತೆಗೆದುಕೊಂಡು, ಕೊಂಚ ನನಗೆ ಸಹಾಯ ಮಾಡಿದರೆ ಪುಣ್ಯ ಬರುತ್ತದೆ" ಎಂದರು.

ಅಷ್ಟು ಹೇಳುವಾಗ್ಗೆ ಸೀತಮ್ಮನವರ ಜೀವ ಬಾಯಿಗೆ ಬಂದಂತಾಗಿತ್ತು. ತಮಗೆ ಅವರು ಅಷ್ಟು ಹೇಳುವರೆಂದು ಭಾಗಮ್ಮನವರು ಎಣಿಸಿರಲಿಲ್ಲ. ಅವರು ಕೋಪ ಬಂದವರಂತೆ ನಟಿಸುತ್ತಾ,

"ಸಾಕು, ಸಾಕು ಈಗ ನಿನ್ನನ್ನು ದುಡ್ಡು ಬೇಕೆಂದು ಕೇಳಿದೆನೆ? ಇಲ್ಲದ ಯೋಚನೆ ಯಾಕೆ ಮಾಡುತ್ತಿ?" ಎಂದರು.

ಸೀನಪ್ಪನವರೂ ಸಹ,

"ಛೇ ಛೇ, ಈಗ ಅದಕ್ಕೆಲ್ಲಾ ನೀವೇಕಮ್ಮಾ ಆತಂಕಪಡುವುದು. ನಿಮ್ಮ ಪಾಡಿಗೆ ನೀವು ಆ ಮಗೂನ ನೋಡಿಕೊಳ್ಳಿ. ವಾಸುವಿನ ಮೇಲಿನ ಭಾರ ನನ್ನದಿರಲಿ" ಎಂದರು.

ಸೀತಮ್ಮನವರು ಅವರಿಬ್ಬರ ವಿಶಾಲ ಹೃದಯವನ್ನು ಕಂಡು ಮೂಕರಾಗಿಹೋದರು.

## ೩೦

ಆ ದಿವಸ ಸಂಜೆಗೇ ಮುದುಕ ದಂಪತಿಗಳಿಬ್ಬರೂ ಮೈಲಾಪುರಕ್ಕೆ ಪ್ರಯಾಣ ಬೆಳಸಿದರು. ಅಂತಹ ವಿಷಮ ವೇಳೆಯಲ್ಲಿಯೂ ತಾವು ಮಗನನ್ನು ಅಗಲಿರಬೇಕಲ್ಲಾ ಎಂಬುದು ಸೀತಕ್ಕನ ಚಿಂತೆ. ಅವರು ಆ ದಿನ ಮೊದಲ್ಗೊಂಡು ದೇವರ ನಂದಾದೀಪವು ಆರದಂತೆ ನೋಡಿಕೊಳ್ಳಹತ್ತಿದರು. ಊಟ, ನಿದ್ರೆಗಳೆಲ್ಲಾ ಅವರಿಗೆ ಮರತೇಹೋಗಿತ್ತು. ತಾವು ಚಿಂತೆಯಿಂದು ಕುಳಿತುಬಿಟ್ಟರೆ ಪಾರ್ವತಿಯು ಉಪವಾಸ ಬೀಳುತ್ತಾಳೆಂದು ಬಲವಂತಕ್ಕೆ ಅನ್ನವೊಂದನ್ನು ಮಾಡುತ್ತಿದ್ದರು. ಒಂದು ಪಾವು ಅಕ್ಕಿಯ ಅನ್ನವನ್ನು ಮಾಡಿದರೆ ಒಂದು ದಿವಸವೆಲ್ಲಾ ಇಬ್ಬರುಂಡು, ಮಾರನೆಯ ದಿವಸಕ್ಕೂ ಮಿಕ್ಕಿಹೋಗುತ್ತಿತ್ತು. ಊಟದ ಶಾಸ್ತ್ರವನ್ನು ಮುಗಿಸಿದರೆ ಅತ್ತೆ ಸೊಸೆಯರಿಬ್ಬರಿಗೂ ಬೀದಿ ಕಾಯುವುದೇ ಕೆಲಸ. ಮನೆಯ ಮುಂದೆ ಸೈಕಲು ಗಂಟೆಯಾದರೇ ಸಾಕು, ತಾರು ಬಂದಿರಬಹುದೆಂದು ಇಬ್ಬರೆದೆಯೂ ಡವಡವನೆ ಹೊಡೆದುಕೊಳ್ಳುತ್ತಿತ್ತು. ಎಲ್ಲಿಯಾದರೂ ಮೋಟಾರು ಸದ್ದಾದರೆ ಸೀತಕ್ಕ ಬಿಟ್ಟದ್ದನ್ನು ಬಿಟ್ಟು

ಹಾಗೇ ಎದ್ದು ಬೀದಿಗೋಡುತ್ತಿದ್ದರು. ಕೂತೆಡೆ, ನಿಂತೆಡೆ ಅವರ ಮನಸ್ಸು ಎಲ್ಲೆಲ್ಲಿಯೋ ಓಡುತ್ತಿತ್ತು. ಒಂದೊಂದು ಬಾರಿ ಹೃದಯದಲ್ಲಿನ ವೇದನೆಯನ್ನು ಬಚ್ಚಿಡಲಾರದೆಯೆ,

"ಪಾತ, ಎಲ್ಲಾ ಸರಿ. ಅನಗೆ ಪರಿಗೆಗೆ ದಿವಸವಾಗಿರುವಾಗ ಅವನು ಖಾಯಿಲೆ ಬಿದ್ದಿರುವುದೇ ನನಗೆ ದೊಡ್ಡ ಚಿಂತೆ. ನನಗೆ ನನ್ನದೇ ವಿಷಯ ನೆನಪಿಗೆ ಬರುತ್ತದೆ. ಒಟ್ಟಿನಲ್ಲಿ ದೇವರು ಕಾಪಾಡಬೇಕು" ಅನ್ನುತ್ತಿದ್ದರು.

ಆಗ ಪಾರ್ವತಿಗೆ ಹೆದರಿಕೆಯಿಂದ ಜೀವ ಹೊಡೆದುಕೊಳ್ಳುತ್ತಿತ್ತು. ಆದರೂ ಸಮಾಧಾನವನ್ನು ತಂದುಕೊಳ್ಳಲು,

"ಅಯ್ಯೋ ಅದೆಲ್ಲಾ ಭ್ರಾಂತಿ ಬಿಡಿ. ಒಬ್ಬರ ಹಾಗೆ ಒಬ್ಬರು ಅನ್ನುವುದು ಹೇಗೆ ಸಾಧ್ಯ" ಎಂದುಬಿಡುತ್ತಿದ್ದಳು.

ಸೀತಮ್ಮನವರಿಗೆ ಆಗ ಎಷ್ಟೋ ಹಗುರವಾಗುತಿತ್ತು.

ಭಾಗಮ್ಮನವರು ಮೈಲಾಪುರಕ್ಕೆ ತೆರಳಿ ಮೂರು ದಿವಸವಾಗಿತ್ತು. ಸೀತಕ್ಕ ಮತ್ತು ಪಾರ್ವತಿ ಆ ದಿವಸಗಳನ್ನು ನೂಕಲಾರದೆ ನೂಕಿದ್ದರು. ವಾಸುವು ಬಂದರೆ ಆ ದಿನ ಬರುವ ನಿರೀಕ್ಷಣೆ ಇದ್ದಿತು. ಅತ್ತೆ ಸೊಸೆಯರಿಬ್ಬರಿಗೂ ಆ ದಿವಸ ಬೀದಿಯ ಕಡೆಯೇ ವಿಶೇಷ ಗಮನ. ಸೀತಕ್ಕನಿಗೆ ಮಗನ ಇದಿರು ನೋಡಿ, ನೋಡಿ ಸಾಕಾಗಿಹೋಯಿತು. ಸಂಧ್ಯೆ ಸಾರಲು ದೇವರಿಗೆ ನಮಸ್ಕಾರ ಮಾಡುವುದಕ್ಕೆ ಒಳಗೆ ಹೋದರು. ದೇವರ ದೀಪ ಆರಿ ಹೋಗಿರುವುದನ್ನು ನೋಡಿ ಅವರೆದೆ ಒಡೆದು ಹೋಯಿತು. ತುಪ್ಪ ಮುಗಿದು ಹೋಗಿರಬಹುದೆಂದು ಅವರು ಹಣತೆಯ ಬಳಿ ಧಾವಿಸಿದರು. ಹಣತೆಯ ತುಂಬಾ ತುಪ್ಪವಿತ್ತು. ಬತ್ತಿಯನ್ನು ಇಲಿ ತೆಗೆದುಕೊಂಡು ಹೋಗಿರುವುದೆಂದು ಊಹಿಸಲು ಸೀತಕ್ಕನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ತಮ್ಮ ಅಜಾಗರೂಕತೆಗೆ ಮರುಗುತ್ತಾ, ನಡೆದಿರುವ ವಿಷಯವನ್ನು ಸೊಸೆಗೆ ಹೇಳಲು ಹಜಾರಕ್ಕೆ ಬಂದರು. ಅವರು ಬರುವ ವೇಳೆಗೆ ಸರಿಯಾಗಿ ಮೋಟಾರೊಂದು ಮನೆಯ ಮುಂದೆ ಬಂದು ನಿಲ್ಲಲು ಅವರು ಹುಚ್ಚರ ಹಾಗೆ,

"ಪಾತ, ವಾಸು ಬಂದ. ಅವನಿಗೆ ಹಾಸುಗೆ, ಹೊದ್ದಿಕೆ ನೋಡು ಹೋಗು ತಾಯಿ" ಎಂದವರೆ ಕಾರಿನ ಬಳಿ ಧಾವಿಸಿದರು. ಅತ್ತು ಅತ್ತು

ಕೆಂಡದಂತೆ ಕೆಂಪಾಗಿದ್ದ ಭಾಗಮ್ಮನವರ ಮುಖವನ್ನು ಅವರು ನೋಡಲೇ ಇಲ್ಲ. ತಾಯಕರುಳಿನ ವಾತ್ಸಲ್ಯದ ಅತಿರೇಕದಿಂದ "ವಾಸು, ಬಂದೆಯಾಪ್ಪ" ಎಂದು ಒಳಗೆ ಬಗ್ಗಿ ನೋಡಿದರು. ಆದರೆ ಅಲ್ಲಿ ಅವರು ನೋಡಿದುದು ಜೀವದಿಂದ ಉಳಿದು ಬಂದ ಮಗನನ್ನಲ್ಲ—ಹೃದ್ರೋಗದಿಂದ ಬೆಳಗ್ಗೆಯೇ ತೀರಿಕೊಂಡಿದ್ದ ವಾಸುವಿನ ಕಳೇಬರವನ್ನು. ವಾಸುವಿನ ಬಾಳ್ವೆಯ ಬಳ್ಳಿ ಚೆನ್ನಾಗಿ ಚಿಗುರಿ, ಹೂ ಬಿಟ್ಟು ಫಲಿಸುವ ಮೊದಲು ಎಳೆತನದಲ್ಲಿಯೇ ಬಾಡಿಹೋಗಿ, ಸುರಟಿಕೊಂಡು ಬಿದ್ದು ಹೋಗಿತ್ತು.

**ಎರಡನೆ ವರುಷ : ೧೯೫೧–೧೯೫೨**

# ಹಂಸ ಸಾಹಿತ್ಯ ಮಾಲೆ

೧. ವರುಷಕ್ಕೆ ೧೦೦೦ ಪುಟಗಳ ಮೇಲ್ಪಟ್ಟು ಸ್ವತಂತ್ರ ಸಾಮಾಜಿಕ ಕಾದಂಬರಿಗಳು.

೨. ಸಾಮಾನ್ಯವಾಗಿ ೧೫೦—೨೦೦ ಪುಟಗಳ ಕಾದಂಬರಿಗಳನ್ನು ಕೊಡಲಾಗುವುದು.

೩. ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ಕಾದಂಬರಿಕಾರರ ಕೃತಿಗಳನ್ನೂ ಅಲ್ಲದೆ ಹೊಸ ಲೇಖಕರ ಉತ್ತಮ ಕಾದಂಬರಿಗಳನ್ನೂ ಪ್ರಕಟಿಸಲಾಗುವುದು.

೪. ಮಾಲೆಯ ವರುಷ ಏಪ್ರಿಲ್‌ನಿಂದ ಮಾರ್ಚ್ ವರೆಗೆ.

## —: ಚಂದಾ ವಿವರ :—

೧. ಮೈಸೂರು ಮತ್ತು ಬೆಂಗಳೂರು ನಗರದಲ್ಲಿರುವವರಿಗೆ
ವರುಷಕ್ಕೆ — ಆರು ರೂಪಾಯಿ

೨. ಹೊರಗಿನವರಿಗೆ ವರುಷಕ್ಕೆ— ಏಳೂಮುಕ್ಕಾಲು ರೂಪಾಯಿ
(ರಿಜಿಸ್ಟರ್ಡ್ ಅಂಚೆವೆಚ್ಚ ಸೇರಿ)

## ಇಂದೇ ಚಂದಾದಾರರಾಗಿ

ವ್ಯವಸ್ಥಾಪಕರು :
ಡಿ. ವಿ. ಕೆ. ಮೂರ್ತಿ
ಜಗನ್ಮೋಹನ ಬಂಗಲೆ ಚೌಕ
ಮೈಸೂರು